UNIVERSAL
LIBRARY

OU_200255

UNIVERSAL
LIBRARY

# ಷೆರ್ಲಾಕ್ ಹೋಮ್ಸನ ಸಾಹಸ ಚರಿತ್ರೆ.

## ೧ ನೇ ಭಾಗ.

ಬೂಕರ್ ಟಿ. ವಾಷಿಂಗ್ಟನ್, ವಿದ್ಯಾರ್ಥಿಕರಭೂಷಣ, ಪರಂತಪವಿಜಯ,

ಅರ್ಥಸಾಧನ, ಹರಿಶ್ಚಂದ್ರ ಚರಿತ್ರೆ, ಚೋರಗ್ರಹಣತಂತ್ರ

ಮೊದಲಾದ ಗ್ರಂಥಗಳ

ಕರ್ತರಾದ

**ಎಂ. ವೆಂಕಟಕೃಷ್ಣಯ್ಯನವರಿಂದ**

ರಚಿಸಲ್ಪಟ್ಟದ್ದು.

ಎರಡನೇ ಛಾಪು.

*Price 1-4-0*] [ಕ್ರಯ ೧-೪-೦.

# ಟೆಲಿಮೊಕಸ್ಸನ ಸಾಹಸಗಳು.

---

ಫ್ರೆಂಚ್ ದೇಶೀಯರಲ್ಲಿ ಬೃಹಸ್ಪತಿಗೆ ಸಮಾನನಾದ ಫೆನಿಲನ್ ಎಂಬಾತನು ಲೋಕವ್ಯವಹಾರ ದರ್ಪಣರೂಪವಾದ ಒಂದು ಲೋಕೋತ್ತರವಾದ ಗ್ರಂಥವನ್ನು ಬರೆದಿರುವನು. ಫ್ರಾನ್ಸ್ ದೇಶವು ಚಕ್ರಾಧಿಪತ್ಯವಾಗಿದ್ದಾಗ, ಆ ದೇಶದ ಚಕ್ರವರ್ತಿಯು ತನ್ನ ಮಗನಿಗೆ ಸಕಲ ವಿದ್ಯಾವಿಶಾರದನಾದ ಒಬ್ಬ ಪಾಠಕನು ಬೇಕೆಂದು ಅಪೇಕ್ಷಿಸಿದನು. ಅವನ ಮಂತ್ರಿಗಳು ಈ ಪದವಿಗೆ ಫೆನಿಲನ್‌ಗಿಂತಲೂ ಹೆಚ್ಚು ಯೋಗ್ಯತೆಯುಳ್ಳವರು ಪ್ರಪಂಚದಲ್ಲೇ ಸಿಕ್ಕುವುದಿಲ್ಲವೆಂದು ಹೇಳಿದರು. ಅವನನ್ನು ಕರೆಸಬೇಕೆಂದು ಆಜ್ಞೆಯು ಮಾಡಲ್ಪಟ್ಟಿತು. ಆತನು ಬಂದ ಕೂಡಲೇ, ಚಕ್ರವರ್ತಿಯು ಅವನ ವೈದುಷ್ಯಕ್ಕೆ ಅನುರೂಪವಾದ ಮರ್ಯಾದೆಯನ್ನು ಮಾಡಿ, ತನ್ನ ಮಗನಾದ ಯುವರಾಜನಿಗೆ ವಿದ್ಯಾಗುರುವಾಗಬೇಕೆಂದು ಪ್ರಾರ್ಥಿಸಿ, ಅವನಿಗೆ ವರ್ಷಕ್ಕೆ 10 ಸಾವಿರ ಪೌನು ಕೊಡುವುದಾಗಿ ಹೇಳಿದನು. "ಈ ಉದ್ಯೋಗವನ್ನು ಒಪ್ಪುವುದಕ್ಕೆ ಮುಂಚೆ, ನಾನು ಯುವರಾಜನೊಡನೆ ಸ್ವಲ್ಪ ಸಂಭಾಷಣವನ್ನು ಮಾಡಬೇಕೆಂದು ಫೆನಿಲನ್ ಹೇಳಿದನು. ಆ ಚಕ್ರವರ್ತಿಯು ಮಗನನ್ನು ಕರೆಸಿ, ಇವನ ವಶಕ್ಕೆ ಬಿಟ್ಟನು. ಫೆನಿಲನ್ನನು ಆ ಹುಡುಗನನ್ನು ಕರೆದುಕೊಂಡು, ಗಾಳಿ ಸವಾರಿಗೆ ಹೋದನು. ಒಂದು ಗಂಟೆಯೊಳಗಾಗಿ ಅನೇಕ ಪ್ರಶ್ನೆಗಳನ್ನು ಹಾಕಿ, ಅವನ ಉತ್ತರಗಳನ್ನು ಕೇಳಿ, ಚಕ್ರವರ್ತಿಯ ಬಳಿಗೆ ಬಂದು, ನಿನ್ನ ಮಗನಿಗೆ ಪಾಠಕನಾಗ ತಕ್ಕ ಉದ್ಯೋಗವು ಬಹಳ ಕಷ್ಟವಾದದ್ದು. ವರ್ಷಕ್ಕೆ 1 ಲಕ್ಷ ಪೌನುಗಳನ್ನು ಕೊಟ್ಟರೆ, ನಾನು ಇದಕ್ಕೆ ಒಪ್ಪುತ್ತೇನೆ." ಎಂದು ಹೇಳಿದನು. "ಅದಕ್ಕೆ ಚಕ್ರವರ್ತಿಯು ಈ ವಿಚಿತ್ರವಾದ ಪ್ರಾರ್ಥನೆಗೆ ಕಾರಣವೇನು?" ಎಂದು ಕೇಳಿದನು. ಅದಕ್ಕೆ ಫೆನಿಲನ್ ಹೇಳಿದ್ದೇನೆಂದರೆ :—

"ಇವನಿಗೆ ಪಾಠ ಹೇಳುವುದಕ್ಕೆ 10 ಸಾವಿರ ಪೌನುಗಳು ಕೊಡುವುದಾಗಿ ನೀವು ಅಪ್ಪಣೆ ಕೊಡಿಸಿದಿರಿ. ನಾನು ಒಂದು ಕಾಸೂ ಇಲ್ಲದೆ ಸುಮ್ಮನೆ ಪಾಠ ಹೇಳುವುದಕ್ಕೆ ಒಪ್ಪುತ್ತೇನೆ. ಪಾಠವನ್ನು ಹೇಳುವುದು ಬಹಳ ಸುಲಭ. ಅದಕ್ಕೆ ನನಗೆ ಸಂಬಳವೇ ಬೇಡ. ಈತನಿಗೆ ಸಹವಾಸ ದೋಷದಿಂದ ಅನೇಕ ದುರಭಿಪ್ರಾಯಗಳು ಉಂಟಾಗಿರುವುವು. ಅವುಗಳು ಮೂಲೋತ್ಪಾಟನ ಮಾಡಲ್ಪಡ್ಡ ಹೊರತು,

ಅವನು ಚಕ್ರವರ್ತಿ ಪದವಿಗೆ ಅರ್ಹನಾಗುವುದಿಲ್ಲ. ಪ್ರಭುತ್ವವು ಬಹಳ ಜವಾಬ್ದಾರಿಯುಳ್ಳದ್ದು. ಹೆಣವನ್ನು ತಿನ್ನುವುದಕ್ಕೆ ಕ್ರಿಮಿಗಳು ಹೇಗೆ ಮುತ್ತಿಕೊಳ್ಳುವುವೋ ಹಾಗೆ ಹೊನ್ನು, ಹೆಣ್ಣು, ಮಣ್ಣುಗಳೆಂಬ ಪಿಶಾಚಗಳಿಂದ ಹಿಡಿಯಲ್ಪಟ್ಟವರು ಪ್ರಭುವನ್ನು ಮುತ್ತಿಕೊಳ್ಳುವರು. ಅವರನ್ನು ಬಿಟ್ಟು, ರಾಜ್ಯಭಾರ ಮಾಡುವುದಕ್ಕೆ ಆಗುವುದಿಲ್ಲ. ಪ್ರಭುಗಳು ಅವರ ಸೂತ್ರಗಳಿಗೆ ಕುಣಿಯುವ ಬೊಂಬೆಗಳಾದರೆ ಮತ್ತು ಅವರು ಹೇಳಿದಂತೆ ರಾಜಕಾರ್ಯಗಳನ್ನು ನಡೆಸುತ್ತಾ ಬಂದರೆ, ಜಗದೀಶ್ವರನಿಗೂ, ಪ್ರಜೆಗಳಿಗೂ ತಮ್ಮ ಜವಾಬ್ದಾರಿಯನ್ನು ನಿರ್ವಹಿಸುವುದಕ್ಕೆ ಆಗುವುದಿಲ್ಲ. ಪ್ರಭುತ್ವ ಮಾಡತಕ್ಕವನು ನಿರ್ದಾಕ್ಷಿಣ್ಯವಾಗಿ ದುಷ್ಟನಿಗ್ರಹ, ಶಿಷ್ಟಪರಿಪಾಲನದಲ್ಲಿ ದಕ್ಷನಾಗಬೇಕು. ಪರೀಕ್ಷಿಸಿ ಧರ್ಮಮಾರ್ಗೈಕಪರಾಯಣರಾದ ಸಚಿವರನ್ನೂ, ಭೃತ್ಯರನ್ನೂ ನಿಯಮಿಸಿಕೊಳ್ಳಬೇಕು. ಸ್ವಾರ್ಥಪರತೆಯುಳ್ಳ ಪರಾಯಣರಾಗಿ, ನೀನೇ ಇಂದ್ರ, ನೀನೇ ಚಂದ್ರ, ನೀನೇ ದೇವೇಂದ್ರನೆಂದು ಸ್ತುತಿಸುತ್ತಾ, ಅರ್ಥಾರ್ಜನೆಯಲ್ಲಿ ಆಸಕ್ತಿಯುಳ್ಳ ಸ್ವೈರಿಣಿಯರಂತೆ ನಡೆದುಕೊಳ್ಳತಕ್ಕವರನ್ನು ದೂರದಲ್ಲಿ ಇಡಬೇಕು. ವಿಷಯಾಸಕ್ತಿಯನ್ನುಂಟುಮಾಡಿ, ಅದರಿಂದ ಪ್ರಯೋಜನವನ್ನು ಹೊಂದಬೇಕೆಂಬ ಅಭಿಲಾಷೆಯಿಂದ ಮನೋಹರವಾದ ಮಾತುಗಳಿಂದ ಬೆರಗು ಮಾಡತಕ್ಕವರಲ್ಲಿ ಸತ್ಪ್ರಭುವಾದವನು ಪರಾಙ್ಮುಖನಾಗಿರಬೇಕು. ಅಪ್ರಿಯವಾಗಿದ್ದಾಗ್ಯೂ, ಶ್ರೇಯಸ್ಕರವಾದ ಹಿತೋಕ್ತಿಗಳನ್ನು ನಿರ್ಭಯವಾಗಿ ಯಾರು ಹೇಳುವರೋ ಅವರಲ್ಲಿ ದ್ವೇಷವನ್ನು ಮಾಡಬಾರದು. ಅವರು ಹಿತಚಿಂತಕರೆಂದು ತಿಳಿದುಕೊಳ್ಳಬೇಕು. ನಮ್ಮನ್ನು ಯಾರಾದರೂ ನಿಂದಿಸಿದರೆ, ನಮ್ಮಲ್ಲಿ ಏನು ತಪ್ಪಿರುವುದೆಂದು ಪರಿಶೀಲಿಸಿ, ಇದ್ದರೆ ತಪ್ಪುಗಳನ್ನು ತಿದ್ದಿಕೊಂಡು, ತಪ್ಪನ್ನು ಉದ್ಘಾಟಿಸಿದವರಲ್ಲಿ ಕೃತಜ್ಞತೆಯನ್ನು ತೋರಿಸಬೇಕು. ನಾವೇ ದೇವರಾಗಿದ್ದರೆ ಹೇಗೋ ಹಾಗೆ ನಮ್ಮನ್ನು ಪೂಜಿಸುವುದಕ್ಕೆ ಯಾರಾದರೂ ಬಂದರೆ, ಈ ಪೂಜೆಗೆ ಮುಖ್ಯ ಕಾರಣವೇನಾಗಿರಬೇಕೆಂದು ಪರಿಶೀಲಿಸಿ, ಅದನ್ನು ತಿಳಿದುಕೊಂಡು, ಲಂಚವೇ ಮುಖ್ಯಕಾರಣವಾಗಿದ್ದರೆ, ಹಾಗೆ ಸ್ವಾರ್ಥಪರತೆಯಿಂದ ಪೂಜಿಸತಕ್ಕವರನ್ನು ದೂರದಲ್ಲಿ ಇಡಬೇಕು. ಪ್ರಭುತ್ವಕ್ಕೆ ಯೋಗ್ಯತಾಸಿದ್ಧಿಯನ್ನು ಉಂಟುಮಾಡಬೇಕಾದರೆ, ಈ ಭಾಗಗಳಲ್ಲಿ ಬಹಳ ಕ್ಲೇಶವಿರುವುದು. ದುರ್ವಿದ್ಯೆಗಳು ಮೊಳೆತಾಗ, ಅದನ್ನು ಕೀಳುವುದು ಸುಲಭ. ಅದು ವಿಷವೃಕ್ಷವಾಗಿ, ದುಷ್ಫಲವನ್ನು ಬಿಡುವುದಕ್ಕೆ ಉಪಕ್ರಮವಾದರೆ, ಆಗ್ಯೆ ಅದನ್ನು ಮೂಲೋತ್ಪಾಟನ ಮಾಡುವುದು ಬಹಳ ಕಷ್ಟ.

ನಿನ್ನ ಮಗನ ವಿಷಬೀಜಗಳು ಬಿತ್ತಲ್ಪಟ್ಟು, ಮೊಳೆತು, ವೃಕ್ಷಗಳಾಗುವುದಕ್ಕೂ, ಫಲೋನ್ಮುಖಗಳಾಗುವುದಕ್ಕೂ ಉಪಕ್ರಮವಾಗಿದೆ. ಈ ವಿಷವೃಕ್ಷವನ್ನು ಕಿತ್ತು ಹಾಕಿ, ಪ್ರಜಾರಂಜನೆಗೆ ಸಾಧಕವಾದ ಅಮೃತಬೀಜವನ್ನು ಹಾಕಿ, ಅದು ಕಲ್ಪತರುವಾಗುವಂತೆಯೂ, ಪ್ರಜೆಗಳ ಸಕಲ ಸದಿಷ್ಟಾರ್ಥಪ್ರಾಪ್ತಿಗೆ ಸಾಧಕವಾಗುವಂತೆಯೂ ಮಾಡಲ್ಪಡಬೇಕು. ಅದು ಅತ್ಯಂತ ಕಷ್ಟವಾದ ಕೆಲಸ. ಸಕಲಕೆಲಸಗಳನ್ನು ಬಿಟ್ಟು, ಸದಾ ಏಕಾಗ ಚಿತ್ತದಿಂದ ಪರ್ಯಾಲೋಚಿಸಿ, ಅವನ ಮನಸ್ಸಿನಲ್ಲಿ ನಟ್ಟಿರತಕ್ಕ ವಿಷವೃಕ್ಷವನ್ನು ಕಳೆಗಳನ್ನೆಲ್ಲಾ ಕಿತ್ತುಹಾಕಿ, ಕಲ್ಪವೃಕ್ಷದ ಬೀಜವನ್ನು ನೆಟ್ಟು, ಚಕ್ರವರ್ತಿ ಪದವಿಗೆ ಸಹಜವಾದ ಧರ್ಮಗಳನ್ನೆಲ್ಲಾ ಇವನಿಗೆ ಬೋಧಿಸಿ, ಈ ಚಕ್ರಾಧಿಪತ್ಯಕ್ಕೆ ಇವನನ್ನು ಅರ್ಹನನ್ನಾಗಿ ಮಾಡಬೇಕು. ಇಷ್ಟು ಕಷ್ಟಪಡಬೇಕಾದರೆ, ಅದಕ್ಕೆ ಅನುರೂಪವಾದ ಫಲವು ಸಿಗಬೇಕು. ಚಕ್ರವರ್ತಿಯನ್ನು ನಿರ್ಮಾಣ ಮಾಡುವುದಕ್ಕೆ ಅಂಥಾ ಚಕ್ರವರ್ತಿಯನ್ನೇ ಉಪಹಾರವಾಗಿದ್ದೇ ಪ್ರತಿಫಲವೆಂದು ನಾನು ತಿಳಿದುಕೊಂಡಿದ್ದೇನೆ. ಸಂಬಳವಿಲ್ಲದೆ ಈ ಕೆಲಸವನ್ನು ಮಾಡುವುದಕ್ಕೂ ಸಿದ್ಧನಾಗಿ ಇದ್ದೇನೆ. ನೀನು ಸಂಬಳವನ್ನು ಕೊಟ್ಟಾಗ್ಯೂ, ನನ್ನ ಸಾಹಸತ್ತಿಗೆ ಪ್ರತಿಫಲವಾಗಲಾರದು. ಆದರೆ, 10 ಸಾವಿರ ಪೌನು ಸಂಬಳವನ್ನು ಕೊಡುವುದಾಗಿ ನೀನು ಹೇಳಿದ್ದರಿಂದ, ನನ್ನ ಜವಾಬ್ದಾರಿಯು ಎಷ್ಟು ಕಷ್ಟವಾದದ್ದು? ಅದನ್ನು ನೀನು ತಿಳಿದುಕೊಳ್ಳಲಿ ಎಂದು 1 ಲಕ್ಷ ಪೌನನ್ನು ಕೇಳಿದೆನು. ದ್ರವ್ಯಕ್ಕೋಸ್ಕರ ನಾನು ನನ್ನ ಹೆಸರನ್ನು ವಿಕ್ರಯಿಸುತ್ತಿಲ್ಲ. ದೇಶಕ್ಕೆ ಕ್ಷೇಮವು ಉಂಟಾಗುವಂತೆ ಇವನಿಗೆ ಶಿಕ್ಷಣವು ದೊರಕುವದಕ್ಕೋಸ್ಕರ ನಾನು ಈ ಕೆಲಸಕ್ಕೆ ಒಪ್ಪುತ್ತೇನೆ. ನನ್ನ ಹಿತೋಪದೇಶದಿಂದ ಇವನು ಧರ್ಮಿಷ್ಠನಾದ ಪ್ರಭುವಾದರೆ, ಅದೇ ನನ್ನ ಸಾಹಸತ್ತಿಗೆ ಪ್ರತಿಫಲರೂಪವಾದ ಫಲ. ನಿನ್ನ ಚಕ್ರಾಧಿಪತ್ಯದ ಸಕಲ ಸಂಪತ್ತನ್ನೂ ಕೊಟ್ಟಾಗ್ಯೂ, ಅದು ಸರಿಯಾದ ಪ್ರತಿಫಲವಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ, ನಿನ್ನ ಮಗನಿಗೆ ಶಿಕ್ಷಕನಾಗಬೇಕಾದರೆ, ನೀನು ಒಂದು ಷರತ್ತಿಗೆ ಒಪ್ಪಬೇಕು. ನನ್ನ ಏರ್ಪಾಡುಗಳಿಗೆ ನೀನೇ ಆಗಲಿ, ನಿನ್ನ ಮಂತ್ರಿಗಳೇ ಆಗಲಿ, ನಿನ್ನ ಕುಟುಂಬದವರೇ ಆಗಲಿ, ಯಾರೂ ಅಡ್ಡಿಯನ್ನು ಮಾಡಕೂಡದು. ಅವನಿಗೆ ಶಿಕ್ಷಣವನ್ನು ಮಾಡುವ ವಿಷಯದಲ್ಲಿ ನನ್ನ ಅಧಿಕಾರವು ನಿರಂಕುಶವಾಗಿಯೂ, ಅಪ್ರತಿಹತವಾಗಿಯೂ ಇರಬೇಕು. ಇದೇ ನಾನು ಅಪೇಕ್ಷಿಸುವ ಸಂಬಳ. ಈ ಸಂಬಳವನ್ನು ಕೊಡುವ್ಯ

ದಾದರೆ, ನಾನು ನಿನ್ನ ಮಗನಿಗೆ ಪಾಠಕನಾಗುತ್ತೇನೆ. ಹಾಗಿಲ್ಲದಿದ್ದರೆ, ಬೇರೆ ಪಾಠಕರನ್ನು ನಿಯಮಿಸಿಕೊಳ್ಳಬಹುದು'' ಎಂದು ಹೇಳಿದನು.

ಇದು ಸತ್ಯವೆಂದು ತಿಳಿದುಕೊಂಡು, ಆವನ ಇಷ್ಟದಂತೆ ಈ ಚಕ್ರವರ್ತಿಯು ಅವನಿಗೆ ತನ್ನ ಮಗನ ಪಾಠಪ್ರವಚನಗಳ ವಿಷಯದಲ್ಲಿ ನಿರಂಕುಶವಾದ ಅಧಿಕಾರವನ್ನು ಕೊಟ್ಟನು. ಆಗ ಫೆನಿಲನ್ನನು ಟ್ರಾಯ್ ದೇಶವನ್ನು ಜಯಿಸಿ, ದುಷ್ಟನಿಗ್ರಹವನ್ನು ಮಾಡುವುದಕ್ಕೆ ಕಾರಣಭೂತನಾದ ಯೂಲಿಸೆಸ್ಸನ ಮಗನಾದ ಟೆಲಿಮಾಕಸ್ಸನ ಸಾಹಸಕೃತ್ಯಗಳ ಚರಿತ್ರೆಯ ರೂಪವಾಗಿ ಒಂದು ಗ್ರಂಥವನ್ನು ರಚಿಸಿ, ಅವನಿಗೆ ಬೋಧೆಯನ್ನು ಮಾಡಿದನು. ಈ ಚರಿತ್ರೆಯಲ್ಲಿ ಈ ಚಕ್ರವರ್ತಿಯ ದೋಷಗಳನ್ನು ಉದ್ಘಾಟಿಸಿದನು. ಇದು ಮುದ್ರಿಸಲ್ಪಟ್ಟ ಕೂಡಲೇ, ಫೆನಿಲಾನನ್ನು ಹಿಡಿದು ಗಲ್ಲಿಗೆ ಹಾಕಬೇಕೆಂದು ಈ ಚಕ್ರವರ್ತಿಯು ಪ್ರಯತ್ನ ಮಾಡಿದನು. ವಿಶಾಲ ಯ... ಚರಿತ್ರೆಯನ್ನು ಬರೆದವರಲ್ಲಿ ಮಹಾಮಹಿಮನಾದ ಡೇವಿಡ್ ಸಲ್ಮನ್ ಎಂಬಾತನು ಇವನನ್ನು ವಿಲಾಯತಿಗೆ ಕಳುಹಿಸಿ ಆ ಚಕ್ರವರ್ತಿಯ ದ್ವೇಷದಿಂದ ಇವನನ್ನು ರಕ್ಷಿಸಿದನು.

ಈ ಗ್ರಂಥದಲ್ಲಿರುವ ರಾಜಧರ್ಮಗಳು ಈಗಲೂ ರಾಜತಂತ್ರವಿಶಾರದರಿಂದ ಉದಹರಿಸಲ್ಪಡುತ್ತಿವೆ. ಆಂಗ್ಲರುಗಳಲ್ಲಿ ಶಿರೋಮಣಿಗಳಾದ ಲಾರ್ಡ್ ಚಥಾಮರವರೇ ಮೊದಲಾದವರು ಅರಸರ ನಿರಂಕುಶಪ್ರವರ್ತನವನ್ನು ಸಾಧುವನ್ನಾಗಿ ಮಾಡಿಕೊಳ್ಳುವುದಕ್ಕೆ ಫೆನಿಲಾನಿನಿಂದ ಹೇಳಲ್ಪಟ್ಟಿರುವ ಧರ್ಮಗಳನ್ನು ಉದಹರಿಸಿರುವರು. ಇತರರೂ ಉದಹರಿಸುತ್ತಲೂ ಇರುವರು.

ಈ ಮಹಾಕವಿಯಿಂದ ವಿರಚಿತವಾದ ಟೆಲಿಮಾಕಸ್ಸನ ಚರಿತ್ರೆಯು ಈ ಪುಸ್ತಕದಲ್ಲಿ ಬರೆಯಲ್ಪಟ್ಟಿದೆ. ಈ ಪುಸ್ತಕವು ನಾಲ್ಕು ಭಾಗಗಳಾಗಿ ವಿಭಾಗಿಸಲ್ಪಟ್ಟು ಮೂರು ಭಾಗಗಳು ಮುದ್ರಿಸಲ್ಪಟ್ಟಿವೆ. ಪ್ರತಿ ಒಂದು ಭಾಗಕ್ಕೂ ಕ್ರಯ 1 ರೂಪಾಯಿ 4 ಆಣೆ ಹಾಕಲ್ಪಟ್ಟಿದೆ. ವಿಮರ್ಶೆಯಿಂದ ಎರಡನೇ ಛಾಪೆಯು ಮುದ್ರಿತವಾಗಿದೆ. ಇಷ್ಟವುಳ್ಳವರು ಗ್ರಂಥಕರ್ತರಿಗಾಗಲೀ ಅಥವಾ ಸಾಧ್ವೀ ಆಫೀಸಿಗಾಗಲೀ ಬರೆದು ತರಿಸಿಕೊಳ್ಳಬಹುದು.

ಈ ಗ್ರಂಥವು ಧರ್ಮಮಾರ್ಗೈಕಪರಾಯಣರಾದ ಮಹಾಜನಗಳಿಗೆ ಅಂಕಿತವಾಗಿ ಸಮರ್ಪಿಸಲ್ಪಟ್ಟಿರುವುದು

ಸಜ್ಜನ ವಿಧೇಯ,

ಎಂ. ವೆಂಕಟಕೃಷ್ಣಯ್ಯ.

# ಟೆಲಿಮಾಕಸ್ಸನ ಚರಿತ್ರೆ

ಗ್ರೀಸ್ ದೇಶದ ಬಳಿಯಲ್ಲಿ ಅಯೋನಿಯನ್ ದ್ವೀಪಗಳೆಂದು ೭ ದ್ವೀಪಗಳಿರುವುವು. ಅವುಗಳಲ್ಲಿ ಇಥಾಕಾ ಎಂಬ ದ್ವೀಪವು ಒಂದಾಗಿರುವುದು. ಈ ದ್ವೀಪದಲ್ಲಿ ಯೂಲಿಸೆಸ್ ಎಂಬ ಒಬ್ಬ ಪ್ರಭುವು ಇದ್ದನು. ಅವನು ಬುದ್ಧಿಯಲ್ಲಿ ಬೃಹಸ್ಪತಿಗೆ ಸಮಾನನಾಗಿದ್ದನು. ಲೋಕದಲ್ಲಿ ಎಲ್ಲಾ ಬಲಗಳಿಗಿಂತಲೂ ಬುದ್ಧಿಬಲವು ದೊಡ್ಡದೆಂಬುದಕ್ಕೆ ಈತನೇ ದೃಷ್ಟಾಂತವಾಗಿದ್ದನು. ಟ್ರಾಯ್ ದೇಶದ ಯುದ್ಧದಲ್ಲಿ ಇವನ ಬುದ್ಧಿಬಲದಿಂದ ದುಷ್ಟನಿಗ್ರಹವು ಸಂಪೂರ್ಣವಾಗಿ ಮಾಡಲ್ಪಟ್ಟಿತು. ಟ್ರಾಯ್ ದೇಶವು ನಾಶವಾದ ಮೇಲೆ, ಯೂಲಿಸಸ್ಸನು ಈ ಪ್ರಪಂಚದ ಎಲ್ಲಾ ಭಾಗಗಳನ್ನೂ ಸಂಚಾರ ಮಾಡಿಕೊಂಡು ಬರಬೇಕೆಂದು ಪ್ರಯಾಣ ಮಾಡಿದನು. ಯೂಲಿಸೆಸ್ಸನ ಹೆಂಡತಿಯು ಲೋಕೋತ್ತರವಾದ ರೂಪಲಾವಣ್ಯಗಳುಳ್ಳವಳಾಗಿದ್ದಳು. ಅವನು ದೇಶಸಂಚಾರಕ್ಕೆ ಹೋಗಿರುವುದನ್ನು ತಿಳಿದು, ಕೆಲವು ಜನ ಪ್ರಭುಗಳು ಅವಳ ಪಾತಿವ್ರತ್ಯಭಂಗವನ್ನು ಮಾಡಬೇಕೆಂದು ಇಥಾಕಾ ಪಟ್ಟಣಕ್ಕೆ ಹೋದರು. ಬಾಲನಾಗಿದ್ದ ತನ್ನ ಮಗನಾದ ಟೆಲಿಮಾಕಸ್ಸನನ್ನು ಕುರಿತು, ಆಕೆಯು ಹೇಳಿದ್ದೇನೆಂದರೆ—"ನಮ್ಮ ಅತಿಥಿಗಳಾಗಿ ನಮ್ಮ ಅರಮನೆಯಲ್ಲಿರತಕ್ಕ ದುರಾತ್ಮರಿಂದ ನನ್ನ ಪಾತಿವ್ರತ್ಯಕ್ಕೆ ಭಂಗವು ಸನ್ನಿಹಿತವಾಗಿರುವುದು. ನನ್ನ ಮಾನವನ್ನೂ ಮತ್ತು ಪ್ರಾಣವನ್ನೂ ಕಾಪಾಡುವ ಶಕ್ತಿಯು ಇರತಕ್ಕವರು ಇಲ್ಲಿ ಯಾರೂ ಇಲ್ಲ. ನಿಮ್ಮ ತಂದೆಯನ್ನು ಹುಡುಕಿ, ಒಂದು ವರ್ಷದೊಳಗಾಗಿ ನೀನು ಕರೆದುಕೊಂಡು ಬರಬೇಕು. ಅದುವರಗೂ ಈ ದುರಾತ್ಮರಿಗೆ ಅಧೀನಳಾಗದೆ, ಪ್ರಾಣಧಾರಣೆಯನ್ನು ಮಾಡಿಕೊಂಡಿರುವೆನು. ವರ್ಷದೊಳಗಾಗಿ ನಿಮ್ಮ ತಂದೆಯನ್ನು ಕರೆದುಕೊಂಡು ಬಂದು ಇವರನ್ನು ಸಂಹರಿಸದಿದ್ದರೆ, ನಾನು ವಿಷವನ್ನು ತೆಗೆದುಕೊಂಡು, ಪ್ರಾಣವನ್ನು ಬಿಡುವೆನು."

ಹೀಗೆ ಹೇಳಿ ಪೂರಯಿಸುವುದರೊಳಗಾಗಿ ದೈವಯೋಗದಿಂದ ಸಕಲ ರಾಜತಂತ್ರವಿಶಾರದನಾದ ಮೆಂಟರನೆಂಬ ಮಹಾತ್ಮನು ಅಲ್ಲಿಗೆ ಬಂದನು. ಇಂದ್ರಿಯಪರವಶರಾಗಿ, ಟೆಲಿಮಾಕಸ್ಸನ ತಾಯಿಯ ಪಾತಿವ್ರತ್ಯವನ್ನು ಕೆಡಿಸಬೇಕೆಂದು ಬಂದಿ

ದ್ದ ಆ ದುರಾತ್ಮರು ಧರ್ಮವನ್ನು ಉಲ್ಲಂಘಿಸಿ ನಡೆದರೆ, ಅವರ ಅಪರಾಧಕ್ಕೆ ಅನುರೂಪವಾದ ಶಿಕ್ಷೆಯು ಆಗುವಂತೆ ಏರ್ಪಾಡುಗಳನ್ನು ಮಾಡಿ, ಯೂಲಿಸಸ್ಸನನ್ನು ಕರೆದುಕೊಂಡು ಬರುವುದಕ್ಕೆ ಹೊರಟ ಟೆಲಿಮಾಕಸ್ಸಿನ ಜೊತೆಯಲ್ಲಿ ತಾನೂ ಹೊರಡುವುದಾಗಿಯೂ, ಅವನನ್ನು ರಕ್ಷಿಸುವುದಲ್ಲದೆ, ಯೂಲಿಸಸ್ಸನನ್ನೂ ವಾಪಸು ಕರೆದುಕೊಂಡು ಬಂದು, ಅವನಿಂದ ಈ ದುರಾತ್ಮರು ಹತವಾಗುವಂತೆ ಮಾಡುವುದಾಗಿಯೂ, ವಾಗ್ದಾನ ಮಾಡಿ, ಪಾತಿವ್ರತ್ಯರಕ್ಷಣಕ್ಕೆ ಸಾಧಕವಾದ ಸಲಹೆಗಳನ್ನು ಆ ಪತಿವ್ರತಾಶಿರೋಮಣಿಗೆ ಉಪದೇಶಿಸಿ, ಅವಳ ಅಪ್ಪಣೆಯನ್ನು ತೆಗೆದುಕೊಂಡು, ಮೆಂಟರನು ಟೆಲಿಮಾಕಸ್ಸನ ಜತೆಯಲ್ಲಿ ಯೂಲಿಸೆಸ್‌ನನ್ನು ಹುಡುಕುವುದಕ್ಕೆ ಹೊರಟನು. ಮಗನಿಗೆ ದಿಗ್ವಿಜಯವಾಗಲೆಂದು ಹರಸಿ, ಮೆಂಟರಿಗೆ ಸಾ|| ನಮಸ್ಕಾರವನ್ನು ಮಾಡಿ ತನ್ನ ಗಂಡನೂ ಮಗನೂ ಶೀಘ್ರದಲ್ಲಿಯೇ ಬಂದು ತನ್ನ ಮಾನವನ್ನು ಉಳಿಸುವಂತೆ ಮಾಡಲೆಂದು, ಜಗದೀಶ್ವರನ ಪೂಜೆಯನ್ನು ಮಾಡುತ್ತಾ, ಸದಾ ದಾನಧರ್ಮಗಳನ್ನು ಮಾಡುತ್ತಾ, ತನ್ನ ಪಾತಿವ್ರತ್ಯಕ್ಕೆ ಭಂಗವೇನಾದರೂ ಬರುವ ಪಕ್ಷದಲ್ಲಿ, ದೇಹವನ್ನು ಬಿಡುವೆನೆಂದು ನಿಶ್ಚಯಿಸಿ ಮಾಡಿಕೊಂಡು, ವಿಷದ ಗುಳಿಗೆಯನ್ನೂ, ಆತ್ಮರಕ್ಷಣೆಗೆ ಸಾಧಕವಾದ ಆಯುಧಗಳನ್ನೂ, ಇಟ್ಟುಕೊಂಡು, ಒಂದು ವರ್ಷದವರೆಗೂ ತನಗೆ ವ್ರತವು ಇರುವುದಾಗಿಯೂ, ಅನಂತರ ದೈವಾಜ್ಞೆಯಂತೆ ನಡೆಯಬಹುದೆಂಬದಾಗಿಯೂ, ತನ್ನ ಮಾನಭಂಗವನ್ನು ಮಾಡಬೇಕೆಂದು ಬಂದಿದ್ದವರಿಗೆ ಹೇಳಿ, ದೇವತಾರಾಧನೆಯಲ್ಲಿ ನಿರತಳಾಗಿ ಆಹಾರವಿಹಾರಗಳಲ್ಲಿ ಪರಾಙ್ಮುಖಳಾಗಿ, ಜಗದೀಶ್ವರನ ದುಷ್ಟನಿಗ್ರಹ ಶಿಷ್ಟಪರಿಪಾಲನೆಯ ಕರ್ಮಗಳನ್ನು ಪರೀಕ್ಷಿಸುವುದರಲ್ಲಿ ಪರಾಯಣಳಾಗಿ, ಆಕೆಯು ಇದ್ದಳು.

ಈ ಮಧ್ಯೆ ಕೆಲಿಪ್ಸೋ ಎಂಬ ಕಿನ್ನರಿಯ ದ್ವೀಪಕ್ಕೆ ಯೂಲಿಸೆಸ್ಸನು ಹೋಗಿರುವನೆಂದು ವರ್ತಮಾನವು ಬಂದಿತು. ಟೆಲಿಮಾಕಸ್ಸನೂ ಮೆಂಟರೂ ಹಡಗನ್ನು ಏರಿ, ಆ ದ್ವೀಪದ ಕಡೆಗೆ ಹೊರಟರು. ಯೂಲಿಸಸ್ಸನ ರೂಪಲಾವಣ್ಯಗಳನ್ನು ನೋಡಿ, ಕೆಲಿಪ್ಸೋ ಎಂಬ ಕಿನ್ನರಿಯು ಮೋಹಿತಳಾಗಿ, ಸ್ವೈರಿಣಿಯರಿಗೆ ಸಹಜವಾದ ಇಂದ್ರಜಾಲ ಮಹೇಂದ್ರಜಾಲ ವಿದ್ಯೆಗಳಿಂದ ಆತನನ್ನು ಸ್ವಾಧೀನಪಡಿಸಿಕೊಳ್ಳಬೇಕೆಂದು, ಅವಳು ಪ್ರಯತ್ನ ಮಾಡಿದಳು. ಜಿತೇಂದ್ರಿಯರಲ್ಲ ಅಗ್ರಗಣ್ಯನಾದ ಯೂಲಿಸೆಸ್ಸನು, ಅವಳ ಪಾಶಕ್ಕೆ ಒಳಗಾಗದೆ, ಅವಳನ್ನು ತಿರಸ್ಕರಿಸಿ ಆಗ ತಾನೇ ಹೊರಟು ಹೋಗಿದ್ದನು. ಮೋಹಪರವಶಳಾಗಿ ಅವಳು ಕ್ಲೇಶಪಡುತ್ತಿದ್ದಳು. ಆ ಕಾಲಕ್ಕೆ ಸರಿಯಾಗಿ ಟೆಲಿಮಾಕಸ್ಸನ ಹಡಗು ಆ ದ್ವೀಪದ ಸಮೀಪದಲ್ಲಿ ಬಂಡೆಗೆ ತಗಲಿ ಮುಳುಗಿಹೋಯಿತು. ಟೆಲಿಮಾಕಸ್ಸನೂ ಮತ್ತು ಮೆಂಟರೂ ಬಹಳ ಶ್ರಮಪಟ್ಟು ಈಜಿಕೊಂಡು ಹೋಗಿ ದ್ವೀಪವನ್ನು ಸೇರಿದರು. ಬಟ್ಟೆ

ಗಳು ಒದ್ದೆಯಾಗಿದ್ದವು. ಈಜುವುದರಲ್ಲಿ ಬೇಜಾರಾಗಿ, ಅನ್ನೋದಕಗಳಲ್ಲಿ ಆಸಕ್ತಿಯು ವಿಶೇಷವಾಗಿ ಉಂಟಾಗಿತ್ತು. ಯೂಲಿಸೆಸ್ಸನು ಆ ದ್ವೀಪಕ್ಕೆ ಪ್ರಭುವಾದ ಈಕೆಯ ಅತಿಥಿಯಾಗಿದ್ದು ಆಗತಾನೇ ಹೊರಟು ಹೋದನೆಂದು ತಿಳಿಯಬಂದಿತು. ಇವರಿಬ್ಬರೂ ಆ ಅವಸ್ಥೆಯಲ್ಲಿ ಆಕೆಯ ಸಮೀಪಕ್ಕೆ ಹೋಗಿ, ತಾವು ಬಂದ ಉದ್ದೇಶವನ್ನೂ, ತಮಗೆ ಉಂಟಾದ ಕಷ್ಟವನ್ನೂ ಶೃತಪಡಿಸಿ, ಒಣಗಿದ ಬಟ್ಟೆಗಳನ್ನೂ, ಅನ್ನೋದಕಗಳನ್ನೂ, ವಾಸಕ್ಕೆ ಸ್ವಲ್ಪ ಅವಕಾಶವನ್ನೂ ಪ್ರಾರ್ಥಿಸಿದರು. ಟೆಲಿಮಾಕಸ್ಸನನ್ನು ನೋಡಿದ ಕೂಡಲೇ, ತನ್ನ ಅನುರಾಗಕ್ಕೆ ಪಾತ್ರನಾಗಿದ್ದ ಯೂಲಿಸೆಸ್ಸನೇ ಬಂದನೆಂದು ಅವಳು ಭ್ರಮೆಪಟ್ಟಳು. ಟೆಲಿಮಾಕಸ್ಸನು ಅವನ ಮಗನೆಂದು ತಿಳಿದ ಕೂಡಲೆ, ಅವನ ಅಸಾಧಾರಣವಾದ ರೂಪಲಾವಣ್ಯಗಳನ್ನು ನೋಡಿ, ಅವನಲ್ಲಿ ವಿಶೇಷ ಅನುರಕ್ತಳಾದಳು. ಅವರಿಗೆ ಬೇಕಾದ ಉಪಚಾರಗಳಿಗೆಲ್ಲಾ ಏರ್ಪಾಡನ್ನು ಮಾಡಿ, ತನ್ನ ಮನೋರಥವು ಕೈಗೂಡುವ ಕಾಲವು ಬಂದಿತೆಂದು ತಿಳಿದುಕೊಂಡಳು. ಟೆಲಿಮಾಕಸ್ಸನ ಜೊತೆಯಲ್ಲಿದ್ದ ಮೆಂಟರಿನ ತೇಜಸನ್ನು ನೋಡಿದ ಕೂಡಲೆ ಈಕೆಗೆ ತುಂಬಾ ಭಯವಾಯಿತು. ಈಕೆಯು ಹಾಕಿದ ಪ್ರಶ್ನೆಗಳಿಗೆ ಟೆಲಿಮಾಕಸ್ಸನು ಧಾರಾಳವಾಗಿಯೂ, ಆದರವಾಗಿಯೂ, ಸಂತೋಷದಿಂದಲೂ, ಉತ್ತರಗಳನ್ನು ಕೊಟ್ಟನು. ಈ ಸಂಭಾಷಣದಲ್ಲಿ ಆತನು ತುಂಬಾ ಪ್ರೀತಿಯನ್ನೂ, ಅನುರಾಗವನ್ನೂ ತೋರಿಸಿದನು. ಮೆಂಟರನ ಸಂಭಾಷಣವು ಹಾಗಿರಲಿಲ್ಲ. ಪ್ರಶ್ನೆಗೆ ತಕ್ಕ ಉತ್ತರಗಳನ್ನು ಸಂಕ್ಷೇಪವಾಗಿ ಕೊಟ್ಟು, ತನ್ನ ಮನೋಭಾವವು ಅಭೇದ್ಯವಾಗಿರುವಂತೆ ಅವನು ನಡೆದುಕೊಂಡನು.

“ ನಾನು ಹಾಕತಕ್ಕ ಮಂಕುಬೂದಿಗೆ ಸ್ವಾಧೀನರಾಗದೇ ಇರತಕ್ಕವರೇ ಅಪೂರ್ವ. ಯೂಲಿಸೆಸ್ಸನು ನನ್ನ ಮರುಳಿಗೆ ಸಿಕ್ಕಲಿಲ್ಲ. ಈ ಮೆಂಟರನು ಅವನಿಗಿಂತಲೂ ಅಸಾಧ್ಯನಾಗಿರುವಂತೆ ತೋರುತ್ತದೆ. ಈ ಟೆಲಿಮಾಕಸ್ಸನು ನನಗೆ ಅನುರೂಪನಾದ ನಾಯಕನಾಗಿರುವನು. ಸರ್ವಪ್ರಯತ್ನದಿಂದಲೂ ಇವನನ್ನು ವಶಮಾಡಿಕೊಂಡು, ಈ ಲೋಕವನ್ನೇ ಸ್ವರ್ಗಪ್ರಾಯವನ್ನಾಗಿ ಮಾಡಿಕೊಳ್ಳಬೇಕು ” ಎಂದು ಪರ್ಯಾಲೋಚಿಸಿ, ಈ ಕಿನ್ನರಿಯು ಅವರಿಬ್ಬರಿಗೂ ಸಕಲ ಶೈತ್ಯೋಪಚಾರಗಳನ್ನು ಮಾಡುವುದಕ್ಕೆ ಆಜ್ಞೆಯನ್ನು ಮಾಡಿದಳು.

“ ಜಗದೀಶ್ವರನು ತನ್ನ ಕ್ಷೇಮಾರ್ಥವಾಗಿ ಇವರ ಹಡಗು ಮುಳುಗುವಂತೆ ಮಾಡಿ, ಅವರನ್ನು ತನ್ನ ಅಧೀನರಾಗುವಂತೆ ಮಾಡಿರುವನು ” ಎಂದು ಅವಳು ತಿಳಿದುಕೊಂಡಳು. ಇವರನ್ನು ನೋಡಿ, ಅವಳಿಗೆ ಪರಮಾನಂದವಾಯಿತು. ಈ ಆನಂದಸಾಗರದಲ್ಲ ಈಜುತ್ತಿದ್ದಳು. ಅವರು ಹೊಸ ಉಡಿಗೆಗಳನ್ನು ಹಾಕಿಕೊಂಡು, ಭೋಜನಾದಿಗಳನ್ನು ಮಾಡಿಕೊಂಡು, ವಿಶ್ರಮಿಸಿಕೊಂಡ

ತರುವಾಯ, ಟೆಲಿಮಾಕಸ್ಸನನ್ನು ಕರೆಸಿ, "ನಿನ್ನ ವೃತ್ತಾಂತವೇನು" ಎಂದು ಕೇಳಿದಳು. ಆತನು ತನ್ನ ಪೂರ್ವೋತ್ತರಗಳನ್ನೆಲ್ಲಾ ತಿಳಿಸಿ, ತಂದೆಯನ್ನು ಹುಡುಕಿಕೊಂಡು ಬಂದಿರುವುದಾಗಿ ಹೇಳಿ, "ನನ್ನ ತಂದೆಯ ವೃತ್ತಾಂತವೇನಾದರೂ ತಿಳಿದಿದ್ದರೆ ಅದನ್ನು ತಿಳಿಸಬೇಕು." ಎಂದು ಪ್ರಾರ್ಥಿಸಿದನು.

ಅದನ್ನು ಕೇಳಿ, ಈ ಕಿನ್ನರಿಯು "ನಿನ್ನ ತಂದೆಯ ವಿಷಯವನ್ನು ನಾನು ಬಲ್ಲೆನು. ಅವನು ಇಲ್ಲಿಗೆ ಬಂದಿದ್ದನು. ನನ್ನ ಅತಿಥಿಯಾಗಿಯೂ ಇದ್ದನು. ಇಲ್ಲಿಂದ ಹೊರಟು ಹೋದನು. ಅವನ ಹಡಗು ಮುಳುಗಿ ಹೋಯಿತು. ಅವನ ಗತಿಯೇನಾಯಿತೋ ನನಗೆ ತಿಳಿಯದು. ಅವನ ವೃತ್ತಾಂತವನ್ನೂ, ನಿನ್ನ ವೃತ್ತಾಂತವನ್ನೂ ತಿಳಿದುಕೊಳ್ಳಬೇಕೆಂಬ ಕುತೂಹಲವು ನನಗೆ ಇರುವುದು. ನೀವು ಯಾರು? ನಿಮ್ಮನ್ನು ಹೊಂದಿದ ಭಾಗ್ಯವು ಯಾವ ದೇಶಕ್ಕೆ ಲಭ್ಯವಾಗಿರುವುದು? ನಿನ್ನ ತಂದೆಯು ಏತಕ್ಕೋಸ್ಕರ ನಿಮ್ಮ ದೇಶವನ್ನು ಬಿಟ್ಟನು? ಇದನ್ನು ತಪಶೀಲುವಾರಾಗಿ ಕೇಳಬೇಕೆಂಬ ಕುತೂಹಲವು ನನಗೆ ಉಂಟಾಗಿರುವುದು." ಎಂದು ಹೇಳಿದಳು. ಅದಕ್ಕೆ ಟೆಲಿಮಾಕಸ್ಸನು ಹೇಳಿದ್ದೇನಂದರೆ:—

"ನಮ್ಮ ತಂದೆಯು ಇಥಾಕಾ ನಗರದ ಪ್ರಭುವು. ಟ್ರಾಯ್ ದೇಶಕ್ಕೂ, ಗ್ರೀಸ್ ದೇಶಕ್ಕೂ ನಡೆದ ಯುದ್ಧದಲ್ಲಿ ಮಿತ್ರಮಂಡಲಿಯವರಿಗೆ ನಮ್ಮ ತಂದೆಯು ಸಹಾಯವನ್ನು ಮಾಡಿ, ಟ್ರಾಯ್ ವಂಶವನ್ನೇ ನಿರ್ವಂಶ ಮಾಡಿ, ದುಷ್ಟನಿಗ್ರಹವನ್ನು ಪೂರೈಸಿ, ಧರ್ಮಕ್ಕೆ ಉಂಟಾಗಿದ್ದ ನ್ಯೂನತೆಯನ್ನು ಪರಿಹಾರಮಾಡಿ, ಶಿಷ್ಟಪರಿಪಾಲನೆಯ ಕೆಲಸವು ಪೂರೈಸಿದ ಕೂಡಲೆ, ದೇಶಾಟನವನ್ನು ಮಾಡಿಕೊಂಡು ಬರಬೇಕೆಂದು ಪ್ರಯಾಣ ಮಾಡಿದನು. ಅವನನ್ನು ಹುಡುಕಿಕೊಂಡು ನಾನು ಬಂದಿರುತ್ತೇನೆ."

ಕೆಲಿಪ್ಸೊ ಎಂಬ ಕಿನ್ನರಿಯು ಟೆಲಿಮಾಕಸ್ಸನ ಮಾತುಗಳನ್ನು ಕೇಳಿ ಅವನಲ್ಲಿ ತುಂಬಾ ಅನುರಕ್ತಳಾದಳು. ಯೂಲಿಸೆಸ್‌ನಲ್ಲಿದ್ದ ಗುಣಾತಿಶಯಗಳೆಲ್ಲಾ ಇವನಲ್ಲಿಯೂ ಇದ್ದವು. ಇವನು ಆಜಾನುಬಾಹುವಾಗಿಯೂ, ಅಸಾಧಾರಣವಾದ ಗಾಂಭೀರ್ಯವುಳ್ಳವನಾಗಿಯೂ ಇದ್ದನು. ಇವನ ಮಾತುಗಳ ಮಾಧುರ್ಯವೂ ಅಸಾಧಾರಣವಾಗಿತ್ತು. "ನೀನು ಹೇಳಿದ ವೃತ್ತಾಂತಗಳನ್ನೆಲ್ಲಾ ಕೇಳಿದೆನು. ನನ್ನ ಅಪ್ಪಣೆ ಇಲ್ಲದೆ, ನನ್ನ ದೇಶಕ್ಕೆ ಪುರುಷರಾದವರು ಯಾರೂ ಬರಕೂಡದೆಂದು ನಾನು ನಿಯಮವನ್ನು ಮಾಡಿರುತ್ತೇನೆ. ನನ್ನ ನಿಯಮವನ್ನು ಉಲ್ಲಂಘಿಸಿದವರಿಗೆ ಬಲವಾದ ಶಿಕ್ಷೆಯು ವಿಧಿಸಲ್ಪಡುವುದು. ಆದರೆ, ನೀವಿಬ್ಬರೂ ವಿಧಿಯಿಲ್ಲದೆ, ಹಡಗು ಮುಳುಗಿಹೋದುದರಿಂದ ನನ್ನ ದ್ವೀಪವನ್ನು ಪ್ರವೇಶಿಸಿದಿರಿ. ಅತಿಕ್ರಮ ಪ್ರವೇ

ಶವನ್ನು ನೀವು ಮಾಡಿರುವುದಿಲ್ಲ. ನನ್ನ ದೇಶಕ್ಕೆ ನನ್ನ ಅನುಮತಿಯಿಲ್ಲದೆ, ಪುರುಷರ್‍ಯಾರೂ ಬರಕೂಡದು. ಬಂದ ಮೇಲೆ ನನ್ನ ಅನುಮತಿಯಿಲ್ಲದೆ, ಹೊರಡಕೂಡದು" ಎಂಬದಾಗಿ ಈ ಕಿನ್ನರಿಯು ಹೇಳಿದಳು.

ಇವರು ಬಂದುದಕ್ಕೋಸ್ಕರ ಮನಸ್ಸಿನಲ್ಲಿ ಸಂತೋಷವಿದ್ದಾಗ್ಯೂ, ಬಹಿರಂಗವಾಗಿ ಔದಾಸೀನ್ಯವನ್ನು ತೋರಿಸಿದಳು. ಅದಕ್ಕೆ ಟೆಲಿಮಾಕಸ್ಸನು ಹೇಳಿದ್ದೇನಂದರೆ:—

"ನೀನು ದೇವತೆಯೋ ಅಥವಾ ಮನುಷ್ಯಳೋ ನನಗೆ ತಿಳಿಯದು. ಅದು ಹೇಗಾದರೂ ಇರಲಿ. ನಾವು ಬಹಳ ದುರದೃಷ್ಟವಂತರು. ಮಳೆ, ಗಾಳಿ, ಸಿಡಿಲು ಮೊದಲಾದವುಗಳಿಂದ ಕಷ್ಟಪಟ್ಟೆವು. ಈ ದ್ವೀಪದ ತೀರದಲ್ಲಿ ನಮ್ಮ ಹಡಗು ಮುಳುಗಿ ಹೋಯಿತು. ಅನಿರ್ವಚನೀಯವಾದ ಕ್ಲೇಶಪಟ್ಟು, ದೈವಯೋಗದಿಂದ ಈ ದ್ವೀಪವನ್ನು ಸೇರಿದೆವು. ನಿನ್ನ ನಿಯಮಗಳಿಗೆ ನಾವು ಬದ್ಧರಲ್ಲ. ನೀನು ಮಾಡಿದ ಉಪಕಾರಕ್ಕೆ ನಾವು ಕೃತಜ್ಞರಾಗಿದ್ದೇವೆ. ನಮ್ಮ ಕೆಲಸದ ಮೇಲೆ ನಾವು ಹೊರಡುತ್ತೇವೆ. ನಮ್ಮ ಪ್ರಯಾಣಕ್ಕೆ ಅನುಕೂಲವನ್ನು ಮಾಡಿಕೊಟ್ಟರೆ, ನಾವು ಕೃತಜ್ಞರಾಗಿರುತ್ತೇವೆ."

"ಟ್ರಾಯ್ ದೇಶದಲ್ಲಿ ಯುದ್ಧಮಾಡಿ, ನಿಮ್ಮ ತಂದೆಯು ದುಷ್ಟನಿಗ್ರಹವನ್ನು ಮಾಡಿದನೆಂದು ಹೇಳಿದೆಯಷ್ಟೆ. ಅದರ ವೃತ್ತಾಂತವೇನು ವಿಶದವಾಗಿ ಹೇಳು"? ಎಂಬದಾಗಿ ಆಕೆಯು ಕೇಳಿದಳು. ಇದಕ್ಕೆ ಟೆಲಿಮಾಕಸ್ಸನು ಹೇಳಿದ್ದೇನಂದರೆ:—

"ಗ್ರೀಸ್ ದೇಶದಲ್ಲಿ ಮಿನಲಯಾಸ್ ಎಂಬ ಒಬ್ಬ ರಾಜನಿದ್ದನು. ಟ್ರಾಯ್ ದೇಶದ ರಾಜಕುಮಾರನಾದ ಪ್ಯಾರಿಸ್ ಎಂಬಾತನು ಮಿನಲಯಾಸ್ ಎಂಬಾತನ ಹೆಂಡತಿಯಾದ ಹೆಲೆನ್ ಎಂಬಾಕೆಯನ್ನು ಅಪಹರಿಸಿಕೊಂಡು ಹೋದನು. ಸದರಿ ಪ್ಯಾರಿಸನಿಗೆ ಶಿಕ್ಷೆಯನ್ನು ಮಾಡುವುದಕ್ಕೋಸ್ಕರ ಮಿನಲಯಾಸ್ ಎಂಬುವನೂ, ಅವನ ಪಕ್ಷವಾಗಿ ಅನೇಕ ದೊರೆಗಳೂ ಟ್ರಾಯ್ ದೇಶಕ್ಕೆ ಹೊರಟರು. ನಮ್ಮ ತಂದೆಯಾದ ಯೂಲಿಸೆಸ್ಸನೂ ಅವರ ಜತೆಯಲ್ಲಿ ಹೊರಟನು. ಉಭಯ ಪಂಗಡದವರಿಗೂ ೯ ವರುಷ ಘೋರಯುದ್ಧವು ನಡೆಯಿತು. ಪ್ಯಾರಿಸ್‌ನೂ, ಅವನ ವಂಶಕ್ಕೆ ಸೇರಿದ ಸಕಲ ಜನಗಳೂ ನಿರ್ಮೂಲ ಮಾಡಲ್ಪಟ್ಟರು. ನಮ್ಮ ತಂದೆಯಾದ ಯೂಲಿಸೆಸ್ಸನು ಈ ಯುದ್ಧದಲ್ಲಿ ಮುಖ್ಯಮಂತ್ರಿಯಾಗಿದ್ದು, ಸಕಲ ಕಾರ್ಯಗಳನ್ನೂ ಜರುಗಿಸಿ, ಧರ್ಮಸಂಸ್ಥಾಪನೆಯನ್ನು ಮಾಡಿ, ದೇಶಾಟನ ಮಾಡುವದಕ್ಕೆ ಹೊರಟಿರುವನು. ನಮ್ಮ ತಾಯಿಯಾದ ಪೆನೆಲೋಪ್ ಎಂಬಾಕೆಯು ನಮ್ಮ ತಂದೆಯನ್ನು ಕರೆದುಕೊಂಡು ಬರುವುದಕ್ಕೆ ನನ್ನನ್ನು ಕಳುಹಿಸಿದಾಳೆ.

ನಾನು ಅವನನ್ನು ಹುಡುಕಿಕೊಂಡು ಬಂದಿರುವೆನು. ಅವನು ಬದುಕಿರುವನೋ, ಕಾಲಾಧೀನನಾಗಿರುವನೋ ತಿಳಿಯದು. ನೀನು ದೇವತೆಯಾಗಿರುವಂತೆ ತೋರುತ್ತದೆ. ಅವನ ವಿಷಯವೇನಾದರೂ ನಿನಗೆ ತಿಳಿದಿದ್ದರೆ, ದಯವಿಟ್ಟು ತಿಳಿಸಬೇಕು " ಎಂದು ಪ್ರಾರ್ಥಿಸಿದನು.

ಇವನ ವಾಗ್ವೈಖರಿಯೂ, ಇವನ ವಿವೇಕವೂ, ಇವನ ಯೌವನವೂ ಕೆಲಿಪ್ಸೋ ಎಂಬ ಕಿನ್ನರಿಗೆ ಆಶ್ಚರ್ಯವನ್ನೂ ಅನುರಾಗವನ್ನೂ ಹುಟ್ಟಿಸಿತು. ಅವನನ್ನು ಚೆನ್ನಾಗಿ ಈಕ್ಷಿಸಿ ನೋಡಿದಳು. ಸ್ವಲ್ಪ ಮೌನವನ್ನವಲಂಬಿಸಿ, ಯೋಚನೆಯನ್ನು ಮಾಡಿದಳು. ಕೊನೆಗೆ ಅವಳು ಹೇಳಿದ್ದೇನಂದರೆ :—

" ನಿನ್ನ ತಂದೆಯ ಪೂರ್ವೋತ್ತರಗಳನ್ನು ನಿನಗೆ ತಿಳಿಸುವೆನು. ಈ ಕಥೆಯು ದೀರ್ಘವಾದದ್ದು. ನೀನು ಆಯಾಸದಿಂದ ಬಳಲಿರುತ್ತೀಯೆ. ನೀನು ವಿಶ್ರಮಿಸಿಕೊಳ್ಳುವುದು ಉತ್ತಮ. ಈ ಮನೆಯು ನಿನ್ನದು. ಈ ದ್ವೀಪವು ನಿನ್ನದು. ನಾನೂ ನಿನ್ನವಳು. ನೀನು ಅದೃಷ್ಟಶಾಲಿಯಾದರೆ, ಸಕಲ ಸೌಭಾಗ್ಯಗಳನ್ನೂ ಇಲ್ಲಿ ಅನುಭವಿಸಬಹುದು."

ಈ ರೀತಿಯಲ್ಲಿ ಹೇಳಿ, ಅಲ್ಲಿಂದ ಎದ್ದಳು. ಕೂಡಲೆ, ಅವಳ ಸುತ್ತಲೂ ಸ್ತ್ರೀಯರೆಲ್ಲರೂ ಎದ್ದರು. ಅವಳ ಸೌಂದರ್ಯವೂ, ಅವಳ ಉಡಿಗೆ-ತೊಡಿಗೆಗಳೂ, ಅವಳ ಲಾವಣ್ಯವೂ, ಅವಳ ವಾಗ್ವೈಖರಿಯೂ, ಅವಳ ಕಟಾಕ್ಷವೀಕ್ಷಣವೂ, ಪ್ರೀತಿಪೂರ್ವಕವಾದ ಅವಳ ಸಂಭಾಷಣಗಳೂ ಟೆಲಿಮಾಕಸ್ಸನ ಮನಸ್ಸನ್ನು ಆಕರ್ಷಿಸಿದವು. ಅವರು ಸಮೀಪದಲ್ಲಿದ್ದ ಒಂದು ಉಪವನಕ್ಕೆ ಹೋಗಿ, ಅಲ್ಲಿನ ಲತಾಗೃಹ ಒಂದಕ್ಕೆ ಪ್ರವೇಶ ಮಾಡಿದರು. ಸಮೀಪದಲ್ಲಿಯೇ ಒಂದು ಗುಹೆಯು ಇತ್ತು. ನಾನಾ ವಿಧವಾದ ಬಳ್ಳಿಗಳಿಂದ ಈ ಗುಹೆಯ ಮುಂಭಾಗದಲ್ಲಿದ್ದ ಚಪ್ಪರವು ಶೋಭಮಾನವಾಗಿತ್ತು. ಆಗ ಬಿಸಲು ವಿಶೇಷವಾದಾಗ್ಯೂ, ಲತೆಗಳ ಮೇಲಿನಿಂದ ಬೀಸುತ್ತಿದ್ದ ಮಂದಮಾರುತದಿಂದ ಆ ಬಿಸಲೂ ಕೂಡ ಮನೋಹರವಾಗಿತ್ತು. ಸಮೀಪದಲ್ಲಿ ಇಂಪಾದ ಧ್ವನಿಯೊಡನೆ ಒಂದು ಚಿಕ್ಕ ನದಿಯು ಹರಿಯುತ್ತಿತ್ತು. ಅಲ್ಲಿ ಅನೇಕ ಸರೋವರಗಳಿದ್ದವು. ಅವುಗಳಲ್ಲಿ ಕಮಲಗಳು ಕೋಮಲವಾಗಿ ಬೆಳೆದಿದ್ದವು. ಅವುಗಳಿಂದ ಮಕರಂದವನ್ನು ಸ್ವೀಕರಿಸುವುದಕ್ಕೆ ಭ್ರಮರಗಳು ಝೇಂಕಾರವನ್ನು ಮಾಡುತ್ತಾ, ಮಕರಂದ ಪಾನದಲ್ಲಿ ಆಸಕ್ತವಾಗಿದ್ದವು. ಆ ಗುಹೆಯ ಸುತ್ತಲೂ ಇದ್ದ ಪ್ರದೇಶವು ಹಸರು ಜಮಖಾನವನ್ನು ಹಾಸಿದ್ದರೆ ಹೇಗೋ ಹಾಗೆ ಶೋಭಿಸುತ್ತಿತ್ತು. ಅದರ ಸಮೀಪದಲ್ಲಿ ಒಂದು ಉಪವನವು ಇತ್ತು. ಈ ವನದಲ್ಲಿ ಸುಗಂಧವನ್ನು ಎರಚುತ್ತಿದ್ದ ಪುಷ್ಪಗಳೂ, ಚಿನ್ನವನ್ನು ಅಣಕಿಸುತ್ತಿದ್ದ ಫಲಗಳೂ, ಬೇಕಾದ

ಹಾಗೆ ಬೆಳೆದಿದ್ದವು. ನಾನಾ ವಿಧವಾದ ಪಕ್ಷಿಗಳು ಗಾನಮಾಡುತ್ತಿದ್ದವು. ಈ ವಾದ್ಯವಿಶೇಷಗಳ ಜತೆಗೆ ನಿರ್ಝರಗಳ ಹೃದಯಂಗಮವಾದ ಶಬ್ದವೂ ಕೂಡ ಸೇರಿಕೊಂಡಿತ್ತು. ಇದೇ ಕೆಲಿಪ್ಸೋ ಎಂಬುವಳ ವಿಹಾರಸ್ಥಾನ. ಇದಕ್ಕೆ ಸ್ವಲ್ಪ ದೂರದಲ್ಲಿ ಸಮುದ್ರತೀರವೂ ಇತ್ತು. ಈ ತೀರಕ್ಕೆ ಸಮುದ್ರದ ಅಲೆಗಳು ಕೆಲವು ಕಾಲ ಮಂದಮಂದವಾಗಿಯೂ, ಮತ್ತೆ ಕೆಲವು ಕಾಲ ಬಹಳ ಬಲವಾಗಿಯೂ ಹೊಡೆಯುತ್ತಿದ್ದವು. ಅದರ ಸಮೀಪದಲ್ಲಿ ಅನೇಕ ಚಿಕ್ಕ ಚಿಕ್ಕ ದ್ವೀಪಗಳಿದ್ದವು. ಅವುಗಳಲ್ಲಿ ಪ್ರತಿಯೊಂದೂ ಫಲಪುಷ್ಪಗಳಿಂದ ಪರಿಶೋಭಿಸುತ್ತಿದ್ದವು. ಅಲ್ಲಿನ ಪರ್ವತಾಗ್ರಗಳು ಹಿಮದಿಂದ ಆವರಿಸಲ್ಪಟ್ಟು, ಕೈಲಾಸದಂತೆ ಶೋಭಿಸುತ್ತಿದ್ದವು. ಆ ಪರ್ವತದ ಪ್ರಸ್ಥಾನಗಳಲ್ಲಿ ಅನೇಕ ವಿಧವಾದ ಮರಗಳೂ, ಗಿಡಗಳೂ, ಫಲಗಳನ್ನೂ ಪುಷ್ಪಗಳನ್ನೂ ಧರಿಸಿಕೊಂಡು, ಭೂಲೋಕದ ಸ್ವರ್ಗದಂತೆ ಶೋಭಿಸುತ್ತಿದ್ದವು. ಅದನ್ನೆಲ್ಲಾ ಈ ಕಿನ್ನರಿಯ ಭೃತ್ಯರು ಟೆಲಿಮಾಕಸ್ಸನಿಗೆ ತೋರಿಸಿ, “ ಈಗ ನೀವು ಇಲ್ಲಿ ವಿಶ್ರಮಿಸಿಕೊಳ್ಳಬಹುದು ಎಂದು ಹೇಳಿದರು. ಆಯಾಸವನ್ನು ಪರಿಹಾರ ಮಾಡಿಕೊಂಡು ಬಂದ ಮೇಲೆ, ಉಳಿದ ವಿದ್ಯಮಾನಗಳನ್ನು ನಮ್ಮ ದೇವಿಯು ತಿಳಿಸುವಳು.” ಎಂದು ಹೇಳಿದರು. ಆ ರಾಜಯೋಗ್ಯವಾದ ಗುಹೆಯಲ್ಲಿ ಟೆಲಿಮಾಕಸ್ಸನಿಗೂ, ಅವನ ಗುರುವಾದ ಮೆಂಟರಿಗೂ ಏರ್ಪಡಿಸಲ್ಪಟ್ಟಿದ್ದ ಹಂಸತೂಲಿಕಾತಲ್ಪಗಳ ಮೇಲೆ ವಿಶ್ರಾಂತಿಗೆ ಅವಕಾಶವು ಮಾಡಲ್ಪಟ್ಟಿತ್ತು. ಆ ಗುಹೆಯನ್ನೂ, ಅಲ್ಲಿದ್ದ ಅತ್ಯಂತ ಮನೋಹರವಾದ ಮಂಚವನ್ನೂ, ಹಾಸಿಗೆಯನ್ನೂ, ಪೆಟ್ಟಿಗೆಗಳನ್ನೂ, ಮನೋಹರವಾದ ಸಾಮಾನುಗಳನ್ನೂ ನೋಡಿ, ಟೆಲಿಮಾಕಸ್ಸನು ಆನಂದಪರವಶನಾದನು. ಅವನ ಅವಸ್ಥೆಯನ್ನು ನೋಡಿ, ಮೆಂಟರನು ಇವನಿಗೆ ಹೇಳಿದ್ದೇನೆಂದರ .--

“ ಯೂಲಿಸೆಸ್ಸನು ಜಿತೇಂದ್ರಿಯರಲ್ಲಿ ಅಗ್ರಗಣ್ಯನು. ನೀನು ಅವನ ಮಗನು ಹೌದೋ ಅಲ್ಲವೋ ಎಂಬ ಸಂದೇಹವು ನನಗೆ ಉಂಟಾಗುತ್ತಿದೆ. ಸಾಮಾನ್ಯ ಜನಗಳಂತೆ ನೀನು ಇಂದ್ರಿಯಪರವಶತೆಯನ್ನು ತೋರಿಸುತ್ತಲಿದ್ದೀಯೆ. ಇದು ನಿನ್ನ ವಂಶಕ್ಕೆ ಅನುಚಿತವಾದದ್ದು. ನಿನ್ನ ಕರ್ತವ್ಯವನ್ನು ನೀನು ಮರೆತಿರುವಿ. ಅಲ್ಪಜ್ಞರಾದ ಹೆಂಗಸರಂತೆ ಉಡಿಗೆ-ತೊಡಿಗೆಗಳಲ್ಲಿಯೂ, ಇಂದ್ರಿಯ ವ್ಯಾಪಾರಗಳಲ್ಲಿಯೂ ಆಸಕ್ತನಾದವನಿಗೆ ಎಂದಿಗೂ ಮಂಗಳವಾಗುವುದಿಲ್ಲ. ಅವನಿಗೆ ಕೀರ್ತಿಯು ಎಂದಿಗೂ ಬರುವುದಿಲ್ಲ. ಜಘನ್ಯವಾದ ಭೋಗಗಳಲ್ಲಿ ಆಸಕ್ತರಾದವರು ಎಂದಿಗೂ ಕೃತಾರ್ಥರಾಗುವುದಿಲ್ಲ. ನಿನ್ನ ತಂದೆಯ ಮಗನೆನ್ನಿಸಿಕೊಳ್ಳಬೇಕಾದರೆ, ನೀನು ಭೋಗಾಸಕ್ತಿಯನ್ನೆಲ್ಲಾ ಸಂಪೂರ್ಣವಾಗಿ ಜಯಿಸಬೇಕು. ಈ ಹೆಂಗಸಿನ ಮಾತಿಗೆ ಮರುಳಾಗಿ, ನೀನು ವಿವೇಕಹೀನನಾಗಿರುವುದನ್ನು ನೋಡಿದರೆ,

ನಿಮ್ಮ ತಾಯಿಯ ಆಜ್ಞೆಯನ್ನು ನೀನು ನೆರವೇರಿಸುವಂತೆ ತೋರುವುದಿಲ್ಲ. ಈ ವರುಷವು ಮುಗಿಯುವುದರೊಳಗಾಗಿ ನಿಮ್ಮ ತಂದೆಯನ್ನು ಕರೆದುಕೊಂಡು ಹೋಗುವುದು ಅಸಾಧ್ಯವಾಗುವುದು. ನಿಮ್ಮ ತಾಯಿಯು ಆತ್ಮಹತ್ಯವನ್ನು ಮಾಡಿಕೊಳ್ಳುವಳು. ನಿನ್ನ ದೇಶವು ಪರಾಧೀನವಾಗುವುದು. ನೀನು ಅಜಿತೇಂದ್ರಿಯನೆಂದು ತಿಳಿದ ಕೂಡಲೆ, ನಿಮ್ಮ ತಂದೆಯು ಮಾತ್ರವೇ ಅಲ್ಲದೆ, ಸಜ್ಜನರೆಲ್ಲರೂ ನಿನ್ನನ್ನು ತಿರಸ್ಕರಿಸುವರು. ನಮ್ಮ ಹಡಗು ಮುಳುಗಿಹೋದದ್ದು ಒಂದು ವಿಪತ್ತೆಂದು ಭಾವಿಸಲ್ಪಟ್ಟಿತ್ತು. ಈ ಕಿನ್ನರಿಯ ಬಲೆಗೆ ನೀನು ಬಿದ್ದಿರುವುದು ಅದಕ್ಕಿಂತಲೂ ದೊಡ್ಡ ವಿಪತ್ತು. ಮನುಷ್ಯನಿಗೆ ಅರಿಷಡ್ವರ್ಗಗಳು ಬಲವಾದ ಶತ್ರುಗಳೆಂದು ಹೇಳುತ್ತಾರೆ. ಇವುಗಳಲ್ಲಿ ಮೋಹವು ಅತ್ಯಂತ ಬಲವಾದ ಶತ್ರುವು. ನೀನು ಮೋಹವೆಂಬ ಪಾಶಕ್ಕೆ ಸಿಕ್ಕಿರುತ್ತೀಯೆ. ವಿವೇಕವನ್ನು ತಂದುಕೊಂಡು, ಜಿತೇಂದ್ರಿಯನಾಗಿದ್ದರೆ, ನಿನಗೆ ಇಷ್ಟಾರ್ಥಸಿದ್ಧಿಯಾಗುವುದು. ಹಾಗಿಲ್ಲದಿದ್ದರೆ, ನಿನಗೆ ಇಹಪರಗಳೆರಡೂ ತಪ್ಪುವುವು. ಎಚ್ಚರಿಕೆಯಾಗಿರು. ಇವಳು ವಿಷಕನ್ನಿಕೆಯೆಂದು ತಿಳಿದುಕೋ. ಇವಳ ಪಾಶಕ್ಕೆ ಬೀಳಬೇಡ'' ಎಂದು ಹೇಳಿದನು. ನಿಟ್ಟುಸಿರನ್ನು ಬಿಟ್ಟು, ಚಿಲಮಾಕಸ್ಸನು ಹೇಳಿದ್ದೇನೆಂದರೆ :—

"ಎಲೈ ಗುರವಾದ ಮೆಂಟರನೆ,—ಭೋಗದಲ್ಲಿ ಆಸಕ್ತನಾಗಿ, ನನ್ನ ಕರ್ತವ್ಯದಲ್ಲಿ ಪರಾಙ್ಮುಖನಾಗಿ, ಇವಳ ಪಾಶಕ್ಕೆ ಬೀಳದಂತೆ ನೀನೂ ಮತ್ತು ಜಗದೀಶ್ವರನೂ ನನ್ನನ್ನು ರಕ್ಷಿಸಬೇಕು. ಯೂಲಿಸಿಸ್ಸನ ಪುತ್ರನಾಗಿ, ಈ ಕಿನ್ನರಿಯ ಪಾಶಕ್ಕೆ ಬೀಳುವುದು ನನಗೆ ಯೋಗ್ಯವಾದುದಲ್ಲ. ನಮ್ಮ ಹಡಗು ಮುಳುಗಿ, ನಮಗೆ ಮಹಾ ವಿಪತ್ತು ಉಂಟಾಯಿತು. ಅದನ್ನು ತಪ್ಪಿಸಿಕೊಂಡು ಈ ದ್ವೀಪಕ್ಕೆ ಬಂದೆವು. ದೇವರು ನಮಗೆ ಪ್ರಸನ್ನನಾಗಿರುವನು. ನಾನು ಕರ್ತವ್ಯವನ್ನು ಮರೆಯುವುದಿಲ್ಲ. ನಾನು ಇವಳ ಪಾಶಕ್ಕೆ ಬೀಳುವುದಿಲ್ಲ. ಜಿತೇಂದ್ರಿಯನಾಗಿರುತ್ತೇನೆ. ಸಂದೇಹಪಡಬೇಡ'' ಎಂದು ಹೇಳಿದನು. ಅದಕ್ಕೆ ಮೆಂಟರನು :—

"ಇಂದ್ರಿಯ ಗ್ರಾಮಗಳ ವ್ಯಾಪಾರವು ಅಪ್ರತಿಹತವಾದದ್ದು. ಸಾರಾಸಾರ ವಿಚಾರಜ್ಞರಾದ ಪಂಡಿತೋತ್ತಮರೂ ಕೂಡ ಇಂದ್ರಿಯಪರವಶರಾಗಿ, ಇಹಪರಗಳನ್ನು ಕೆಡಿಸಿಕೊಳ್ಳುವರು. ಈ ಕಿನ್ನರಿಯು ಬಹಳ ರೂಪವತಿ. ಇವಳ ಮಾತುಗಳಲ್ಲಿ ಅಮೃತವು ಧಾರಾಕಾರವಾಗಿ ಸುರಿಯುತ್ತಿರುವುದು. ಇವಳ ನೋಟವೂ, ಇವಳ ಮಾತುಗಳೂ, ಇವಳ ಹಾವಭಾವಗಳೂ, ಇವಳ ಇಂದ್ರಜಾಲ ಮಹೇಂದ್ರಜಾಲ ವಿದ್ಯೆಗಳೂ, ನಿಜವಾದ ಸನ್ಯಾಸಿಗಳ ಮನಸ್ಸನ್ನೂ ಕೂಡ ಕೆಡಿಸುವಂತಿರುವುವು. ನಿನ್ನ ಮನಸ್ಸಿನಲ್ಲಿ ವಿಕಲ್ಪವು ಹುಟ್ಟಿರುವುದು. ದೌರ್ಬಲ್ಯವನ್ನು ತೋರಿಸುವುದಕ್ಕೆ ನೀನು ಉಪಕ್ರಮ ಮಾಡಿರುವಿ. ಇವಳಿಂದ ನಿನ್ನ ಧರ್ಮಬುದ್ಧಿಯು

ಮೂಲೋತ್ಪಾಟನವಾಗುವಂತೆ ತೋರುತ್ತದೆ. ಹಡಗು ಮುಳುಗಿದ್ದರಿಂದಲೂ, ಮರಣಭಯ ಉಂಟಾದ್ದರಿಂದಲೂ ನನಗೆ ಎಷ್ಟು ಕ್ಲೇಶವು ಉಂಟಾಯಿತೋ, ಅದರ ಶತಾಂಶ ಕ್ಲೇಶವು ಇವಳ ಸಹವಾಸದಿಂದ ನಿನಗೆ ಉಂಟಾಗಿದೆ. ವರ್ಷಾಕಾಲದಲ್ಲಿ ಹುಟ್ಟತಕ್ಕ ಪತಂಗದ ಹುಳುಗಳು ಬೆಂಕಿಯನ್ನು ಕಂಡು, ಅನಿವರ್ತನೀಯವಾದ ಆಕರ್ಷಣವನ್ನು ಹೊಂದಿ, ಅದರಲ್ಲಿ ಹೇಗೆ ಬಿದ್ದು ಸುಟ್ಟುಹೋಗುವುವೋ, ಆ ಅವಸ್ಥೆಯು ನಿನಗೆ ಬರುವಂತೆ ತೋರುತ್ತದೆ. ಇವಳ ಮಾತುಗಳಿಗೆ ಮರುಳಾಗಬೇಡ. ನಿನ್ನ ಪರಿಶುದ್ಧವಾದ ಮನೋಭಾವದಂತೆಯೇ ಅವಳ ಮನೋಭಾವವೂ ಇರುವುದೆಂದು ಭ್ರಮಿಸಬೇಡ. ನೀನು ಬಹಳ ಅಪಾಯಕ್ಕೆ ಸಿಕ್ಕಿರುವಿ. ಅನಿರ್ವಚನೀಯವಾದ ಅನರ್ಥಕ್ಕೆ ಗುರಿಯಾಗುವಿ ಎಂದು ನನಗೆ ತೋರುತ್ತದೆ. ಈ ಕಿನ್ನರಿಯ ಮಾತುಗಳಿಗೆ ಬೆರಗಾಗಬೇಡ. ಪುಷ್ಪಗಳಲ್ಲಿ ಆಚ್ಛಾದಿಸಲ್ಪಟ್ಟ ಸರ್ಪದಂತೆ ಇವಳನ್ನು ಭಾವಿಸು. ನಾಗರಹಾವಿನ ವಿಷಕ್ಕಿಂತಲೂ ಇವಳ ವಿಷವು ಅತ್ಯಂತ ತೀಕ್ಷ್ಣವಾದದ್ದು. ನಿನ್ನ ಇಷ್ಟಕ್ಕನುಸಾರವಾಗಿ ನಡೆಯಬೇಡ. ನಾನು ಹೇಳುವ ವಚನಗಳು ಕಟುವಾಕ್ಯಗಳಾಗಿದ್ದರೂ, ಹೇಗೋ ಹಾಗೆ ಅನುಷ್ಠಿಸು. ಹಾಗಿಲ್ಲದಿದ್ದರೆ, ಬಹಳ ಕಷ್ಟಕ್ಕೆ ಗುರಿಯಾಗುವಿ.'' ಈ ರೀತಿಯಲ್ಲಿ ಮೆಂಟರನು ಹೇಳಲು,—ಹಾಗೇ ಆಗಲೆಂದು ಟೆಲಿಮಾಕಸ್ಸನು ಒಪ್ಪಿದನು. ಅನಂತರ ಇಬ್ಬರೂ ವಿಶ್ರಮಿಸಿಕೊಂಡು, ಆ ಕಿನ್ನರಿಯ ಬಳಿಗೆ ಹೋದರು.

ಅವಳ ದೂತಿಯರು ಅವಳಿಗೆ ಬಹಳ ಮನೋಹರವಾದ ಉಡಿಗೆ-ತೊಡಿಗೆಗಳನ್ನು ಹಾಕಿ ಅಲಂಕರಿಸಿದ್ದರು. ಉಡಿಗೆ-ತೊಡಿಗೆಗಳಿಲ್ಲದೇನೆ, ಅವಳು ಮನೋಹರವಾದ ಆಕೃತಿಯುಳ್ಳವಳಾಗಿದ್ದಳು. ಬಹಳ ಪ್ರಕಾಶಮಾನವಾದ ಉಡಿಗೆ-ತೊಡಿಗೆಗಳನ್ನು ಹಾಕಿಕೊಂಡಿದ್ದದ್ದರಿಂದ, ಅವಳ ತೇಜಸ್ಸು ಅತ್ಯಂತ ಹೆಚ್ಚಿತು. ಫಲಾಹಾರಕ್ಕೆ ನಾನಾ ವಿಧವಾದ ಭಕ್ಷ್ಯಗಳೂ, ಪಾನಗಳೂ ಸಿದ್ಧಮಾಡಲ್ಪಟ್ಟಿದ್ದವು. ಚಿನ್ನದ ಪಾತ್ರೆಗಳಲ್ಲಿ ಅಮೃತವು ತುಂಬಲ್ಪಟ್ಟು ಇತ್ತು. ನಾನಾ ವಿಧವಾದ ಫಲಗಳು ಇಡಲ್ಪಟ್ಟಿದ್ದವು. ಗಾನವಿಶಾರದೆಯರಾದವರು ಅತ್ಯಂತ ಮನೋಹರವಾಗಿ ಹಾಡುತ್ತಿದ್ದರು. ಯೂಲಿಸೆಸ್ಸನೇ ಮೊದಲಾದ ಮಹಾವೀರರ ಗುಣಕಥನರೂಪವಾದ ಹಾಡುಗಳನ್ನು ಹಾಡಿದರು. ತನ್ನ ತಂದೆಯ ಸಾಹಸಕೃತ್ಯಗಳ ಕಥನವು ಮಾಡಲ್ಪಟ್ಟ ಕೂಡಲೆ, ಈತನ ಕಣ್ಣೀರುಗಳು ಮುತ್ತುಗಳಂತೆ ಥಳಥಳಿಸುತ್ತಾ ಹರಿಯುವುದಕ್ಕೆ ಉಪಕ್ರಮವಾದವು. ಇದನ್ನು ನೋಡಿ, ಬೇರೆ ಗಾನವನ್ನು ಮಾಡುವುದಕ್ಕೆ ಆಜ್ಞೆಯನ್ನು ಹೊಂದಿ, ಅವರು ಗಾನಮಾಡು

ವುದಕ್ಕೆ ಉಪಕ್ರಮಿಸಿದರು. ಆಗ ಕೆಲಿಪ್ಸೋ ಎಂಬ ಕಿನ್ನರಿಯು ಟೆಲಿಮಾಕಸ್ಸ ನನ್ನು ಕುರಿತು ಹೇಳಿದ್ದೇನೆಂದರೆ :—

"ಎಲೈ ಮನ್ಮಥಸದೃಶನಾದ ಟೆಲಿಮಾಕಸ್ಸನೇ,—ನೀನು ಮೂರ್ತಿಮತ್ತಾದ ಯೂಲಿಸೆಸ್ಸಿನ ಪ್ರತಿಮೆಯೆಂದು ಹೇಳಬಹುದು. ನನ್ನ ಭಾಗ್ಯಪರಿಪಾಕದಿಂದ ನೀನು ನನ್ನ ದ್ವೀಪಕ್ಕೆ ಬಂದಿರುವೆ. ಇದು ನಿನ್ನ ಭಾಗ್ಯಪರಿಪಾಕವೆಂಬುದಾಗಿಯೂ ತಿಳಿದುಕೊ. ನಾನು ಸಾಮಾನ್ಯಳಲ್ಲ. ಜರಾಮರಣಗಳಿಗೆ ಅಧೀನಳಾಗದ ದೇವತೆಯಾಗಿ ನಾನು ಇರುವೆನು. ಮನುಷ್ಯಮಾತ್ರದವರಿಗೆ ನಾನು ಸ್ವಾಧೀನಳಾಗತಕ್ಕವಳಲ್ಲ. ನೀನು ಮನುಷ್ಯನಾಗಿದ್ದಾಗ್ಯೂ, ನಿನ್ನ ಪುಣ್ಯಪರಿಪಾಕದಿಂದ ನಿನ್ನಲ್ಲಿ ನನಗೆ ಅನುರಾಗವು ಉಂಟಾಗಿರುವುದು. ನಿನ್ನ ತಂದೆಯು ನನ್ನ ವಿಶ್ವಾಸಕ್ಕೆ ಪಾತ್ರನಾಗಿದ್ದನು. ಆದರೆ ನನ್ನ ಪ್ರೀತಿಯ ಫಲವನ್ನು ಹೊಂದುವುದಕ್ಕೆ ಅವನಿಗೆ ಅದೃಷ್ಟವಿರಲಿಲ್ಲ. ಇಲ್ಲಿ ಸುಖವಾಗಿರುವುದಕ್ಕೆ ಅವನಿಗೆ ಅವಕಾಶ ಮಾಡಿದ್ದೆನು. ನನ್ನ ಜತೆಯಲ್ಲಿ ನಿತ್ಯಸುಖವನ್ನು ಅನುಭವಿಸಿಕೊಂಡು, ಅವನು ಇರಬಹುದಾಗಿತ್ತು. ತನ್ನ ದ್ವೀಪಕ್ಕೆ ಹೋಗಿ, ತನ್ನ ಸಂಸಾರಸುಖವನ್ನು ಪಡೆಯುವುದರಲ್ಲಿ ಅವನಿಗೆ ಆಸಕ್ತಿಯು ಹೆಚ್ಚಾಗಿ ಹುಟ್ಟಿತು. ದೇವತೆಗಳಿಗೂ ದುರ್ಲಭವಾದ ಈ ಸುಖವು ಅವನಿಗೆ ರುಚಿಸಲಿಲ್ಲ. ಇವನ ರಾಜ್ಯಕ್ಕೆ ಇವನು ತಲುಪುವುದಿಲ್ಲ. ಇಲ್ಲಿ ನಾನು ಕೊಡತಕ್ಕ ಸುಖವನ್ನು ಇವನು ಅನುಭವಿಸಲಿಲ್ಲ. ನನ್ನ ಆಜ್ಞೆಯನ್ನು ನಿರಾಕರಿಸಿ, ಇವನು ಹೊರಟುಹೋದನು. ಇವನಿಗೆ ಆಜ್ಞೋಲ್ಲಂಘನೆಗೆ ತಕ್ಕ ಶಿಕ್ಷೆಯು ಆಯಿತು. ಒಂದು ಬಿರುಗಾಳಿಯು ಉಂಟಾಗಿ, ಅವನಿದ್ದ ಹಡಗು ಪಾತಾಳಕ್ಕೆ ಹೋಯಿತು. ನಿನ್ನ ತಂದೆಯು ಮಾಡಿದ ತಪ್ಪನ್ನು ನೀನು ಮಾಡಬೇಡ. ಅವನನ್ನು ನೋಡುವ ಆಶೆಯನ್ನು ಬಿಟ್ಟುಬಿಡು. ಇಥಾಕಾ ರಾಜ್ಯದ ಸಿಂಹಾಸನದ ಆಶೆಯನ್ನು ಬಿಡು. ಇದಕ್ಕಾಗಿ ವ್ಯಸನಪಡಬೇಡ. ದೇವತೆಯಾದ ನಾನು ನಿನಗೆ ಸಿಕ್ಕಿರುವೆನು. ನನ್ನ ರಾಜ್ಯಕ್ಕೆ ಹೋಲಿಸುವ ರಾಜ್ಯವು ಪ್ರಪಂಚದಲ್ಲೇ ಇರುವುದಿಲ್ಲ. ನನ್ನ ಅನುರಾಗಕ್ಕೆ ಪಾತ್ರನಾಗುವುದರಿಂದ, ನಿನಗೆ ಈ ದ್ವೀಪವೇ ಸ್ವರ್ಗವಾಗಿ ಪರಿಣಮಿಸುವುದು" ಎಂದು ಈ ಕಿನ್ನರಿಯು ಹೇಳಲು, ಟೆಲಿಮಾಕಸ್ಸನು ಹೇಳಿದ್ದೇನೆಂದರೆ :—

"ಎಲೈ ಕಿನ್ನರಿಯೇ,—ಕ್ಷಮಿಸಬೇಕು. ಈಗ ನನಗೆ ಯಾವ ಸುಖವೂ ಬೇಕಾಗಿಲ್ಲ. ಪಿತೃವಿಯೋಗ ದುಃಖವು ನನಗೆ ಹೃದಯಶಲ್ಯವಾಗಿದೆ. ನನ್ನ ತಂದೆಯು ಲೋಕೋತ್ತರವಾದ ಗುಣಾತಿಶಯಗಳನ್ನು ಹೊಂದಿದ್ದನು. ಅಂಥಾವನನ್ನು ಕಳೆದುಕೊಂಡವನಿಗೆ ಸುಖದಲ್ಲಿಯೂ, ಸಾಂಮ್ರಾಜ್ಯದಲ್ಲಿಯೂ ಯಾವ ಅಭಿರುಚಿಯು ತಾನೇ ಉಂಟಾಗುವುದು? ಇಂಥಾ ತಂದೆಯು ಹೋದ ಮೇಲೆ

ನಾನು ಇದ್ದು ಫಲವೇನು ? ಈ ವರ್ತಮಾನವು ತಿಳಿದ ಕೂಡಲೆ, ನಮ್ಮ ತಾಯಿಯು ಮೃತಳಾಗುವಳು. ಏನೋ ಒಂದು ಮಹಾಪಾಪವನ್ನು ನಾನು ಮಾಡಿದ್ದೆನು. ಅದರಿಂದ ಪಿತೃವಿಯೋಗ ದುಃಖವು ನನಗೆ ಪ್ರಾಪ್ತವಾಯಿತು" ಎಂದು ಹಾ ! ತಂದೆಯೇ ಎಂದುಕೊಳ್ಳುತ್ತಾ, ಭೂಮಿಗೆ ಬಿದ್ದನು.

"ಇವನ ಶೋಕಾತಿಶಯಕ್ಕೆ ತಾನೇ ಕಾರಣಳೆಂದು ಈ ಕಿನ್ನರಿಗೆ ಗೊತ್ತಾಯಿತು. ಅಚಾತುರ್ಯವನ್ನು ಮಾಡಿದೆನೆಂದು ತಿಳಿದುಕೊಂಡಳು. ಟೆಲಿಮಾಕಸ್ಸನ ದುಃಖದಲ್ಲಿ ತಾನೂ ಭಾಗಿಯಾಗಿದ್ದಂತೆ ಅಭಿನಯಿಸಿದಳು. ಯೂಲಿಸೆಸ್ಸಿಗೆ ಉಂಟಾದ ದುರವಸ್ಥೆಗೋಸ್ಕರ ತಾನೂ ವ್ಯಸನಪಡುವಂತೆ ನಟಿಸಿದಳು. ಪಿತೃವಿಯೋಗ ದುಃಖವನ್ನು ಹೋಗಲಾಡಿಸುವುದಕ್ಕೆ ಸಾಧಕವಾದ ವೈರಾಗ್ಯಗರ್ಭಿತಗಳಾದ ಅನೇಕ ಇತಿಹಾಸಗಳನ್ನು ಹೇಳಿದಳು."

ಇವನ ತಂದೆಯು ಕಥೆಯನ್ನೂ, ತಾಯಿಯು ಕಥೆಯನ್ನೂ ವಿಚಾರಿಸಿದಳು. ಟೆಲಿಮಾಕಸ್ಸನು ಸದರಿ ವೃತ್ತಾಂತವನ್ನೆಲ್ಲಾ ವಿವರವಾಗಿ ಹೇಳಿ, ತಂದೆಯು ಅಕಾಲಮರಣವನ್ನು ಕುರಿತು ತುಂಬಾ ವ್ಯಸನಪಟ್ಟನು.

ಟೆಲಿಮಾಕಸ್ಸನು ಮಾತನಾಡುತ್ತಿದ್ದಾಗ, "ಕೆಲಿಪ್ಸಳು ನುಂಟರನ ಪೂರ್ವಾಪರಗಳನ್ನು ಕುರಿತು ಪರ್ಯಾಲೋಚಿಸುತ್ತಿದ್ದಳು. ಇವಳಿಗೆ ತುಂಬಾ ಆಶ್ಚರ್ಯವಾಯಿತು. ಅವನ ಮಾತುಗಳಿಂದ ಅವನ ಮನೋಭಾವವು ಇವಳಿಗೆ ಗೊತ್ತಾಗಲಿಲ್ಲ. ಅವನ ಅಂತರಂಗವು ಅಭೇದ್ಯವಾಗಿ ತೋರಿತು. ತನ್ನ ಮನೋರಥಕ್ಕೆ ಅವನು ಪ್ರತಿಕೂಲನಾಗುವನೋ ಏನೋ ಎಂದು ಸಂದೇಹ ಉಂಟಾಯಿತು. ತನ್ನ ಮನೋಭಾವವು ಟೆಲಿಮಾಕಸ್ಸನಿಗೆ ತಿಳಿಯದೇ ಇರಲೆಂದು, ಅವನು ಹೇಳುವುದನ್ನೆಲ್ಲಾ ಮನಸ್ಸಿಟ್ಟು ಕೇಳುವಳಂತೆ ಅಭಿನಯಿಸುತ್ತಾ, ಮುಂದಕ್ಕೆ ಹೇಳು" ಎಂಬದಾಗಿ ಅಂದಳು. ಟೆಲಿಮಾಕಸ್ಸನು ಹೇಳಿದ್ದೇನಂದರೆ :—

"ಅಲ್ಲಿಂದ ನಾವು ಸಿಸಲಿ ಪಟ್ಟಣಕ್ಕೆ ಪ್ರಯಾಣ ಮಾಡಿದೆವು. ವಾಯುವು ನಮಗೆ ಅನುಕೂಲವಾಗಿತ್ತು. ಕೊಂಚ ಹೊತ್ತಿನೊಳಗಾಗಿ ಆಕಾಶವು ಮೇಘಗಳಿಂದ ಮುಚ್ಚಲ್ಪಟ್ಟಿತು. ಒಂದು ನಿಮಿಷಾರ್ಧದಲ್ಲಿ ಕತ್ತಲೆಯಾಯಿತು. ಮಿಂಚಿನ ಥಾಳಥಳ್ಯದಿಂದ ನಮ್ಮ ಸುತ್ತುಮುತ್ತಲೂ ಇದ್ದ ಪದಾರ್ಥಗಳು ಗೋಚರವಾಗುತ್ತಿದ್ದವು. ನಾವು ತುಂಬಾ ಅಪಾಯಕ್ಕೆ ಗುರಿಯಾದೆವು. ನಮ್ಮ ಹಡಗುಗಳು ಹೇಗೋ ಹಾಗೆ ಇತರ ಕೆಲವು ಹಡಗುಗಳು ಬಿರುಗಾಳಿಗೆ ಸಿಕ್ಕಿದವು. ಈ ಮಿಂಚಿನ ಬೆಳಕಿನಿಂದ ಈ ಹಡಗುಗಳು ಟ್ರಾಯ್ ದೇಶದ ಹಡಗುಗಳೆಂದು ಗೊತ್ತಾಯಿತು. ನಮ್ಮ ಭಯವು ದ್ವಿಗುಣವಾಯಿತು. ಅವರು ನಮ್ಮ ಶತ್ರುಗಳು. ಬಿರುಗಾಳಿಯಿಂದಲೂ, ಬಂಡೆಯಿಂದಲೂ ಉಂಟಾಗುವ ವಿಪತ್ತಿ

ಗಿಂತಲೂ ಅವರಿಂದ ಹೆಚ್ಚು ವಿಪತ್ತುಂಟಾಗುವುದೆಂದು ತೋರಿತು. ನಾನು ಭಯಭ್ರಾಂತನಾದೆನು. ವಿಪತ್ತು ಬಂದಾಗ ಶಾಂತವಾಗಿಯೂ, ನಿರ್ಭಯವಾಗಿಯೂ ಇರುವುದು ಮಹಾತ್ಮರ ಲಕ್ಷಣ. ಮೆಂಟರನು ಈ ರೀತಿಯಲ್ಲಿದ್ದನು. ಭಯಪಡಬೇಡನೆಂಬದಾಗಿಯೂ, ಧೈರ್ಯದಿಂದ ಸರ್ವಸ್ವವೂ ಸಾಧ್ಯವಾಗುವುದೆಂಬದಾಗಿಯೂ, ಅಧೈರ್ಯವು ಅನರ್ಥಕಾರಿಯಾದ್ದೆಂಬದಾಗಿಯೂ ಮಂದಹಾಸಪೂರ್ವಕವಾಗಿ ಈತನು ನನಗೆ ಹೇಳಿದನು. ಇದರಿಂದ ಅಸಾಧಾರಣವಾದ ಧೈರ್ಯವು ನನಗೆ ಉಂಟಾಯಿತು. ಸ್ವಲ್ಪವೂ ಗಾಬರಿಗೆ ಗುರಿಯಾಗದೆ, ಮೆಂಟರನು ಹಡಗು ನಡೆಸತಕ್ಕವರ ಜತೆಯಲ್ಲಿ ಸೇರಿ, ಅವರಿಗೆ ಧೈರ್ಯವನ್ನು ಹೇಳುತ್ತಾ, ಅವರ ಕರ್ತವ್ಯವನ್ನು ಅವರಿಗೆ ಬೋಧಿಸಿದನು. ಅದುವರೆಗೂ ಮೆಂಟರನು ತನ್ನಂತೆಯೇ ಒಬ್ಬ ಸಾಧಾರಣ ಮನುಷ್ಯನೆಂದು ತಿಳಿದುಕೊಂಡಿದ್ದೆನು. ಈ ವಿಪತ್ತುಕಾಲ ಬಂದ ಕೂಡಲೆ, ಅವನಿಗೂ, ನನಗೂ ಇದ್ದ ವ್ಯತ್ಯಾಸವು ಗೊತ್ತಾಯಿತು. ಅವನು ಸರ್ವಜ್ಞನೆಂಬದಾಗಿ ಗೊತ್ತಾದ ಕೂಡಲೆ, ಅವನ ವಿಷಯದಲ್ಲಿ ಅಭೂತಪೂರ್ವವಾದ ಭಕ್ತಿಯು ನನಗೆ ಹುಟ್ಟಿತು. ಈ ವಿಪತ್ತಿನಿಂದ ಮೋಕ್ಷವು ಉಂಟಾದ ಪಕ್ಷದಲ್ಲ, ನಿನ್ನ ಆಜ್ಞೆಯನ್ನು ಮೀರದೆ, ನಿನ್ನ ಸಲಹೆಗಳ ಪೂರ್ವಾಪರಗಳನ್ನು ವಿಚಾರಿಸದೆ, ನೀನು ಹೇಳುವಂತೆ ನಡೆಯುವೆನೆಂದು ನಾನು ಹೇಳಿದೆನು." ಅದಕ್ಕೆ ಮೆಂಟರನು ನಕ್ಕು ಹೇಳಿದ್ದೇನಂದರೆ.—

"ನಿನ್ನ ಅಪರಾಧಗಳನ್ನು ಕ್ಷಮಿಸಿರುವೆನು. ನೀನು ಮಾಡಿದ ಅಪರಾಧವು ಅಪರಾಧವೆಂದು ನಿನಗೆ ಗೊತ್ತಾಗಿರುವುದು. ಇದರಿಂದ ನಾನು ಸಂತುಷ್ಟನಾಗಿರುವೆನು. ಈ ವಿಪತ್ತು ಕಳೆದ ಕೂಡಲೆ, ನೀನೇ ಸರ್ವಜ್ಞನೆಂದು ತಿಳಿದುಕೊಳ್ಳುವ ಕಾಲವು ಬರಹುದು. ಇದು ಸಾಮಾನ್ಯ ಜನಗಳ ಸ್ವಭಾವ. ಅದು ಹೇಗಾದರೂ ಇರಲಿ. ವಿಪತ್ತು ಬರುವುದಕ್ಕೆ ಮುಂಚೆ, ನಾವು ಅದನ್ನು ತಪ್ಪಿಸಿಕೊಳ್ಳುವ ಉಪಾಯವನ್ನು ಮಾಡಬೇಕು. ವಿಪತ್ತು ಬಂದ ಮೇಲೆ ಭಯಪಡಬಾರದು. ಧೈರ್ಯದಿಂದ ಅದನ್ನು ನಿಗ್ರಹಿಸುವ ಪ್ರಯತ್ನವನ್ನು ಮಾಡಬೇಕು. ನಿಮ್ಮ ತಂದೆಯಲ್ಲಿ ಈ ಗುಣಾತಿಶಯವು ವಿಶೇಷವಾಗಿತ್ತು. ಇದನ್ನು ನೀನೂ ಸಂಪಾದಿಸಿಕೊಳ್ಳುವುದು ಆವಶ್ಯಕ. ನಮಗೆ ಉಂಟಾಗತಕ್ಕ ಸಕಲ ಅನರ್ಥಗಳಿಗೂ ನಾವೇ ಕಾರಣಭೂತರು. ಮಾಡಬೇಕಾದ ಕೆಲಸಗಳನ್ನು ಬಿಡುವುದರಿಂದಲೂ, ಮಾಡಬಾರದ ಕೆಲಸಗಳನ್ನು ಮಾಡುವುದರಿಂದಲೂ ನಮಗೆ ಅನಿರ್ವಚನೀಯವಾದ ಅನರ್ಥಗಳು ಉಂಟಾಗುವುವು. ಇವುಗಳೆಲ್ಲಾ ಅದೃಷ್ಟಗಳೆಂದು ಅಜ್ಞಾನಿಗಳು ತಿಳಿದುಕೊಳ್ಳುವರು. ದೀರ್ಘದರ್ಶಿಗಳಿಗೆ ಅದೃಷ್ಟಗಳೇ ಇರುವುದಿಲ್ಲ. ನಮ್ಮ ಮನೋವಾಕ್ಕರ್ಮಗಳ ಪರಿಣಾಮ ಫಲವನ್ನು ಪೂರ್ವಭಾವಿಯಾ

ಗಿಯೇ ಯೋಚಿಸಿ, ಅದರಿಂದ ಉಂಟಾಗತಕ್ಕ ಕೇಡನ್ನು ತಪ್ಪಿಸಿಕೊಳ್ಳುವುದು ನಮ್ಮ ಕರ್ತವ್ಯ. ಈ ಕರ್ತವ್ಯವನ್ನು ಮಾಡದೆ, ನಮಗೆ ಉಂಟಾಗತಕ್ಕ ಕೇಡುಗಳೆಲ್ಲಾ ಅದೃಷ್ಟಗಳೆಂದು ನಾವು ತಿಳಿದುಕೊಂಡರೆ, ಅದಕ್ಕೆ ನಾವೇ ಉತ್ತರವಾದಿಗಳು. ಇಂದ್ರಿಯಪರವಶರಾಗಿ ಮಾಡಬಾರದ ಕೆಲಸಗಳನ್ನು ಮಾಡಿದರೆ, ಅದಕ್ಕೆ ತಕ್ಕ ಫಲವು ಆಗಿಯೇ ಆಗುವುದು. ಅದನ್ನು ಜಗದೀಶ್ವರನೂ ಕೂಡ ತಪ್ಪಿಸುವದಿಲ್ಲ. ಎಚ್ಚರವಾಗಿರು '' ಎಂದು ಮೆಂಟರನು ಹೇಳಿದನು.

" ಈ ಉಪದೇಶವು ನನಗೆ ತುಂಬಾ ಸಂತೋಷವನ್ನುಂಟುಮಾಡಿತು. ನರಕದಿಂದ ಸ್ವರ್ಗಕ್ಕೆ ಆರೋಹಣ ಮಾಡಿದರೆ, ಹೇಗೋ ಹಾಗೆ ನನಗೆ ಆನಂದ ಉಂಟಾಯಿತು. ಏನೋ ಒಂದು ಜನ್ಮಾಂತರ ಸುಕೃತದಿಂದ ಈತನ ಸಹಾಯವು ನನಗೆ ದೊರೆಯಿತು. ಅಪ್ರತಿಹತವಾದ ಸಾಮರ್ಥ್ಯದಿಂದ ಅವನು ನನ್ನನ್ನು ರಕ್ಷಿಸಿದನು. ಆ ಹಡಗುಗಳಲ್ಲಿ ಒಂದು ಪ್ರತ್ಯೇಕವಾಯಿತು. ಆ ಹಡಗಿನಲ್ಲಿರತಕ್ಕವರು ನಾವು ಅವರ ಶತ್ರುಗಳೆಂದು ತಿಳಿದುಕೊಳ್ಳಲಿಲ್ಲ. ನಾವು ಯಾರೋ ಉದಾಸೀನರೆಂದು ಭಾವಿಸಿಕೊಂಡು, ಮುಂದಕ್ಕೆ ಪ್ರಯಾಣ ಮಾಡಿದರು. ದೈವಯೋಗದಿಂದ ನಾವು ಇಂಥಾವರೆಂದು ಅವರಿಗೆ ತಿಳಿಯದೇ ಹೋಗುವುದಕ್ಕೆ ಅವಕಾಶವಾಯಿತೆಂದು ಸಂತೋಷದಿಂದ ನಾವು ಆ ಸಿಸಿಲಿ ದ್ವೀಪಕ್ಕೆ ಹೋದೆವು. ನಮ್ಮ ದುರದೃಷ್ಟದಿಂದ ಆ ದ್ವೀಪದ ತೀರದಲ್ಲಿ ಟ್ರಾಯ್ ದೇಶದ ಜನರು ಕೆಲವರಿದ್ದರು. ನಾವು ತೀರಕ್ಕೆ ಬಂದ ಕೂಡಲೆ, ನಮ್ಮನ್ನು ಶತ್ರುಗಳೆಂದು ಭಾವಿಸಿ, ಎಲ್ಲರನ್ನೂ ಕೊಂದುಹಾಕಿ, ನಮ್ಮಿಬ್ಬರನ್ನು ಮಾತ್ರ ಹಿಂಗಟ್ಟುಮುರಿಕಟ್ಟಿ, ತಮ್ಮ ಮುಖಂಡನಾದ ಅಸೆಸ್ಟೀಸ್ ಎಂಬುವನ ಬಳಿಗೆ ಕರದುಕೊಂಡು ಹೋದರು.''

" ಅಸೆಸ್ಟೀಸನು ಒಂದು ಯಜ್ಞಶಾಲೆಯಲ್ಲಿ ಕುಳಿತು, ನ್ಯಾಯವಿಮರ್ಶೆಯನ್ನು ಮಾಡುತ್ತಿದ್ದನು. ನಮ್ಮನ್ನು ಕರೆದುಕೊಂಡು ಹೋಗಿ ನಿಲ್ಲಿಸಿದ ಕೂಡಲೆ, ನೀವ್ಯಾರು ? ನೀವು ಇಲ್ಲಿಗೆ ಬರುವುದಕ್ಕೆ ಕಾರಣವೇನು ?'' ಎಂದು ಆತನು ಅತ್ಯಂತ ದರ್ಪದಿಂದ ಕೇಳಿದನು.

" ನಾವು ಹೆಸ್ಪೇರಿಯಾ ದೇಶದಿಂದ ಬಂದಿದೇವೆ. ಇಲ್ಲಿಂದ ಸ್ವಲ್ಪ ದೂರದಲ್ಲಿ ಆ ದೇಶವಿದೆ '' ಎಂಬದಾಗಿ ಮೆಂಟರನು ಹೇಳಿದನು.

ನಾವು ಶತ್ರುಗಳಲ್ಲವೆಂಬದಾಗಿಯೂ, ಯಾರೋ ಅಜ್ಞಾತಕುಲಗೋತ್ರರೆಂಬದಾಗಿಯೂ ತಿಳಿದುಕೊಂಡು, ಅರಣ್ಯದಲ್ಲಿ ಅವನ ದನಗಳನ್ನು ಕಾಯುವುದಕ್ಕೆ ನಮ್ಮನ್ನು ನಿಯಮಿಸುವುದೆಂದು ಆತನು ಆಜ್ಞೆಮಾಡಿದನು. ಇದು ನನಗೆ ತುಂಬಾ ಅವಮಾನವಾಗಿ ತೋರಿತು. ಅವನನ್ನು ನೋಡಿ ಎಲೈ ಧೊರೆಯೇ,— " ನಮ್ಮ ಪದವಿಗೆ ಅನುಚಿತವಾದ ಉದ್ಯೋಗಕ್ಕೆ ನಮ್ಮನ್ನು ನಿಯಮಿಸುವುದ

ಕ್ಕಿಂತ ನಮಗೆ ಮರಣದಂಡನೆಯನ್ನಾದರೂ ಕೊಡು " ಎಂದು ನಾನು ಹೇಳಿದೆನು. " ನೀನು ಯಾರು? ನಿನ್ನ ಪದವಿಯು ಎಂಥಾದ್ದು?" ಎಂಬದಾಗಿ ಅವನು ಕೇಳಿದನು. " ಇಥಾಕಾ ಸಂಸ್ಥಾನದ ಧೊರೆಯಾದ ಯೂಲಿಸೆಸ್ಸಿನ ಮಗನೇ ನಾನು. ನನ್ನನ್ನು ಟೆಲಿಮಾಕಸ್ ಎಂದು ಕರೆಯುತ್ತಾರೆ. ನನ್ನ ತಂದೆಯು ದೇಶಾಟನಕ್ಕೋಸ್ಕರ ಹೋಗಿರುವನು. ಅವನನ್ನು ಹುಡುಕಿಕೊಂಡು ನಾನು ಹೋಗುತ್ತಿರುವೆನು. ನೀನು ನಮ್ಮನ್ನು ದನಕಾಯುವುದಕ್ಕೆ ಹಾಕಿದರೆ, ನನ್ನ ಉದ್ದೇಶಕ್ಕೆ ಭಂಗವು ಬರುವುದು. ನಾನು ಯಾವಜ್ಜೀವವೂ ಜೀತಗಾರನಾಗುವ ಪಕ್ಷದಲ್ಲ, ನನಗೆ ಮರಣದಂಡನೆಯೇ ಅಭೀಷ್ಟವು. ನನ್ನ ಉದ್ದಿಷ್ಟವಾದ ಕೆಲಸವನ್ನು ಬಿಟ್ಟು, ಈ ಸೇವಾವೃತ್ತಿಯನ್ನು ನಾನು ಮಾಡಲಾರೆನು " ಎಂದು ಹೇಳಿದೆನು.

ಇದನ್ನು ಕೇಳಿದ ಕೂಡಲೆ, ಅಲ್ಲಿದ್ದ ಸಮಸ್ತ ಜನಗಳಿಗೂ ಕೋಪವು ಅತ್ಯುತ್ಕಟಾವಸ್ಥೆಗೆ ಬಂದಿತು. " ಈ ದುರಾತ್ಮನ ತಂದೆಯು ಇಂದ್ರಜಾಲ ಮಹೇಂದ್ರಜಾಲ ವಿದ್ಯೆಗಳಿಂದ ನಮ್ಮ ದೇಶವೇ ನಾಶವಾಯಿತು. ನಮ್ಮಲ್ಲಿ ಕೋಟ್ಯಂತರ ಜನಗಳು ಸತ್ತರು. ನಮಗೆ ಅನಿರ್ವಚನೀಯವಾದ ಕಷ್ಟಗಳು ಉಂಟಾದವು. ಯೂಲಿಸೆಸ್ಸನು ಸಿಕ್ಕಿದರೆ, ಅವನನ್ನು ಕಲ್ಲುಗಾಣಕ್ಕೆ ಹಾಕಿ ಅರೆಯುತ್ತಿದ್ದೆವು. ಇವನು ಹುಡುಗ. ನಿರಪರಾಧಿ. ಆದಾಗ್ಯೂ ಅಪರಾಧಿಯ ಮಗನು. ಇವನಿಗೆ ಮರಣದಂಡನೆಯನ್ನು ಮಾಡಬೇಕು " ಎಂದು ಅಲ್ಲಿದ್ದ ಮಹಾಜನಗಳೆಲ್ಲರೂ ಏಕವಾಕ್ಯತೆಯಿಂದ ಹೇಳಿದರು.

" ಎಲೋ ಟೆಲಿಮಾಕಸ್ಸನೆ,—ನಿನ್ನ ತಂದೆಯು ಬಹಳ ದೊಡ್ಡ ಪಾಪಿ. ನಮ್ಮ ದೇಶವನ್ನು ನಾಶಮಾಡಿದನು. ಮಹಾಜನಗಳೆಲ್ಲರೂ ನಿನಗೆ ಮರಣದಂಡನೆಯನ್ನು ವಿಧಿಸಿರುವರು. ಅದನ್ನು ನಾನು ಮಂಜೂರ್ಮಾಡಿದೇನೆ. ನಿನ್ನ ಜತೆಯಲ್ಲಿ ಬಂದಿರತಕ್ಕ ಈ ಮನುಷ್ಯನಿಗೂ ಮರಣದಂಡನೆಯು ಮಾಡಲ್ಪಟ್ಟಿರುವುದು " ಎಂದು ಅಸೆಸ್ಟೀಸನು ಹೇಳಿದನು.

ತಕ್ಷಣದಲ್ಲಿಯೇ ಅಲ್ಲಿದ್ದ ಒಬ್ಬ ಮುದುಕನು ಅಸೆಸ್ಟೀಸನ ಬಳಿಗೆ ಬಂದು, ಸ್ವಾಮಿ,—" ಆಂಚಿಸಿಸ್ ಎಂಬುವನ ಗೋರಿಯ ಬಳಿಯಲ್ಲಿ ಇವರನ್ನು ಸಂಹರಿಸಬೇಕು. ನಮ್ಮ ದೇಶರಕ್ಷಣೆಗೆ ದೇಹವನ್ನು ಒಪ್ಪಿಸಿದ ಮಹಾಪರಾಕ್ರಮಶಾಲಿಗಳಲ್ಲಿ ಅವನು ಅಗ್ರಗಣ್ಯನು. ಇವರನ್ನು ಅಲ್ಲಿ ಬಲಿಕೊಡುವುದರಿಂದ, ಆತನ ಆತ್ಮಕ್ಕೆ ಶಾಂತಿಯುಂಟಾಗುವುದು " ಎಂದು ಹೇಳಿದನು.

ನಾವಿಬ್ಬರೂ ಆಂಚಿಸಿಸ್ ಎಂಬುವನ ಗೋರಿಯ ಬಳಿಗೆ ಕರೆದುಕೊಂಡು ಹೋಗಲ್ಪಟ್ಟೆವು. ಅಲ್ಲಿ ನಮ್ಮನ್ನು ಬಲಿಕೊಡುವುದಕ್ಕೆ ಸಿದ್ಧಮಾಡಿದರು. ಅಲ್ಲಿ

ಒಂದು ಚಿತಿಯನ್ನು ಮಾಡಿ, ಅದಕ್ಕೆ ಬೆಂಕಿಯನ್ನು ಹತ್ತಿಸಿದರು. ನಮ್ಮನ್ನು ಕತ್ತರಿಸುವುದಕ್ಕೆ ಕತ್ತಿಯು ಸಿದ್ಧವಾಡಲ್ಪಟ್ಟಿತು. ನನಗೆ ಅಲಂಕಾರವನ್ನು ಮಾಡಿ, ಪುಷ್ಪಮಾಲಿಕೆಗಳನ್ನು ಹಾಕಿದರು. ನಮ್ಮಲ್ಲಿ ಕೃಪೆಯನ್ನು ಇಟ್ಟು ರಕ್ಷಿಸಬೇಕೆಂದು ನಾವೆಷ್ಟೋ ಕೇಳಿಕೊಂಡೆವು. ಅವರಿಗೆ ಕರುಣವು ಹುಟ್ಟಲಿಲ್ಲ. ಇಂಥಾ ವಿಪತ್ಕಾಲದಲ್ಲಿಯೂ ಕೂಡ ಮೆಂಟರು ಧೈರ್ಯವುಳ್ಳವನಾಗಿದ್ದನು. ನಮ್ಮನ್ನು ಬಲಿಕೊಡುವುದನ್ನು ನೋಡುವುದಕ್ಕೆ ಅಸೆಸ್ಟೀಸನೂ ಬಂದನು. ಅವನನ್ನು ನೋಡಿ ಮೆಂಟರು—

"ಎಲೈ ಅಸೆಸ್ಟೀಸನೆ,—ಈ ಟೆಲಿಮಾಕಸ್ಸನು ನಿಮ್ಮ ಮೇಲೆ ಯುದ್ಧಮಾಡಿದವನಲ್ಲ. ಇವನು ಹುಡುಗನು. ಅವನಲ್ಲಿ ನಿನಗೆ ದಯಬರದೆ ಇದ್ದಾಗ್ಯೂ, ನಿನಗೆ ಉಂಟಾಗಿರತಕ್ಕ ವಿಪತ್ತಿನಿಂದ ನಿನ್ನನ್ನು ರಕ್ಷಿಸಿಕೊ. ನಾನು ದೈವಜ್ಞನು. ಮುಂದೆ ಬರತಕ್ಕದ್ದನ್ನು ಹೇಳುವುದರಲ್ಲಿ ನಾನು ದಕ್ಷನು. ಇನ್ನು ಮೂರು ದಿವಸದೊಳಗಾಗಿ ಕಿರಾತರ ಸೈನ್ಯವೊಂದು ಇಲ್ಲಿಗೆ ಬರುವುದು. ಅವರಿಂದ ನಿನಗೆ ವಿಪತ್ತು ಉಂಟಾಗುವುದು. ಈ ವಿಪತ್ತನ್ನು ನೀನು ತಪ್ಪಿಸಿಕೊಳ್ಳಬೇಕಾದರೆ, ನಿನಗೆ ನಮ್ಮ ಸಹಾಯವು ಬೇಕು. ನಿನ್ನ ಜನಗಳನ್ನು ಸಿದ್ಧಪಡಿಸಿಕೊ. ನಾವು ನಿನ್ನನ್ನು ರಕ್ಷಿಸುತ್ತೇವೆ. ನಿನ್ನ ಶತ್ರುಗಳನ್ನು ಜಯಿಸುತ್ತೇವೆ. ನಿನಗೆ ಸನ್ನಿಹಿತವಾಗಿರತಕ್ಕ ವಿಪತ್ತನ್ನು ತಪ್ಪಿಸುತ್ತೇವೆ. ಮೂರು ದಿವಸದ ವರೆಗೂ ನೋಡು. ನಾನು ಹೇಳುವುದು ನಿಜವಾದರೆ, ನಮ್ಮಿಂದ ನಿನಗೆ ಶತ್ರುಗಳ ಬಾಧೆಯು ತಪ್ಪಿದರೆ, ನಿನ್ನ ರಕ್ಷಣೆಗೆ ನಾವು ಕಾರಣಭೂತರಾದರೆ, ನಮ್ಮನ್ನು ಯಜ್ಞಮಾಡಬೇಡ. ನಾನು ಹೇಳಿರುವುದು ಸುಳ್ಳಾದರೆ, ಆಗ್ಗೆ ನಮ್ಮನ್ನು ವಧಿಸು. ಈಗ ದುಡುಕಬೇಡ" ಎಂದು ಹೇಳಿದನು.

"ಈ ಮಾತನ್ನು ಕೇಳಿದ ಕೂಡಲೆ, ಅಸೆಸ್ಟೀಸನಿಗೆ ಆಶ್ಚರ್ಯವುಂಟಾಯಿತು. ನೀನು ಹೇಳುವುದು ನಿಜವೋ ಸುಳ್ಳೋ ಅದನ್ನು ಪರೀಕ್ಷಿಸುತ್ತೇನೆ. ಮೂರು ದಿವಸಗಳ ವರೆಗೂ ನಿಮಗೆ ಅವಧಿಯನ್ನು ಕೊಡುತ್ತೇನೆ. ಇದು ನಿಜವಾದ ಪಕ್ಷದಲ್ಲಿ, ನೀವು ನನಗೆ ಸಹಾಯ ಮಾಡಿ. ನಿಮ್ಮ ಸಹಾಯಕ್ಕೆ ಪ್ರತಿಫಲವನ್ನುಂಟುಮಾಡುತ್ತೇನೆ. ನೀನು ಹೇಳುವುದು ಸುಳ್ಳಾದ ಪಕ್ಷದಲ್ಲಿ, ನಿಮ್ಮಿಬ್ಬರನ್ನೂ ಬಲಿಕೊಡುತ್ತೇನೆ" ಎಂದು ಹೇಳಿದನು.

ಮೆಂಟರನ ಮಾತನ್ನು ಕೇಳಿ, ಅಲ್ಲಿದ್ದವರೆಲ್ಲರೂ ಬಹಳ ಆಶ್ಚರ್ಯಪಟ್ಟರು. "ಬೀಸುವ ದೊಣ್ಣೆಯ ಏಟು ತಪ್ಪಿದರೆ, ಸಾವಿರ ವರ್ಷ ಆಯುಸ್ಸು" ಎಂಬ ಗಾಥೆಗನುಸಾರವಾಗಿ ಈ ಮೆಂಟರನು ಇದೊಂದು ಕುಯುಕ್ತಿಯನ್ನು ಮಾಡಿರುವನೆಂದು ಅಂದುಕೊಂಡರು. ಇವನ ಮುಖಭಾವದಿಂದಲೂ, ಇವನ ವಾಗ್ವೈಖರಿ

## ಎರಡನೇ ಅಧ್ಯಾಯ.

ನಮ್ಮ ಹಡಗುಗಳನ್ನು ನಡೆಸುವುದಕ್ಕೆ ಸದರಿ ವಿದ್ಯೆಯಲ್ಲಿ ಸಮರ್ಥರಾದ ಕೆಲವು ಜನ ಫಿನೀಷಿಯಾ ದೇಶೀಯರ ಸಹಾಯವು ನಮಗೆ ಕೊಡಲ್ಪಟ್ಟಿತು. ಗ್ರೀಷ್ಯರ್ನರನ್ನು ಕಳುಹಿಸಿ ಕೊಟ್ಟರೆ, ಅವರು ನಮಗೆ ಅಪಾಯ ಮಾಡಿಯಾರೆಂಬ ಭಯದಿಂದ ಅನೆಸ್ಟೀಸನು ಅವರ ಸಹಾಯವನ್ನು ನಮಗೆ ಕೊಡಲಿಲ್ಲ. ಫಿನೀಷಿಯಾದವರನ್ನು ನಂಬಬಹುದೆಂದು ಅವರ ಸಹಾಯವು ನಮಗೆ ಕೊಡಲ್ಪಟ್ಟಿತು. ನಮ್ಮ ಕ್ಷೇಮಕ್ಕಾಗಿ ಮಾಡಲ್ಪಟ್ಟ ಕೆಲಸವು ನಮಗೆ ಪ್ರತಿಕೂಲವಾಗಿ ಪರಿಣಮಿಸಿತು. ಈ ಕಾಲದಲ್ಲಿ ಈಜಿಪ್ಟ್ ದೇಶದಲ್ಲಿ ಸಸಾಟ್ರಿಸ್ ಎಂಬ ಧೊರೆಯು ಆಳುತ್ತಿದ್ದನು. ಅವನು ಅನೇಕ ರಾಜ್ಯಗಳನ್ನು ಗೆದ್ದು, ತನ್ನ ದೇಶಕ್ಕೆ ಸೇರಿಸಿಕೊಂಡಿದ್ದನು. ಫಿನೀಷಿಯಾ ದೇಶೀಯರಿಗೂ, ಇವನಿಗೂ ಆಗುತ್ತಿರಲಿಲ್ಲ. ಫಿನೀಷಿಯನ್ನರು ವ್ಯಾಪಾರ ಶಾಸ್ತ್ರದಲ್ಲಿ ಬಹಳ ಸಮರ್ಥರಾಗಿದ್ದರು. ವ್ಯಾಪಾರದಿಂದ ಬಹು ದ್ರವ್ಯವನ್ನು ಸಂಪಾದಿಸಿಕೊಂಡಿದ್ದರು. ಸಮುದ್ರ ತೀರದಲ್ಲಿ ಅವರು ಅನೇಕ ದುರ್ಗಗಳನ್ನು ಕಟ್ಟಿಕ್ಕೊಂಡಿದ್ದರು. ಅನೇಕ ರೇವು ಪಟ್ಟಣಗಳು ಸಕಲ ಸಂಪತ್ತುಗಳಿಗೂ ತೌರುಮನೆಯಾಗಿದ್ದವು. ಈ ಪಟ್ಟಣಗಳೆಲ್ಲಾ ಅವರಿಗೆ ಸೇರಿದ್ದವು. ಈ ಜನಗಳು ಮಿತಿಯಿಲ್ಲದ ದ್ರವ್ಯಬಲದಿಂದ ಉನ್ಮತ್ತರಾಗಿದ್ದರು. ಸಸಾಟ್ರಿಸ್ ಎಂಬುವನು ಈಜಿಪ್ಟ್ ದೇಶದಲ್ಲಿ ಇವರು ಮಾಡುತ್ತಿದ್ದ ವ್ಯಾಪಾರಕ್ಕೆ ತೆರಿಗೆಯನ್ನು ಹಾಕಿದ್ದನು. ಇವರು ಅದನ್ನು ಕೊಡುವುದಿಲ್ಲವೆಂದು ತಿರಸ್ಕರಿಸಿದ್ದರು. ಅವರು ಇವನ ಸಹೋದರನನ್ನು ಎತ್ತಿಕಟ್ಟಿ, ಅವನಿಂದ ಸಸಾಟ್ರಿಸ್‌ನನ್ನು ಒಂದು ಸಂತೋಷ ಕೂಟವು ನಡೆಯುವಾಗ್ಯೆ, ಕೊಲ್ಲಿಸಬೇಕೆಂದು ಪ್ರಯತ್ನ ಮಾಡಿದ್ದರು.

ಈ ವಿಷಯಗಳೆಲ್ಲಾ ಸೂಕ್ಷ್ಮವಾಗಿ ಸಸಾಟ್ರಿಸ್ಸನಿಗೆ ಗೊತ್ತಾಯಿತು. ಫಿನೀಷಿಯರ್ನರ ಮೇಲೆ ಇವನ ದ್ವೇಷವು ಹೆಚ್ಚಿತು. ಅವರನ್ನು ಮೂಲೋತ್ಪಾಟನ ಮಾಡಬೇಕೆಂಬ ಸಂಕಲ್ಪವು ಮಾಡಲ್ಪಟ್ಟಿತು. ಫಿನೀಷಿಯಾ ದೇಶದ ಹಡಗುಗಳು ಎಲ್ಲಿ ಸಿಕ್ಕಿದರೂ ಹಿಡಿಯಲ್ಪಡಲಿ, ಅಥವಾ ಮುಳುಗಿಸಲ್ಪಡಲಿ ಎಂದು ಇವನು ಆಜ್ಞೆ ಮಾಡಿದ್ದನು. ನಾವು ಸಿಸಿಲಿ ಪಟ್ಟಣದ ಸಮೀಪಕ್ಕೆ ಬರುತ್ತಿದ್ದಾಗ, ನಮ್ಮ ಹಡಗುಗಳು ಈಜಿಪ್ಟ್ ದೇಶದವರ ಗೋಚರಕ್ಕೆ ಬಂದವು. ನಮ್ಮ ಹಡಗಿನ ಕಡೆಗೆ ಅವರು ಬಂದರು. ದೊಡ್ಡ ಪಟ್ಟಣವೇ ತೇಲಿಕೊಂಡು ಬರುತ್ತಲಿದೆಯೋ ಎಂಬಂತೆ ಅವರ ಹಡಗುಗಳ ಸಮೂಹವು ಕಾಣಬಂತು. ನಮ್ಮ ಹಡಗಿನ ನಾವಿಕರು ಭಯಗ್ರಸ್ತರಾದರು. ಅವರಿಂದ ತಪ್ಪಿಸಿಕೊಂಡು ಹೋಗು

ವುದು ಅಸಾಧ್ಯವಾಯಿತು. ನಮ್ಮ ಹಡಗುಗಳಿಗಿಂತಲೂ ಅವರ ಹಡಗುಗಳು ವೇಗಶಾಲಿಗಳಾಗಿದ್ದವು. ಗಾಳಿಯು ಅವರಿಗೆ ಅನುಕೂಲವಾಗಿತ್ತು. ದೋಣಿಗಳು ಅವರಲ್ಲಿ ಹೆಚ್ಚಾಗಿದ್ದವು. ವಿಶೇಷ ಪ್ರಯತ್ನವಿಲ್ಲದೆ, ಅವರು ನಮ್ಮನ್ನು ಸೆರೆ ಹಿಡಿದು, ಈಜಿಪ್ಟ್ ದೇಶಕ್ಕೆ ತೆಗೆದುಕೊಂಡು ಹೋದರು. ಮೆಂಟರೂ ನಾನೂ ಫಿನೀಷಿಯರ್ಲ್ಲವೆಂದು ನಾನು ಅವರಿಗೆ ಎಷ್ಟೋ ಹೇಳಿದೆನು. ಅವರು ನನ್ನ ಮಾತುಗಳನ್ನು ಕೇಳಿ ಪರಿಹಾಸ ಮಾಡಿದರು. ಫಿನೀಷಿಯರ್ರು ನಮ್ಮನ್ನು ವಿಕ್ರಯ ಮಾಡುವುದಕ್ಕೆ ತಂದಿರಬಹುದೆಂದು ಅವರು ಭಾವಿಸಿದರು. ಸಾಧ್ಯವಾದಷ್ಟು ಒಳ್ಳೇ ಖರೀದಿಗೆ ನಮ್ಮನ್ನು ಮಾರಿ, ದ್ರವ್ಯವನ್ನು ಸಂಪಾದಿಸಿಕೊಳ್ಳಬೇಕೆಂದು ಅವರೂ ಯೋಚಿಸಿಕೊಂಡರು. ನೈಲ್ ನದಿಯ ತೀರಕ್ಕೆ ಹೋದ ಕೂಡಲೆ, ಆ ನದಿಯ ನೀರಿನಿಂದ ಸಮುದ್ರವು ಬೆಳ್ಳಗೆ ಕಾಣುವುದಕ್ಕೆ ಉಪಕ್ರಮವಾಯಿತು. ಈಜಿಪ್ಟ್ ದೇಶದ ತೀರವು ಆಕಾಶಕ್ಕೆ ಸೇರಿಕೊಂಡಿರುವ ಮೇಘದೋಪಾದಿಯಲ್ಲಿ ಕಾಣಬಂತು. ಫೆರಾಸ್ ಎಂಬ ದ್ವೀಪಕ್ಕೆ ಬಂದು, ಅಲ್ಲಿಂದ ನೈಲ್ ಮಾರ್ಗವಾಗಿ ಮೆಂಟಿಸ್ಟ್ ಪಟ್ಟಣಕ್ಕೆ ಪ್ರಯಾಣ ಮಾಡಿದೆವು. ವ್ಯಾಕುಲದಿಂದ ನಮ್ಮ ಮನಸ್ಸು ಪೀಡಿತವಾಗಿತ್ತು. ಆದಾಗ್ಯೂ ಆ ದೇಶವನ್ನು ನೋಡಿದ ಕೂಡಲೆ, ಅನಿರ್ವಚನೀಯವಾದ ಸಂತೋಷವು ನಮಗೆ ಉಂಟಾಯಿತು. ಈಜಿಪ್ಟ್ ದೇಶವೆಲ್ಲಾ ಒಂದು ವಿಶಾಲವಾದ ನಂದನವನದಂತೆ ಇದ್ದಿತು. ಎಲ್ಲಿ ನೋಡಿದಾಗ್ಯೂ ನದಿಗಳು, ಕಾಲುವೆಗಳು, ಸರೋವರಗಳು, ಇತರ ಜಲಾಶಯಗಳೂ ತುಂಬಿದ್ದವು. ನದಿಯ ಉಭಯ ಪಾರ್ಶ್ವಗಳಲ್ಲಿಯೂ ಸಕಲ ಸಂಪತ್ತುಗಳಿಂದ ತುಂಬಿ ತುಳುಕುತ್ತಲಿದ್ದ ಪಟ್ಟಣಗಳು, ಮನೋಹರವಾದ ಉಪವನಗಳು, ನಾನಾ ವಿಧವಾದ ಧಾನ್ಯದ ತೆನೆಗಳಿಂದ ಬಗ್ಗಿದ ಹೊಲಗಳು, ಗದ್ದೆಗಳು, ಲಕ್ಷೋಪಲಕ್ಷ ಕುರಿಗಳುಳ್ಳ ಮಂದೆಗಳಿಂದ ತುಂಬಿದ ಮೈದಾನಗಳು, ಅನೇಕ ಫಲಪುಷ್ಪ ಭರಿತಗಳಾದ ವೃಕ್ಷಗಳು, ಮನೋಹರವಾದ ಗಾನಗಳನ್ನು ಮಾಡುತ್ತಿದ್ದ ಗಾಯಕರೂ ಉಳ್ಳ ಪರ್ವತಗಳ ಮತ್ತು ಬೆಟ್ಟದ ತಪ್ಪಲುಗಳೂ ಉಳ್ಳ ಪ್ರದೇಶಗಳು, ಸಕಲ ಸಂಪತ್ತುಗಳಿಂದಲೂ ಪರಿಶೋಭಿತಗಳಾದ ಪಟ್ಟಣಗಳು ಇವುಗಳೆಲ್ಲಾ ದೃಷ್ಟಿಪಥಕ್ಕೆ ಬಿದ್ದವು. ಎಲ್ಲೆಲ್ಲಿ ನೋಡಿದಾಗ್ಯೂ ಗಿಡಗಳು ಫಲಭರಿತವಾಗಿ ಬಗ್ಗಿದ್ದವು. ಎಲ್ಲಿ ನೋಡಿದಾಗ್ಯೂ ಗ್ರಾಮಸ್ಥರು ಬಹಳ ಸಂತೋಷದಿಂದ ಗಾನಸುಖವನ್ನು ಅನುಭವಿಸುತ್ತಿದ್ದರು. ನನ್ನನ್ನು ಕುರಿತು ಆಗ ಮೆಂಟರು—

"ಈ ದೇಶದಲ್ಲಿ ವ್ಯವಸಾಯವು ಚೆನ್ನಾಗಿ ಮಾಡಲ್ಪಡುತ್ತಲಿದೆ. ಭೋಗ್ಯ ವಸ್ತುಗಳ ನಿರ್ಮಾಣವು ಚೆನ್ನಾಗಿರುವುದು. ಜನಗಳ ಕಲಾಕೌಶಲ್ಯವು ಪರಾಕಾಷ್ಠದೆಸೆಯನ್ನು ಹೊಂದಿರುವಂತೆ ಕಾಣುತ್ತದೆ. ಗ್ರಾಮಗಳೂ ಕೂಡ ಅತ್ಯುತ್ತ

ಮುಸ್ಥಿತಿಯಲ್ಲಿರುವುವು. ರಮಣೀಯವಾದ ಪ್ರಾಸಾದಗಳಿಂದ ಊರುಗಳು ಪರಿಶೋಭಿತವಾಗಿರುವುವು. ಜನಗಳು ತಾಪತ್ರಯವುಳ್ಳವರಂತೆ ತೋರುವುದಿಲ್ಲ. ದನಕರುಗಳೆಲ್ಲಾ ಬಹಳ ಪುಷ್ಟಿಯಾಗಿರುತ್ತವೆ. ಎಲ್ಲಿ ನೋಡಿದಾಗ್ಯೂ ಸುಭಿಕ್ಷವು ನೇತ್ರಾನಂದವನ್ನೂ, ಗಾನವು ಶ್ರೋತ್ರಾನಂದವನ್ನೂ ಉಂಟುಮಾಡುತ್ತಲಿರುವುವು. ಈ ದೇಶದಲ್ಲಿ ಲಕ್ಷ್ಮಿಯು ತಾಂಡವಾಡುವಂತೆ ತೋರುತ್ತದೆ. ಈ ದೇಶವನ್ನಾಳತಕ್ಕ ಪ್ರಭುವು ಪ್ರಜೆಗಳ ಸೌಖ್ಯವೇ ತನ್ನ ಸೌಖ್ಯವೆಂದು ತಿಳಿದುಕೊಂಡಿರಬೇಕು. ಪುತ್ರನಿರ್ವಿಶೇಷವಾಗಿ ಅವನು ಪ್ರಜೆಗಳನ್ನು ಕಾಣುತ್ತಲಿರಬೇಕು. ಪ್ರಜೆಗಳೂ ಕೂಡ ಅವನಲ್ಲಿ ಪಿತೃನಿರ್ವಿಶೇಷವಾದ ಭಕ್ತಿಯನ್ನು ಹೊಂದಿರಬಹುದು. ಎಲೈ ಟೆಲಿಮಾಕಸ್ಸನೆ, ದೈವಯೋಗದಿಂದ ನಿನಗೆ ಪ್ರಭುತ್ವವು ಬಂದರೆ, ನಿನ್ನ ಪ್ರಜೆಗಳನ್ನು ಈ ರೀತಿಯಲ್ಲಿ ಇಟ್ಟುಕೊಂಡಿರಬೇಕು. ಪ್ರಜೆಗಳಲ್ಲಿ ಅಕೃತ್ರಿಮವಾದ ಪ್ರೀತಿಯನ್ನು ಹೇಗೆ ಇಡಬೇಕೋ ಅದನ್ನು ಕಲಿತುಕೊ. ಪ್ರೀತಿಯಿಂದ ಪ್ರೀತಿಯು ಹುಟ್ಟುವುದು. ನೀನು ಪ್ರಜೆಗಳನ್ನು ಹೇಗೆ ಪ್ರೀತಿಸುವೆಯೋ, ಪ್ರಜೆಗಳೂ ನಿನ್ನನ್ನು ಹಾಗೆಯೇ ಪ್ರೀತಿಸುವರು. ಯಾರು ಈ ರೀತಿಯಲ್ಲಿ ಪ್ರೀತಿಸುವುದನ್ನು ತಿಳಿದುಕೊಳ್ಳುವರೋ ಅವರು ಧನ್ಯರಾಗುವರು. ಪ್ರಜೆಗಳು ನೀನು ಪ್ರಭುವೆಂಬುದಾಗಿಯೂ, ತಾವು ಭೃತ್ಯರೆಂಬುದಾಗಿಯೂ ತಿಳಿದುಕೊಳ್ಳುವರು. ನೀನು ಅವರಲ್ಲಿ ಪುತ್ರವಾತ್ಸಲ್ಯವನ್ನಿಟ್ಟರೆ, ನಿನ್ನನ್ನು ಅವರು ತಂದೆಯಂತೆ ಮಾತ್ರವಲ್ಲದೆ, ದೇವರಂತೆಯೂ ತಿಳಿದುಕೊಳ್ಳುವರು. ಅವರ ಸುಖವೇ ನಿನ್ನ ಸುಖವೆಂದು ಭಾವಿಸಿದರೆ, ನಿನ್ನಲ್ಲಿ ಅಕೃತ್ರಿಮವಾದ ಭಕ್ತಿಯನ್ನಿಟ್ಟು, ಆವಶ್ಯಕವಾದಾಗ ಪ್ರಾಣವನ್ನೂ ಕೂಡ ಒಪ್ಪಿಸುವರು. ಸಮಾಧಾನ ಕಾಲದಲ್ಲಿ ಅದಕ್ಕೆ ಮೂಲಕಾರಣನೇ ನೀನೆಂದು ಕೃತಜ್ಞತೆಯಿಂದ ನಿನ್ನ ಸೇವೆಯನ್ನು ಮಾಡುವರು. ವಿಧಿಯಿಲ್ಲದೆ ಯುದ್ಧವು ಪ್ರಾಪ್ತವಾದರೆ, ನಿನ್ನ ರಕ್ಷಣೆಗಾಗಿ ಸರ್ವಸ್ವವನ್ನೂ, ಪ್ರಾಣವನ್ನೂ ಒಪ್ಪಿಸುವರು. ಭಯದಿಂದಲೂ, ನಿರಂಕುಶವಾದ ಅಧಿಕಾರದಿಂದಲೂ, ಅಧರ್ಮದಿಂದಲೂ ಪ್ರಜೆಗಳನ್ನು ಯಾರು ಆಳಬೇಕೆಂದು ಪ್ರಯತ್ನಿಸುತ್ತಾರೋ, ಅವರಲ್ಲಿ ಪ್ರಜೆಗಳಿಗೆ ಪ್ರೀತಿಯು ಇರುವುದಿಲ್ಲ. ಪ್ರಭುವು ಪ್ರಜೆಗಳ ಭಯಕ್ಕೆ ಕಾರಣನಾದರೆ, ಪ್ರಜೆಗಳು ಅವನ ಭಯಕ್ಕೆ ಜನ್ಮಸ್ಥಾನರಾಗುವರು. ಪ್ರಭುವು ಪ್ರಜೆಗಳನ್ನು ದ್ವೇಷಿಸಿ, ತಿರಸ್ಕಾರದಿಂದ ಕಂಡರೆ, ಅವರೂ ಅವನನ್ನು ದ್ವೇಷಿಸುವರು. ಮತ್ತು ತಿರಸ್ಕರಿಸುವರು. ಈ ದೇಶವನ್ನು ನೋಡಿದರೆ, ಪ್ರಭುವಿಗೂ ಪ್ರಜೆಗಳಿಗೂ, ಪರಸ್ಪರಾನುರಾಗವು ರೂಢಮೂಲವಾಗಿರುವಂತೆ ತೋರುತ್ತದೆ. ಇಂಥಾ ಪ್ರಜೆಗಳುಳ್ಳ ಪ್ರಭುವು ಧನ್ಯನು. ಇಂಥಾಪ್ರಭುವುಳ್ಳ ಪ್ರಜೆಗಳು ಧನ್ಯರು." ಎಂದು ಹೇಳಿದನು. ಇದನ್ನು ಕೇಳಿ ನಾನು—

" ಎಲೈ ಮೆಂಟರನೇ, ನಾವು ಅತ್ಯಂತ ಹೀನಸ್ಥಿತಿಯಲ್ಲಿರುತ್ತೇವೆ. ನಮಗೆ ಅನಿರ್ವಚನೀಯವಾದ ವಿಪತ್ತು ಸನ್ನಿಹಿತವಾಗಿದೆ. ಈಗ ರಾಜಧರ್ಮಗಳ ವಿಷಯವೇತಕ್ಕೆ? ನನ್ನ ಭಾಗಕ್ಕೆ ಇಥಾಕಾ ದ್ವೀಪವು ಬಹಳ ದೂರವಾಗಿರುವುದು. ನಮ್ಮ ಮಾತೃಶ್ರೀಯವರನ್ನು ನೋಡತಕ್ಕ ಸಂಭವವು ನನಗೆಲ್ಲಿಯದು ? ನಮ್ಮ ದೇಶವನ್ನು ನೋಡತಕ್ಕ ಸಂಪತ್ತು ನನಗೆ ಬಹಳ ದೂರವಾಯಿತು. ನನ್ನನ್ನು ನೋಡುವ ಸಂಪತ್ತು ನಮ್ಮ ತಂದೆತಾಯಿಗಳಿಗೆ ಹೇಗೆ ದುರ್ಲಭವೋ, ಅವರನು ನೋಡುವ ಸಂಪತ್ತು ನನಗೂ ಹಾಗಯೇ ದುರ್ಲಭವಾಯಿತು. ಪ್ರಜೆಗಳನ್ನು ಪ್ರೀತಿಸಿ, ಅವರ ಪ್ರೀತಿಗೆ ಪಾತ್ರನಾಗಿ ರಾಜ್ಯಭಾರವನ್ನು ವಹಿಸುವುದೆಲ್ಲಿ? ನಾನು ಎಲ್ಲಿ? ಈ ಎರಡಕ್ಕೂ ಮಹದಂತರವಿರುತ್ತದೆ. ನಮ್ಮಿಬ್ಬರಿಗೂ ಮರಣವು ಸನ್ನಿಹಿತವಾಗಿರುತ್ತದೆ. ಈ ಶುಭಪರಂಪರೆಗಳ ಯೋಚನೆಗಳೆಲ್ಲಾ ನಿರರ್ಥಕಗಳು. ನಮಗೆ ಮರಣ ಕಾಲವು ಒದಗಿತು. ದೇವರ ಇಷ್ಟವು ಹೀಗೆಯೇ ಇರಬಹುದೆಂದು ತೋರುತ್ತದೆ. ಸಾಯುವುದಕ್ಕೆ ಸಿದ್ಧರಾಗೋಣ." ಎಂಬದಾಗಿ ಬಹಳ ವ್ಯಸನದಿಂದ ಹೇಳಿದೆನು.

ವಿಪತ್ತು ಬಂದ ಕಾಲದಲ್ಲಿ ತಗ್ಗದೆ, ಸಂಪತ್ತು ಬಂದ ಕಾಲದಲ್ಲಿ ಹಿಗ್ಗದೆ ಇರುವ ಸಾಮರ್ಥ್ಯವು ಲೋಕವ್ಯವಹಾರಜ್ಞಾನವಿಲ್ಲದ ಹುಡುಗರಿಗೆ ಬರುವುದು ಕಷ್ಟ. ಆದರೆ ಮೆಂಟರು ವೃದ್ಧನಾಗಿದ್ದನು. ಲೋಕವ್ಯವಹಾರಜ್ಞಾನವುಳ್ಳವನಾಗಿದ್ದನು. ನಾಸ್ತಿಕನಾಗಿರಲಿಲ್ಲ. ಸತ್ಯವಂತರನ್ನೂ, ಧರ್ಮಿಷ್ಠರನ್ನೂ ರಕ್ಷಿಸುವುದು ಜಗದೀಶ್ವರನ ಬಿರುದೆಂದು ಅವನಿಗೆ ನಂಬಿಕೆಯು ಇತ್ತು. ಮುಂದಾಗತಕ್ಕದ್ದು ಗೊತ್ತಾಗದಿದ್ದಾಗ್ಯೂ, ನಿರಪರಾಧಿಗಳಾದ ತಮ್ಮನ್ನು ರಕ್ಷಿಸುವುದಕ್ಕೆ ದೇವರು ಬಂದೇ ಬರುವನೆಂದು ದೃಢವಾದ ನಂಬಿಕೆಯು ಅವನಿಗೆ ಇತ್ತು. ಭಯಭ್ರಾಂತನಾದ ನನ್ನನ್ನು ಕುರಿತು ಅವನು ಹೇಳಿದ್ದೇನಂದರೆ :—

" ಯೂಲಿಸೆಸ್ಸನು ಲೋಕೈಕವೀರನು. ಪೂರ್ವಾಪರಜ್ಞಾನದಲ್ಲಿ ಅವನು ಅದ್ವಿತೀಯನಾಗಿದ್ದನು. ಸಂಪತ್ತುಗಳಲ್ಲಿಯೂ, ವಿಪತ್ತುಗಳಲ್ಲಿಯೂ ಒಂದೇ ವಿಧವಾಗಿರುತ್ತಿದ್ದನು. ನಿನ್ನ ಮಾತುಗಳನ್ನು ನೋಡಿದರೆ, ಅಂಥಾ ಮಹಾತ್ಮನ ಅಂಶವು ನಿನ್ನಲ್ಲಿ ಏಕೆ ಉಂಟಾಗಲಿಲ್ಲವೋ, ಅದನ್ನು ಹೇಳುವುದಕ್ಕಾಗುವುದಿಲ್ಲ. ವಿಪತ್ತು ಬಂದಾಗ ಧೈರ್ಯದಿಂದ ಇರಬೇಕು. ದೇವರ ಮೇಲೆ ಭಾರವನ್ನು ಹಾಕಿ, ಧರ್ಮದಿಂದ ವಿಪತ್ತನ್ನು ತಪ್ಪಿಸಿಕೊಳ್ಳುವ ಪ್ರಯತ್ನ ಮಾಡಬೇಕು. ಈ ಹೇಡಿತನವು ನಿನಗೆಲ್ಲಿಂದ ಬಂದಿತು ? ಪ್ರಾಜ್ಞರಾದವರು ಹೀಗೆ ಭಯಪಡುವರೇ ? ನಿನ್ನ ತಂದೆತಾಯಿಗಳನ್ನು ನೋಡುವ ಸಂಭವವು ಬರುವುದಿಲ್ಲವೆಂಬ ಭೀತಿಯು ನಿನಗೆ ಉಂಟಾಗುವುದಕ್ಕೆ ಕಾರಣವೇನು ? ಸತ್ಪುರುಷರ ಇಷ್ಟಾರ್ಥಗಳು ಹಸ್ತಗ

ಶವಾಗದೆ ಇರತಕ್ಕದ್ದನ್ನು ನೀನು ಎಲ್ಲಾದರೂ ಕೇಳಿರುವೆಯಾ ? ಮಹಾತ್ಮರಾದವರೆಲ್ಲರೂ ತಮ್ಮ ಧರ್ಮದಿಂದ ವಿಘ್ನಕೋಟಿಗಳನ್ನೂ ಕೂಡ ಜಯಿಸಿ, ದೈವಪ್ರಸನ್ನತೆಯನ್ನು ಹೊಂದಿರುವುದಿಲ್ಲವೆ ? ಅಜೇಯನಾದ ಯೂಲಿಸೆಸ್ಸಿಗೆ ಮಗನಾಗಿ, ಹೇಡಿಗಳಂತೆ ಮಾತನಾಡುವುದನ್ನು ಬಿಡು. ಇಂಥಾ ವಿಪತ್ತುಗಳೂ, ಇದಕ್ಕಿಂತಲೂ ಭಯಂಕರಗಳಾದ ವಿಪತ್ತುಗಳೂ ಗೊತ್ತಿಲ್ಲದ ಹಾಗೆ ನಿಮ್ಮ ತಂದೆಗೆ ಬಂದವು. ಆತನು ಅವುಗಳನ್ನೆಲ್ಲಾ ಲೇಶವೂ ಭಯಪಡದೆ ಜಯಿಸಿದನು. ಇಂಥಾ ಚಿಕ್ಕ ವಿಪತ್ತುಗಳಿಗೆ ಗುರಿಯಾಗಿ, ನೀನು ಭಯಪಟ್ಟೆಯೆಂದು ತಿಳಿದರೆ, ನಿಮ್ಮ ತಂದೆಯು ಬಹಳ ವಿಷಾದ ಪಡುವನು. ನಿನ್ನ ಹೇಡಿತನವು ಅವನ ಮನೋರಥಭಂಗಕ್ಕೆ ಕಾರಣವಾಗುವುದು. ಸಾಮಾನ್ಯ ಜನಗಳಂತೆ ಭಯಭ್ರಾಂತನಾಗಬೇಡ. ಬಂದ ವಿಪತ್ತುಗಳನ್ನು ಜಯಿಸುವುದಕ್ಕೆ ತಕ್ಕ ಉಪಾಯಗಳನ್ನು ದೇವರೇ ನಮಗೆ ತೋರಿಸಿರುವನು. ಇದುವರೆಗೂ ಎಷ್ಟೋ ಕಷ್ಟಗಳು ಬರಲಿಲ್ಲವೇ ? ಅವುಗಳನ್ನೆಲ್ಲಾ ನಾವು ಜಯಿಸಲಿಲ್ಲವೇ ? ಕಷ್ಟವಿಲ್ಲದೆ ಹಸ್ತಗತವಾದ ಇಷ್ಟಾರ್ಥಪ್ರಾಪ್ತಿಯು ಎಂದಿಗೂ ಮಂಗಳಕರವಾಗುವುದಿಲ್ಲ. ಯಾವ ಇಷ್ಟಾರ್ಥವನ್ನು ಪುರುಷಕಾರದಿಂದ ನಾವು ಸಂಪಾದಿಸುತ್ತೇವೋ ಅದೇ ನಮಗೆ ಮಹಿಮೆಯನ್ನುಂಟುಮಾಡುವುದು. ಭಯಪಡಬೇಡ. ಯೂಲಿಸೆಸ್ಸಿನ ಮಗನಂತೆ ನಡೆದುಕೊ. ವ್ಯಸನಾಕ್ರಾಂತನಾಗಬೇಡ. ಶಾಂತಿಯನ್ನು ತಂದುಕೊ. ಶಾಂತಿಯು ನಮ್ಮನ್ನು ಕಾಪಾಡುವುದು.''

ಈ ರೀತಿಯಲ್ಲಿ ಮೆಂಟರನು ಹೇಳಲು, ನಾನು ಮೊದಲು ಭಯದಿಂದ ಹೇಗೆ ಭ್ರಾಂತನಾಗಿದ್ದೆನೋ ಹಾಗೆ ನಾಚಿಕೆಯಿಂದ ತಗ್ಗಿದವನಾಗಿ '' ಎಲೈ ಮೆಂಟರನೆ, ನನ್ನ ಹೇಡಿತನವನ್ನೂ, ಭಯಭ್ರಾಂತಿಯನ್ನೂ ಕ್ಷಮಿಸು. ನನ್ನ ತಂದೆತಾಯಿಗಳಿಗೆ ಅವಮಾನವುಂಟಾಗತಕ್ಕ ಕೆಲಸಗಳನ್ನು ನಾನು ಎಂದಿಗೂ ಮಾಡುವುದಿಲ್ಲ. ದೈವಯೋಗದಿಂದ ಅಮಾರ್ಗದಲ್ಲಿ ನಡೆದಾಗ, ನನ್ನನ್ನು ತಿದ್ದುವುದಕ್ಕೆ ನೀನು ದೊರೆತಿರುವೆ. ದೇವರು ನನ್ನಲ್ಲಿ ಪ್ರೀತಿಯಿಟ್ಟಿರುವನೆಂಬುವುದಕ್ಕೆ ಇದಕ್ಕಿಂತಲೂ ಬೇರೆ ದೃಷ್ಟಾಂತವು ಆವಶ್ಯಕವಿಲ್ಲ. ನೀನು ಸಹಾಯಭೂತನಾಗಿರುವವರೆಗೂ ನನಗೆ ಯಾವ ಭಯವೂ ಇರುವುದಿಲ್ಲ.'' ಎಂದು ಹೇಳಿದೆನು. ಅನಂತರ ಮೆಂಟರು—

'' ಈ ಈಜಿಪ್ಟ್ ದೇಶವು ಎಷ್ಟು ಫಲವತ್ತಾದುದು ? ಜನಗಳು ಎಷ್ಟು ತೃಪ್ತರಾದವರಂತೆ ತೋರುತ್ತಾರೆ ? ಅವುಗಳನ್ನೆಲ್ಲಾ ಸಾವಧಾನವಾಗಿ ನೋಡು. ಈ ದೇಶದಲ್ಲಿ ೨೨ ಸಾವಿರ ಪಟ್ಟಣಗಳು ಇರುವುವು. ಇಲ್ಲಿ ರಾಜಧರ್ಮವು ಹಸ್ತಗತವಾಗಿರುವುದು. ಬಡವರನ್ನು ಉಪಪನ್ನರು ಹಿಂಸಿಸುತ್ತಿಲ್ಲ. ಯುವಕರು

ವಿದ್ಯಾವಿನಯ ಸಂಪನ್ನರಾಗಿರುತ್ತಾರೆ. ಉದ್ಯೋಗದಲ್ಲಿ ಯಾರೂ ಪರಾಙ್ಮುಖರಾಗಿರುವುದಿಲ್ಲ. ನಿಷಾದ್ರವ್ಯ ಸೇವನೆಯು ಇವರಲ್ಲಿರುವುದಿಲ್ಲ. ಸತ್ಕಾವ್ಯಾಲಾಪವು ಇವರಲ್ಲಿ ಚೆನ್ನಾಗಿರುವುದು. ಅನೇಕ ಕಲಾಕೌಶಲ್ಯವು ಇವರಲ್ಲಿ ನೆಲೆಗೊಂಡಿರುವುದು. ಎಲ್ಲರೂ ಅವರವರ ಕೆಲಸಗಳನ್ನು ಸರಿಯಾದ ಕಾಲದಲ್ಲಿ ಶ್ರದ್ಧೆಯಿಂದ ಮಾಡುತ್ತಾರೆ. ಲೋಕಬಾಂಧವತೆಯು ಎಲ್ಲರಲ್ಲೂ ಮೂರ್ತೀಭವಿಸಿದೆ. ಎಲ್ಲರೂ ತಮ್ಮ ಗೌರವದ ಮೇಲೆ ದೃಷ್ಟಿಯುಳ್ಳವರಾಗಿದ್ದಾರ. ಎಲ್ಲರೂ ಪ್ರಾಮಾಣಿಕರಾಗಿರುತ್ತಾರೆ. ಮಾತಾಪಿತೃಗಳು, ಬಾಲ್ಯದಲ್ಲಿಯೇ ದೈವಭಕ್ತಿಯು ಉಂಟಾಗುವಂತೆ ಮಕ್ಕಳಿಗೆ ಹಿತೋಪದೇಶವನ್ನು ಮಾಡುತ್ತಲಿದ್ದಾರ. ಪ್ರಭುತ್ವ ಮಾಡತಕ್ಕವರು ಯುಕ್ತಾಯುಕ್ತ ವಿಚಕ್ಷಣರಲ್ಲವಿದ್ದರ, ಪ್ರಜೆಗಳು ಇಂಥಾ ಗುಣಾತಿಶಯಗಳುಳ್ಳವರಾಗುವುದು ಅಪೂರ್ವ. ಇಂಥಾ ಪ್ರಜೆಗಳುಳ್ಳ ಪ್ರಭುಗಳು ಹೇಗೆ ಕೃತಕೃತ್ಯರೋ, ಇಂಥಾ ಪ್ರಭುಗಳುಳ್ಳ ಪ್ರಜೆಗಳೂ ಕೂಡ ಹಾಗೆಯೇ ಕೃತಕೃತ್ಯರು. ಈ ದೇಶದಲ್ಲಿ ಪ್ರಭುತ್ವವು ರೂಢಮೂಲವಾಗಿದೆ. ಶತ್ರುಗಳ ಭಯವು ಪ್ರಭುಗಳಿಗೆ ಇರುವುದಿಲ್ಲ. ಅಜಾತಶತ್ರುಗಳಿಗೆ ಶತ್ರುಗಳು ಎಲ್ಲಿಂದ ತಾನೇ ಬರುತ್ತಾರ? ದೈವಯೋಗದಿಂದ ಅಜಾತಶತ್ರುಗಳಾದ ಪ್ರಭುಗಳು ಪ್ರಜೆಗಳಿಗೆ ದೊರೆಯುವರು. ಅವರ ಪುಣ್ಯವೇ ಇದಕ್ಕೆ ಮುಖ್ಯ ಕಾರಣ. ಪ್ರಭುತ್ವವು ಬಂದ ಮಾತ್ರದಿಂದಲೆ, ಪ್ರಜಾರಂಜನೈಕಪರಾಯಣತೆಯು ಬರುವುದೆಂದು ಹೇಳುವುದಕ್ಕಾಗುವುದಿಲ್ಲ. ಅದಕ್ಕೂ ಪೂರ್ವಾರ್ಜಿತ ಪುಣ್ಯಪರಿಪಾಕವು ಬೇಕು. ಪುಣ್ಯದಿಂದ ಪುಣ್ಯವು ಹೆಚ್ಚುವುದು. ಪಾಪದಿಂದ ಪಾಪವು ವೃದ್ಧಿಯಾಗುವುದು. ಈ ದೇಶವನ್ನು ನೋಡಿದರೆ, ಈ ದೇಶದ ಪ್ರಭುವು ಈ ದೇಶವನ್ನು ಪ್ರೀತಿಯಿಂದ ಆಳುತ್ತಾನೆಂದು ಗೊತ್ತಾಗುತ್ತದೆ. ಪ್ರಭುಗಳೂ, ಪ್ರಜೆಗಳೂ ಒಬ್ಬರ ಕ್ಷೇಮಕ್ಕೆ ಒಬ್ಬರು ಬಾಧ್ಯರೆಂದು ತಿಳಿದುಕೊಂಡಿದ್ದಾರೆಂಬದಾಗಿಯೂ ಗೊತ್ತಾಗುತ್ತದೆ. ಜನಗಳಲ್ಲ ವೈಷಮ್ಯಗಳಿಲ್ಲವೆಂಬುದಾಗಿಯೂ ಸ್ಪಷ್ಟವಾಗುತ್ತದೆ. ಸೃಷ್ಟಿಸ್ಥಿತಿಪ್ರಳಯಗಳಿಗೆ ಕರ್ತನಾದ ಮತ್ತು ಕಾರಣಭೂತನಾದ ಜಗದೀಶ್ವರನ ವಿಧಿನಿಷೇಧಗಳನ್ನು ಅನುಸರಿಸಿ ನಡೆಯುವುದೇ ದೇವತಾರಾಧನೆಯೆಂದು ತಿಳಿದುಕೊಂಡು, ಇಲ್ಲಿನ ಪ್ರಭುಗಳೂ, ಪ್ರಜೆಗಳೂ ಉಭಯತ್ರರೂ ನಡೆಯುತ್ತಿರುವಂತೆ ಗೊತ್ತಾಗುತ್ತದೆ. ಈ ದೇಶದ ಪ್ರಭುವು ಪ್ರಜೆಗಳಿಗೆ ಸಮ್ಮತನಾಗಿರುವನೆಂಬುದಾಗಿಯೂ, ಇವನ ರಾಜ್ಯಭಾರವು ಆಚಂದ್ರಾರ್ಕವಾಗಿರಲೆಂದು ಜನಗಳು ಕೋರುತ್ತಲಿದ್ದಾರೆಂಬುದಾಗಿಯೂ ಗೊತ್ತಾಗುತ್ತದೆ. ಕಾಲದೇಶವರ್ತಮಾನಗಳ ವೈಷಮ್ಯದಿಂದ ಈ ಧರ್ಮರಾಜ್ಯಕ್ಕೆ ವಿಪತ್ತು ಏನಾದರೂ ಬಂದೀತೋ ಏನೋ ಎಂಬ ಭಯದಿಂದ ಪೂರ್ವಾಚಾರಜ್ಞರು ವಿಚಾರಪರರಾಗಿರುವರೆಂಬದಾಗಿಯೂ ತಿಳಿಯಬರು

ತ್ತದೆ. ಈ ದೇಶದ ಜನಗಳ ಸ್ಥಿತಿಯನ್ನು ನೋಡಿ, ನಿನ್ನ ಕರ್ತವ್ಯವನ್ನು ಗೊತ್ತು ಮಾಡಿಕೊಳ್ಳುವುದರಲ್ಲಿ ಆಸಕ್ತನಾಗು. ಇದು ನಿನಗೆ ತುಂಬಾ ಶ್ರೇಯಸ್ಕರವಾದದ್ದು" ಎಂದು ಮೆಂಟರನು ಹೇಳಿದನು.

(ಆತ್ಮಗತ) ಇವನು ಹೇಳಿದ್ದು ನಿಜ. ಜನ್ಮಾಂತರ ಸುಕೃತದಿಂದ ವಿವೇಕವುಳ್ಳ ಪ್ರಭುಗಳು ಪ್ರಜೆಗಳಿಗೆ ದೊರೆಯುವರು. ಜನ್ಮಾಂತರ ಸುಕೃತದಿಂದ ಪ್ರಭುಗಳಿಗೂ ಕೂಡ ಸತ್ಪುರುಷರ ಸೇವೆಯು ಲಭಿಸುವುದು. ಪ್ರಾಯಿಕವಾಗಿ ಪ್ರಭುಗಳು ಅಪ್ರತಿಹತವಾದ ಅಧಿಕಾರವನ್ನೂ, ಅಪರಿಮಿತವಾದ ಐಶ್ವರ್ಯವನ್ನೂ, ಅಕೃತ್ರಿಮವಾದ ಭಕ್ತಿಯುಳ್ಳ ಬಂಧುಮಿತ್ರರನ್ನೂ, ಅನುಕೂಲರಾದ ಪತ್ನೀಪುತ್ರರನ್ನೂ ಅಪೇಕ್ಷಿಸುತ್ತಾರೆ. ಈ ಸಂಪತ್ತುಗಳಲ್ಲಿ ಯಾವುವೂ ಜನ್ಮತಃ ನಮ್ಮ ಜತೆಯಲ್ಲಿ ಬಂದವುಗಳಲ್ಲ. ದೇಹವನ್ನು ಬಿಟ್ಟು ಹೋಗುವಾಗ್ಯೂ, ಇವುಗಳಲ್ಲಿ ಯಾವುವೂ ನಮ್ಮ ಜತೆಯಲ್ಲಿ ಬರುವುದಿಲ್ಲ. ತಿರ್ಯಗ್ಜಂತುಗಳೂ ಕೂಡ ಪುತ್ರಮಿತ್ರಕಳತ್ರಾದಿಗಳಲ್ಲಿ ಅನುರಕ್ತವಾಗಿರುವುವು. ಈ ಭಾಗದಲ್ಲಿ ಅವುಗಳಿಗೂ, ನಮಗೂ ಯಾವ ವಿಧವಾದ ವಿಶೇಷವೂ ಇರುವುದಿಲ್ಲ. ಈಶ್ವರನಿಗೂ ಮನುಷ್ಯನಿಗೂ ವ್ಯತ್ಯಾಸವೇನು? ಮನುಷ್ಯನು ತನಗೆ ಸಂಬಂಧಪಟ್ಟ ವಿಷಯಗಳಲ್ಲಿ ವಿಶೇಷ ಅನುರಕ್ತನಾಗಿರುವನು. ಇತರ ವಿಷಯಗಳಲ್ಲಿ ಅವನಿಗೆ ಅಷ್ಟು ಅನುರಾಗವಿರುವುದಿಲ್ಲ. ಈಶ್ವರನಿಗಾದರೋ, ಸರ್ವಸಮದೃಷ್ಟಿ ಇರುವುದು. ಅಣುಸ್ವರೂಪವಾದ ಪ್ರಾಣಿಗಳು ಮೊದಲುಗೊಂಡು ಮಹಾಭೂತಗಳ ವರಗೂ ಎಲ್ಲಾ ಪ್ರಾಣಿಗಳ ಯೋಗಕ್ಷೇಮಚಿಂತನೆಯಲ್ಲಿ ಅವನು ಒಂದೇ ವಿಧವಾಗಿರುವನು. ಎಲ್ಲಾ ಪ್ರಾಣಿಗಳ ಕರ್ಮಕ್ಕೆ ಅನುಸಾರವಾಗಿ ಅವುಗಳಿಗೆ ಫಲವು ಉಂಟಾಗುವಂತೆ ಅವನು ಮಾಡಿರುವನು. ಕರ್ಮಗಳಿಗೆ ಅನುಸಾರವಾದ ಫಲಗಳು ಬರುವಂತೆಯೂ, ಫಲಗಳಿಗೆ ಅನುಸಾರವಾದ ಕರ್ಮಗಳು ಸರ್ವಜಂತುಗಳಿಗೂ ಲಭಿಸುವಂತೆಯೂ ಮಾಡಿ, ಅದಕ್ಕೆ ತಾನೇ ಸಾಕ್ಷಿಯಾಗಿರುವನು. ಸೊಳ್ಳೆಯೂ, ಆನೆಯೂ ಎರಡೂ ಅವನಿಗೆ ಒಂದೇ. ಒಂದರಲ್ಲಿ ಪಕ್ಷಪಾತವೂ, ಮತ್ತೊಂದರಲ್ಲಿ ದ್ವೇಷವೂ ಅವನಿಗೆ ಇರುವುದಿಲ್ಲ. ಇದು ದೇವರ ಅನಂತ ಗುಣಗಳಲ್ಲಿ ಪ್ರಧಾನವಾದ ಒಂದು ಗುಣವಾಗಿರುವುದು. ಮನುಷ್ಯನು ತಾನು ಜನ್ಮಿಸಿದಾಗ ತನ್ನೊಡನೆ ಹುಟ್ಟಿ ಪ್ರವೃದ್ಧವಾಗತಕ್ಕ ಇಂದ್ರಿಯಗಳಿಗೂ, ಅರಿಷಡ್ವರ್ಗಗಳಿಗೂ ಅಧೀನನಾಗದೆ ದೇವರಂತೆ ಸಹಜವಾದ ಸರ್ವ ಸಮದೃಷ್ಟಿಯನ್ನು ಹೊಂದುವುದು ಅಪೂರ್ವ. ಆದರೆ, ದೇವತ್ವವನ್ನು ಹೊಂದುವುದು ಅಸಾಧ್ಯವಲ್ಲ. ಇದಕ್ಕೆ ಮೆಂಟರೇ ದೃಷ್ಟಾಂತ. ನನಗೂ ಇವನಿಗೂ ಇರತಕ್ಕ ವೈಲಕ್ಷಣ್ಯವನ್ನು ನೋಡಿದರೆ, ಮನುಷ್ಯನಿಗೂ, ದೇವರಿಗೂ ಇರತಕ್ಕ ವ್ಯತ್ಯಾಸದ ಮಹಿಮೆಯು

ಗೊತ್ತಾಗುವುದು. ಈತನು ಜಿತೇಂದ್ರಿಯನು. ಕೋಪತಾಪಗಳಿಗೆ ಅಧೀನನಲ್ಲ. ಫೆಸಿಫಿಕ್ ಸಾಗರದಂತೆ ತುಳುಕದೆ ಇರತಕ್ಕ ಶಾಂತಿಯಿಂದ ಶೋಭಿತನಾಗಿರುತ್ತಾನೆ. ಎಂಥಾ ಕಷ್ಟಬಂದಾಗ್ಯೂ ತಗ್ಗುವುದಿಲ್ಲ. ಎಂಥಾ ಸುಖಬಂದಾಗ್ಯೂ ಹಿಗ್ಗುವುದಿಲ್ಲ. ದುಷ್ಟನಿಗ್ರಹ, ಶಿಷ್ಟಪರಿಪಾಲನೆಯಲ್ಲಿ ಜಗದೀಶ್ವರನು ಬದ್ಧದೀಕ್ಷೆಯುಳ್ಳವನೆಂದು ಇವನಿಗೆ ನಂಬಿಕೆಯು ಇರುವುದು. ಇದು ನಿರಾಧಾರವಾದ ನಂಬಿಕೆಯಲ್ಲ. ಈಗ ಬಂದಿರತಕ್ಕ ವಿಪತ್ತುಗಳನ್ನು ನೋಡಿ, ಆಶಾಪಾಶಪರವಶನಾದ ನನಗೆ ಭಯಭ್ರಾಂತಿಯು ಉಂಟಾಗಿರುವುದು. ದೇಶದ ರಮಣೀಯತ್ವವು ಅದರ ಸ್ವಭಾವಸಿದ್ಧವಾದ ರೂಪದಲ್ಲಿ ನನ್ನ ಕಣ್ಣಿಗೆ ತೋರುತ್ತಲಿಲ್ಲ. ಇವನು ಇದನ್ನು ನೋಡಿ ಆನಂದ ಪಡುತ್ತಲಿದಾನೆ. ಇದಕ್ಕೆ ಕಾರಣವೇನು? ಅವನ ಆಸ್ತಿಕತೆಯೇ ಅವನ ಶಾಂತಿಗೆ ಮುಖ್ಯಕಾರಣವಲ್ಲವೇ? ಸಂಶಯಾತ್ಮನಾಗಿರುವುದೇ ನನ್ನ ಭಯಕ್ಕೆ ಮುಖ್ಯ ಕಾರಣವಲ್ಲವೇ? ಅಜ್ಞಾನದ ಮಹಿಮೆಯು ನನ್ನಲ್ಲಿ ತೋರುತ್ತದೆ. ಜ್ಞಾನದ ಮಹಿಮೆಯ ಅವನಲ್ಲಿ ತೋರುತ್ತದೆ. ಜ್ಞಾನವಿಲ್ಲದವರಿಗೆ ಮೋಕ್ಷವಿಲ್ಲವೆಂಬುದು ಎಷ್ಟು ನಿಜವಾದದ್ದು! ಪುಣ್ಯಪರಿಪಾಕದಿಂದ ಈ ಜ್ಞಾನವು ಲಭ್ಯವಾಗಬೇಕು. ಅದು ಹೇಗಾದರೂ ಇರಲಿ. ಲೋಕದಲ್ಲಿ ಬಹು ಜನಗಳಿಗಿಂತ ನಾನು ಹೆಚ್ಚು ಪುಣ್ಯಶಾಲಿ. ನನಗೆ ಸಂಚಿತವಾದ ಸುಕೃತರಾಶಿಯು ಮೇರುಪರ್ವತದಂತೆ ಇರಬೇಕು. ಹಾಗಿಲ್ಲದಿದ್ದರೆ, ಈ ಮಹಾತ್ಮನ ಸಾನ್ನಿಧ್ಯವೂ, ಸಹವಾಸವೂ ನನಗೆ ಹೇಗೆ ದೊರೆಯುತ್ತಿತ್ತು? ಎಂದು ಮನಸ್ಸಿನಲ್ಲಿ ಯೋಚಿಸುತ್ತಾ ಮೆಂಟರನನ್ನು ನೋಡಿ—

(ಪ್ರಕಾಶ) ಎಲೈ ಮಹಾತ್ಮನಾದ ಮೆಂಟರನೇ, ನಾನು ಕೇವಲ ಪಾಮರನು. ಅಜಿತೇಂದ್ರಿಯರಾಗಿಯೂ, ಕಾಮಕ್ರೋಧಪರವಶರಾಗಿಯೂ, ಭಯಗ್ರಸ್ತರಾಗಿಯೂ ಇರತಕ್ಕವರಿಗೆ ಜಗದೀಶ್ವರನ ಮಹಿಮೆಯು ತೋರುವುದಿಲ್ಲ. ಅವರ ಜ್ಞಾನಚಕ್ಷುಸ್ಸಿಗೆ ಪರೆಯು ಬಂದಿರುವುದು. ಪ್ರಕೃತಿ ಸಂಬಂಧವಾದ ರಾಗದ್ವೇಷಗಳಿಂದ ಭಯಪರವಶರಾದ ಕಾಲದಲ್ಲಿ ಜನಗಳಿಗೆ ಕಣ್ಣು ಕಾಣುವುದಿಲ್ಲ. ಕಿವಿಯು ಕೇಳುವುದಿಲ್ಲ, ಸಕಲೇಂದ್ರಿಯಗಳೂ ಸ್ತಬ್ಧವಾಗುವುವು. ಜ್ಞಾನೇಂದ್ರಿಯವು ರಕ್ಕೆಗಳನ್ನು ಕಟ್ಟಿಕೊಂಡು ಓಡಿಹೋಗುವುದು. ಈಗ ಸ್ವಲ್ಪ ಹೊತ್ತಿಗೆ ಮುಂಚೆ, ನನ್ನ ಅವಸ್ಥೆಯು ಈ ರೀತಿಯಲ್ಲಿದ್ದಿತು. ಉಷ್ಣವಲಯದ ಸೂರ್ಯನು ಪ್ರಜ್ವಲಿಸಿದ ಕೂಡಲೆ, ನಿಬಿಡವಾದ ತಿಮಿರವು ಫಲಾಯನ ಮಂತ್ರವನ್ನು ಜಪಿಸುವಂತೆ ಶಾಂತಿಯೆಂಬ ಸಾಗರದಲ್ಲಿ ಮಹಾ ವಿಷ್ಣುವಿನಂತೆ ತೇಲುವ ನಿನ್ನ ಜ್ಞಾನೋಪದೇಶದಿಂದ ನನಗೆ ಎಚ್ಚರವಾಯಿತು. ಭಯವು ತೊಲಗಿತು. ಪರಿಣಾ

ಮದಲ್ಲಿ ಧರ್ಮವು ಜಯಿಸುವುದೆಂಬ ನಂಬಿಕೆಯು ಉಂಟಾಯಿತು. ನಿನ್ನ ಉಪದೇಶದಿಂದ ನನ್ನ ಚರ್ಮಚಕ್ಷುಸ್ಸಿಗೂ, ಜ್ಞಾನಚಕ್ಷುಸ್ಸಿಗೂ ಉಂಟಾಗಿದ್ದ ಪರೆಯು ಕರಗಿಹೋಯಿತು. ಈ ದೇಶದ ರಮಣೀಯತೆಯು ಈಗ ನನ್ನ ದೃಷ್ಟಿಗೆ ಬೀಳುತ್ತಲಿದೆ. ಈ ದೇಶವೆಲ್ಲಾ ಅತ್ಯಂತ ರಮಣೀಯವಾಗಿದೆ. ಈ ರಮಣೀಯತೆಗೆ ಕಾರಣಭೂತರಾದವರು ಮಹಾಜನಗಳೆಂದು ಗೊತ್ತಾಗುತ್ತದೆ. ಸಂಪದಭಿವೃದ್ಧಿ ಕೆಲಸಗಳಲ್ಲಿ ಅವರು ಮಾಡುತ್ತಲಿರುವ ಮೆಹನತ್ತು ಹೊಲಗಳಲ್ಲಿಯೂ, ಗದ್ದೆಗಳಲ್ಲಿಯೂ, ಆರಾಮುಗಳಲ್ಲಿಯೂ, ಕಲ್ಪವೃಕ್ಷಗಳಲ್ಲಿಯೂ ಸ್ಪಷ್ಟವಾಗಿ ಕಾಣುತ್ತಲಿದೆ. ಇಲ್ಲಿನ ಸ್ತ್ರೀ ಪುರುಷರು ಆನಂದವಾಗಿರುವುದನ್ನೂ, ದನಕರುಗಳು ಚೆನ್ನಾಗಿ ಬೆಳೆದಿರುವುದನ್ನೂ ನೋಡಿದರೆ, ಈ ದೇಶದ ಪ್ರಭುವು ಪ್ರಜೆಗಳ ಸೇವೆಯಲ್ಲಿ ಎಷ್ಟು ಪರಾಯಣನಾಗಿರುವನೋ ಅದು ಗೊತ್ತಾಗುತ್ತಧೆ. ಪ್ರಭುವು ವಾಸ ಮಾಡತಕ್ಕ ಅರಮನೆಗೂ, ಉಪಪನ್ನರಾದ ಜನಗಳು ವಾಸ ಮಾಡತಕ್ಕ ಪ್ರಾಸಾದಗಳಿಗೂ, ಪ್ರಜೆಗಳು ವಾಸ ಮಾಡತಕ್ಕ ಮನೆಗಳಿಗೂ, ಮುನಿಗಳು ವಾಸ ಮಾಡತಕ್ಕ ಪರ್ಣಶಾಲೆಗಳಿಗೂ ಜಗಚ್ಚಕ್ಷುವಾದ ಸೂರ್ಯನೂ, ಜಗತ್ತಿಗೆ ಪ್ರಾಣಭೂತವಾದ ವಾಯುವೂ ಸರ್ವಸಮದೃಷ್ಟಿಯಿಂದ ಹೇಗೆ ಅನುಗ್ರಹಮಾಡುತ್ತಲಿರುವರೋ ಅದು ಗೊತ್ತಾಗುತ್ತದೆ. ಅಶ್ವಿನೀ ದೇವತೆಗಳೂ ಕೂಡ ಪ್ರಜೆಗಳ ಆರೋಗ್ಯಭಾಗ್ಯದ ವಿಷಯಗಳಲ್ಲಿ ಈ ಪ್ರಭುವಿನಲ್ಲಿ ಕೃಪೆಯಿಟ್ಟು, ದೀರ್ಘಾಯುರಾರೋಗ್ಯಗಳಿಗೆ ಸಹಕಾರಿಗಳಾದ ಉಪದೇಶಗಳನ್ನು ಮಾಡಿರಬೇಕೆಂದು ತೋರುತ್ತದೆ. ಮುಂದೆ ನಾನು ಇಥಾಕಾ ದ್ವೀಪಕ್ಕೆ ಪ್ರಭುವಾದ ಪಕ್ಷದಲ್ಲಿ, ನನ್ನ ದೇಶವನ್ನು ಹೇಗೆ ಇಟ್ಟುಕೊಳ್ಳಬೇಕೋ, ನನ್ನ ಪ್ರಜೆಗಳ ಸೇವೆಯನ್ನು ಹೇಗೆ ಮಾಡಬೇಕೋ ಅದಕ್ಕೆ ಮೇಲ್ಪಂಕ್ತಿಯು ಇಲ್ಲಿ ಇರುವುದೆಂದು ನೀನು ಹೇಳಿದೆ. ನನ್ನ ದೇಶದಲ್ಲಿ ಪ್ರಭುತ್ವವನ್ನು ಮಾಡುವ ಸಂಪತ್ತು ನನಗೆ ಲಭ್ಯವಾಗುವುದೋ ಇಲ್ಲವೋ ಎಂಬ ಸಂದೇಹವು ನನಗೆ ಇದುವರೆಗೂ ಇದ್ದಿತು ಈಗ ನಿವೃತ್ತವಾಯಿತು. ನಾವು ಅಪರಾಧಿಗಳಲ್ಲ. ನಮ್ಮನ್ನು ಗೂಢಾಚಾರರೆಂದು ತಿಳಿದುಕೊಂಡು, ಮರಣದಂಡನೆಗೆ ಗುರಿಮಾಡಬೇಕೆಂಬ ಉದ್ದೇಶ್ಯವು ಈ ದೇಶೀಯರಿಗೆ ಉಂಟಾಗಿರುವುದು. ಜಗದೀಶ್ವರನಿಗೆ "ಭಯಕೃದ್ಭಯನಾಶನಃ" ಎಂಬ ಬಿರುದು ಇರುವುದು. ನನ್ನ ಅಜ್ಞಾನದಿಂದ ಭಯವು ಉಂಟಾಗಿರುವುದು. ದೇವರು ಸತ್ಯಸಂಧನಾದ್ದರಿಂದಲೂ, ನಾವು ನಿರಪರಾಧಿಗಳಾದದ್ದರಿಂದಲೂ ನಮಗೆ ಯಾವ ಅನರ್ಥವೂ ಉಂಟಾಗಲಾರದೆಂದು ನಂಬಬಹುದು." ಈ ರೀತಿಯಲ್ಲಿ ನಾನು ಹೇಳಲು, ಮೆಂಟರನು ಹೇಳಿದ್ದೇನೆಂದರೆ.—

"ಈ ರಾಜ್ಯದ ಜನಗಳು ಕೇವಲ ಸುಖವಾಗಿರುವರು. ಇದರಿಂದಲೇ ಈ

ದೇಶದ ಪ್ರಭುವೂ, ಇವನ ಮಂತ್ರಿಗಳೂ, ಇವನ ಭೃತ್ಯರೂ, ಸರ್ವರೂ ವಿವೇಕ ಶಾಲಿಗಳಾಗಿ ಇರಬೇಕೆಂದು ಹೇಳಬಹುದು. ಈ ಪ್ರಭುವೂ, ಆವನ ನೌಕರರೂ ಕೂಡ ಪುಣ್ಯಶಾಲಿಗಳು. ಹಾಗಿಲ್ಲದಿದ್ದರೆ, ಪ್ರಜೆಗಳ ಸೌಖ್ಯವೇ ತಮ್ಮ ಸೌಖ್ಯ ನೆಂದು ಅವರು ಭಾವಿಸುತ್ತಿರಲಿಲ್ಲ. ಹಾಗೆ ಅವರು ಭಾವಿಸಿದ ಹೊರತು, ಪ್ರಜೆಗಳು ಸೌಖ್ಯವಾಗಿರುವುದಕ್ಕೆ ಅವಕಾಶವಾಗುತ್ತಿರಲಿಲ್ಲ. ಮಹಾತ್ಮರಾದ ಪ್ರಭುಗಳಿಗೆ ವಿಷಯೋಪಭೋಗಗಳಿಗಿಂತ ಪ್ರಜಾರಂಜನೆಯು ದೊಡ್ಡದೆಂದು ತೋರುವುದು. ಅಂಥಾ ಪ್ರಭುಗಳ ದರ್ಪವು ಅಪ್ರತಿಹತವಾಗಿರುವುದು. ಆವರ ದರ್ಪಕ್ಕೆ ಭಯವು ಕಾರಣವಾಗಿರುವುದಿಲ್ಲ. ವಿಶ್ವಾಸವು ಕಾರಣವಾಗಿರುತ್ತದೆ. ಅವರ ಆಜ್ಞೆಗಳು ವೇದವಾಕ್ಯಗಳಂತೆ ಅಂಗೀಕರಿಸಲ್ಪಡುವುವು. ಮನಃಪೂರ್ತಿಯಾಗಿ ವಿಶ್ವಾಸದಿಂದ ಅವರ ಆಜ್ಞೆಗಳು ನಡೆಸಲ್ಪಡುವುವು. ಅಂಥಾ ಪ್ರಭುವಿನ ರಾಜ್ಯಭಾರವು ಶಾಶ್ವತವಾಗಿರಲೆಂದು ಜನಗಳು ಅಪೇಕ್ಷಿಸುವರು. ಅವನಿಗೆ ವಿಪತ್ತು ಬಂದರೆ, ಅಂಥಾ ವಿಪತ್ತನ್ನು ತಪ್ಪಿಸುವುದಕ್ಕೆ ಜನಗಳು ಮನಃಪೂರ್ತಿಯಾಗಿ ತಮ್ಮ ಪ್ರಾಣಗಳನ್ನೂ ಕೂಡ ಒಪ್ಪಿಸುವುದಕ್ಕೆ ಸಿದ್ಧರಾಗುವರು. ಇಂಥಾ ಅಕೃತ್ರಿಮವಾದ ಪ್ರೀತಿಗೆ ಈ ಪ್ರಭುವು ಪಾತ್ರನಾಗಿರುತ್ತಾನೆ. ಅವನ ಮೇಲ್ಪಂಗ್ತಿಯು ನಿನಗೂ ಅನುಸ್ಠಿಸಲ್ಪಡುವುದಕ್ಕೆ ಅರ್ಹವಾಗಿರುವುದು." ಎಂದು ಮೆಂಟರನು ಹೇಳಿದನು.

ಈ ಹಿತೋಕ್ತಿಗಳನ್ನು ನಾನು ಸಾವಧಾನವಾಗಿ ಕೇಳಿದೆನು. ತಕ್ಷಣದಲ್ಲಿಯೇ ಸರಿಯಾದ ಪ್ರಯತ್ನವನ್ನು ಮಾಡಿದರೆ, ಈ ಧೊರೆಯಂತೆ ನಾನು ಕೂಡ ಏತಕ್ಕೆ ಪ್ರಜಾರಂಜಕನಾಗಕೂಡದೆಂದು ನನಗೆ ತೋರಿತು. ಹೀಗೆ ಮಾತನಾಡುತ್ತಾ ಹೋಗುವಾಗ್ಗೆ, ಮೆಂಫಿಸ್‌ಪಟ್ಟಣದ ಬಳಿಗೆ ಬಂದೆವು. ಈ ಪಟ್ಟಣವು ಮಹಾ ಐಶ್ವರ್ಯದಿಂದಲೂ, ಅನೇಕ ಮುಖವಾದ ಸಂಪತ್ತುಗಳಿಂದಲೂ ಜಾಜ್ವಲ್ಯಮಾನವಾಗಿತ್ತು. ಅಲ್ಲಿನ ಅಧಿಪತಿಯು ನಮ್ಮನ್ನು ಥೀಬೀಸ್‌ಪಟ್ಟಣಕ್ಕೆ ಕಳುಹಿಸಿದನು. ಈ ದೇಶದ ದೊರೆಯಾದ ಸಸಾಟ್ರಿಸ್ಸಿಗೆ ಅದು ರಾಜಧಾನಿಯಾಗಿತ್ತು. ಈ ಪಟ್ಟಣವು ನೂರು ಕೋಟೆಬಾಗಿಲುಗಳುಳ್ಳದ್ದಾಗಿತ್ತು. ಇಷ್ಟು ದೊಡ್ಡ ಪಟ್ಟಣವು ಗ್ರೀಸ್ ದೇಶದಲ್ಲಿ ಒಂದೂ ಇರಲಿಲ್ಲ. ಈ ಪಟ್ಟಣವು ಬಹಳ ಜನಭರಿತವಾಗಿಯೂ, ಅತ್ಯಂತ ಶೋಭಾಯಮಾನವಾಗಿಯೂ ಇತ್ತು. ಜಲಯಂತ್ರಗಳು ಕೃತ್ರಿಮವಾದ ಬುಗ್ಗೆಗಳಿಂದ ನೀರನ್ನು ಆಕಾಶಕ್ಕೆ ಹಾರಿಸುತ್ತಿದ್ದವು. ಎಲ್ಲೆಲ್ಲಿಯೂ ರಮಣೀಯವಾದ ಸರೋವರಗಳಿದ್ದವು. ಉಪವನಗಳೂ ವಿಹಾರಸ್ಥಾನಗಳೂ, ಲತಾಗೃಹಗಳೂ ಎಲ್ಲೆಲ್ಲಿಯೂ ಶೋಭಿಸುತ್ತಿದ್ದವು. ಎಲ್ಲೆಲ್ಲಿಯೂ ಮನೋಹರವಾದ ಗಾನವು ಶ್ರೋತ್ರಗಳಿಗೆ ಆನಂದವನ್ನುಂಟುಮಾಡುತ್ತಿದ್ದಿತು. ಎಲ್ಲೆಲ್ಲಿಯೂ ಸ್ತ್ರೀ

ಪುರುಷರೂ, ಮಕ್ಕಳೂ ಪ್ರಕಾಶಮಾನವಾದ ಉಡಿಗೆಗಳನ್ನು ಹಾಕಿಕೊಂಡು, ಸಂತೋಷದಿಂದ ಸಂಚಾರಮಾಡುತ್ತಾ, ನೇತ್ರಾನಂದವನ್ನು ಉಂಟುಮಾಡುತ್ತಾ ಇದ್ದರು. ಇವುಗಳನ್ನೆಲ್ಲಾ ಕೇಳುತ್ತಲೂ, ನೋಡುತ್ತಲೂ ಮೆಂಟರನು ಆಶ್ಚರ್ಯ ಪಡುತ್ತಿದ್ದನು. ಮೆಂಟರನ ಸಂಭಾಷಣವೂ, ಧೈರ್ಯಸ್ಥೈರ್ಯಗಳೂ, ಅವನ ಶಾಂತಿ ಯೂ 'ಪರಿಣಾಮದಲ್ಲಿ ಧರ್ಮವೂ, ಸತ್ಯವೂ, ಅವುಗಳಿಗೆ ಅನುರೂಪವಾದ ಫಲಗ ಳನ್ನು ಹೊಂದುವುವು' ಎಂಬ ಅವನ ನಂಬಿಕೆಯೂ ನನಗೂ ತುಂಬಾ ಧೈರ್ಯಕ್ಕೆ ಕಾರಣವಾದವು. ಅಲ್ಲಿನ ಮನೆಗಳನ್ನೂ, ಪ್ರಾಸಾದಗಳನ್ನೂ, ಅರಮನೆಗಳನ್ನೂ ನೋಡಿದೆವು. ನಮ್ಮ ವಿಷಯವು ಸಸಾಟ್ರಿಸ್ಸಿಗೆ ತಿಳಿಸಲ್ಪಟ್ಟಿತು. ಫಿನೀಷಿಯರ್ ರಿಂದ ನಡೆಸಲ್ಪಟ್ಟ ಒಂದು ಹಡಗಿನಲ್ಲಿ ನಾವು ಇದ್ದವೆಂಬದಾಗಿ ತಿಳಿಸಲ್ಪಟ್ಟಿತು.

"ಈ ಪ್ರಭುವು ಪ್ರತಿದಿವಸವೂ ಫಿರ್ಯಾದಿಗಳನ್ನು ಕೇಳುವುದಕ್ಕೂ, ಅದನ್ನು ವ್ಯವಸ್ಥೆ ಮಾಡುವುದಕ್ಕೂ ದರ್ಬಾರಿನ ಕಾಲವನ್ನು ಕ್ಲುಪ್ತಮಾಡಿಕೊಂಡಿದ್ದನು. ಯಾರು ಫಿರ್ಯಾದಿಗಳಾಗಿ ಹೋದಾಗ್ಯೂ, ಅವರಿಗೆ ಅವಕಾಶವು ದೊರೆಯುತ್ತಿತ್ತು. ಇವರು ದೊಡ್ಡವರು, ಇವರು ಚಿಕ್ಕವರು, ಇವರು ಉತ್ತಮರು, ಇವರು ಕನಿ ಷ್ಠರು, ಇವರು ಐಶ್ವರ್ಯವಂತರು, ಇವರು ದರಿದ್ರರು, ಇವರು ನನ್ನ ಬಂಧುಮಿ ತ್ರವರ್ಗಕ್ಕೆ ಸೇರಿದವರು, ಇವರು ಸೇರಿದವರಲ್ಲ" ಎಂಬ ಭೇದಭಾವವು ಇವ ನಿಗೆ ಲೇಶವೂ ಇರಲಿಲ್ಲ. ತನ್ನ ರಾಜದಂಡವೂ, ಬ್ರಹ್ಮದಂಡವೂ, ಧರ್ಮದಂಡವೂ ಮೂರು ಒಂದೆಂದು ಇವನು ತಿಳಿದುಕೊಂಡಿದ್ದನು. ಪ್ರಜೆಗಳ ಕ್ಷೇಮಾರ್ಥ ವಾಗಿ ತಾನು ಇರುವೆನೆಂಬದಾಗಿಯೂ, ಅವರು ಕೊಡತಕ್ಕ ಕಂದಾಯದಿಂದ ತನ್ನ ರಕ್ತಕಣಗಳೂ ಕೂಡ ಬೆಳೆದಿರುವುವೆಂಬದಾಗಿಯೂ, ತನ್ನ ಸಕಲ ಸಂಪ ತ್ತುಗಳಿಗೂ ಅವರು ಕಾರಣಭೂತರೆಂಬದಾಗಿಯೂ, ಅವರ ಅನ್ನವನ್ನು ತಿಂದು, ಅವರಿಗೆ ಎರಡು ಬಗೆದರೆ, ತಾನು ಪ್ರಜಾದ್ರೋಹಿಯಾಗುವೆನೆಂಬದಾಗಿಯೂ, ರಾಜದ್ರೋಹಕ್ಕಿಂತಲೂ ಪ್ರಜಾದ್ರೋಹವು ಬಹಳ ಅನರ್ಥಕಾರಿಯಾದದ್ದೆಂಬ ದಾಗಿಯೂ, ಪ್ರಜೆಗಳು ಕೊಡತಕ್ಕ ಕಂದಾಯಕ್ಕೆ ದುಷ್ಟನಿಗ್ರಹ ಶಿಷ್ಟಪರಿಪಾಲನ ರೂಪವಾದ ಪ್ರತಿಫಲವು ಕೊಡಲ್ಪಡಬೇಕೆಂಬದಾಗಿಯೂ ಈತನು ತಿಳಿದುಕೊಂಡಿ ದ್ದನು. ಧರ್ಮಸೂಕ್ಷ್ಮಗಳನ್ನು ತಿಳಿಸುವುದಕ್ಕೆ ವೇದಶಾಸ್ತ್ರ ಪುರಾಣೇತಿಹಾಸಗಳ ರಹಸ್ಯವನ್ನು ಯಾರು ಚನ್ನಾಗಿ ತಿಳಿದುಕೊಂಡಿದ್ದರೋ, ಅವರನ್ನು ಇಟ್ಟು ಕೊಂಡಿದ್ದನು. ಪ್ರತಿ ಒಂದು ಫಿರ್ಯಾದನ್ನೂ ಪೂರ್ವಭಾವಿಯಾಗಿಯೇ ಅವ ರೊಡನೆ ಚರ್ಚಿಸಿ, ದರ್ಬಾರು ಮಾಡುವುದಕ್ಕೆ ಮುಂಚೆಯೇ ತನ್ನ ಅಭಿಪ್ರಾ ಯವನ್ನು ಗೊತ್ತುಮಾಡಿಕೊಂಡು ಬರುತ್ತಾ ಇದ್ದನು. ಈತನ ಸನ್ನಿಧಿಗೆ ನಾವು ಹಾಜರ್ಮಾಡಲ್ಪಟ್ಟೆವು. ಇವನು ಒಂದು ದಂತದ ಸಿಂಹಾಸನದ ಮೇಲೆ

ಕುಳಿತಿದ್ದನು. ಕೈನಲ್ಲಿ ಒಂದು ಚಿನ್ನದ ರಾಜದಂಡವನ್ನು ಹಿಡಿದುಕೊಂಡಿದ್ದನು ಅಪರವಯಸ್ಸಿನವನಂತೆ ಕಾಣುತ್ತಿದ್ದಾಗ್ಯೂ, ಇವನು ಸುಂದರನಾಗಿದ್ದನು. ಇವನ ಮುಖದಲ್ಲಿ ಸತ್ಯವೂ, ಧರ್ಮವೂ, ಘನತೆಯೂ, ಸದ್ಭಾವವನ್ನು ತೋರಿಸತಕ್ಕ ಮಂದಹಾಸವೂ ನರ್ತಿಸುತ್ತಿದ್ದವು. ಪ್ರತಿ ದಿವಸವೂ ಜನಗಳ ಕಷ್ಟನಿಷ್ಠೂರಗಳನ್ನು ಕೇಳುವುದಕ್ಕೆ ಇವನು ದರ್ಬಾರು ಮಾಡುತ್ತಿದ್ದನು. ಇವನ ಶಾಂತಿಯೂ, ಬುದ್ಧಿಯೂ ಅಸಾಧಾರಣವಾಗಿದ್ದವು. ಅತಿಶಯೋಕ್ತಿಗರ್ಭಿತಗಳಾದ ಸ್ತುತಿಯೂ ಕೂಡ ಇವನ ವಿಷಯದಲ್ಲಿ ಅತಿಶಯೋಕ್ತಿಗಳಾಗುವುದಿಲ್ಲವೆಂದು ತೋರುತ್ತಿತ್ತು. ಇಂಥಾ ಪ್ರಭುವಿನ ಸಮುಖಕ್ಕೆ ನಾವಿಬ್ಬರೂ ಕರೆದುಕೊಂಡು ಹೋಗಲ್ಪಟ್ಟೆವು. ನನ್ನನ್ನು ನೋಡಿದ ಕೂಡಲೆ, ಅವನಿಗೆ ಏನೋ ಒಂದು ವಿಧವಾದ ಕರುಣೆಯು ಹುಟ್ಟಿತು. "ನೀನು ಯಾರು? ನಿನ್ನ ಹೆಸರು ಏನು? ನೀನು ಎಲ್ಲಿಂದ ಬಂದಿರುತ್ತೀಯೆ!" ಎಂಬದಾಗಿ ಈತನು ನನ್ನನ್ನು ಕೇಳಿದನು. ನಾನು ಅದಕ್ಕೆ ಹೇಳಿದ್ದೇನಂದರೆ :—

"ಎಲೈ ಪ್ರಭುವೆ, ಟ್ರಾಯ್ ರಾಜ್ಯದ ಮುತ್ತಿಗೆಯ ವಿಷಯವು ನಿನಗೆ ತಿಳಿದಿರಬಹುದು. ಈ ಯುದ್ಧವು ೧೦ ವರ್ಷಗಳು ನಡೆಯಿತು. ಈ ೧೦ ವರ್ಷಗಳ ಯುದ್ಧದಲ್ಲಿ ಗ್ರೀಸ್ ದೇಶದವರಲ್ಲ ಪ್ರಸಿದ್ಧರಾದ ಅನೇಕರು ಮೃತಪಟ್ಟರು. ಟ್ರಾಯ್ ದೇಶವು ನಾಶಮಾಡಲ್ಪಟ್ಟಿತು. ಇದು ನಿನಗೆ ತಿಳಿದಿರಬಹುದು. ಈ ಮಹಾ ಯುದ್ಧದಲ್ಲಿ ಮುಖಂಡನಾಗಿದ್ದ ಇಥಾಕಾ ದ್ವೀಪದ ಪ್ರಭುವಾದ ಯೂಲಿಸೆಸ್ಸಿನ ವಿಷಯವನ್ನು ನೀನು ಕೇಳಿರಬಹುದು. ಅವನು ನಮ್ಮ ತಂದೆಯು. ಅವನು ದೇಶಾಟನವನ್ನು ಮಾಡುವುದಕ್ಕೋಸ್ಕರ ಹೊರಟಿರುವನು ಅವನನ್ನು ಹುಡುಕಿಕೊಂಡು ನಾನು ತಿರುಗುತ್ತಿರುವೆನು. ನನ್ನ ದುರದೃಷ್ಟದಿಂದ ಈ ದೇಶದಲ್ಲಿ ಖೈದಿಯಾಗಿ ಮಾಡಲ್ಪಟ್ಟಿರುವೆನು. ನನ್ನಲ್ಲಿ ಕರುಣೆಯು ಏನಾದರೂ ನಿನಗೆ ಇದ್ದರೆ, ನನ್ನ ದೇಶಕ್ಕೆ ನಾನು ವಾಪಸು ಹೋಗುವುದಕ್ಕೆ ಅನುಜ್ಞೆಯನ್ನು ಕೊಡು. ತಂದೆಯಿಂದ ವಿಯುಕ್ತನಾದ ನನ್ನನ್ನು ನಮ್ಮ ತಂದೆಯೊಡನೆ ಸೇರುವಂತೆ ಮಾಡಿದರೆ, ಅದರಿಂದ ನಿನಗೆ ಪುಣ್ಯವು ಒರದೆ ಹೋಗುವುದಿಲ್ಲ. ಧರ್ಮಕ್ಕೆ ಶೀಘ್ರವಾಗಿಯಲ್ಲದಿದ್ದರೂ ಪ್ರತಿಫಲವು ಬರುವುದು. ಇದೇ ನನ್ನ ವೃತ್ತಾಂತ. ಇದೇ ನನ್ನ ಪ್ರಾರ್ಥನೆ."

ಈ ರೀತಿಯಲ್ಲಿ ನಾನು ಹೇಳಲು, ನಸಾಟ್ರೆಸ್ಸನು ನನ್ನಲ್ಲಿ ಕೃಪೆಯುಳ್ಳವನಾಗಿ, ನಾನು ಹೇಳುವುದು ನಿಜವೋ, ಸುಳ್ಳೋ ಎಂಬುದನ್ನು ತಿಳಿದುಕೊಳ್ಳುವುದಕೋಸ್ಕರ ನಮ್ಮನ್ನು ದಸ್ತಗಿರಿಮಾಡಿ ಕರೆದುಕೊಂಡು ಬಂದವರಿಗೆ ಇವನು ಹೇಳಿದ್ದೇನಂದರೆ :—

" ಇವರು ಫಿನೀಷಿಯರ್‌ರಾಗಿದ್ದರೆ, ಇವರಿಗೆ ಬಲವಾದ ದಂಡನೆಯು ಆಗಬೇಕು. ಇವರು ಹೇಳುವುದು ನಿಜವಾದರೆ, ನಮ್ಮ ಹಡಗುಗಳ ಪೈಕಿ ಒಂದನ್ನು ಇವರಿಗೆ ಕೊಟ್ಟು, ಇವರ ದೇಶಕ್ಕೆ ಇವರನ್ನು ಕಳುಹಿಸಬೇಕು. ಇವರ ಮಾತಿನಿಂದ ಇವರು ಗ್ರೀಸ್ ದೇಶಸ್ಥರಾಗಿರಬಹುದೆಂದು ಗೊತ್ತಾಗುತ್ತದೆ. ಗ್ರೀಸ್ ದೇಶವು ನಮ್ಮ ದೇಶಕ್ಕೆ ಹುಂಬ ಉಪಕಾರವನ್ನು ಮಾಡಿ ಇದೆ. ನಾವು ಸಕಲ ಧರ್ಮಗಳನ್ನೂ ಗ್ರೀಕ್ ಜನಗಳಿಂದ ಕಲಿತು ಇದೇವೆ. ಎಕೆಲೀಸನ ಮಹಿಮೆಯನ್ನು ನಾವು ಕೇಳಿ ಇದೇವೆ. ದುರದೃಷವಂತನಾದ ಯೂಲಿಸಸ್ಸನು ಬೃಹಸ್ಪತಿಗೆ ಸಮಾನನಾದವನು. ಈ ಹುಡುಗನು ಅವನ ಮಗನಾಗಿದ್ದ ಪಕ್ಷದಲ್ಲಿ, ನಮ್ಮ ಮರ್ಯಾದೆಗೂ, ಪೂಜೆಗೂ ಇವನು ಅರ್ಹನು." ಎಂದು ಅವನು ತನ್ನ ಅಧಿಕಾರಿಗೆ ಹೇಳಿ, ನಿಜವಾದ ವಿದ್ಯಮಾನಗಳನ್ನು ಗೊತ್ತುಮಾಡು ಎಂದು ಆಜ್ಞೆಮಾಡಿದನು. ಈ ಅಧಿಕಾರಿಯು ಬಹಳ ನೀಚನು. ನಮನ್ನು ಫಿನೀಷಿಯರ್‌ರೆಂದು ಪ್ರತ್ಯಯವನ್ನು ಹುಟ್ಟಿಸಿ, ಬಲವಾದ ಶಿಕ್ಷೆಗೆ ನಮ್ಮನ್ನು ಗುರಿಮಾಡಬೇಕೆಂದು ಇವನು ಸಂಕಲ್ಪಮಾಡಿಕೊಂಡಿದ್ದನು. ಚಿತ್ರವಿಚಿತ್ರವಾದ ಪ್ರಶ್ನೆಗಳನ್ನು ನನಗೂ, ಮೆಂಟರಿಗೂ ಹಾಕಿದನು. ಮೆಂಟರು ಪೂರ್ವಾಪರಗಳನ್ನು ಯೋಚಿಸದೆ, ಉತ್ತರವನ್ನು ಕೊಡುತ್ತಿರಲಿಲ್ಲ. ಅವನು ಬಹಳ ಜಾಗರೂಕನಾಗಿದ್ದನು. ನನಗೆ ಮಾತ್ರ ಆ ಶಕ್ತಿಯು ಇರಲಿಲ್ಲ. ಈ ಅಧಿಕಾರಿಯು ನಮ್ಮಿಬ್ಬರನ್ನೂ ಬೇರೆ ಬೇರೆ ಇಡಿಸಿದನು. ಮೆಂಟರನ ಗತಿಯು ಅನಂತರದಲ್ಲಿ ಏನಾಯಿತೋ ಅದು ನನಗೆ ತಿಳಿಯುವುದಕ್ಕೆ ಅವಕಾಶವಾಗಲಿಲ್ಲ. ನನ್ನ ತಂದೆಯ ವಿಯೋಗದಿಂದ ನನಗೆ ಉಂಟಾದ ಸಂಕಟಕ್ಕಿಂತಲೂ ಮೆಂಟರಿನ ವಿಯೋಗದಿಂದ ಉಂಟಾದ ಸಂಕಟವು ಹೆಚ್ಚಾಯಿತು. ಈ ಅಧಿಕಾರಿಯ ಹೆಸರು ಮೆಟೋಫಿಸ್ ಎಂಬುವುದು. ಇವನು ನಮ್ಮನ್ನು ಬೇರೆ ಬೇರೆ ಇಟ್ಟು, ಕೈಫೀತುಗಳನ್ನು ತೆಗೆದುಕೊಂಡರೆ, ಪರಸ್ಪರ ವಿರೋಧವಾದ ಕೈಫೀತುಗಳು ಬರಬಹುದೆಂದು ಪರ್ಯಾಲೋಚಿಸಿದನು. ಮೆಂಟರು ಹೇಳದೆ ಇರತಕ್ಕ ರಹಸ್ಯಗಳನ್ನು ನಾನು ಹೇಳುವಂತೆ ಮಾಡಬಹುದೆಂಬದಾಗಿಯೂ ಇವನು ಪರ್ಯಾಲೋಚಿಸಿದನು. ನಿಜವನ್ನು ತಿಳಿದುಕೊಳ್ಳುವುದು ಇವನ ಉದ್ದೇಶವಾಗಿರಲಿಲ್ಲ. ನಾವು ಫಿನೀಷಿಯರ್‌ರೆಂದು ಪ್ರತ್ಯಯವನ್ನುಂಟುಮಾಡಿ, ನಮ್ಮನ್ನು ಗುಲಾಮರಂತೆ ಹರಾಜು ಹಾಕಿಸಿ, ಅದರಿಂದ ಪ್ರಯೋಜನವನ್ನು ಹೊಂದಬೇಕೆಂಬುವುದೇ ಇವನ ಮುಖ್ಯ ಉದ್ದೇಶವಾಗಿತ್ತು. ನಾವು ನಿರಪರಾಧಿಗಳಾಗಿದ್ದಾಗ್ಯೂ, ನಸಾಟ್ರಿಸ್ಸನು ಬುದ್ಧಿಶಾಲಿಯಾಗಿದ್ದಾಗ್ಯೂ, ಇವನ ದುರ್ವಿದ್ಯವೇ ಗೆದ್ದಿತು. ಎಷ್ಟು ಬುದ್ಧಿಶಾಲಿಗಳಾದಾಗ್ಯೂ, ದುರ್ಮಂತ್ರಿಗಳಿಗೆ ಅಧೀನರಾಗದೆ ಇರಬೇಕಾದರೆ, ಪ್ರಭುಗಳಿಗೆ ದೇವರ

ಸಹಾಯವು ಬೇಕು. ಅನೇಕ ಪ್ರಭುಗಳು ದುರ್ಮಂತ್ರಿಗಳ ಸೂತ್ರಗಳಿಗೆ ಲಗತ್ತಾದ ಬೊಂಬೆಗಳಂತೆ ಪರಿಣಮಿಸುವರು. ಅಸತ್ಯವು ಸತ್ಯವಾಗಿರುವಂತೆಯೂ, ಅಧರ್ಮವು ಧರ್ಮವಾಗಿರುವಂತೆಯೂ, ಪಾಪವು ಪುಣ್ಯವಾಗಿರುವಂತೆಯೂ ಇವರು ಪ್ರತ್ಯಯವನ್ನು ಹುಟ್ಟಿಸುವರು. ಸ್ವಾರ್ಥಪರತೆಯೆಂಬ ಪಿಶಾಚದಿಂದ ಹಿಡಿಯಲ್ಪಟ್ಟ ಇಂದ್ರಜಾಲ ಮಹೇಂದ್ರಜಾಲ ವಿದ್ಯೆಗಳಲ್ಲಿ ನಿಸ್ಸೀಮರಾದ ಜನಗಳು ಸಿಂಹಾಸನವನ್ನು ಆವರಿಸಿಕೊಂಡಿರುವರು. ಪ್ರಾಮಾಣಿಕತೆಯು ಗಡೀಪಾರು ಮಾಡಲ್ಪಡುವುದು. ಪ್ರಾಮಾಣಿಕರಾದವರು ಮನೋಹರವಾದ ರೀತಿಯಲ್ಲಿ ಖಾರ್ಖುಷಿ, ದಿಲ್‌ಖುಷಿಯನ್ನು ಮಾಡುವುದಕ್ಕೆ ಅಸಮರ್ಥರು. ಈ ಭಾಗದಲ್ಲಿ ಸಮರ್ಥರಾದವರು ಅಸಮರ್ಥರನ್ನು ನಿಷ್ಕಾಸನ ಮಾಡುವುದು ಏನೂ ಆಶ್ಚರ್ಯವಲ್ಲ. ಸತ್ಪುರುಷರು ಕರೆಯಲ್ಪಡದೆ, ಪ್ರಭುಗಳ ಸಾನ್ನಿಧ್ಯವನ್ನು ಹೊಂದುವುದಿಲ್ಲ. ಸಮೀಪಕ್ಕೆ ಕರೆದಾಗ್ಗೂ ದೂರದಲ್ಲಿರುವರು. ಮಾತನಾಡಿದಾಗ್ಗೂ ಸತ್ಯಕ್ಕೂ, ಧರ್ಮಕ್ಕೂ ಚ್ಯುತಿಯಿಲ್ಲದಂತೆ ತೋರುವ ಹಾಗೆ ಮಾತನಾಡುವರು. ದುರ್ಮಾರ್ಗಪ್ರವರ್ತಕರು ಹಾಗೆ ಇರುವುದಿಲ್ಲ. ಹರಟುವುದರಲ್ಲಿ ಅವರು ನಿಸ್ಸೀಮರಾಗಿರುತ್ತಾರೆ. ಮೋಸಗಾರತನದಲ್ಲಿಯೂ, ವಂಚನೆಯಲ್ಲಿಯೂ, ಮನಸ್ಸಿನಲ್ಲಿ ಒಂದು, ಮಾತು ಒಂದು, ಕರ್ಮದಲ್ಲಿ ಒಂದು ಮಾಡುವುದರಲ್ಲಿಯೂ ಇವರು ನಿಸ್ಸೀಮರು. ಇಂಥಾ ಜನಗಳಿಂದ ಸಂಸ್ತರಾದ ಪ್ರಭುಗಳು ದುರದೃಷ್ಟವಂತರೆಂದು ಹೇಳಿದರೆ, ಅದು ತಪ್ಪಾಗುವುದಿಲ್ಲ. ಇವರ ಮನೋಹರವಾದ ಸ್ತೋತ್ರವೂ, ಇವರ ಇಂದ್ರಜಾಲ ಮಹೇಂದ್ರಜಾಲ ವಿದ್ಯೆಗಳೂ ಪ್ರಭುಗಳಿಗೆ ಮಂಕುಬೂದಿಯಂತೆ ಪರಿಣಮಿಸುವವು.

ಈ ಮೆಟೋಫಿಸ್ಸನು ಈ ರೀತಿಯಾದ ಮಂಕುಬೂದಿಯನ್ನು ಪ್ರಯೋಗಿಸಿ, ನಮ್ಮಿಬ್ಬರನ್ನೂ ಮೂಲೋತ್ಪಾಟನ ಮಾಡಬೇಕೆಂದು ನಿಷ್ಕರ್ಷಿಸಿದನು. ನಾವು ಗ್ರೀಕರು ಹೌದೋ ಅಲ್ಲವೋ ಎಂಬುದನ್ನು ಗೊತ್ತುಮಾಡಬೇಕೆಂಬ ಉದ್ದೇಶವು ಇವನಿಗೆ ಇರಲಿಲ್ಲ. ನಾವು ಫಿನೀಷಿಯರ್ರೆಂಬದಾಗಿಯೂ, ನಮ್ಮನ್ನು ಗುಲಾಮರನ್ನಾಗಿ ತೆಗೆದುಕೊಂಡು, ವಿಕ್ರಯಿಸುವುದಕ್ಕೆ ಸಸಾಟ್ರಿಸ್ಸನನ್ನು ಒಪ್ಪುವಂತೆ ಮಾಡಬೇಕೆಂಬದಾಗಿಯೂ, ಹಾಗೆ ಒಪ್ಪುವುದಕ್ಕೆ ಅನುಕೂಲವಾದ ನಿದರ್ಶನವನ್ನು ಹೇಗಾದರೂ ಕಲ್ಪಿಸಬೇಕೆಂಬದಾಗಿಯೂ ಇವನ ಉದ್ದೇಶವು ಇತ್ತು. ನಾವು ಗ್ರೀಕರಾಗಿದಾಗ್ಗೂ, ನಾವು ಫಿನೀಷಿಯರ್ರೆಂದು ಇವನು ಪ್ರಭುವಿಗೆ ಪ್ರತ್ಯಯವನ್ನುಂಟುಮಾಡಿದನು.

ನಮ್ಮ ಅವಸ್ಥೆಯು ಹೇಗಾದರೂ ಇರಲಿ. ಸಸಾಟ್ರಿಸ್ಸನು ಧರ್ಮದಲ್ಲಿ ಆಸಕ್ತನು. ಸತ್ಯಕ್ಕೂ, ಧರ್ಮಕ್ಕೂ ನ್ಯೂನತೆಯುಂಟಾಗುವಂತೆ ನಡೆಯಬಾರದೆಂದು

ಇವನು ಸ್ಥಿರಸಂಕಲ್ಪವುಳ್ಳವನಾಗಿದ್ದನು. ಇವನ ಅವಸ್ಥೆಯು ತುಂಬಾ ಶೋಚನೀಯವಾಯಿತು. ಪ್ರಭುಗಳು ಸ್ವತಂತ್ರರೆಂದು ಜನಗಳು ಸಾಮಾನ್ಯವಾಗಿ ತಿಳಿದುಕೊಳ್ಳುವರು. ಇವರಿಗೆ ಸ್ವಾತಂತ್ರ್ಯವು ಪ್ರಾಯಕವಾಗಿ ಅಸಂಭವವಾಗುವುದು. ಧರ್ಮಿಷ್ಠರಾದ ಪ್ರಭುಗಳೂ ಕೂಡ ಭೃತ್ಯಮಿತ್ರ ಕಳತ್ರಾದಿಗಳ ಮಾತುಗಳನ್ನು ನಂಬಬೇಕಾಗುವುದು. ಅವರು ಧರ್ಮಿಷ್ಠರಾಗಿದ್ದರೆ ಪ್ರಭುಗಳಿಗೂ ಧರ್ಮಲಭ್ಯವಾಗುವುದು. ಅವರು ಮೋಸಗಾರರಾಗಿಯೂ, ಸ್ವಾರ್ಥಪರರಾಗಿಯೂ, ಅಧರ್ಮಿಷ್ಠರಾಗಿಯೂ, ಇಂದ್ರಜಾಲ ಮಹೇಂದ್ರಜಾಲ ವಿದ್ಯೆಗಳನ್ನು ತೋರಿಸುವುದರಲ್ಲಿ ನಿಪುಣರಾಗಿಯೂ ಇದ್ದರೆ, ಪ್ರಭುವು ಅವರು ಹೇಳಿದಂತೆ ನಡೆಯಬೇಕಾಗುವುದು. ಸ್ವತಂತ್ರನೆಂದು ಪ್ರಭುವು ತಿಳಿದುಕೊಂಡಿರಬಹುದು. ಇಂಥಾ ಸಂದರ್ಭಗಳಲ್ಲಿ ಪ್ರಾಯಕವಾಗಿ ಅವನು ಪರತಂತ್ರನಾಗಿರುವನು. ಪ್ರಭುಗಳ ಪರಿವಾರ ದೇವತೆಗಳು ಪ್ರಾಯಕವಾಗಿ ಆಶಾಪಾಶಗಳಿಗೆ ಒಳಗಾಗಿರುವರು. ಇವರು ಧನಪಿಶಾಚದಿಂದ ಹಿಡಿಯಲ್ಪಟ್ಟಿರುವರು. ಪ್ರಾಮಾಣಿಕರು ಪ್ರಭುಗಳ ಸಮೀಪದಲ್ಲಿ ಇರುವುದು ಅಪೂರ್ವ. ಮನೋಹರವಾಗಿರುವಂತೆ ಮೃಷಾಸ್ತುತಿಯನ್ನು ಮಾಡಿ, ಪ್ರಭುಗಳ ಪ್ರಸನ್ನತೆಗೆ ಪಾತ್ರರಾಗುವ ಶಕ್ತಿಯು ಈ ದರ್ಬಾರಿಗಳಿಗೆ ನಿಸರ್ಗವಾದ ಗುಣವಾಗಿ ಪರಿಣಮಿಸಿರುವುದು. ಹಿಡಿದ ಪಟ್ಟನ್ನು ಅವರು ಎಂದಿಗೂ ಬಿಡುವುದಿಲ್ಲ. ಪ್ರಭುವು ಹಟವನ್ನು ಹಿಡಿದಾಗ್ಯೂ, ಆಗ್ಗೆ ಆ ವಿಷಯವನ್ನು ಬಿಟ್ಟು, ಅವನು ದಾಸಾನುದಾಸನಾಗುವವರಗೂ ಅವರು ತಮ್ಮ ಪಟ್ಟನ್ನು ಬಿಡುವುದಿಲ್ಲ. ಸತ್ಪುರುಷರಿಗೆ ಪ್ರಭುವಿನ ಸಮೀಪದಲ್ಲಿ ಅವಕಾಶವು ದೊರೆಯುವುದಿಲ್ಲ. ದೊರೆತಾಗ್ಯೂ, ಅವರು ಮನಸ್ಸಿನಲ್ಲಿ ಒಂದು ವಿಧವಾಗಿಯೂ, ವಾಚಾ ಒಂದು ವಿಧವಾಗಿಯೂ, ಕರ್ಮದಲ್ಲಿ ಒಂದು ವಿಧವಾಗಿಯೂ ನಡೆಯಲಾರರು. ಅಂಥಾವರಿಗೆ ಪ್ರಭುವಿನ ಪ್ರಸನ್ನತೆಯು ಉಂಟಾಗುವುದು ಕಷ್ಟ. ಸ್ವಾರ್ಥಪರರಾದ ದರ್ಬಾರಿಗಳು ಅಪೇಕ್ಷಿಸಲ್ಪಡದೆ ಇದ್ದಾಗ್ಯೂ, ಹಾಜರುಭಾಷೆಯಲ್ಲಿರುವರು. ಮಹಾತ್ಮರಾದವರು ತೃಣೀಕೃತಪುರಂದರರು. ಪ್ರಭುವಿನಿಂದ ಪ್ರಾಪ್ತವಾಗತಕ್ಕ ಪ್ರಯೋಜನಗಳಿಗಾಗಿ ತಮ್ಮ ಮನಸ್ಸಾಕ್ಷಿಯನ್ನು ಬಲಿಯಾಗಿ ಮಾಡುವುದಕ್ಕೆ ಅವರು ಒಪ್ಪುವುದಿಲ್ಲ. ಪ್ರಭುಗಳ ನ್ಯೂನಾತಿರಿಕ್ತಗಳನ್ನು ನಿರ್ಭಯವಾಗಿ ಅವರಿಗೆ ತೋರಿಸುವರು. ಅವರ ಪರಿವಾರ ದೇವತೆಗಳ ತಪ್ಪುಗಳನ್ನು ನಿರ್ದಾಕ್ಷಿಣ್ಯವಾಗಿ ಪ್ರಕಾಶ ಪಡಿಸುವರು. ಶ್ರೇಯಸ್ಸಿಗೆ ಸಾಧಕವಾದ ಮಾರ್ಗಗಳನ್ನು ದಯೆಯಿಂದ ಉಪದೇಶಿಸುವರು. ಸತ್ಯವನ್ನೂ, ಅಸತ್ಯವನ್ನೂ ನೋಡದೆ, ಪ್ರಿಯವಾದ ಮಾತುಗಳನ್ನು ಆಡಿ, ಪ್ರಭುವಿನಿಂದ ತಮ್ಮ ಇಷ್ಟಾರ್ಥಗಳನ್ನು ಪಡೆದುಕೊಳ್ಳತಕ್ಕ ಭೃತ್ಯರು ಪ್ರಭುಗಳಿಗೆ ಬೇಕಾದ ಹಾಗೆ ಸಿಕ್ಕುವರು. ಅಪ್ರಿಯ

ವಾಗಿದ್ದಾಗ್ಯೂ, ಶ್ರೇಯಸ್ಕರವಾದ ಹಿತೋಪದೇಶವನ್ನು ಮಾಡತಕ್ಕವರು ಪ್ರಭು ಗಳಿಗೆ ಜನ್ಮಾಂತರ ಸುಕೃತದಿಂದ ದೊರೆಯಬೇಕೇ ಹೊರತು, ಅನ್ಯಥಾ ಎಂದಿಗೂ ದೊರೆಯುವುದಿಲ್ಲ. ಈ ವಿಷಯವು ಅನೇಕ ಪ್ರಭುಗಳ ಅನುಭವಕ್ಕೆ ಬಂದೇ ಇರುವುದಿಲ್ಲ. ಪ್ರಾಯಿಕವಾಗಿ ಪ್ರಭುಗಳ ಸಮೀಪವರ್ತಿಗಳಾದ ಜನರು ಅವರೇ ಇಂದ್ರಚಂದ್ರದೇವೇಂದ್ರರಾಗಿ ಇದ್ದರೆ ಹೇಗೋ ಹಾಗೆ ಅತಿಶಯೋಕ್ತಿಗಳಿಂದ ಸ್ತುತಿಸುವುದರಲ್ಲಿ ಪ್ರವೀಣರಾಗಿರುವರು. ಯಥಾರ್ಥವನ್ನು ಹೇಳತಕ್ಕ ಜನಗ ಳಿಗೆ ತೇಜೋವಧೆಯನ್ನು ಮಾಡುವುದರಲ್ಲಿಯೂ ಇವರು ನಿಸ್ಸೀಮರಾಗಿರುವರು. ದುರಹಂಕಾರ, ಮೋಸ, ವಂಚನೆ, ಮೃಷಾಸ್ತುತಿ, ಆಪ್ತಾಭಿನಯ, ನಿಜವಾದ ಅಭಿಪ್ರಾಯಗಳನ್ನು ಆಚ್ಛಾದಿಸುವಿಕೆ, ದ್ರೋಹಬುದ್ಧಿಯು ಭಕ್ತಿಯಂತೆ ತೋರುವ ಹಾಗೆ ವಿಜೃಂಭಿಸುವಿಕೆ, ಧರ್ಮೋಲ್ಲಂಘನೆ, ಸದ್ಬಂಧ ವಿಮೋಚನೆ, ದುರ್ಮಾರ್ಗ ಪ್ರವರ್ತನ, ಧರ್ಮದಿಂದ ಅಸಾಧ್ಯವಾದದ್ದನ್ನು ಅಧರ್ಮದಿಂದಲಾದರೂ ಸಾಧಿಸು ವಿಕೆ, ಇವುಗಳೆಲ್ಲಾ ಪ್ರಭುಗಳ ಪರಿವಾರ ದೇವತೆಗಳ ಪೈಕಿ ಅನೇಕರಲ್ಲಿ ಮೂರ್ತೀ ಭವಿಸಿರುವುದುಂಟು. ಇಂಥಾ ಜನಗಳ ಬಲೆಗೆ ಸಿಕ್ಕದೆ ಇರತಕ್ಕ ಪ್ರಭುಗಳೇ ಅಪೂರ್ವ. ಪ್ರಾಯಿಕವಾಗಿ ಗಾನವು ಪ್ರಭುಗಳ ಕಿವಿಗೆ ಬಹಳ ಮನೋಹರವಾ ಗಿರುವುದು. ಮನೋಹರವಾಗಿಯೂ, ಸ್ತುತಿಗರ್ಭಿತವಾಗಿಯೂ ಇರುವ ಸಹ ಪ್ರನಾಮರೂಪವಾದ ಗಾನವು ಮನಸ್ಸಿಗೂ, ಕೈಕಾಲುಗಳಿಗೂ ಬೇಡಿಯಂತೆ ಪರಿ ಣಮಿಸುವುದು. ಪ್ರಭುಗಳ ಪರಿವಾರ ದೇವತೆಗಳ ಇಂದ್ರಜಾಲ ಮಹೇಂದ್ರ ಜಾಲ ವಿದ್ಯೆಗಳೂ ಹೀಗೆಯೇ ಇರುವುವೆಂದು ಮೆಂಟರನು ನನಗೆ ಹೇಳಿದ್ದನು. ಇದು ನಿಜವೆಂದು ಈಗ ಗೊತ್ತಾಯಿತು. ಈ ವಿದ್ಯೆಗಳೆಲ್ಲಾ ಮೆಟೋಫಿಸನಲ್ಲಿ ಪರಿಪೂರ್ಣವಾಗಿದ್ದವು. ಅವನು ನಮ್ಮ ಕೈಫೀತುಗಳಿಂದಲೇ ನಮ್ಮನ್ನು ಸಿಕ್ಕಿಸಿ ಕೊಂಡು, ತನ್ನ ಸಂಕಲ್ಪವನ್ನು ಪೂರೈಸಬೇಕೆಂದು ಮಾಡುತ್ತಿದ್ದ ಮಹಸತ್ತನ್ನು ನೋಡಿ, ಇಂಥಾ ದುರಾತ್ಮರನ್ನು ಪಡೆವಿರತಕ್ಕ ಪ್ರಭುವಿನ ದುರ್ದೆಸೆಯು ಅಸ ಮಾನವಾದದ್ದೆಂದು ನಾನು ತಿಳಿದುಕೊಂಡೆನು.

ಹೀಗೆ ಯೋಚಿಸುತ್ತಿದ್ದಾಗ, ಈ ದುರಾತ್ಮನು ನನಗೆ ಹೇಳಿಕಳುಹಿಸಿದನು. ಅವನ ಬಳಿಗೆ ಹೋಗಲು, ಆ ಪಟ್ಟಣದ ಸಮೀಪದಲ್ಲಿ ಒಂದು ಪರ್ವತವಿರುವು ದೆಂಬದಾಗಿಯೂ, ಅಲ್ಲಿ ಮನೋಹರವಾದ ದೊಡ್ಡ ಕಾಡು ಇರುವುದೆಂಬದಾ ಗಿಯೂ, ಅಲ್ಲಿ ಈ ಸಂಸ್ಥಾನಕ್ಕೆ ಸೇರಿದ ಕುರಿಮಂದೆಗಳು ಅನೇಕವಾಗಿರುವು ವೆಂಬದಾಗಿಯೂ, ಸದರಿ ಸ್ಥಳಕ್ಕೆ ಹೋಗಿ, ಕುರಿಕಾಯತಕ್ಕವರಿಗೆ ನಾನು ಸಹಾಯಮಾಡಬೇಕೆಂಬದಾಗಿಯೂ ಇವನು ನನಗೆ ಆಜ್ಞಾಪಿಸಿದನು. ' ಆಗ

ನೀನು ಏನು ಮಾಡಿದೆ ' ಎಂಬದಾಗಿ ಕೆಲಿಪ್ಸ್ಳೋ ಕೇಳಿದಳು. ಅದಕ್ಕೆ ಟೆಲಿಮಾಕಸ್ಸನು ಹೇಳಿದ್ದೇನಂದರೆ :—

" ಸಿಸಿಲಿಯಲ್ಲಿದ್ದಾಗ, ದಾಸತ್ವಕ್ಕಿಂತಲೂ ಮರಣವು ಲೇಸೆಂದು ನಾನು ಭಾವಿಸಿದ್ದೆನು. ಈಗ ವಿಧಿಯಿಲ್ಲದೆ ದಾಸನಾಗಬೇಕಾಯಿತು. ಕುರಿಕಾಯುವುದಕ್ಕೆ ಹೋಗಬೇಕಾಯಿತು. ಈ ವೃತ್ತಿಯಿಂದ ವಿಮೋಚನೆಯು ದೂರವಾಯಿತು. ಮೆಂಟರನು ಇಥಿಯೋಪಿಯಾಕ್ಕೆ ಕಳುಹಿಸಲ್ಪಟ್ಟನು. ಈ ದುರಾತ್ಮನಾದ ಮೆಟೋಫಿಸ್ಸನು ಸಸಾಟ್ರಿಸ್ಸನಿಗೆ ನಾವು ಗ್ರೀಕರಲ್ಲವೆಂಬದಾಗಿಯೂ, ಫಿನೀಷಿಯರ್ಸರೆಂಬದಾಗಿಯೂ ಪ್ರತ್ಯಯವನ್ನುಂಟುಮಾಡಿ, ನಮ್ಮನ್ನು ವಿಕ್ರಯ ಮಾಡುವುದಕ್ಕೆ ಪ್ರಭುವಿನ ಆಜ್ಞೆಯನ್ನು ಹೊಂದಿ, ಅದನ್ನು ಜಾರಿಗೆ ತಂದನು. ನಾನು ಕಾಡಿನಲ್ಲಿ ಕುರುಬನಾಗಿರಬೇಕಾಯಿತು. ಈ ಸ್ಥಳವು ಮರಳಿನ ದೊಡ್ಡ ಮೈದಾನದಿಂದ ಕೂಡಿದ್ದಾಗಿತ್ತು. ಪರ್ವತಾಗ್ರದಲ್ಲಿ ಹಿಮವೂ, ತಪ್ಪಲಲ್ಲಿ ಉರಿಯುವ ಬಿಸಲೂ, ಇವೆರಡೂ ಇದ್ದವು. ಅಲ್ಲಲ್ಲಿಯೇ ಬಾಡೆಯ ಸಮೀಪದಲ್ಲಿ ಹುಲ್ಲೂ, ಕುರ್ಚು ಗಿಡಗಳೂ ಇದ್ದವು. ಪರ್ವತವು ಅನೇಕ ಪ್ರದೇಶಗಳಲ್ಲಿ ಕಡಿದಾಗಿಯೂ, ಭಾರಿ ಬಂಡೆಗಳುಳ್ಳದ್ದಾಗಿಯೂ ಇತ್ತು. ಕಣಿವೆಗಳು ಅಗಾಧವಾಗಿಯೂ, ಸೂರ್ಯರಶ್ಮಿಯು ಪ್ರವೇಶಕ್ಕೂ ಅವಕಾಶವಿಲ್ಲದವುಗಳಾಗಿಯೂ ಇದ್ದವು. ಈ ಭಯಂಕರವಾದ ಸ್ಥಳದಲ್ಲಿ ಕುರುಬರ ಸಹವಾಸ ವಿನಾ ಇನ್ನಾರ ಸಹಾಯವೂ ನನಗೆ ಇರಲಿಲ್ಲ. ಈ ಕುರುಬರು ಪ್ರಾಯಕವಾಗಿ ಅಸಂಸ್ಕಾರಿಗಳಾಗಿಯೂ, ಒರಟರಾಗಿಯೂ ಇದ್ದರು. ಈ ಅವಸ್ಥೆಯಲ್ಲಿ ಇರತಕ್ಕ ದುರದೃಷ್ಟವು ನನಗೆ ಬಂದಿತಲ್ಲಾ ಎಂದು ನಾನು ವ್ಯಸನಾಕ್ರಾಂತನಾಗಿದ್ದೆನು. ಈ ಕುರುಬರಲ್ಲಿ ಬ್ಯುಟಿಸ್ ಎಂಬ ಒಬ್ಬ ಕುರುಬನಿದ್ದನು. ಇವನು ಬಹಳ ದುರಹಂಕಾರಿ. ಅವನು ಮೆಟೋಫಿಸ್ಸನ ಪ್ರಸನ್ನತೆಗೆ ಪಾತ್ರನಾಗಬೇಕೆಂದು ಅವನಿಗೆ ಮುಖೋಲ್ಲಾಸವಾಗುವಂತೆ ಬಹು ಜನಗಳ ಮೇಲೆ ಚಾಡಿಯನ್ನು ಹೇಳುತ್ತಾ ಬಹು ಜನಗಳನ್ನು ಹಿಂಸಿಸುತ್ತಾ ಇದ್ದನು. ಯಾವಾಗ್ಲೂ ನನ್ನ ಮೇಲೆ ಇಲ್ಲದ ತಪ್ಪುಗಳನ್ನು ಆಪಾದಿಸುತ್ತಾ ಇದ್ದನು. ಅವನ ಆಜ್ಞೆಯೇ ವೇದವಾಕ್ಯೆಂದು, ಕೇಳಿದ ಕೆಲಸವನ್ನೆಲ್ಲಾ ನಾನು ಮಾಡುತ್ತಿದ್ದಾಗ್ಯೂ, ನನ್ನಲ್ಲಿ ಇಲ್ಲದ ದೋಷಗಳನ್ನು ಆರೋಪಿಸುತ್ತಾ, ಅಲ್ಪವಾದ ತಪ್ಪುಗಳನ್ನು ಪರ್ವತಾಕಾರವಾಗಿ ಮಾಡಿ, ಮೆಟೋಫಿಸ್ಸನಿಗೆ ಹೇಳುತ್ತಾ, ದುಸ್ಸಹವಾದ ಶಿಕ್ಷೆಗೆ ಗುರಿಮಾಡುತ್ತಾ, ಅಹೋರಾತ್ರಿಗಳಲ್ಲಿಯೂ ನನ್ನ ಶಕ್ತಿಗೆ ಮೀರಿದ ಕೆಲಸಗಳನ್ನು ಮಾಡಿಸುತ್ತಾ ಇದ್ದನು. ನಿರಾಸೆಯೂ, ಪ್ರಾಣದಲ್ಲಿ ನಿರಪೇಕ್ಷೆಯೂ, ಆತ್ಮಹತ್ಯದಲ್ಲಿ ಆಸಕ್ತಿಯೂ ನನಗೆ ಉಂಟಾಯಿತು. ಒಂದಾನೊಂದು ದಿವಸ ವ್ಯಸನದಲ್ಲಿ ಮಗ್ನನಾಗಿ, ನನ್ನ ಕುರಿ

ಮಂದೆಯನ್ನು ಮರೆತು, ಒಂದು ಗುಹೆಯ ಬಾಗಲಲ್ಲಿ ದೇಹವನ್ನು ಬಿಡಬೇಕೆಂಬ ಸಂಕಲ್ಪದಿಂದ ಬಿದ್ದು ಇದ್ದೆನು. ಇಂಥಾ ನಿರಾಸೆಯಲ್ಲಿರುವಾಗ, ಸದರಿ ಪರ್ವತವು ಕಂಪಿಸುವುದಕ್ಕೆ ಉಪಕ್ರಮವಾಯಿತು. ಪರ್ವತಾಗ್ರದಲ್ಲಿ ಇದ್ದ ಓಕ್ ಗಿಡಗಳೂ, ಪೈನ್ ಗಿಡಗಳೂ ಬಗ್ಗಿದವು. ಗಾಳಿಯು ನಿಂತುಹೋಯಿತು. ಅಗಾಧವಾದ ಒಂದು ಅಶರೀರವಾಕ್ಕು ಕೇಳಬಂತು.'' ಈ ಆಕಾಶವಾಣಿಯು ಹೇಳಿದ್ದೇನಂದರೆ :—

" ಎಲೈ ವಿವೇಕಶಾಲಿಯಾದ ಯೂಲಿಸೆಸ್ಸನ ಮಗನೆ, ಟೆಲಿಮಾಕಸ್ಸನೆ, ಆತ್ಮಹತ್ಯ ಮಾಡಿಕೊಳ್ಳಬೇಕೆಂಬ ಸಂಕಲ್ಪವನ್ನು ಬಿಡು. ಶಾಂತಿಯನ್ನು ಹೊಂದು. ಕಷ್ಟವನ್ನರಿಯದವರು ಸುಖವನ್ನು ಅನುಭವಿಸುವುದಕ್ಕೆ ಪಾತ್ರರಲ್ಲ. ಬಿಸಲಿನಲ್ಲಿ ಶ್ರಮಪಟ್ಟವರಿಗೆ ನೆರಳಿನ ಮಹಿಮೆಯು ಗೊತ್ತಾಗುವಂತೆ ಸದಾ ನೆರಳಿನಲ್ಲಿರತಕ್ಕವರಿಗೆ ನೆರಳಿನ ಮಹಿಮೆಯು ಗೊತ್ತಾಗುವುದೇ ? ದಾಸಾನುದಾಸನಾಗಿ ಅಹೋರಾತ್ರಿಗಳಲ್ಲಿಯೂ ಕಷ್ಟಪಟ್ಟವನು ಪ್ರಭುತ್ವಕ್ಕೆ ಬಂದರೆ, ಜನಗಳ ಕಷ್ಟಸುಖಗಳನ್ನು ತಿಳಿದುಕೊಂಡು, ಹೇಗೆ ಪ್ರಜಾರಂಜನೆಯನ್ನು ಮಾಡಬಲ್ಲನೋ ಹಾಗೆ ಸದಾ ಸಂಪತ್ತಿನಲ್ಲಿ ಇದ್ದುಕೊಂಡು, ಕಷ್ಟದ ಮಹಿಮೆಯನ್ನೇ ತಿಳಿಯದವರು ಪ್ರಜಾರಂಜನೆಯನ್ನು ಮಾಡುವುದು ಸಾಧ್ಯವೇ ? ಆಗರ್ಭ ಶ್ರೀಮಂತರು ಶ್ರೀಮಂತರಾಗುವುದಕ್ಕೆ ಯೋಗ್ಯರೇ ಹೊರತು, ಅವರು ಶ್ರೀಮಂತ ಪದವಿಯಿಂದ ಚ್ಯುತರಾದರೆ, ನಿಮಿಷಾರ್ಧವೂ ಬದುಕಲಾರರು. ಕೋಟ್ಯಂತರ ಪ್ರಭುಗಳು ಸಂಪಲ್ಲಕ್ಷ್ಮಿಯು ಪರಾಙ್ಮುಖಳಾದ ಕೂಡಲೆ, ಪತನದ ಕಷ್ಟವನ್ನು ಅನುಭವಿಸಲಾರದೆ, ದೇಹತ್ಯಾಗವನ್ನು ಮಾಡಿರುವರು. ಯೂಲಿಸೆಸ್ಸನ ಮಗನಾಗಿ, ಕಷ್ಟವನ್ನು ಅನುಭವಿಸುವುದಕ್ಕೆ ಹಿಂತೆಗೆಯುವುದು ನಿನಗೆ ಧರ್ಮವೇ ? ಲೋಕೈಕವೀರನಾಗಿಯೂ, ಅನನ್ಯಸಾಧಾರಣವಾದ ಪ್ರಜಾರಂಜಕತೆಯಲ್ಲಿ ದಕ್ಷನಾಗಿಯೂ ಇರುವ ಯೂಲಿಸೆಸ್ಸನು ನಿನ್ನ ಹೇಡಿತನವನ್ನು ನೋಡಿದರೆ, ಬಹಳ ಸಂಕಟಪಡುವನು. ಕಷ್ಟವನ್ನು ಅನುಭವಿಸುವುದಕ್ಕೆ ಮಹಾತ್ಮರಾದವರು ಹೆದರಬಹುದೇ ? ಈ ಕಷ್ಟವನ್ನು ತಪ್ಪಿಸಿಕೊಳ್ಳುವುದಕ್ಕೋಸ್ಕರ ಆತ್ಮಹತ್ಯವನ್ನು ಮಾಡಿಕೊಳ್ಳಬೇಕೆಂದು ನೀನು ಮಾಡಿರುವ ಸಂಕಲ್ಪವು ಬಹಳ ನೀಚವಾದದ್ದು. ಈ ಸಂಕಲ್ಪವನ್ನು ಬಿಡು. ಈ ದುರದೃಷ್ಟವೆಲ್ಲಾ ನಿನ್ನ ಕ್ಷೇಮಾರ್ಥವಾಗಿ ಬಂದಿರುವುದೆಂದು ತಿಳಿದುಕೊ. ಜನಗಳಿಗೆ ಎಂಥಾ ಕಷ್ಟನಿಷುರಗಳು ಬರುತ್ತವೋ ಅವುಗಳನ್ನು ಸ್ವಯಂ ಅನುಭವಿಸಿ ತಿಳಿದುಕೊಳ್ಳದೆ ಇರತಕ್ಕವರು ಪ್ರಭುತ್ವಕ್ಕೇ ಅನರ್ಹರು. ಕಷ್ಟಗಳು ಬಂದಾಗ ತಗ್ಗುವುದು ಅಧಮರ ಸ್ವಭಾವ. ಯೂಲಿಸೆಸ್ಸನ ಮಗನು ಹೇಡಿತನವನ್ನು ತೋರಿಸಬಾರದು. ಕಷ್ಟವನ್ನು ಜಯಿಸುವುದರಲ್ಲಿ ನಿನ್ನ ಶಕ್ತಿಯನ್ನು ತೋರಿಸು. ಇಥಾಕಾ ಪಟ್ಟಣಕ್ಕೆ ನೀನು ವಾಪಸು ಹೋಗುವ ಸಂಭ

ವವು ಬರುವುದು. ದಿಗಂತವಿಶ್ರಾಂತವಾದ ಕೀರ್ತಿಯು ನಿನಗೆ ಲಭ್ಯವಾಗುವುದು. ಸಂಪತ್ತು ಬಂದಾಗ, ಜನಗಳಿಗೆ ಉಂಟಾಗತಕ್ಕ ಈ ಕಷ್ಟವನ್ನೆಲ್ಲಾ ಸ್ಮರಿಸಿಕೊಂಡು, ಅವರ ಕಷ್ಟಗಳನ್ನು ನಿವಾರಣೆ ಮಾಡುವುದಕ್ಕೋಸ್ಕರ ನಿನಗೆ ತಕ್ಕ ಯೋಗ್ಯತೆಯು ಬರಲೆಂದು ದೇವರು ನಿನಗೆ ಈ ಕಷ್ಟಗಳನ್ನು ಕೊಟ್ಟಿರುತ್ತಾನೆ. ಭಯಪಡಬೇಡ. ನಿರಾಸೆಯುಳ್ಳವನಾಗಬೇಡ. ದೌರ್ಬಲ್ಯವನ್ನು ತೋರಿಸಬೇಡ. ಜಗದೀಶ್ವರನು ನಿನ್ನನ್ನು ನಿರಾಕರಿಸಿದನೆಂದು ಭಾವಿಸಬೇಡ. ಈ ಕಷ್ಟವೇ ನಿರಂತರವಾದದ್ದೆಂದು ತಿಳಿದುಕೊಳ್ಳಬೇಡ. ಪ್ರಪಂಚದಲ್ಲಿ ಹಗಲೂ ರಾತ್ರಿಯೂ ಹೇಗೆ ಒಂದನ್ನು ಒಂದು ಅನುಸರಿಸಿ ಬರುವುದೋ, ಚಕ್ರದಲ್ಲಿ ಪ್ರತಿ ಒಂದು ಭಾಗವೂ ಉಚ್ಚಸ್ಥಾನವನ್ನೂ, ನೀಚಸ್ಥಾನವನ್ನೂ ಹೇಗೆ ಒಂದಾಗುತ್ತಲೂ ಒಂದನ್ನು ಹೊಂದುವುದೋ ಹಾಗೆಯೇ ಸಂಪತ್ತುಗಳೂ, ವಿಪತ್ತುಗಳೂ ಸರದಿಯ ಮೇಲೆ ಬರುವುವು. ವಿಪತ್ತುಗಳು ಬಂದಾಗ ಸಹಿಸಿಕೊಳ್ಳುವ ಶಕ್ತಿಯು ಯಾರಿಗೆ ಇರುವುದಿಲ್ಲವೋ ಅವರಿಗೆ ಸಂಪತ್ತುಗಳು ಬರುವುದೇ ಇಲ್ಲ. ಹೇಡಿತನವನ್ನು ಬಿಡು. ಪೌರುಷವನ್ನು ಅವಲಂಬಿಸು. ಕಷ್ಟಗಳನ್ನು ಸಹಿಸಿಕೊ. ಪುರುಷಸಿಂಹನಾಗಿರು. ಕಷ್ಟಗಳ ಸರದಿಯು ಮುಗಿಯುತ್ತದೆ. ಇಷ್ಟಾರ್ಥಪ್ರಾಪ್ತಿಯ ಸರದಿಯು ಬರುತ್ತದೆ. ಲೋಕೈಕವೀರರಾದವರು ಹೇಗೆ ಲೋಕೈಕವೀರರಾದರೆಂದು ಪರ್ಯಾಲೋಚಿಸು. ಕಷ್ಟಗಳು ಬಂದಾಗ, ಧೈರ್ಯದಿಂದ ಕಷ್ಟಗಳನ್ನು ಅನುಭವಿಸದೆ, ಆತ್ಮಹತ್ಯದೀಕ್ಷೆಯನ್ನು ವಹಿಸಿದರೆ, ಅವರು ಲೋಕೈಕವೀರರಾಗುವರೇ? ಅಜಿತೇಂದ್ರಿಯರಾದವರೂ, ಅರಿಷಡ್ವರ್ಗಗಳನ್ನು ಗೆಲ್ಲದವರೂ ಒಳ್ಳೇ ಪದವಿಗೆ ಬಂದಿರುವರೇ? ಈ ವಿಷಯವನ್ನು ಚೆನ್ನಾಗಿ ಪರ್ಯಾಲೋಚಿಸು.'' ಈ ಮಾತುಗಳನ್ನು ಕೇಳಿದ ಕೂಡಲೆ, ಈ ವಾಣಿಯು ಎಲ್ಲಿಂದ ಬಂದಿತೆಂದು ದಶದಿಕ್ಕುಗಳಿಗೂ ನನ್ನ ದೃಷ್ಟಿಯನ್ನು ಪ್ರಸರಿಸಿದೆನು.

ಎಲ್ಲಿಯೂ ಯಾರೂ ಕಾಣಬರಲಿಲ್ಲ. ಇದು ಜಗದೀಶ್ವರನ ಅಶರೀರವಾಕ್ಯಾಗಿರಬೇಕೆಂದು ತಿಳಿದುಕೊಂಡೆನು. ತತ್ಕ್ಷಣದಲ್ಲಿಯೇ ನನಗೆ ಧೈರ್ಯವು ಉಂಟಾಯಿತು. ನಿರಾಸೆಯು ಅದೃಶ್ಯವಾಯಿತು. ಬಂದ ಕಷ್ಟಗಳನ್ನು ಧೈರ್ಯದಿಂದ ಸಹಿಸಬೇಕೆಂಬ ಸಂಕಲ್ಪವು ಉಂಟಾಯಿತು. ಭಯದಿಂದಲೂ, ನಿರಾಶೆಯಿಂದಲೂ ಉಂಟಾಗಿದ್ದ ವ್ಯಸನವು ಪರಿಹಾರವಾಯಿತು. ಸಂತೋಷವು ರೋಮಕೂಪಗಳನ್ನೂ ಕೂಡ ಪ್ರವೇಶಿಸಿ, ರೋಮಾಂಚವಾಗುವಂತೆ ಮಾಡಿತು. ಜಗದೀಶ್ವರನು ಸತ್ಪುರುಷರಿಗೆ ಅವರ ಕ್ಷೇಮಾರ್ಥವಾಗಿ ಭಯವನ್ನು ಹುಟ್ಟಿಸಿ, ಭಯನಿವಾರಣೆಯನ್ನು ಮಾಡುತ್ತಾನೆಂಬುದು ನನ್ನ ಅನುಭವಕ್ಕೆ ಬಂದಿತು. ಜಗದೀಶ್ವರನ ವ್ಯಾಪಾರವು ಅನಿರ್ವಚನೀಯವಾದುದು. ಒಂದು ನಿಮಿಷಕ್ಕೆ

ಮುಂಚೆ ಸಾಯುವುದು ಲೇಸೆಂದು ಸಂಕಲ್ಪ ಮಾಡಿದ್ದೆನು. ಉತ್ತರನಿಮಿಷದ ಲ್ಲಿಯೇ ಬದುಕುವುದು ಲೇಸೆಂದು ಪ್ರತ್ಯಯವು ಉಂಟಾಯಿತು. ಇದು ಈಶ್ವರನ ಮಹಿಮೆ. ಈ ಮಹಿಮೆಯ ಪ್ರಭಾವವು ಗೊತ್ತಾದ ಕೂಡಲೆ, ಸೃಷ್ಟಿಸ್ಥಿತಿಪ್ರಳ ಯಕರ್ತನಾದ ಜಗದೀಶ್ವರನಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿ, ಈ ಆಕಾಶ ವಾಣಿಗೆ ಕಾರಣಭೂತಳಾದ ಚಿಚ್ಛಕ್ತಿಸ್ವರೂಪಳಾದ ಮಿನರ್ವಾ ದೇವತೆಗೆ ನನ್ನ ವಂದನೆಗಳನ್ನು ಅರ್ಪಿಸಿದೆನು. ತಕ್ಷಣವೇ ನನಗೆ ವಿವೇಕವು ಬಂದಿತು. ನಿರಾಸೆ ಯು ಹೋಯಿತು. ಶಾಂತಿಯು ಉಂಟಾಯಿತು. ಹುಡುಗಬುದ್ಧಿಯು ಹೋಯಿ ತು. ಪೂರ್ವಾಪರಜ್ಞಾನವು ಲಭ್ಯವಾಯಿತು. ದೇವರ ಮಹಿಮೆಯಿಂದಲೋ ಅಥವಾ ನನ್ನ ಸೌಜನ್ಯದಿಂದಲೋ ಎಲ್ಲಾ ಕುರುಬರೂ ನನ್ನಲ್ಲಿ ಅನುರಕ್ತರಾದರು. ವ್ಯಾಟಿಸ್ಸನೂ ಕೂಡ ನನ್ನಲ್ಲಿ ದ್ವೇಷವನ್ನು ಬಿಟ್ಟು, ಪ್ರೀತಿಯುಳ್ಳವನಾದನು. ನನಗೆ ನಿಸರ್ಗವಾಗಿದ್ದ ಶಾಂತಿಯೂ, ಸಹನವೂ, ಜಾಗರೂಕತೆಯೂ, ಭೂತದ ಯೆಯೂ, ಲೋಕಸೇವಾಸಕ್ತಿಯೂ ಬಂದವು. "ನಾನು ಯೂಲಿಸೆಸ್ಸನ ಮಗ ನು. ರಾಜಕುಮಾರನು. ಸೇವಾವೃತ್ತಿಯು ನನಗೆ ಸಹಜವಾದ್ದಲ್ಲ. ಪ್ರಭುತ್ವ ಮಾತ್ರ ನನಗೆ ತಕ್ಕದ್ದು. ಪ್ರಭುಗಳು ಸೇವಕರಲ್ಲ. ಸೇವಿಸಲ್ಪಡುವುದಕ್ಕೆ ಮಾತ್ರ ಯೋಗ್ಯರು." ಎಂಬ ಸಂಕುಚಿತವಾದ ಅಭಿಪ್ರಾಯಗಳೆಲ್ಲಾ ತೊಲಗಿ ಹೋದವು.

ಹೀಗಿರುವಾಗ್ಗೆ, ಲೋಭಿಯಾದವನಿಗೆ, ನಿಧಿಗಳು ದೊರೆತಂತೆ ಸಮೀಪದ ಲ್ಲಿದ್ದ ಒಂದು ಗುಹೆಯಲ್ಲಿ ಒಂದು ಪುಸ್ತಕ ಭಂಡಾರವು ದೊರೆಯಿತು. ಜ್ಞಾನರ ತ್ನಗಳಿಂದ ಪರಿಶೋಭಿತಗಳಾದ ಗ್ರಂಥಗಳು ಆ ಭಂಡಾರದಲ್ಲಿ ಬೇಕಾದ ಹಾಗೆ ಇದ್ದವು. ಸಂಪತ್ತು ಬರುವಾಗ್ಗೆ ಅದು ನಿರೀಕ್ಷಿಸಲ್ಪಡದೆ, ಹೀಗೆ ಆ ಶ್ಚರ್ಯಕರ ವಾಗಿ ಬರುವುದು. ವಿಪತ್ತೂ ಕೂಡ ಹೀಗೆಯೇ ಸಂಭವಿಸುವುದು. ಕುರುಬ ರೆಲ್ಲರೂ ನನಲ್ಲಿ ಅನುರಕ್ತರಾದುದನ್ನೂ, ಅಮೋಘವಾದ ಗ್ರಂಥಗಳುಳ್ಳ ಈ ಭಂಡಾರವು ದೊರೆತದ್ದನ್ನೂ ನೋಡಿ, ದುರದೃಷ್ಟರೂಪವಾದ ಕಷ್ಟಕಾಲವು ಪರಿಸಮಾಪ್ತ್ಯವಸ್ಥೆಗೆ ಬಂದಿರಬೇಕೆಂದು ನನಗೆ ತೋರಿತು. ಕುರಿಗಳನ್ನು ಕಾಯುತ್ತಾ, ಗ್ರಂಥಗಳನ್ನು ಓದುತ್ತಾ, ದೈವಲೀಲೆಯನ್ನೂ, ಪ್ರಪಂಚದ ವ್ಯಾಪಾ ರಗಳನ್ನೂ ಪರ್ಯಾಲೋಚಿಸುತ್ತಾ, ಸಂಪತ್ತುಗಳೂ ವಿಪತ್ತುಗಳೂ ಹೇಗೆ ಪ್ರಪಂ ಚದಲ್ಲಿ ಕಣ್ಣಾಮುಚ್ಚಿ ಆಟದಂತೆ ಪರಿಣಮಿಸುವುವೋ ಅವುಗಳನ್ನು ಪರಿಶೀಲಿಸು ತ್ತಾ, ಪಾಮರರಾದವರು ಕಷ್ಟಗಳು ಬಂದಾಗ ಹೇಗೆ ತಗ್ಗುತ್ತಾ, ಸುಖವು ಬಂದಾಗ ಹೇಗೆ ಹಿಗ್ಗುತ್ತಾ ಇರುವರೋ, ಸಕಲ ಕಷ್ಟಸುಖಗಳು ಕೂಡ ಹೇಗೆ ಮನೋವಾಕ್ಕರ್ಮಗಳಿಗನುಸಾರವಾಗಿರುವುವೋ ಅವುಗಳನ್ನೆಲ್ಲಾ ಪರಿಶೀಲಿಸು

ತ್ತಾ ಕಾಲಹರಣ ಮಾಡುತ್ತಿದ್ದೆನು. ವಿಚಾರಪರತೆಯು ಅರಿಷ್ಟನಿವಾರಣೆಗೂ, ಇಷ್ಟಪ್ರಾಪ್ತಿಗೂ ಕೇವಲ ಸಾಧಕವಾದುದು.

ಹೀಗೆಯೇ ವಿಚಾರ ಮಾಡುತ್ತಾ, ಅರಣ್ಯದಲ್ಲಿ ಸಂಚಾರ ಮಾಡುತ್ತಿರುವಾಗ, ನನ್ನ ಎದುರಿಗೆ ಒಬ್ಬ ಮುದುಕನು ಒಂದು ಪುಸ್ತಕವನ್ನು ಹಿಡಿದುಕೊಂಡು, ನನಗೆ ಅಭಿಮುಖವಾಗಿ ಬಂದನು. ಅವನ ನೆತ್ತಿಯಲ್ಲಿ ತ್ರಿವಳಿಗಳಿದ್ದವು. ತಲೆಯ ಮೇಲೆ ಮಧ್ಯ ನೆತ್ತಿಯವರೆಗೂ ಕೂದಲು ಇರಲಿಲ್ಲ. ಒರೆಯಿಟ್ಟ ಬೆಳ್ಳಿಯಂತೆ ಥಳಥಳಿಸುತ್ತಲಿರುವ ಕೂದಲುಗಳುಳ್ಳ ಗಡ್ಡವು ನಡುವಿನ ವರೆಗೂ ಜೋಲಾಡುತ್ತಿದ್ದಿತು. ವೃದ್ಧನಾದಾಗ್ಯೂ, ಇವನು ಆಜಾನುಬಾಹುವಾಗಿದ್ದನು. ವಯಸ್ಸಾಗಿದ್ದಾಗ್ಯೂ, ಮುಖದಲ್ಲಿ ಗುಲಾಬಿ ರಂಗು ಥಳಥಳಿಸುತ್ತಿತ್ತು. ಅವನ ಕಣ್ಣುಗಳು ನಕ್ಷತ್ರಗಳಂತೆ ಪ್ರಜ್ವಲಿಸುತ್ತಿದ್ದವು. ಅವನು ಮಾತನಾಡುವುದಕ್ಕೆ ಉಪಕ್ರಮಿಸಲು, ಪ್ರತಿ ಒಂದು ಶಬ್ದವೂ ಮೂರ್ತಿಮತ್ತಾದ ಮಾಧುರ್ಯದಂತೆ ಇತ್ತು. ಅವನ ವಾಗ್ಧೋರಣೆಯು ಚಿತ್ತವನ್ನು ಆಕರ್ಷಿಸುತ್ತಿತ್ತು. ಅವನನ್ನು ನೋಡಿದ ಕೂಡಲೆ, ಅನಿರ್ವಚನೀಯವಾದ ಭಕ್ತಿಯೂ ಪ್ರೀತಿಯೂ ನನಗೆ ಉಂಟಾಯಿತು. ಅವನ ಹೆಸರು ಟಮರ್ಗಸಿಲಿಸ್ ಎಂಬುದೆಂದು ಗೊತ್ತಾಯಿತು. ಈಜಿಪ್ಟ್ ದೇಶದಲ್ಲಿ ಪ್ರಸಿದ್ಧವಾದ ದೇವಾಲಯವೊಂದಿರುವುದು. ಅಲ್ಲಿ ಅಪಾಲೋ ಎಂಬ ದೇವತೆಯು ಇರುವುದು. ಇವನು ಆ ದೇವತೆಯ ಅರ್ಚಕನೆಂದು ಗೊತ್ತಾಯಿತು. ಇವನ ಕೈನಲ್ಲಿದ್ದ ಪುಸ್ತಕವು ಆ ದೇವರ ಕೀರ್ತನೆಗಳನ್ನು ಒಳಗೊಂಡಿತ್ತು. ಆ ಅರ್ಚಕನು ನನ್ನನ್ನು ನೋಡಿ, ಪುತ್ರನಿರ್ವಿಶೇಷವಾದ ಪ್ರೀತಿಯಿಂದ ನನ್ನನ್ನು ಮಾತನಾಡಿಸಿದನು. ಭೂತಭವಿಷ್ಯದ್ವರ್ತಮಾನಗಳಿಗೆ ಸಂಬಂಧಪಟ್ಟ ಅನೇಕ ವಿಷಯಗಳನ್ನು ಇವನು ನನಗೆ ತಿಳಿಸಿದನು. ಈತನು ಹೇಳಿದ ವಿಷಯಗಳೆಲ್ಲಾ ಅತ್ಯಂತ ಮನೋಹರವಾಗಿದ್ದವು. ಭವಿಷ್ಯದ್ವಿಷಯಗಳನ್ನು ಹೇಳುವುದರಲ್ಲಿ ಇವನು ಅಸಾಧಾರಣವಾದ ದೀರ್ಘದೃಷ್ಟಿಯನ್ನು ತೋರಿಸಿದನು. ವಯೋವೃದ್ಧನಾಗಿದ್ದಾಗ್ಯೂ, ಜ್ಞಾನವಿಷಯದಲ್ಲಿ ಇವನು ಕುಮಾರಾವಸ್ಥೆಯಲ್ಲಿಯೇ ಇದ್ದನು. ಪ್ರಪಂಚವ್ಯವಹಾರಗಳು ಯಾರಿಗೆ ಸಮಗ್ರವಾಗಿ ತಿಳಿಯದೋ ಅವರಿಗೆ ಲೋಕಾನುಭವವನ್ನು ಉಂಟುಮಾಡಿ, ದುರ್ಮಾರ್ಗಪ್ರವರ್ತನೆಗಳಿಂದ ಉಂಟಾಗತಕ್ಕ ಅನರ್ಥಗಳನ್ನು ತೋರಿಸಿ, ಅವರು ಸನ್ಮಾರ್ಗಪ್ರವರ್ತಕರಾಗುವಂತೆ ಮಾಡುವುದು ಅನುಭವಶಾಲಿಗಳಾದ ಹಿರಿಯರ ಕರ್ತವ್ಯವೆಂದು ಈತನು ತಿಳಿದುಕೊಂಡಿದ್ದನು.

"ಈತನು ನನ್ನಲ್ಲಿ ತುಂಬಾ ಕೃಪೆಯನ್ನು ತೋರಿಸಿದನು. ನನ್ನ ಮನೋವಿಕಾರಗಳನ್ನು ಹೋಗಲಾಡಿಸುವುದಕ್ಕೆ ತಕ್ಕ ಪುಸ್ತಕಗಳನ್ನು ನನಗೆ ಕೊಟ್ಟನು. ನನ್ನನ್ನು ಮಗೂ ಎಂಬದಾಗಿ ಕರೆಯುತ್ತಿದ್ದನು. ನಾನು ಅವನನ್ನು ತಂದೆ ಎಂಬ

ದಾಗಿ ಕರಯುತ್ತಿದ್ದನು. ಮುಂಟರನ ಸಹವಾಸವು ತಪ್ಪಿದಾರಭ್ಯ ನಾನು ಅನಾಥನಾಗಿದ್ದೆನು. ನನ್ನನ್ನು ಸನಾಥನನ್ನಾಗಿ ಮಾಡಬೇಕೆಂದು ದೇವರು ಇವನ ಸಹಾಯವನ್ನು ನನಗೆ ದಯಪಾಲಿಸಿರಬೇಕೆಂದು ನನಗೆ ತೋರಿತು. ಇವನು ಆರ್ಫಿಯಸ್ ಲೈಕ್ಸ್‌ರಂತೆ ದೇವತಾಂಶ ಸಂಭೂತನಾಗಿರಬೇಕೆಂದು ತೋರುತ್ತಿತ್ತು. ಆಗಾಗ್ಯೆ ಹಿತೋಪದೇಶಗರ್ಭಿತಗಳಾದ ಅನೇಕ ಶ್ಲೋಕಗಳನ್ನು ಹೇಳುತ್ತಿದ್ದನು. ಕಾಲೋಚಿತವಾದ ಹಿತೋಪದೇಶಗಳು ಸಂದರ್ಭಾನುಸಾರವಾಗಿ ಹೇಳಲ್ಪಡುತ್ತಲಿದ್ದುದರಿಂದ, ಸದರಿ ಶ್ಲೋಕಗಳು ಸ್ವಕಪೋಲಕಲ್ಪಿತಗಳೋ ಅಥವಾ ಇವನು ವ್ಯಾಸಂಗ ಮಾಡಿರತಕ್ಕ ಗ್ರಂಥಗಳಿಂದ ಸಂಗ್ರಹಿಸಲ್ಪಟ್ಟವುಗಳೋ ಗೊತ್ತಾಗುತ್ತಲಿರಲಿಲ್ಲ. ಅದು ಹೇಗಾದರೂ ಇರಲಿ. ವಿವೇಕಗರ್ಭಿತಗಳಾದ ವಚನಗಳು ಗಂಗಾಪ್ರವಾಹದಂತೆ ಅವನಿಂದ ಹೊರಡುತ್ತಿದ್ದವು. ಇಷ್ಟು ಮಾತ್ರವೇ ಅಲ್ಲ. ವೀಣೆಯನ್ನು ನುಡಿಸುವುದರಲ್ಲಿಯೂ, ಗಾನವನ್ನು ಮಾಡುವುದರಲ್ಲಿಯೂ ಅವನಿಗೆ ಅಸದೃಶವಾದ ಶಕ್ತಿಯು ಇತ್ತು. ಇವನು ಗಾನಮಾಡುವುದಕ್ಕೆ ಉಪಕ್ರಮಿಸಿದರೆ, ಮನುಷ್ಯರು ಮಾತ್ರವೇ ಅಲ್ಲದೆ, ಕರಡಿ, ಸಿಂಹ, ಹುಲಿ ಮೊದಲಾದ ಭಯಂಕರವಾದ ತಿರ್ಯಗ್ಜಂತುಗಳೂ ಕೂಡ ನಾಯಿಗಳಂತೆ ಬಾಲವನ್ನು ಅಲ್ಲಾಡಿಸಿಕೊಂಡು, ಇವನ ಸುತ್ತಲೂ ಕುಳಿತುಕೊಂಡು, ಇವನ ಕಾಲುಗಳನ್ನು ನೆಕ್ಕುತ್ತಾ ಪರಮಾನಂದ ಸುಖವನ್ನು ಅನುಭವಿಸುತ್ತಿದ್ದವು. ಯಕ್ಷರೂ, ಗಂಧರ್ವರೂ, ಕಿನ್ನರರೂ ಇವನನ್ನು ಆವರಿಸಿಕೊಂಡು, ಗಾನಸುಖವನ್ನು ಅನುಭವಿಸುತ್ತಾ, ತಾಳವನ್ನು ಅನುಸರಿಸಿ ನರ್ತನ ಮಾಡುತ್ತಿದ್ದರು. ಇವನ ಗಾನದ ಮಹಿಮೆಯಿಂದ ಸ್ಥಾವರಗಳಾದ ಪರ್ವತಗಳೂ, ಸಮುದ್ರಗಳೂ, ವೃಕ್ಷಗಳೂ, ಬಂಡೆಗಳೂ ಕೂಡ ಆನಂದದಿಂದ ಉಬ್ಬುವಂತೆ ತೋರುತ್ತಿದ್ದವು. ಇವನ ಗಾನಗಳೆಲ್ಲಾ ಭಕ್ತಿರಸಪ್ರಧಾನಗಳಾಗಿದ್ದವು. ಸೃಷ್ಟಿಸ್ಥಿತಿಪ್ರಳಯಗಳಿಗೆ ಕರ್ತನಾದ ಶ್ರೀ ಪರಬ್ರಹ್ಮನ ಅಪಾರವಾದ ಮಹಿಮೆಯನ್ನೂ, ಅವನ ಭಕ್ತರಲ್ಲಿ ಅಗ್ರಗಣ್ಯರಾದ ಮಹಾನುಭಾವರುಗಳ ಗುಣಾತಿಶಯಗಳನ್ನೂ, ಅವನು ಮಾಡಿದ ಅವತಾರಗಳಲ್ಲಿ ತೋರುವ ವಿವೇಕಾತಿಶಯವನ್ನೂ ಸ್ರಕ್ಚಂದನ ವನಿತಾದಿಗಳಿಂದ ಉಂಟಾಗತಕ್ಕ ಪಾರ್ಥಿವ ಸುಖಕ್ಕಿಂತಲೂ ಈ ಅಖಂಡ ಬ್ರಹ್ಮಾಂಡದಲ್ಲಿ ತೋರುವ ಜಗದೀಶ್ವರನ ಮಹಿಮೆಯನ್ನು ತಿಳಿದುಕೊಳ್ಳತಕ್ಕ ದೈವಿಕ ಸುಖವು ಎಷ್ಟು ಉತ್ತಮವಾದದ್ದೋ ಅದನ್ನೂ ಇವನ ಗಾನವು ಪ್ರಕಾಶ ಪಡಿಸುತ್ತಿದ್ದಿತು. ನಿಲುವಂಗಿಯನ್ನು ಹಾಕಿಕೊಂಡು, ಮಗೂ ಬಾ, ಎಂಬದಾಗಿ ಪಿತೃನಿರ್ವಿಶೇಷವಾದ ಪ್ರೀತಿಯಿಂದ ಕರೆದು, ನನ್ನನ್ನು ಕೂಡಿಸಿಕೊಂಡು, ಹಿತೋಪದೇಶಗಳನ್ನು ಮಾಡುತ್ತಲೂ; ದೇವತಾಖ್ಯಾನಗರ್ಭಿತಗಳಾದ ಶ್ಲೋಕಗಳನ್ನು ಹೇಳುತ್ತಲೂ, ಗಾನದ

ಳನ್ನು ಮಾಡುತ್ತಲೂ ಇದ್ದರೆ, ಅದರಿಂದ ನನಗೆ ಉಂಟಾಗುತ್ತಿದ್ದ ಸುಖವು ಅನಿರ್ವಚನೀಯವಾಗಿ ಪರಿಣಮಿಸಿತು. ನನ್ನ ತಂದೆಯಾದ ಯೂಲಿಸೆಸ್ಸನು ಈ ವೇಷದಲ್ಲಿ ಬಂದಿರುವನೋ ಅಥವಾ ಮೆಂಟರು ಈ ರೀತಿಯಲ್ಲಿ ಬಂದಿರುವನೋ ಅಥವಾ ಜಗದೀಶ್ವರನೇ ಹೀಗೆ ಬಂದಿರುವನೋ" ಎಂಬ ಸಂದೇಹವು ನನಗೆ ಉಂಟಾಯಿತು. ಇವನು ನನಗೆ ಹೇಳಿದ್ದೇನಂದರೆ :—

"ಧೈರ್ಯವು ಸರ್ವತ್ರ ಸಾಧಕವಾದದ್ದು. ಸತ್ಪುರುಷರನ್ನು ಜಗದೀಶ್ವರನು ಎಂದಿಗೂ ಬಿಡುವುದಿಲ್ಲ. ಸತ್ಪುರುಷರಿಗೆ ವಿಪತ್ತು ಬರುವುದುಂಟು. ಅವುಗಳು ಬರುವುದಕ್ಕೆ ಕಾರಣವೂ ಉಂಟು. ವಿಪತ್ತುಗಳ ಮಹಿಮೆಯನ್ನು ತಿಳಿಯದವರು ಸಂಪತ್ತನ್ನು ಅನುಭವಿಸುವುದಕ್ಕೆ ಅನರ್ಹರಾಗುವರು. ಕಷ್ಟ ಬಂದಾಗ ಧೈರ್ಯವನ್ನು ಅವಲಂಬಿಸಬೇಕು. ಪಾಮರರಂತೆ ಭಯಭ್ರಾಂತರಾಗುವುದು ತಪ್ಪು. ಪ್ರಪಂಚದ ಸೃಷ್ಟಿಸ್ಥಿತಿಪ್ರಳಯಗಳನ್ನು ಪರಿಶೀಲಿಸಿ ನೋಡು. ಒಂದು ಕಾಲದಲ್ಲಿ ಪ್ರಪಂಚವು ಬೆಳಕಿನಿಂದ ಪರಿಪೂರ್ಣವಾಗುತ್ತದೆ. ಮತ್ತೊಂದು ಕಾಲದಲ್ಲಿ ತಮಸ್ಸಿನಿಂದ ವ್ಯಾಪ್ತವಾಗುತ್ತದೆ. ಒಂದು ಕಾಲದಲ್ಲಿ ಶಾಂತಿಯು ಪರಿಪೂರ್ಣವಾಗಿರುತ್ತದೆ. ಒಂದು ಕಾಲದಲ್ಲಿ ಗಾಳಿ, ಮಳೆ, ಗುಡುಗು, ಸಿಡಿಲು ಮೊದಲಾದವುಗಳ ಆರ್ಭಟದಿಂದ ವ್ಯಾಪ್ತವಾಗುತ್ತದೆ. ಒಂದು ಕಡೆ ಶಾಂತಿಯು ಕೋಲಾಹಲವಾಗಿರುತ್ತದೆ. ಮತ್ತೊಂದು ಕಡೆ ಭೂಗರ್ಭದಿಂದ ಅಗ್ನಿಜ್ವಾಲೆಯು ಪ್ರಪಂಚವನ್ನೆಲ್ಲಾ ಸುಟ್ಟುಬಿಡುವಂತೆ ಹೊರಡುತ್ತದೆ. ಒಂದು ಕಡೆ ಸಮುದ್ರವು ಶಾಂತವಾಗಿರುತ್ತದೆ. ಮತ್ತೊಂದು ಕಡೆ ಸಮುದ್ರದ ಅಲೆಗಳು ಪರ್ವತಾಕಾರವಾಗಿ ಎದ್ದು, ಸಮುದ್ರದ ಮೇಲೆ ಪ್ರಯಾಣ ಮಾಡತಕ್ಕವರಿಗೆ ಭಯವನ್ನು ಉಂಟುಮಾಡುತ್ತವೆ. ಒಂದು ಕಡೆ ಸಾಗರವು ಸರೋವರದಂತೆ ಕಾಣುತ್ತದೆ. ಮತ್ತೊಂದು ಕಡೆ ಮೇಲ್‌ಸ್ಟ್ರಮ್ ಮೊದಲಾದ ಅನೇಕ ಮೈಲಿಗಳ ವ್ಯಾಸವುಳ್ಳ ಭಯಂಕರವಾದ ಸುಳಿಗಳಿಗೆ ಸಿಕ್ಕಿ ನಾಶವಾಗತಕ್ಕ ಮೃಗಗಳನ್ನೂ, ಹಡಗುಗಳನ್ನೂ ತೋರಿಸುತ್ತವೆ. ಎಲ್ಲಿ ನೋಡಿದಾಗ್ಯೂ, ಗೊತ್ತಿಲ್ಲದ ಹಾಗೆ ಕೀಟಗಳ ಮೊದಲ್ಗೊಂಡು ಆನೆಗಳವರೆಗೂ ಅನೇಕ ವಿಧವಾಗಿ ಪ್ರಾಣಿಗಳು ಉತ್ಪನ್ನವಾಗುತ್ತವೆ. ಎಲ್ಲಿ ನೋಡಿದಾಗ್ಯೂ, ಉತ್ಪನ್ನವಾದ ಪ್ರಾಣಿಗಳ ಸಮುದಾಯವು ಸ್ವರ್ಗಸುಖವನ್ನು ಅನುಭವಿಸುವಂತೆಯೂ, ನರಕ ಯಾತನೆಗಳನ್ನು ಅನುಭವಿಸುವಂತೆಯೂ ಕಾಣುತ್ತವೆ. ಪರಿಶೀಲಿಸಿ ನೋಡಿದರೆ, ಈ ಪ್ರಪಂಚವು ಸಕಲ ಭೋಗ್ಯವಸ್ತುಗಳಿಗೂ ಉತ್ಪತ್ತಿ ಸ್ಥಾನವಾಗಿಯೂ, ಪ್ರಳಯ ಸ್ಥಾನವಾಗಿಯೂ, ಅಥವಾ ಮಹಾರುದ್ರಭೂಮಿಯಾಗಿಯೂ ಇರುವಂತೆ ಕಾಣುತ್ತದೆ. ಈ ಪ್ರಪಂಚವನ್ನು ನೋಡಿದಾಗ, ಸರ್ವವೂ ಶಾಶ್ವತವಾದದ್ದೆಂದು ಭ್ರಮೆಯು ಉಂಟಾಗುವುದನ್ನು ಪರಿಶೀಲಿಸಿ

ನೋಡಿದರೆ, ಮಹದಾಶ್ಚರ್ಯವಾಗುವುದು. ಯಕ್ಷಪ್ರಶ್ನೆಯಲ್ಲಿ ಪ್ರಪಂಚದಲ್ಲಿ ಆಶ್ಚರ್ಯವಾದ್ದು ಏನು ಎಂದು ಪ್ರಶ್ನೆಯು ಹಾಕಲ್ಪಟ್ಟಾಗ, ಧರ್ಮರಾಯನು "ಅಹನ್ಯಹನಿ ಭೂತಾನಿ ಪ್ರವಿಶಂತಿ ಯಮಾಲಯಂ | ಶೇಷಾಃಸ್ಥಾವರ ಮಿಚ್ಛಂತಿ ಕಿಮಾಶ್ಚರ್ಯ ಮತಃಪರಂ ||" ಎಂಬದಾಗಿ ಹೇಳಿದನೆಂದು ತಿಳಿಯಬರುತ್ತದೆ. ಈ ಕ್ಷಣಭಂಗುರವಾದ ಮಾಯಾಮಯವಾದ ಪ್ರಪಂಚದಲ್ಲಿ ನಡೆಯುತಕ್ಕ ಸೃಷ್ಟಿಸ್ಥಿತಿಪ್ರಳಯರೂಪವಾದ ಕರ್ಮಗಳನ್ನು ನೋಡಿದರೆ, ಯಾರಿಗೆ ತಾನೆ ಆಶ್ಚರ್ಯವಾಗುವುದಿಲ್ಲ? ಎಲ್ಲರಿಗೂ ಅವರವರ ಮನೋವಾಕ್ಕರ್ಮಗಳಿಗನುರೂಪವಾದ ಫಲವು ಆಗುವುದು. ಅದನ್ನು ತಪ್ಪಿಸುವುದಕ್ಕೆ ಬ್ರಹ್ಮಾದಿಗಳಿಂದಲೂ ಸಾಧ್ಯವಲ್ಲ. "ನಾನು ಕೆಟ್ಟ ಕರ್ಮಗಳನ್ನು ಮಾಡಿ ಇಲ್ಲ. ನಾನು ಶುಭಕರ್ಮಗಳನ್ನೇ ಮಾಡಿ ಇದ್ದೇನೆ. ನನಗೆ ಏತಕ್ಕೆ ಈ ಕಷ್ಟಗಳು ಬಂದವು?" ಎಂದು ಅಲ್ಪಜ್ಞರಾದವರು ಎಂದುಕೊಳ್ಳುವರು. ನಾನು ಎಂದರೆ ಅರ್ಥವೇನು? ಬೀಜವೃಕ್ಷಗಳ ಸ್ವರೂಪವನ್ನು ಪರಿಶೀಲಿಸಿ ನೋಡು. ಬೀಜವು ವೃಕ್ಷಕ್ಕೆ ಕಾರಣ. ವೃಕ್ಷವು ಬೀಜಕ್ಕೆ ಕಾರಣ. ಈ ಬೀಜವೃಕ್ಷಗಳಿಗೆ ಮೊದಲು ಯಾವುದು? ಕೊನೆಯಾವುದು? ಅದರಂತೆಯೇ ಸಕಲ ಚರಾಚರ ವಸ್ತುಗಳಿಗೂ ಮಿತಿಯಿಲ್ಲದಷ್ಟು ಜನ್ಮಾಂತರಗಳು ಬರುವುದಿಲ್ಲವೇ? ಒಂದು ಜನ್ಮದಲ್ಲಿ ನಾನು ಎಂದುಕೊಂಡರೆ, ನಾನು ಎಂಬ ಶಬ್ದಕ್ಕೆ ಹಿಂದಿನ ಜನ್ಮವಿರುವುದಿಲ್ಲವೇ? ಪ್ರತಿ ಒಂದು ಜನ್ಮದಲ್ಲಿಯೂ ಅನೇಕ ಕರ್ಮಗಳು ಮಾಡಲ್ಪಡುವುದಿಲ್ಲವೇ? ಆ ಕರ್ಮಗಳಿಗೆ ಅನುರೂಪವಾದ ಫಲವು ಆ ಜನ್ಮದಲ್ಲಿ ಅನುಭವಿಸಲ್ಪಡುವುದೂ ಉಂಟು. ಹಾಗೆ ಅನುಭವಿಸಲ್ಪಡುವುದಕ್ಕೆ ಮುಂಚೆಯೇ ಪೂರೈಸಲ್ಪಟ್ಟರೆ, ಸಂಚಿತವಾದ ಕರ್ಮಫಲವು ಜನ್ಮಾಂತರದಲ್ಲಿ ಅನುಭವಿಸಲ್ಪಡಬೇಕಾಗುವುದು. ಫಲವೃಕ್ಷಗಳನ್ನೂ, ಧಾನ್ಯಗಳನ್ನೂ ಬಿತ್ತತಕ್ಕವರು ಒಳ್ಳೇ ಬೀಜಗಳನ್ನು ನೋಡಿ ಹಾಕುವರು. ಅವುಗಳಿಂದ ಒಳ್ಳೇ ವೃಕ್ಷಗಳೂ, ಒಳ್ಳೇ ಫಲಗಳೂ, ಒಳ್ಳೇ ಪೈರೂ, ಆಗುವವು. ವ್ಯವಸಾಯ, ಗೊಬ್ಬರ, ಮಳೆ ಮೊದಲಾದವುಗಳು ಒದಗಿದರೆ, ಸೊಸಿಯೂ, ವೃಕ್ಷಗಳೂ, ಫಲಗಳೂ ನಿರೀಕ್ಷಿಸಲ್ಪಡುವವು. ಕೆಟ್ಟುಹೋದ ಬೀಜಗಳನ್ನು ಹಾಕಿದರೆ, ಎಷ್ಟು ಸಾಗುವಳಿ ಮಾಡಲ್ಪಟ್ಟಾಗ್ಯೂ, ಎಂಥಾ ಗೊಬ್ಬರಗಳು ಹಾಕಲ್ಪಟ್ಟಾಗ್ಯೂ, ಬಿಸಿಲು, ಮಳೆ, ಗಾಳಿಗಳು ಎಷ್ಟು ಅನುಕೂಲವಾಗಿದ್ದಾಗ್ಯೂ ಪೈರು ಆಗುವುದೇ? ವೃಕ್ಷವು ಬೆಳೆಯುವುದೆ? ಫಲವಾಗುವುದೇ? ವಿಚಾರ ಮಾಡಿದರೆ, ಆಶ್ಚರ್ಯವಾಗಿ ತೋರತಕ್ಕ ಜಗದೀಶ್ವರನ ಲೀಲೆಗಳಲ್ಲಿ ಯಾವುದೂ ಆಶ್ಚರ್ಯವಾಗಿರುವುದಿಲ್ಲ. ಕರ್ಮಗಳಿಗನುಸಾರವಾಗಿ ಎಲ್ಲಾ ನಡೆಯುವುವೆಂದು ಗೊತ್ತಾಗುತ್ತದೆ. ಆದಾಗ್ಯೂ ಪಾಮರರಾದವರಿಗೆ ಎಲ್ಲಾ

ಆಶ್ಚರ್ಯಗಳಾಗಿಯೇ ತೋರುವುವು. ಈ ವಿಷಯಗಳನ್ನೆಲ್ಲಾ ಪರ್ಯಾಲೋಚಿಸದೆ, ನೀನು ಪ್ರವರ್ತಿಸಿದುದು ತಪ್ಪು. ಯುಕ್ತಾಯುಕ್ತವಿಹೀನರಾದ ಸಾಮಾನ್ಯ ಜನಗಳ ಮಕ್ಕಳು ಸುಖ ಬಂದಾಗ ಸಂತೋಷದಿಂದಿರುವರು. ಕಷ್ಟ ಬಂದಾಗ ಯುಕ್ತಾಯುಕ್ತ ಜ್ಞಾನವನ್ನು ಕಳೆದುಕೊಂಡು, ಉನ್ಮತ್ತರಾಗಿ ಸಾಯುವುದೂ ಕೂಡ ಉಂಟು. ದುಷ್ಟನಿಗ್ರಹ ಶಿಷ್ಟಪರಿಪಾಲನೆಗೋಸ್ಕರ ಜನ್ಮವನ್ನೆತ್ತಿ, ಅಧರ್ಮಿಷ್ಠರಾದ ಟ್ರೋಜನರನ್ನು ನಿಗ್ರಹಿಸಿ, ಲೋಕೈಕವೀರನೆಂಬದಾಗಿಯೂ, ವಿವೇಕನಿಧಿಯೆಂಬದಾಗಿಯೂ ಪ್ರಸಿದ್ಧನಾದ ಯೂಲಿಸೆಸ್ಸನ ಮಗನಾಗಿ, ಈ ಆತ್ಮಹತ್ಯೋದ್ಯೋಗದಲ್ಲಿ ನಿನಗೆ ಬುದ್ಧಿಯು ಬಂದದ್ದನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ. ಈ ಉದ್ಯೋಗದಿಂದ ನೀನು ಜಗದೀಶ್ವರನಲ್ಲಿ ತುಂಬಾ ಅವಮಾನವನ್ನು ಪಡೆದಿರುವೆ. ಅವನು ಧರ್ಮಿಷ್ಠರನ್ನು ರಕ್ಷಿಸುವುದರಲ್ಲಿ ಪರಾಙ್ಮುಖನೆಂದು ನೀನು ತಿಳಿದುಕೊಂಡದ್ದು ಶುದ್ಧ ತಪ್ಪು. ದೇವರಿಗೆ ನಿಮ್ಮ ತಂದೆಯಲ್ಲಿ ಎಷ್ಟು ಪ್ರೀತಿಯಿರುವುದೋ, ನಿನ್ನಲ್ಲೂ ಅಷ್ಟು ಪ್ರೀತಿಯಿರುವುದು. ಚಿನ್ನವು ಶುದ್ಧವಾಗಿರುವುದೋ ಇಲ್ಲವೋ ಎಂದು ಪರೀಕ್ಷಿಸಬೇಕಾದರೆ, ಅದನ್ನು ಕರಗಿಸುವರು. ಕಲ್ಮಷಗಳೇನಾದರೂ ಇದ್ದರೆ, ಹಾಗೆ ಕರಗಿಸುವುದರಿಂದ, ಅದು ವಿಸರ್ಜಿಸಲ್ಪಡಬಹುದು. ನಿಮ್ಮ ತಂದೆಯ ಪದವಿಗೆ ನಿನ್ನನ್ನು ಅರ್ಹನನ್ನಾಗಿ ಮಾಡುವುದಕ್ಕೋಸ್ಕರ ಈ ಕಷ್ಟದೆಸೆಗೆ ನೀನು ತರಲ್ಪಟ್ಟಿರುವೆ. ಧೈರ್ಯವನ್ನು ತಂದುಕೊ. ಯೂಲಿಸೆಸ್ಸನ ಮಗನೆಂಬುದಕ್ಕೆ ಅರ್ಹನಾಗು. ಕುರುಬನಾಗಿರುವುದು ಹೀನವೃತ್ತಿಯೆಂದು ನೀನು ಭಾವಿಸಿರುವುದು ತಪ್ಪು. ಕುರುಬರು ಮನುಷ್ಯರಲ್ಲವೇ? ಮನೋವಾಕ್ಕರ್ಮಗಳಲ್ಲಿ ಪರಿಶುದ್ಧನಾಗಿದ್ದುಕೊಂಡು ಇರತಕ್ಕವನು ಕುರುಬನಾದರೇನು? ಝಾಡಮಾಲಿಯಾದರೇನು? ಚಕ್ರವರ್ತಿಯಾದರೇನು? ಮನೋವಾಕ್ಕರ್ಮಗಳಲ್ಲಿ ಅಪರಿಶುದ್ಧನಾಗಿದ್ದುಕೊಂಡು, ಚಕ್ರವರ್ತಿ ಪದವಿಯಲ್ಲಿ ಇದ್ದಾಗ್ಯೂ, ಅವನಿಗಿಂತಲೂ ರುಜುಮಾರ್ಗಾವಲಂಬಿಯಾದ ಕುರುಬನೂ, ಝಾಡಮಾಲಿಯೂ ಮೇಲಲ್ಲವೇ? ಜನಗಳ ಯೋಗ್ಯತೆಯನ್ನು ಅವರ ಪಾಪಪುಣ್ಯಗಳಿಂದ ಅಳೆಯಬೇಕೇ ಹೊರತು, ಅವರ ಸಂಪತ್ತುಗಳಿಂದ ಅಳೆಯುವುದಕ್ಕೆ ಆಗುತ್ತದೆಯೇ? ಅಜ್ಞಾನಿಗಳಾದವರು ಒಂದು ವೇಳೆ ಹೀಗೆ ಅಳೆದಾಗ್ಯೂ, ಯಮಧರ್ಮರಾಯನು ಎಂದಿಗೂ ಹಾಗೆ ಅಳೆಯುವುದಿಲ್ಲ. ಪುಣ್ಯವಂತರಿಗೆ ಬರತಕ್ಕ ಫಲವನ್ನು ಜಗದೀಶ್ವರನು ಪಾಪಿಷ್ಠರಿಗೆ ಎಂದಿಗೂ ಲಭ್ಯವಾಗುವಂತೆ ಮಾಡುವುದಿಲ್ಲ. ಸಕಲರೂ ಅವರವರ ಕರ್ಮಕ್ಕನುಸಾರವಾದ ಶುಭಾಶುಭ ಫಲಗಳನ್ನು ಅನುಭವಿಸಿಯೇ ಅನುಭವಿಸುವರು. ಇದನ್ನು ತಿಳಿದುಕೊಳ್ಳದೆ, ಪಾಮರನಂತೆ ಕೆಡಬೇಡ. ಯಾವ ಕಾಲದಲ್ಲಿ ಯಾವ ಸ್ಥಿತಿಯು ಬರುವುದೋ ಅದನ್ನು ಆಗ

ಸಂತೋಷದಿಂದ ಅನುಭವಿಸುವುದನ್ನು ತಿಳಿದುಕೊ. ನಿನ್ನ ಕರ್ಮಗಳನ್ನು ತೃಪ್ತಿಯಿಂದ ಧರ್ಮಕ್ಕೆ ಅನುಸಾರವಾಗಿ ಮಾಡು. ರಾತ್ರಿಯನ್ನು ಅನುಸರಿಸಿ ಹಗಲು ಬರುವಂತೆ, ವಿಪತ್ತನ್ನು ಅನುಸರಿಸಿ ಸಂಪತ್ತು ಬಂದೇ ಬರುವುದು. ಇದು ಎಂದಿಗೂ ತಪ್ಪುವುದಿಲ್ಲ.''

ಈ ರೀತಿಯಲ್ಲಿ ಟೆಮ್ಮಾಸಿಲಿಸ್ಸನು ಹೇಳಿದ ಕೂಡಲೆ, ಅಂಧಕಾರ ರೂಪವಾದ ನನ್ನ ಮೌಢ್ಯವು ತೊಲಗಿತು. ಜಗದೀಶ್ವರನೇ ಇವನ ರೂಪದಿಂದ ನನ್ನ ಸಂತಾಪವನ್ನು ಹೋಗಲಾಡಿಸುವುದಕ್ಕೆ ಬಂದಿರಬೇಕೆಂದು ಗೊತ್ತಾಯಿತು. ಅಜ್ಞಾನದ ಮಹಿಮೆಯಿಂದ ನಾನು ಮಾಡಿದ ಆತ್ಮಹತ್ಯೋದ್ಯೋಗವು ತಪ್ಪೆಂದು ಗೊತ್ತಾಯಿತು. ಆಗ ಸಿಲಿಸ್ಸನನ್ನು ನೋಡಿ, '' ಎಲೈ ತಂದೆಯೇ ಮೋಹಪರವಶನಾಗಿ ಮಾಡಿದ ಅಪರಾಧಗಳನ್ನು ಕ್ಷಮಿಸು. ಮೆಂಟರನ ಸಹವಾಸದಲ್ಲಿ ಇರುವವರೆಗೂ ನಾನು ಮಾಡಿದ ತಪ್ಪುಗಳನ್ನು ಅವನು ಆಗಾಗ್ಯೆ ತಿದ್ದುತ್ತಿದ್ದನು. ದುರಾತ್ಮನಾದ ಮೆಟೋಫಿಸ್ಸನು ಅವನಿಗೂ, ನನಗೂ ವಿಯೋಗವಾಗುವಂತೆ ಮಾಡಿದನು. ಮಹಾತ್ಮರ ಸಾನ್ನಿಧ್ಯಸುಖವು, ಆ ಸಾನ್ನಿಧ್ಯವಿರುವವರೆಗೂ ತಿಳಿಯುವದಿಲ್ಲ. ಅದು ತಪ್ಪಿದ ಕೂಡಲೆ ವ್ಯಕ್ತವಾಗುವುದು. ಮೆಂಟರನ ಸಾನ್ನಿಧ್ಯ ಬಲದಿಂದ ಕ್ಯಾಂಡಿಯಾ ದ್ವೀಪದಲ್ಲಿ ಸರ್ವೋತ್ಕೃಷ್ಟನೆಂದು ನಾನು ಭಾವಿಸಲ್ಪಟ್ಟೆನು. ಆ ದ್ವೀಪದ ಪ್ರಭುತ್ವಕ್ಕೆ ನಾನು ಬರಬೇಕೆಂದು ಸರ್ವರೂ ಏಕಕಂಠ್ಯದಿಂದ ಪ್ರಾರ್ಥಿಸುವಂತಹ ಸ್ಥಿತಿಗೆ ಬಂದೆನು. ಮೆಂಟರನ ಆಶ್ರಯವು ತಪ್ಪಿದ ಮೇಲೆ, ಕುರುಬರಲ್ಲಿ ಅಧಮರಿಗಿಂತಲೂ ಕಡಮೆಯಾದ ಹೇಡಿತನವು ನನ್ನಲ್ಲಿ ಕಾಣಬಂದಿತು. ಇದು ಸ್ವಭಾವ. ಮಹಾತ್ಮರ ಸಹವಾಸದ ಮಹಿಮೆಯು ಇದರಿಂದ ಸ್ಪಷ್ಟವಾಗುತ್ತದೆ. ಜನಗಳ ಸಹವಾಸದಿಂದ ಅವರ ಯೋಗ್ಯತೆಯು ಗೊತ್ತಾಗುವುದು. ಅಜ್ಞಾನಿಗಳಾಗಿಯೂ, ಅಜಿತೇಂದ್ರಿಯರಾಗಿಯೂ, ಅರಿಷಡ್ವರ್ಗಗಳಿಗೆ ಅಧೀನರಾಗಿಯೂ, ಹೊನ್ನು, ಹೆಣ್ಣು, ಮಣ್ಣುಗಳಿಗೆ ಅಧೀನರಾಗಿಯೂ, ಋಜುಮಾರ್ಗಪ್ರವರ್ತನಕ್ಕೆ ಪರಾಙ್ಮುಖರಾಗಿಯೂ ಇರತಕ್ಕ ಜನಗಳ ಸಹವಾಸದಲ್ಲಿ ಯಾರಾದರೂ ಇದ್ದರೆ, ಇವರೂ ಅವರಂತೆಯೇ ಇರಬಹುದೆಂದು ಹೇಳಿದರೆ, ಅದು ಎಂದಿಗೂ ಅಸಂಭವವಾಗಲಾರದು. ನನ್ನ ಅವಸ್ಥೆಯು ಹೀಗೆ ಆಗುವುದಕ್ಕೆ ಸಹವಾಸ ಮಹಿಮೆಯೇ ಮುಖ್ಯಕಾರಣ. ಪ್ಯಾಟಿಸ್ಸನು ಇತರ ಕುರುಬರಿಗಿಂತಲೂ ನನ್ನನ್ನು ಕಡೆಯಾಗಿ ಕಂಡು, ದುಸ್ಸಹವಾದ ಕಷ್ಟಕ್ಕೆ ಗುರಿಮಾಡಿದನು. ಅದನ್ನು ಸಹಿಸಿಕೊಳ್ಳುವ ಶಕ್ತಿಯು ಇಲ್ಲದೆ, ಕೇವಲ ಪಾಮರನಂತೆ ನಾನು ನಡೆದುಕೊಂಡೆನು. ಬಂದ ಕಷ್ಟಗಳನ್ನು ಅನುಭವಿಸುತ್ತಾ, ಅವುಗಳ ನಿವಾರಣೋಪಾಯವನ್ನು ಮಾಡುತ್ತಾ ಇರುವುದು ಕರ್ತವ್ಯವೆಂದು ನೀನು ಮಾಡಿದ ಹಿತೋಪದೇ

ಶದಿಂದ ಗೊತ್ತಾಯಿತು. ಈ ಹಿತೋಪದೇಶಕ್ಕೆ ನಾನು ಎಷ್ಟು ಕೃತಜ್ಞನಾಗಿದ್ದರೂ ಕೂಡ ಕಡಮೆಯಾಗಿರುವುದು. ನನ್ನ ಭಾಗಕ್ಕೆ ನೀನು ಯೂಲಿಸೆಸ್ಸೋ, ಮೆಂಟರೋ, ಅಥವಾ ದೇವರೇ ಆಗಿರುವೆಯೋ ಗೊತ್ತಿಲ್ಲ. ಈ ತ್ರಿಮೂರ್ತಿಗಳ ಸ್ವರೂಪವಾಗಿಯೂ ನೀನೇ ಇರಬಹುದು. ಅದು ಹೇಗಾದರೂ ಇರಲಿ. ನಿನ್ನ ಹಿತೋಪದೇಶದಿಂದ ನನ್ನ ಮೌಢ್ಯವು ತೊಲಗಿತು. ನಿತ್ಯಾನಿತ್ಯ ವಸ್ತುವಿವೇಕವು ಉಂಟಾಯಿತು. ನಮ್ಮ ಮನೋವಾಕ್ಕರ್ಮಗಳಿಗೆ ಅನುಸಾರವಾಗಿ ಶುಭಾಶುಭಗಳು ಉಂಟಾಗುವುವೆಂದು ಗೊತ್ತಾಯಿತು. ಇಂದ್ರಿಯಪರವಶನಾಗಿ, ಅರಿಷಡ್ವರ್ಗಗಳಿಗೆ ಅಧೀನನಾಗಿ, ದುರ್ವಿಷಯಗಳಲ್ಲಿ ಮನಸ್ಸನ್ನು ಬಿಡುವುದರಿಂದ ಉಂಟಾಗತಕ್ಕ ಅನರ್ಥಗಳೆಲ್ಲಾ ಗೊತ್ತಾದವು. ಸತ್ಕರ್ಮಗಳನ್ನು ಮಾಡದೆ, ಅಂಥಾ ಕರ್ಮಫಲಗಳನ್ನು ಮಾತ್ರ ಅಪೇಕ್ಷಿಸುವುದು ತಪ್ಪೆಂದು ಗೊತ್ತಾಯಿತು. ಮಹೇಂದ್ರಪದವಿಯಲ್ಲಿದ್ದಾಗ್ಯೂ, ಯಾರು ಆ ಪದವಿಗೆ ಅನುರೂಪವಾದ ಕರ್ಮಗಳನ್ನು ಮಾಡದೆ ಪತಿತರಾಗುವರೋ ಅವರಿಗಿಂತಲೂ ಕುರುಬರೂ, ಝಾಡಮಾಲಿಗಳೂ ಕೂಡ ಉತ್ತಮರೆಂಬುದೂ ಗೊತ್ತಾಯಿತು. ಸಮಲೋಷ್ಟಾಶ್ಮಕಾಂಚನರೆಂಬ ಬಿರುದನ್ನು ಹೊಂದಿರತಕ್ಕ ವೈರಾಗ್ಯ ಚಕ್ರವರ್ತಿಗಳು ರಾಗಚಕ್ರವರ್ತಿಗಳಿಗಿಂತಲೂ ಉತ್ತಮರೆಂದು ಗೊತ್ತಾಯಿತು. ಕ್ಷಣಭಂಗುರವಾದ ಐಹಿಕ ಸಂಪತ್ತುಗಳಿಂದ ನನ್ನ ಮನಸ್ಸು ಹಿಂತಿರುಗಿತು. ಮಹಾತ್ಮರಾದ ನಿನ್ನಂಥಾವರ ಸೇವೆಯಲ್ಲಿ ಪರಾಯಣನಾಗಿ, ಜಗದೀಶ್ವರನ ವ್ಯಾಪಾರಗಳನ್ನೂ, ಲೀಲೆಗಳನ್ನೂ, ಜ್ಞಾನದೃಷ್ಟಿಯಿಂದ ನೋಡಿ ತಿಳಿದುಕೊಂಡು, ಅವನ ಪ್ರಸನ್ನತೆಗೆ ಅರ್ಹನಾಗಬೇಕೆಂಬುದೇ ಈಗ ನನ್ನ ಮನೋರಥವಾಗಿ ಪರಿಣಮಿಸಿರುವುದು. ಇಂಥಾ ಮನೋಭಾವವನ್ನು ಹುಟ್ಟಿಸುವುದಕ್ಕೆ ನಿನ್ನ ಹಿತೋಪದೇಶವೇ, ಮುಖ್ಯಕಾರಣ. ನಿನ್ನ ಹಿತೋಪದೇಶವೂ, ನಿನ್ನ ಸಂಭಾಷಣವನ್ನು ಕೇಳುವ ಸುಖವೂ, ನಿನ್ನ ಸಹವಾಸವೂ ಯಾವಜ್ಜೀವವೂ ಲಭಿಸುವಂತೆ ಜಗದೀಶ್ವರನು ನನಗೆ ಅನುಗ್ರಹಿಸಲೆಂದು ನಾನು ಪ್ರಾರ್ಥಿಸುತ್ತೇನೆ. ಇದೇ ನನ್ನ ಪರಮ ಮನೋರಥ.'' ಎಂದು ನಾನು ಹೇಳಿದೆನು. ಅದಕ್ಕೆ ಟರ್ಮಾಸಿಲಿಸ್ಸನು ಅಪ್ಪಣೆ ಕೊಡಿಸಿದ್ದೇನಂದರೆ:—

“ಎಲೈ ಟೆಲಿಮಾಕಸ್ಸನೆ, ಇದುವರೆಗೂ ಒಂದು ವಿಧವಾದ ಮನೋರೋಗವು ನಿನ್ನನ್ನು ಆವರಿಸಿತ್ತು. ಈಗ ಮತ್ತೊಂದು ವಿಧವಾದ ಜಾಡ್ಯವು ಆವರಿಸಿರುವುದು. ಸಕಲರಿಗೂ ಬಾಲ್ಯ, ಯೌವನ, ಕೌಮಾರ ವಾರ್ಧಕ್ಯ ಎಂಬ ಅವಸ್ಥೆಗಳು ಉಂಟು. ಈ ಅವಸ್ಥೆಗಳಿಗೆ ಅನುರೂಪವಾದ ಕರ್ಮಗಳೂ ಉಂಟು. ಪ್ರಭುವಾಗತಕ್ಕವನು ಬಾಲ್ಯದಲ್ಲಿ ಬ್ರಹ್ಮಚರ್ಯವನ್ನು ಅವಲಂಬಿಸಿ, ಜ್ಞಾನಪ್ರದವಾದ [illegible] ವೇದಶಾಸ್ತ್ರಪುರಾಣೇತಿಹಾಸಗಳ ಸಾರಾಂಶಗಳನ್ನು ಪರಿಗ್ರಹಿಸಬೇಕು.

ಅನಂತರ ದೇಶಾಟನದಿಂದಲೂ, ಪಂಡಿತ ಭಾಷಣದಿಂದಲೂ, ಸತ್ಕರ್ಮಗಳಿಂದಲೂ ದುಷ್ಟನಿಗ್ರಹ ಶಿಷ್ಟಪರಿಪಾಲನೆಗೆ ಬೇಕಾದ ಯೋಗ್ಯತೆಯನ್ನು ಸಂಪಾದಿಸಿಕೊಳ್ಳಬೇಕು. ತರುವಾಯ, ಗೃಹಸ್ಥ ಧರ್ಮವನ್ನು ಅವಲಂಬಿಸಿ, ಸತ್ಪ್ರಜೋತ್ಪತ್ತಿಗೆ ಕಾರಣಭೂತನಾಗಿ, ಧರ್ಮದಿಂದ ರಾಜ್ಯಭಾರವನ್ನು ಮಾಡುವುದಕ್ಕೆ ತಕ್ಕ ಅರ್ಹತೆಯನ್ನು ಹೊಂದುವವರಿಗೂ ಸುಶಿಕ್ಷೆಗೆ ಪಾತ್ರರಾದವನ್ನು ಹೊಂದಿ, ತನಗೆ ಸರಿಯಾದ ಸಹವಾಸವನ್ನು ಕಲ್ಪಿಸಿಕೊಂಡು, ತನ್ನನ್ನು ಹೇಗೋ ಹಾಗೆ ಎಲ್ಲಾ ಪ್ರಜೆಗಳನ್ನೂ ಕಾಣುತ್ತಾ, ವಿದ್ಯಾವಂತರಾಗಿಯೂ, ರಾಜತಂತ್ರಜ್ಞರಾಗಿಯೂ, ಪ್ರಜಾಸೇವೆಯಲ್ಲಿ ಧುರೀಣರಾಗಿಯೂ, ಋಜುಮಾರ್ಗಾವಲಂಬಿಗಳಾಗಿಯೂ, ಕುಟಿಲ ಮಾರ್ಗಗಳಲ್ಲಿ ಪರಾಙ್ಮುಖರಾಗಿಯೂ ಇರತಕ್ಕ ಸಚಿವರನ್ನು ಯುವರಾಜರಿಗೆ ಸಂಪಾದಿಸಿಕೊಟ್ಟು, ರಾಜ್ಯಭಾರವನ್ನು ಅವರಿಗೆ ವಹಿಸಿ, ತಪೋವನವನ್ನು ಪ್ರವೇಶಿಸಿ, ಆಗ ಜಗದೀಶ್ವರನ ಸೃಷ್ಟಿಸ್ಥಿತಿಪ್ರಳಯ ಕರ್ಮಗಳನ್ನು ಶ್ರವಣಮನನನಿಧಿಧ್ಯಾಸನಗಳಿಂದ ಅನುಭವಿಸುವುದು ಕರ್ತವ್ಯವಾದದ್ದು. ಇನ್ನೂ ಹುಡಗನಾಗಿದ್ದುಕೊಂಡು, ಮಾಡಬೇಕಾದ ಕರ್ಮರಾಶಿಯು ಪರ್ವತಾಕಾರವಾಗಿರುವಾಗ, ವೈರಾಗ್ಯವನ್ನು ಅವಲಂಬಿಸಬೇಕೆಂದು ನೀನು ಮಾಡಿರುವ ಸಂಕಲ್ಪವು ನಿನ್ನ ಕೃತಕೃತ್ಯತೆಗೆ ಬಹಳ ಬಾಧಕವನ್ನುಂಟುಮಾಡುವುದು. ಕ್ರಮವನ್ನು ಅರಿತು, ಸಕಲ ಕರ್ಮವನ್ನೂ ಮಾಡಬೇಕು. ಹಾಗಿಲ್ಲದಿದ್ದರೆ, ಅಧೋಗತಿಯುಂಟಾಗುವುದು. ಪಾಪಕರ್ಮಗಳನ್ನು ಮಾಡುವುದರಿಂದ ಹೇಗೆ ನರಕಾದಿಗಳು ಸಂಭವಿಸುವುವೋ ಹಾಗೆಯೇ ಮಾಡಬೇಕಾದ ಕರ್ಮಗಳನ್ನು ಬಿಡುವುದರಿಂದಲೂ ಭಯಂಕರವಾದ ಪಾತಿತ್ಯವು ಬರುವುದು. ಆದುದರಿಂದ ನೀನು ಈಗ ಮಾಡಿರತಕ್ಕ ಸಂಕಲ್ಪವು ಸಾಧುವಾದುದಲ್ಲ. ಈ ವಿಷಯವನ್ನು ಪರ್ಯಾಲೋಚಿಸಿ, ಹೇಗೆ ಧನ್ಯತೆಯು ಉಂಟಾಗುವುದೋ ಹಾಗೆ ನೀನು ನಡೆದುಕೊಳ್ಳಬೇಕು.

ಈ ರೀತಿಯಲ್ಲಿ ಟವರ್ಮಾಸಿಲಿಸ್ಸನು ನನಗೆ ಧೈರ್ಯವನ್ನು ಹೇಳಿದನು. ಈ ಧೈರ್ಯವನ್ನು ಹೇಳುವುದರಲ್ಲಿ ದುರ್ಮಾರ್ಗಪ್ರವರ್ತಕರು ಮಾಡತಕ್ಕ ದುಷ್ಕರ್ಮಗಳೇ ಅವರನ್ನು ಮೂಲೋತ್ಪಾಟನ ಮಾಡುವುದಕ್ಕೆ ಬ್ರಹ್ಮಾಸ್ತ್ರಗಳಾಗಿ ಪರಿಣಮಿಸುವುವೆಂದು ಹೇಳಿ, ಅದಕ್ಕೆ ದೃಷ್ಟಾಂತವಾಗಿ ಸೈಕ್ಲಾಪ್ಸ್ ಜನಗಳು ತಮಗೆ ತಾವೇ ಮೃತ್ಯುಗಳಾಗುವಂತೆ ಅಪಾಲೋ ಎಂಬ ದೇವರು ಹೇಗೆ ಮಾಡಿದನೋ, ಎಟ್ನಾ ಎಂಬ ಅಗ್ನಿಪರ್ವತವು ಜ್ವಾಲೆಯನ್ನು ಕಕ್ಕುತ್ತಾ, ಕರಗಿದ ಪಾರ್ಥಿವ ಪ್ರವಾಹದಿಂದ ದುರ್ಮಾರ್ಗಪ್ರವರ್ತಕರನ್ನು ನಾಮಾವಶೇಷರನ್ನಾಗಿ ಮಾಡುವುದಕ್ಕೆ ಹೇಗೆ ಸಾಧಕವಾಯಿತೋ ಅದನ್ನೂ, ದೇವತೆಗಳು ದುಷ್ಟನಿಗ್ರಹ ಶಿಷ್ಟಪರಿಪಾಲನೆಗೋಸ್ಕರ ಕುರುಬರ ಅವತಾರವನ್ನು ಮಾತ್ರವೇ ಅಲ್ಲದೆ, ತಿರ್ಯಗ್ಜಂತುಗಳ

ರೂಪದಲ್ಲಿಯೂ ಅವತರಿಸಿ, ಹೇಗೆ ಲೋಕವನ್ನು ಉದ್ಧರಿಸಿರುವರೋ ಅದನ್ನೂ ತಿಳಿಸಿದನು. ಅಪಾಲೋ ಎಂಬ ದೇವರು ಕುರುಬನ ಅವತಾರವನ್ನು ಧರಿಸಿ, ಕುರಿಗಳನ್ನು ಮೇಯಿಸುವುದಕ್ಕೆ ಬಂದಾಗ, ಕುರುಬರು ಮಾತ್ರವೇ ಅಲ್ಲದೆ, ತಿರ್ಯಗ್ಜಂತುಗಳೆಲ್ಲಾ ಈತನ ಸೇವೆಯನ್ನು ಮಾಡುವುದರಲ್ಲಿ ಹೇಗೆ ಬದ್ಧಾದರಗಳಾದವೋ, "ಯಾಂತಿನ್ಯಾಯಪ್ರವರ್ತಸ್ಯ ತಿರ್ಯಂಚೋಪಿ ಸಹಾಯತಾಂ" ಎಂಬ ಶ್ರೀ ರಾಮರ ವಿಷಯವಾಗಿ ಹೇಳಲ್ಪಟ್ಟ ವಾಕ್ಯ, ಈ ಕುರುಬನ ಸಂಬಂಧದಲ್ಲಿ ಹೇಗೆ ಅನ್ವರ್ಥವಾಯಿತೋ, ಕುರುಬರೂ, ಕುರುಬಗಿತ್ತಿಯರೂ ಈತನ ಸೇವೆಯಲ್ಲಿ ನಿರತರಾಗಿ, ಅರಣ್ಯವೂ ಕೂಡ ಹೇಗೆ ಚಕ್ರಾಧಿಪತ್ಯವಾಗಿ ಪರಿಣಮಿಸಿತೋ, ಅರಣ್ಯಲಕ್ಷ್ಮಿಯು ಈತನ ಸೇವೆಯಲ್ಲಿ ಹೇಗೆ ಅಕೃತ್ರಿಮವಾದ ಪ್ರೀತಿಯುಳ್ಳವಳಾದಳೋ, ಅರಣ್ಯನಿವಾಸಿಗಳೆಲ್ಲಾ ನಿಸರ್ಗವಾದ ಭಕ್ತಿಯುಳ್ಳ ಪ್ರಜೆಗಳಾಗಿ ಹೇಗೆ ಪರಿಣಮಿಸಿದರೋ ಇವುಗಳನ್ನೆಲ್ಲಾ ನನಗೆ ಹೇಳಿ, ಮನುಷ್ಯನಿಗೆ ಸೌಜನ್ಯವೂ, ಭೂತದಯೆಯೂ, ಪರೋಪಕಾರ ಬುದ್ಧಿಯೂ, ಆತ್ಮಯಜ್ಞವೂ, ಯಶಸ್ಸಿಗೆ ಕಾರಣವೆಂಬದಾಗಿಯೂ, ಈ ಗುಣಾತಿಶಯಗಳಿಲ್ಲದವರು ಚಕ್ರವರ್ತಿಗಳಾಗಿದ್ದಾಗ್ಯೂ, ಪ್ರಜೆಗಳ ಅಕೃತ್ರಿಮವಾದ ಪ್ರೀತಿಗೆ ಪಾತ್ರರಾಗುವುದಿಲ್ಲವೆಂಬದಾಗಿಯೂ, ಪ್ರಜೆಗಳ ಪ್ರೀತಿಗೆ ಪಾತ್ರರಾಗದೆ, ಭಯದಿಂದಲೂ, ದರ್ಪದಿಂದಲೂ ರಾಜ್ಯಭಾರ ಮಾಡಿ, ಕಾಲದೇಶವರ್ತಮಾನಗಳಲ್ಲಿ ವೈಷಮ್ಯಗಳು ಬಂದಾಗ, ತಮ್ಮ ಪದವಿಯನ್ನು ಕಳೆದುಕೊಂಡು, ಬಹಳ ಹೀನಸ್ಥಿತಿಗೆ ಬರುವರೆಂಬದಾಗಿಯೂ, ಅನೇಕ ಸಂದರ್ಭಗಳಲ್ಲಿ ಇವರು ನಾಮಾವಶೇಷರಾಗುವುದೂ ಉಂಟೆಂಬದಾಗಿಯೂ ಹೇಳಿದನು.

ನಾನು ಬಂದಾಸೊಂದು ದಿನ ಕುರುಬರಿಂದಲೂ, ಕುರಿಗಳಿಂದಲೂ ಸುತ್ತುವರಿಯಲ್ಪಟ್ಟು, ಕುರಿಗಳನ್ನು ಕಾಯುತ್ತಿದ್ದಾಗ, ಒಂದು ಸಿಹ್ಮವು ಕುರಿಯ ಮಂದೆಗೆ ನುಗ್ಗಿ, ಅವುಗಳಲ್ಲಿ ಕೆಲವನ್ನು ಕೊಂದು, ರಕ್ತಪಾನ ಮಾಡಿ, ಪ್ರಯತ್ನ ಮಾಡಿತು. ನಾನು ನಿರಾಯುಧನಾಗಿದ್ದಾಗ್ಯೂ, ಕುರಿಗಳನ್ನು ರಕ್ಷಿಸುವುದಕ್ಕೆ ಆ ಸಿಂಹದ ಕಡೆಗೆ ನುಗ್ಗಿದನು. ನನ್ನನ್ನು ನೋಡಿದ ಕೂಡಲೆ, ಅದು ಹಲ್ಲುಗಳನ್ನು ಕಡಿಯುತ್ತಾ, ಮುಂಗಾಲುಗಳನ್ನು ಎತ್ತಿ, ನನ್ನ ಮೇಲೆ ಬೀಳುವುದಕ್ಕೆ ಸನ್ನಾಹ ಮಾಡಿತು. ಇದರ ಕಣ್ಣುಗಳು ಬೆಳಗುವ ಬೆಂಕಿಯಂತಿದ್ದವು. ನನ್ನ ಮೇಲೆ ಬೀಳಬೇಕೆಂದು ಅದು ಸನ್ನಾಹ ಮಾಡಿಕೊಳ್ಳುವುದಕ್ಕೆ ಮುಂಚೆಯೇ, ನಾನು ಅದರ ಮೇಲೆ ಬಿದ್ದು, ಕೆಳಕ್ಕೆ ಕೆಡವಿ, ಮುಷ್ಟಿಯಿಂದ ಅದನ್ನು ಹೊಡೆದೆನು. ಅದು ಚೇತರಿಸಿಕೊಂಡು, ನನ್ನ ಮೇಲೆ ಬಿದ್ದಿತು. ನಾನು ಪುನಃಪುನಃ ಅದನ್ನು ಕೆಡವಿ ಕೊನೆಗೆ ಅದರ ಕತ್ತನ್ನು ಕಿವುಚಿ, ಅದನ್ನು ಕೊಂದುಹಾಕಿದೆನು. ಈ ವರ್ತಮಾನವು ಮೊದಲು ಕುರುಬರಲ್ಲಿ ಪ್ರಚಾರಕ್ಕೆ ಬಂದಿತು. ತರುವಾಯ

ಸಸಾಟ್ರಿಸ್ಸನಿಗೂ ತಿಳಿಯಿತು. ಫಿನೀಷಿಯರ್‌ರೆಂಬದಾಗಿ ದಸ್ತಗಿರಿಮಾಡಲ್ಪಟ್ಟು, ಗುಲಾಮರಂತೆ ಮಾರಲ್ಪಟ್ಟವರಲ್ಲಿ ನಾನೊಬ್ಬನೆಂದು ಅವನಿಗೆ ಗೊತ್ತಾಯಿತು. ಸಿಂಹವು ಅತ್ಯಂತ ಭಯಂಕರವಾದುದೆಂಬದಾಗಿಯೂ, ನಾನು ಮಾಡಿದ ಸಾಹಸವು ಅಮಾನುಷಕೃತ್ಯವೆಂಬದಾಗಿಯೂ, ಮನುಷ್ಯ ಮಾತ್ರಕ್ಕೆ ಇಂಥಾ ಸಾಹಸವು ಅಸಂಭವವೆಂಬದಾಗಿಯೂ, ದೈವಾನುಗ್ರಹವೋ ಅಥವಾ ದೇವಾಂಶವೋ ನನ್ನಲ್ಲಿ ಇರಬೇಕೆಂಬದಾಗಿಯೂ, ಕುರುಬರಿಗೆ ಹೇಗೋ ಹಾಗೆ ಸಸಾಟ್ರಿಸ್ಸನಿಗೂ ತೋರಿತು. ನನ್ನನ್ನು ಕರೆದುಕೊಂಡು ಬರಬೇಕೆಂದು ಆತನು ಆಜ್ಞೆಮಾಡಿದನು. ಅವನ ಬಳಿಗೆ ಹೋದ ಕೂಡಲೆ ಅವನು ನನ್ನ ವಿದ್ಯಮಾನಗಳನ್ನೆಲ್ಲಾ ಕೇಳಿದನು. ಅಷ್ಟರಲ್ಲಿಯೇ ನನ್ನಲ್ಲಿ ಅನುರಕ್ತರಾದ ಕುರುಬರು ಅನೇಕರು ಸಸಾಟ್ರಿಸ್ಸನ ಬಳಿಗೆ ಬಂದರು. ಆತನು ಅವರನ್ನು ಪ್ರತ್ಯೇಕವಾಗಿ ಕರಸಿಕೊಂಡು, ನಾನು ಕುರುಬನಾಗಿ ಕಳುಹಿಸಲ್ಪಟ್ಟ ಮೊದಲುಗೊಂಡು, ಆ ದಿನದವರೆಗೂ ಹೇಗೆ ಕಾಲಹರಣ ಮಾಡುತ್ತಿದ್ದೆನೋ ಅದನ್ನು ವಿಚಾರಿಸಿದರು. ಸಸಾಟ್ರಿಸ್ಸನು ಅವರಿಗೆ ಅನೇಕ ಪ್ರಶ್ನೆಗಳನ್ನು ಹಾಕಿದನು. ಅವರಲ್ಲಿ ಮುಖಂಡನಾದವನು ಆ ಪ್ರಶ್ನೆಗಳಿಗೆಲ್ಲಾ ಉತ್ತರವನ್ನು ಕೊಟ್ಟನು. ಈ ಉತ್ತರಗಳೆಲ್ಲಾ ಪೂರೈಸಿದ ಕೂಡಲೆ, ಆ ಕುರುಬನು ಸಂಕ್ಷೇಪವಾಗಿ ಕುರುಬರ ಮನೋಭಾವವನ್ನು ಸಸಾಟ್ರಿಸ್ಸಿಗೆ ತಿಳಿಸಿದನು. ಅವನು ಹೇಳಿದ್ದೇನಂದರೆ.—

"ಎಲೈ ಮಹಾಪ್ರಭುವೇ,—ನಾವು ಮಾಡಿದ ಪುಣ್ಯವಿಶೇಷದಿಂದ ಈ ಟೆಲಿಮಾಕಸ್ಸನ ಸಹವಾಸವು ನಮಗೆ ದೊರೆಯಿತು. ಈತನು ನಮ್ಮ ಅರಣ್ಯವನ್ನು ಪ್ರವೇಶಿಸಿದ ಕೂಡಲೆ, ನಮ್ಮ ಅರಣ್ಯಕ್ಕೆ ಅನಿರ್ವಚನೀಯವಾದ ಕಳೆಯೊಂದು ಬಂದಿತು. ಗಾನವಿಶಾರದರಲ್ಲಿ ಇವನು ಶಿರೋಮಣಿಯಂತಿರುವನು. ಇವನ ಶಾರೀರವು ಅಮಾನುಷವಾಗಿರುವುದು. ಇವನು ಗಾನಮಾಡುವುದಕ್ಕೆ ಉಪಕ್ರಮಿಸಿದರೆ, ಕುರಿಗಳು ಮಾತ್ರವೇ ಅಲ್ಲದೆ, ಸಕಲ ತಿರ್ಯಗ್ಜಂತುಗಳೂ ಕೂಡ ಇವನ ಗಾನಸುಖದಿಂದ ದೇಹವನ್ನು ಮರೆಯುವುವು. ನಮ್ಮ ಹೆಂಡತಿ, ಮಕ್ಕಳು ಮೊದಲಾದವರು ಈತನ ಗಾನಾಮೃತವನ್ನು ಕಿವಿಯಿಂದ ಪಾನಮಾಡಿ, ಸೊಕ್ಕಿ, ಆನಂದಪರವಶರಾಗುವರು. ನಮ್ಮ ಮಕ್ಕಳೆಲ್ಲರೂ ಈತನ ಗಾನವನ್ನು ಕೇಳಿ, ತಾವೂ ಅವನಂತೆ ಹಾಡುವುದಕ್ಕೆ ಉಪಕ್ರಮಿಸಿರುವರು. ಇವನ ಗಾನವು ಸ್ಥಾವರಾತ್ಮಕವಾದ ಸಕಲ ಸಸ್ಯಗಳಿಗೂ ಪ್ರಾಣಕಳೆಯನ್ನು ಕೊಡುವಂತೆ ತೋರುತ್ತದೆ. ಇವನು ಬಂದ ಮೇಲೆ ಮನುಷ್ಯನು ಮಾಡತಕ್ಕ ದ್ರೋಹಗಳಿಂದ ಗಿಡಗಳು ಬೆಳೆದಿರುವುದು ಮಾತ್ರವೇ ಅಲ್ಲದೆ, ಕಾಡು ಗಿಡಗಳೂ ಕೂಡ ಅಭೂತಪೂರ್ವವಾದ ಕಳೆಯನ್ನು ಹೊರಡುತ್ತಲಿವೆ. ವಿಶೇಷವಾಗಿ ಫಲಪುಷ್ಪಗಳನ್ನು ಬಿಡುತ್ತ

ಲಿವೆ. ಮಳೆ, ಗಾಳಿ, ಬಿಸಿಲು, ಚಂದ್ರಿಕೆ ಮೊದಲಾದವುಗಳು ಮಾತ್ರ ಪೂರ್ವದಂತೆಯೇ ಇರುವುವು. ಸ್ಥಾವರಾತ್ಮಕವಾದ ವನಲಕ್ಷ್ಮಿಯು ಕೇವಲ ಜಾಜ್ವಲ್ಯಮಾನಳಾಗಿರುವಳು. ಈ ವ್ಯತ್ಯಾಸವು ನಿಸರ್ಗವಾಗಿ ಬಂದಿತೋ ಅಥವಾ ಇವನ ಮಹಿಮೆಯಿಂದ ಉಂಟಾಯಿತೋ ನಾನು ಹೇಳಲಾರೆನು. ಇವನ ವಿಯೋಗದುಃಖವನ್ನು ನಮ್ಮ ಜನಗಳು ಕ್ಷಣಮಾತ್ರವೂ ಸಹಿಸಲಾರರು. ಇವನನ್ನು ವಾಪಸು ಕಳುಹಿಸು. ಈತನ ಮಹಿಮೆಯಿಂದ ನಮಗೆ ಯಾವ ಕಷ್ಟಗಳೂ ಕಷ್ಟಗಳಂತೆ ತೋರುವುದಿಲ್ಲ. ನಮ್ಮ ಜನಗಳಿಗೆ ನಾವು ಕಾಡುಕುರುಬರು ಎಂಬ ಭಾವನೆಯು ಹೋಯಿತು. ನಮ್ಮ ಕಾಡೇ ಸ್ವರ್ಗವೆಂಬದಾಗಿಯೂ, ನಾವೇ ಸ್ವರ್ಗನಿವಾಸಿಗಳೆಂಬದಾಗಿಯೂ ಭಾವನೆಯುಂಟಾಯಿತು. ಈತನು ನಮಗೆಲ್ಲಾ ತರುಮೂಲಗಳಲ್ಲಿ ಸಭೆಯನ್ನು ಮಾಡಿ, ಅನೇಕ ಪುಣ್ಯಕಥೆಗಳನ್ನು ಹೇಳಿ, ಆಬಾಲವೃದ್ಧರೂ ಕೂಡ ಧರ್ಮದಿಂದ ನಡೆದುಕೊಂಡರೆ, ಈ ಅರಣ್ಯವೇ ನಮ್ಮ ಭಾಗಕ್ಕೆ ಹೇಗೆ ನಂದನವನವಾಗಬಹುದೋ, ಉದ್ಯೋಗವು ಪುರುಷರಿಗೆ ಮಾತ್ರವೇ ಅಲ್ಲದೆ, ಸ್ತ್ರೀಯರಿಗೂ, ಮಕ್ಕಳಿಗೂ ಹೇಗೆ ಲಕ್ಷಣವಾದದ್ದೋ, ನಮ್ಮ ಕಾರ್ಯಕ್ಕೆ ಅನುಸಾರವಾದ ಫಲವು ಉಂಟಾಗುವಂತೆ ದೇವರು ಹೇಗೆ ಮಾಡುವನೋ, ಸಂಪದಭಿವೃದ್ಧಿಯ ಕೆಲಸಗಳನ್ನು ಮಾಡುವುದರಲ್ಲಿ ನಾವು ಹೇಗೆ ಭೇದಭಾವಗಳನ್ನು ಬಿಟ್ಟು, ಅಕೃತ್ರಿಮವಾದ ಪ್ರೀತಿಯುಳ್ಳವರಾಗಿ ಪರಸ್ಪರ ಕ್ಷೇಮಚಿಂತೆಯಿಂದ ಪ್ರೀತರಾದ ಮಿತ್ರರಂತೆ ಹೇಗೆ ನಡೆದುಕೊಳ್ಳಬೇಕೋ, ಅಂಥಾ ನಡತೆಯಿಂದ ಹೇಗೆ ಎಲ್ಲರೂ ಸುಖವಾಗಿರುವುದು ಸಾಧ್ಯವೋ, ಭೇದಭಾವದಿಂದ ಈ ಅರಣ್ಯವು ನರಕಪ್ರಾಯವಾಗುವುದೋ ಇವುಗಳೆಲ್ಲಾ ನಮ್ಮ ಮನಸ್ಸಿಗೆ ತೋರುವಂತೆ ಮಾಡಿ, ಸಕಲ ಭೇದಭಾವಗಳನ್ನೂ ಬಿಟ್ಟು, ಮೈತ್ರಿಯಿಂದ ಎಲ್ಲರೂ ಬದುಕುವಂತೆ ಮಾಡಿರುವನು. ಚಕ್ರವರ್ತಿಯಾಗಿರುವುದಕ್ಕೆ ಯೋಗ್ಯನಾದವನು ನಮಗೆ ಲಭ್ಯವಾಗಿರುವನು. ಇವನನ್ನು ನೀನು ಕರೆಸಿಕೊಂಡದ್ದರಿಂದ, ತಾಯಿಯಿಂದ ವಿಯೋಗವನ್ನು ಹೊಂದಿದ ಮಕ್ಕಳಂತೆ ಎಲ್ಲರೂ ಪರಿತಪಿಸುತ್ತಲಿದ್ದಾರೆ. ನಮ್ಮಲ್ಲಿ ಅನುಗ್ರಹವನ್ನು ಮಾಡಿ, ಈತನನ್ನು ವಾಪಸು ಕಳುಹಿಸು.'' ಎಂಬದಾಗಿ ಪ್ರಾರ್ಥಿಸಿದನು. ಅವನ ಜೊತೆಯಲ್ಲಿ ಬಂದಿದ್ದವರೆಲ್ಲಾ ಈ ಪ್ರಾರ್ಥನೆಯನ್ನು ಅನುಮೋದಿಸಿದರು.

ಇದನ್ನು ಕೇಳಿ ನಸಾಟ್ರಸ್ಸನು ಅಸಾಧಾರಣವಾದ ವಿಸ್ಮಯವುಳ್ಳವನಾದನು. ಇಂಥಾ ಕಾಡು ಜನಗಳ ಅಗಾಧವಾದ ಪ್ರೀತಿಗೆ ಪಾತ್ರನಾಗುವುದು ಯಾರಿಗೂ ಸಾಧ್ಯವಲ್ಲ. ಈ ಟೆಲಿಮಾಕಸ್ಸನಲ್ಲಿ ಪ್ರಜಾರಂಜನೈಕ ಪರಾಯಣತೆಯು ವಿಶೇಷವಾಗಿರಬೇಕು. ಇದೇನಾಶ್ಚರ್ಯವಲ್ಲ. ದುರಾತ್ಮರಾದ ಟ್ರಾಯ್‌ [illegible]

ವರನ್ನು ಮೂಲೋತ್ಪಾಟನ ಮಾಡುವುದು ಯಾರಿಗೆ ತಾನೇ ಸಾಧ್ಯವಾಗಿತ್ತು ? ದುಷ್ಟನಿಗ್ರಹವನ್ನು ಮಾಡಬೇಕೆಂದು ಸಂಕಲ್ಪ ಮಾಡಿ, ಅವರ ದೌರಾತ್ಮ್ಯವೇ ಅವರಿಗೆ ಕಾಲಕೂಟ ವಿಷವಾಗುವಂತೆ ಮಾಡಿದ ಮಹಾತ್ಮನ ಮಗನಿಗೆ ಈ ಗುಣಾತಿಶಯಗಳು ಇರುವುದೇನಾಶ್ಚರ್ಯ ! ನನ್ನ ಅದೃಷ್ಟಪರಿಪಾಕದಿಂದ ಇವನ ಸೇವೆಯನ್ನು ಮಾಡುವ ಸಂಭವವು ನನಗೂ ಲಭ್ಯವಾಯಿತು ’ ಎಂದು ಮನಸ್ಸಿನಲ್ಲಿ ಎಂದುಕೊಂಡು, ಆ ಕುರುಬನನ್ನು ಕುರಿತು ಸಸಾಟ್ರಿಸ್ಸನು ಹೇಳಿದ್ದೇನೆಂದರೆ :—

“ ಎಲೈ ಕುರುಬರೇ,—ನಿಮ್ಮ ಪುಣ್ಯವಿಶೇಷದಿಂದ ಇದುವರೆಗೂ ಈತನ ಸಹವಾಸವು ನಿಮಗೆ ದೊರೆಯಿತು. ಅವನ ಸಹವಾಸದಿಂದ ಎಷ್ಟುಮಟ್ಟಿಗೆ ಫಲವಾಗಬಹುದೋ ಅಷ್ಟಾಯಿತು. ನನಗಿಂತಲೂ ನೀವು ಪುಣ್ಯಶಾಲಿಗಳು. ನಿಮಗೆ ಉಂಟಾದಷ್ಟು ಇವನ ಸಹವಾಸ ಲಾಭವು ನನಗೆ ಉಂಟಾಗುವುದಿಲ್ಲ. ಈತನು ಕುರುಬನಲ್ಲ. ಶಕ್ತಿಯಲ್ಲಿ ಭೀಮಸೇನಗೂ, ಬುದ್ಧಿಯಲ್ಲಿ ಬೃಹಸ್ಪತಿಗೂ, ಗುಣಾತಿಶಯಗಳಲ್ಲಿ ದೇವರಿಗೂ ಸಮಾನನಾದ ಯೂಲಿಸೆಸ್ಸೆಂಬ ಮಹಾತ್ಮನ ಚರಿತ್ರೆಯನ್ನು ನೀವು ಕೇಳಿರಬಹುದು. ಟ್ರಾಯ್ ದೇಶದ ಪ್ರಭುಗಳು ತಮಗೆ ಸಮಾನರಿಲ್ಲವೆಂದು ತಿಳಿದುಕೊಂಡು, ಅಧಿಕಾರ ಮದದಿಂದಲೂ, ಐಶ್ವರ್ಯ ಮದದಿಂದಲೂ ಯುಕ್ತಾಯುಕ್ತ ವಿಹೀನತೆಯನ್ನು ಹೊಂದಿ, ವಿಷಯಾಸಕ್ತರಾಗಿ, ಗ್ರೀಸ್ ದೇಶದ ಪ್ರಭುವಾದ ಮಿನಲಯಾಸ್ ಎಂಬುವನ ಧರ್ಮಪತ್ನಿಯಾದ ಹೆಲೆನ್ ಎಂಬುವಳನ್ನು ಈ ದೇಶದ ರಾಜಪುತ್ರನೊಬ್ಬನು ಹೇಗೆ ಅಪಹರಿಸಿಕೊಂಡು ಹೋದನೋ, ಅವನ ದೌರಾತ್ಮ್ಯಕ್ಕೆ ಶಿಕ್ಷೆಯನ್ನು ಮಾಡುವುದಕ್ಕೋಸ್ಕರ ಗ್ರೀಸ್ ದೇಶದ ಪ್ರಭುಗಳೆಲ್ಲರೂ ಒಗ್ಗಟ್ಟಾಗಿ, ಟ್ರಾಯ್ ದೇಶಕ್ಕೆ ಹೇಗ ಮುತ್ತಿಗೆ ಹಾಕಿದರೋ, ಇವರಿಗೆ ಯುದ್ಧವು ಅನೇಕ ವರ್ಷಗಳ ವರಗೂ ಹೇಗೆ ನಡೆಯಿತೋ, ಪರಿಣಾಮದಲ್ಲಿ ಯೂಲಿಸೆಸ್ಸನ ರಾಜಮಂತ್ರ ಪ್ರವೀಣತೆಯಿಂದಲೂ, ಯುದ್ಧವಿದ್ಯಾವಿಶಾರದತ್ವದಿಂದಲೂ ದುರ್ಮಾರ್ಗಪ್ರವರ್ತಕನಾದ ಪ್ಯಾರಿಸ್ ಎಂಬುವನು ತನ್ನ ಪುತ್ರಮಿತ್ರಕಳತ್ರಾದಿಗಳೊಡನೆಯೂ, ತನ್ನ ಬಾಂಧವರೊಡನೆಯೂ ಹೇಗೆ ಮೂಲೋತ್ಪಟನ ಮಾಡಲ್ಪಟ್ಟನೋ, ಅದನ್ನೆಲ್ಲಾ ನೀವು ಕೇಳಿರಬಹುದು. ಇಂಥಾ ಲೋಕೈಕವೀರನಾದ ಯೂಲಿಸೆಸ್ ಎಂಬುವನೇ ಈತನ ತಂದೆ. ಇವನು ಇಥಾಕಾ ಸಂಸ್ಥಾನದ ಪ್ರಭು. ಅವನು ದೇಶಾಟನವನ್ನು ಮಾಡುವುದಕ್ಕೆ ಹೊರಟಿರುವನು. ಅವನನ್ನು ಹುಡುಕಿಕೊಂಡು, ಈತನು ನಮ್ಮ ದೇಶಕ್ಕೆ ಬಂದಿರುವನು. ದುರಾತ್ಮನಾದ ಮೆಟೋಫಿಸ್ಸನು ಇವನು ಫಿನೀಷಿಯನ್ ಎಂದು ನನಗೆ ನಂಬಿಕೆಯನ್ನುಂಟುಮಾಡಿದನು. ಅದನ್ನು ನಾನು ನಂಬಿದೆನು. ಇವನು

ಇವನ ಮಿತ್ರನಾದ ಮೆಂಟರನೂ ಗುಲಾಮರಂತೆ ನನ್ನ ಆಜ್ಞೆಯಿಂದ ಮಾರಲ್ಪಟ್ಟರು. ನಿಮ್ಮ ಭಾಗ್ಯ ಪರಿಪಾಕಕ್ಕೆ ನನ್ನ ಅಜ್ಞಾನವೇ ಕಾರಣವಾಯಿತು. ಈಗ ಇವನು ಯೂಲಿಸೆಸ್ಸಿನ ಪುತ್ರನಾದ ಟೆಲಿಮಾಕಸ್ಸೆಂದು ಗೊತ್ತಾಯಿತು. ನಿಮ್ಮ ಪ್ರಾರ್ಥನೆಗನುಸಾರವಾಗಿ ಇವನನ್ನು ನಾನು ಹೇಗೆ ಕಳುಹಿಸಿಕೊಡಲಿ? ಅವನು ನಿಮ್ಮಲ್ಲಿ ಅನುಗ್ರಹವನ್ನಿಟ್ಟು ಬರುವುದಾದರೆ, ನೀವು ಅವಶ್ಯಕವಾಗಿ ಕರೆದುಕೊಂಡು ಹೋಗಬಹುದು. ಆದರೆ, ಅವನ ಕರ್ತವ್ಯವು ಬಹಳವಾಗಿರುವುದು. ಯೂಲಿಸೆಸ್ಸೆಂಬುವನು ದೇಶಾಟನ ಮಾಡುವುದಕ್ಕೆ ಹೋಗಿ, ಬಹುಶಃ ಸ್ವರ್ಗಸ್ಥನಾಗಿರುವನೆಂದು ತಿಳಿದುಕೊಂಡು, ದುರ್ಮಾರ್ಗಪ್ರವರ್ತಕರಾದ ಕೆಲವು ಜನ ಪ್ರಭುಗಳು ಇವನ ದೇಶಕ್ಕೆ ಮುತ್ತಿಗೆಯನ್ನು ಹಾಕಿದರು. ಇವನ ತಾಯಿಯ ಪಾತಿವ್ರತ್ಯಕ್ಕೆ ಭಂಗವನ್ನುಂಟುಮಾಡಬೇಕೆಂದು ಪ್ರಯತ್ನವನ್ನು ಮಾಡುತ್ತಲಿರುವರು. ತಾಯಿಯ ಮಾನರಕ್ಷಣೆಗಿಂತಲೂ ಹೆಚ್ಚಾದ ಕೆಲಸವು ಯಾವುದೂ ಇರುವುದಿಲ್ಲ. 'ನಮಾತುಃಪರದೇವತಾ' ಎಂಬ ಗಾಥೆಯು ಇರುವುದು. ಈತನು ಅವನ ದೇಶಕ್ಕೆ ಹೋಗಿ, ಈ ದುರ್ಮಾರ್ಗಪ್ರವರ್ತಕರಿಗೆ ಸನ್ಮಾರ್ಗೋಪದೇಶವನ್ನು ಮಾಡಬೇಕು. ಅವರು ಸನ್ಮಾರ್ಗಪ್ರವರ್ತಕರಾಗದೆ ಹೋದರೆ, ಅವರನ್ನು ಸಂಹರಿಸಬೇಕು. ಈ ಕರ್ತವ್ಯಗಳನ್ನು ಇಟ್ಟುಕೊಂಡಿರತಕ್ಕ ಟೆಲಿಮಾಕಸ್ಸನು ನಿಮಗೆ ಹೇಗೆ ದೊರೆಯುವನು? ಈ ಚಾಪಲ್ಯವನ್ನು ನೀವು ಬಿಡುವುದು ಉತ್ತಮ. ಟೆಲಿಮಾಕಸ್ಸನು ಹಾಕಿರತಕ್ಕ ಮೇಲ್ಪಂಕ್ತಿಯನ್ನು ಅನುಸರಿಸಿ, ನೀವು ನಿಮ್ಮ ಅರಣ್ಯಕ್ಕೆ ಹೋಗಿ ಸುಖವಾಗಿರಿ,"

ಈ ರೀತಿಯಲ್ಲಿ ಸಸಾಟ್ರಿಸ್ಸನು ಹೇಳಲು, ಆ ಕುರುಬರೆಲ್ಲರೂ ವ್ಯಸನಕ್ರಾಂತರಾಗಿ, ಬಿಕ್ಕಿ ಬಿಕ್ಕಿ ಅಳುವುದಕ್ಕೆ ಉಪಕ್ರಮಿಸಿದರು. ತಕ್ಷಣದಲ್ಲಿಯೇ ಟೆಲಿಮಾಕಸ್ಸನನ್ನು ಬಂದು, ತನ್ನ ವಿದ್ಯಮಾನಗಳನ್ನೆಲ್ಲಾ ತಿಳಿಸಿ, ತನ್ನ ಕರ್ತವ್ಯವನ್ನು ಪೂರೈಸಿ, ಪುನಃ ಬರುವುದಾಗಿ ಎಷ್ಟು ವಿಧವಾಗಿ ಹೇಳಿದಾಗ್ಯೂ, ಅವರು ಸಮಾಧಾನವನ್ನು ಹೊಂದಲಿಲ್ಲ. ಅವರಲ್ಲಿ ವೃದ್ಧರಾದವರಲ್ಲಿ ಕೆಲವರು ಸಸಾಟ್ರಿಸ್ಸನನ್ನು ಕುರಿತು ಹೇಳಿದ್ದೇನೆಂದರೆ:—

"ಎಲೈ ಮಹಾಪ್ರಭುವೇ,—ನಿನ್ನ ಸಂಭಾಷಣದಿಂದ ಈ ಟೆಲಿಮಾಕಸ್ಸಿನಲ್ಲಿ ನೀನೂ ನಮ್ಮಂತೆಯೇ ವಿಶೇಷ ಪ್ರೀತಿಯುಳ್ಳವನಾಗಿರುತ್ತೀ ಎಂದು ಗೊತ್ತಾಗುತ್ತದೆ. ನಿನ್ನ ಪ್ರೀತಿಯು ನಿಜವಾಗಿದ್ದರೆ, ನಾವು ಮಾಡತಕ್ಕ ಒಂದು ವಿಜ್ಞಾಪನೆಗೆ ಒಪ್ಪು. ಇಥಾಕಾ ದೇಶಕ್ಕೆ ಮುತ್ತಿಗೆ ಹಾಕಿರತಕ್ಕ ದುರಾತ್ಮರನ್ನು ನಿಗ್ರಹಿಸಿ, ಮಾತಾಪಿತೃ ಸೇವೆಯನ್ನು ಮಾಡುವುದೇ ಈತನ ಮುಖ್ಯ ಕರ್ತವ್ಯವೆಂದು ನೀನು ಹೇಳಿದೆ. ಇದು ನಮಗೂ ಅಭಿಮತವಾದದ್ದು. ಇವನಿಗೆ ನಿನ್ನ ಕೈಲಾದ

ಸಹಾಯವನ್ನು ಮಾಡು. ಇವನ ಜೊತೆಯಲ್ಲಿ ಹೋಗುವುದಕ್ಕೆ ನಮಗೆ ಅನುಜ್ಞೆಯನ್ನು ಕೊಡು. ಈ ಮಹಾತ್ಮನ ತಂದೆತಾಯಿಗಳನ್ನು ನೋಡುವ ಅಭಿಲಾಷೆಯು ನಮಗೆ ತುಂಬಾ ಉಂಟಾಗಿರುವುದು. ಇಂಥಾ ಮಹಾತ್ಮನ ಜನ್ಮಕ್ಕೆ ಕಾರಣಭೂತಳಾದವಳು ಕೇವಲ ಸತ್ವಗುಣ ಪ್ರಧಾನಳಾಗಿರಬೇಕು. ಸಕಲ ಸೃಷ್ಟಿಸ್ಥಿತಿಪ್ರಳಯಗಳಿಗೆ ಕಾರಣಭೂತಳಾದ, ಧರ್ಮಸ್ವರೂಪಳಾದ ಶಕ್ತಿಯೇ ಇವಳಾಗಿರಬೇಕು. ಅವಳ ದರ್ಶನದಿಂದ ಕೃತಾರ್ಥರಾಗಬೇಕೆಂಬ ಆಸೆಯು ನಮಗೆ ಉಂಟಾಗಿರುವುದು. ಈ ಟೆಲಿಮಾಕಸ್ಸನ ಜೊತೆಯಲ್ಲಿ ಇವನ ದೇಶಕ್ಕೆ ಹೋಗಿಬರುವುದಕ್ಕೆ ನಮ್ಮೆಲ್ಲರಿಗೂ ಅನುಜ್ಞೆಯನ್ನು ಕೊಡು.'' ಈ ರೀತಿಯಲ್ಲಿ ಈ ಕುರುಬರು ಹೇಳಲು, ಸಸಾಟ್ರಿಸ್ಸನು ಹೇಳಿದ್ದೇನೆಂದರೆ :—

"ಎಲೈ ಕುರುಬರೇ,—ಈ ಪ್ರಾರ್ಥನೆಯನ್ನು ಒಪ್ಪಿದೆನು. ಈ ಟೆಲಿಮಾಕಸ್ಸನಿಗೆ ಸಹಾಯಾರ್ಥವಾಗಿ ನನ್ನ ಸೈನ್ಯಗಳನ್ನು ಅನೇಕ ಹಡಗುಗಳಲ್ಲಿ ಕಳುಹಿಸುವೆನು. ನಿಮ್ಮ ಪ್ರಯಾಣಕ್ಕೂ ಬೇಕಾದ ಏರ್ಪಾಡುಗಳನ್ನು ಮಾಡುವೆನು. ಇಥಾಕಾ ದೇಶಕ್ಕೆ ಹೋಗಿ, ಆ ದೇಶದ ಶತ್ರುಗಳನ್ನು ಮೂಲೋತ್ಪಾಟನ ಮಾಡಿ ಯೂಲಿಸೆಸ್ ಮತ್ತು ಪೆನಿಲೋಪರ ದರ್ಶನವನ್ನು ಮಾಡಿಕೊಂಡು, ಟೆಲಿಮಾಕಸ್ಸನಿಗೆ ಯುವರಾಜ ಪಟ್ಟಾಭಿಷೇಕವನ್ನು ಮಾಡಿಸಿ, ಅನಂತರ ಅವನನ್ನೂ, ಅವನ ತಂದೆತಾಯಿಗಳನ್ನೂ ಕರೆದುಕೊಂಡು ಬಂದು, ಅವರ ಪಾದಧೂಳಿಯಿಂದ ನಮ್ಮ ದೇಶವು ಪವಿತ್ರವಾಗುವಂತೆ ನೀವು ಮಾಡಬಹುದು. ಸಂಚಕಾರರೂಪವಾಗಿ ನಿಮ್ಮನ್ನು ಕಳುಹಿಸುವುದಕ್ಕೆ ಒಪ್ಪಿರುತ್ತೇನೆ.'' ಈ ರೀತಿಯಲ್ಲಿ ಸಸಾಟ್ರಿಸ್ಸನು ಕುರುಬರಿಗೆ ಹೇಳಿ, ಟೆಲಿಮಾಕಸ್ಸನನ್ನು ಕುರಿತು ಹೇಳಿದ್ದೇನೆಂದರೆ :—

"ಎಲೈ ಟೆಲಿಮಾಕಸ್ಸನೇ,—ನನ್ನ ಅಜ್ಞಾನದಿಂದ ನೀನು ಬಹಳ ಕಷ್ಟಪಟ್ಟೆ. ನಿನ್ನ ಕಷ್ಟವು ನನ್ನ ಪ್ರಜೆಗಳಾದ ಕುರುಬರು ಧರ್ಮಿಷ್ಠರಾಗಿಯೂ, ಪ್ರಜ್ಞಾಶಾಲಿಗಳಾಗಿಯೂ ಆಗುವುದಕ್ಕೆ ತುಂಬಾ ಸಾಧಕವಾಯಿತು. ಆದಾಗ್ಯೂ ನನ್ನ ಅಪರಾಧವನ್ನು ಕ್ಷಮಿಸು. ದುರಾತ್ಮನಾದ ಮೆಟೋಫಿಸ್ಸನು ನೀನೂ, ಮೆಂಟರೂ ಗುಲಾಮರಂತೆ ವಿಕ್ರಯಿಸಲ್ಪಡುವುಕ್ಕೆ ಕಾರಣಭೂತನಾದನು. ಇದು ನನಗೆ ಗೊತ್ತಾಯಿತು. ಕೂಡಲೆ ಆತನನ್ನು ವಿಚಾರಣೆ ಮಾಡಿದೆನು. ಅವನ ತಪ್ಪುಗಳೂ, ದ್ರೋಹಚಿಂತೆಯೂ ರುಜುವಾತಾದವು. ಅವನಿಗೆ ನ್ಯಾಯವಾಗಿ ಮರಣದಂಡನೆಯನ್ನು ಮಾಡಬೇಕು. ಆದರೆ ಮರಣದಂಡನೆಗಿಂತಲೂ ಅವನು ಸಾಯುವವರೆಗೂ ಅವನ ಅಪರಾಧವನ್ನು ಸ್ಮರಿಸಿಕೊಳ್ಳುತ್ತಿರಬೇಕೆಂದು ಯಾವಜ್ಜೀವವೂ ಅವನು ಬಂದೀಖಾನೆಯಲ್ಲಿರುವಂತೆ ಆಜ್ಞೆಮಾಡಿರುವೆನು, ಅವನ ಕುಟುಂಬಕ್ಕೆ ಸಾಕಾಗುವಷ್ಟು ಆಸ್ತಿಯನ್ನು ಬಿಟ್ಟು, ಉಳಿದ ಆಸ್ತಿಯನ್ನೆಲ್ಲಾ

ಮುಟ್ಟುಕೋಲು ಹಾಕುವಂತೆ ಆಜ್ಞೆ ಮಾಡಿರುವೆನು.'' ಈ ಮಾತನ್ನು ಕೇಳಿದ ಕೂಡಲೆ, ಟೆಲಿಮಾಕಸ್ಸನು ಹೇಳಿದ್ದೇನೆಂದರೆ :—

" ಎಲೈ ಮಹಾಪ್ರಭುವೇ, —ನನ್ನಲ್ಲಿ ನಿನಗೆ ನಿಜವಾದ ಪ್ರೀತಿಯು ಇದ್ದರೆ, ಈ ಶಿಕ್ಷೆಯನ್ನು ವಾಪಸು ತೆಗೆದುಕೊ. ಮೆಟೋಫಿಸ್ಸನು ಬಂದೀಖಾನೆಯಿಂದ ಖುಲಾಸೆ ಮಾಡಲ್ಪಡಲಿ. ಅವನ ಆಸ್ತಿಯೆಲ್ಲಾ ಅವನಿಗೆ ವಾಪಸು ಕೊಡಲ್ಪಡಲಿ. ನಡೆಯತಕ್ಕವರು ಎಡವುವುದುಂಟು. ನನ್ನಲ್ಲಿ ಆತನಿಗೆ ದ್ವೇಷವುಂಟಾಗುವುದಕ್ಕೆ ಕಾರಣವಿಲ್ಲ. ಅಜ್ಞಾನದಿಂದ ಅವನು ಹೀಗೆ ಮಾಡಿರಬಹುದು. ಕ್ಷಮೆಯು ದೇವರ ಗುಣ. ನೀನು ಮಹಾತ್ಮನು. ಭೃತ್ಯರಲ್ಲಿ ತಪ್ಪು ಉಂಟಾದರೆ, ಮುಂದೆ ಅವರು ಅಂಥಾ ತಪ್ಪು ಮಾಡದಂತೆ ಹಿತೋಪದೇಶವನ್ನು ಮಾಡಿ, ಅವರು ಧರ್ಮಿಷ್ಠರಾಗುವುದಕ್ಕೆ ಅವಕಾಶವನ್ನು ಕೊಡಬೇಕು ನನ್ನಲ್ಲಿ ಕೃಪೆಯನ್ನು ಇಟ್ಟು ಈ ವಿಧವಾದ ಅವಕಾಶವನ್ನು ಕೊಡು.''

ಈ ರೀತಿಯಲ್ಲಿ ಟೆಲಿಮಾಕಸ್ಸನು ಹೇಳಲು, ಸಸಾಟ್ರಿಸ್ಸನಿಗೆ ಪರಮಾಶ್ಚರ್ಯವಾಯಿತು. ಅಪಕಾರ ಮಾಡಿದವರಿಗೆ ಉಪಕಾರ ಮಾಡಬೇಕೆಂದು ಧರ್ಮಶಾಸ್ತ್ರಗಳು ಹೇಳುವುವು. ಇದು ಯಾರ ಅನುಷ್ಠಾನದಲ್ಲಿಯೂ ಇರುವುದಿಲ್ಲ. ಈ ಕಲಿಯುಗದಲ್ಲಿ ಉಪಕಾರ ಮಾಡಿದವರಿಗೂ ಅಪಕಾರ ಮಾಡತಕ್ಕ ವ್ಯಕ್ತಿಗಳು ಇರುತ್ತವೆ. ಇವನು ಅಪಕಾರ ಮಾಡಿದಾಗ್ಯೂ, ಅವನಿಗೆ ಉಪಕಾರವನ್ನು ಮಾಡಬೇಕೆಂಬ ಇವನ ಅಭಿನಿವೇಶವನ್ನು ನೋಡಿದರೆ, ಯೂಲಿಸೆಸ್ಸನ ಮಹಾತ್ಮ್ಯಕ್ಕಿಂತಲೂ ಇವನ ಮಹಾತ್ಮ್ಯವು ಹೆಚ್ಚಾದದ್ದೆಂದು ತೋರುತ್ತದೆ. ಜಗದೀಶನು ದುಷ್ಟನಿಗ್ರಹ ಶಿಷ್ಟಪರಿಪಾಲನೆಗೋಸ್ಕರ ಇಂಥಾ ಮಹಾ ವ್ಯಕ್ತಿಗಳನ್ನು ನಿರ್ಮಾಣ ಮಾಡುವುದುಂಟು. ಇವನ ದರ್ಶನದಿಂದ ಧನ್ಯನಾಗುವ ಸಂಭವವು ನನಗೆ ಲಭ್ಯವಾಗಿರುವುದಕ್ಕೋಸ್ಕರ ನಾನು ಎಷ್ಟು ಸಂತೋಷಪಟ್ಟರೂ ಕಡಮೆಯಾಗಿರುವುದು ಎಂದು ಮನಸ್ಸಿನಲ್ಲಿ ಎಂದುಕೊಂಡು ತಕ್ಷಣದಲ್ಲಿಯೇ ಬಂದೀಖಾನೆಯಿಂದ ಮೆಟೋಫಿಸ್ಸನನ್ನು ಕರೆಸಿದನು. ಅವನು ಬಂದೀಖಾನೆಯ ದಂಡನೆಗಿಂತಲೂ ಅತ್ಯಂತ ಕ್ರೂರವಾದ ದಂಡನೆಯು ಯಾವುದೋ ಮಾಡಲ್ಪಡುವುದೆಂಬದಾಗಿಯೂ, ಇದಕ್ಕೆ ಟೆಲಿಮಾಕಸ್ಸನೇ ಕಾರಣಭೂತನಾಗಿರಬೇಕೆಂಬದಾಗಿಯೂ ನಿರೀಕ್ಷಿಸಿಕೊಂಡು ಬಂದನು. ಅವನನ್ನು ಕುರಿತು ಸಸಾಟ್ರಿಸ್ಸನು ಹೇಳಿದ್ದೇನೆಂದರೆ :—

" ಎಲೈ ಮೆಟೋಫಿಸ್ಸನೇ,—ಈ ಟೆಲಿಮಾಕಸ್ಸನನ್ನು ನೋಡು. ಇವನು ಫಿನೀಷಿಯರ್ ಅಲ್ಲ. ಯೂಲಿಸೆಸ್ಸನ ಪುತ್ರನು. ಇವನ ಜೊತೆಯಲ್ಲಿ ವಿಕ್ರಯಿಸಲ್ಪಟ್ಟ ಮೆಂಟರನು ಮಹಾ ಪುರುಷನಾಗಿರಬೇಕು. ಸತ್ಪುರುಷರ ಸಹವಾಸದಲ್ಲಿ

ಸತ್ಪುರುಷರು ಇರುವರು. ದುರಾತ್ಮರ ಸಹವಾಸದಲ್ಲಿ ದುರಾತ್ಮರು **ಇರುವರು.** **ಇವನ** ಗುಣಾತಿಶಯಗಳನ್ನು ನೋಡಿದರೆ, ಇವನಿಗೆ ಗುರುವಾಗಿದ್ದ **ಮೆಂಟರನ** **ಗುಣಾತಿಶಯಗಳು** ಹೇಗಿರಬಹುದೋ ಅದನ್ನು ಊಹಿಸಿಕೊಳ್ಳುವುದು ಸಾಧ್ಯ. **ಅದು ಹಾಗಿರಲಿ.** ಇವರು ಫಿನೀಷಿಯರ್ ಕೆಂದು ನೀನು ಮೋಸಹೋಗಿರಬಹು ದೆಂದು ಈತನು ಹೇಳುತ್ತಾನೆ. ಅವನಲ್ಲಿ ನಿನಗೆ ದ್ವೇಷವಿರುವುದಿಲ್ಲವೆಂಬದಾಗಿ ಯೂ, ಅಜ್ಞಾನವೇ ಮುಖ್ಯಕಾರಣವೆಂಬದಾಗಿಯೂ, ನಿನಗೆ ಮಾಡಿರುವ ಶಿಕ್ಷೆ ಯು ಧರ್ಮಮಾರ್ಗದದ್ದಲ್ಲವೆಂಬದಾಗಿಯೂ, ನಿನಗೆ ಸ್ವಾತಂತ್ರ್ಯವು ಕೊಡಲ್ಪಡಬೇ ಕೆಂಬದಾಗಿಯೂ, ನಿನ್ನ ಆಸ್ತಿಯೆಲ್ಲಾ ನಿನಗೆ ವಾಪಸು ಮಾಡಲ್ಪಡಬೇಕೆಂಬದಾ ಗಿಯೂ ಈತನು ಹೇಳುತ್ತಾನೆ. ಇದು ಯುಕ್ತಿಯುಕ್ತವಾಗಿ ತೋರುತ್ತದೆ. **ಈತನ** ಗುಣಾತಿಶಯಗಳನ್ನೂ, ಇವನ ಪರಾಕ್ರಮವನ್ನೂ, ಇವನ ದೇಶಭಕ್ತಿಯ ವಿಷಯವನ್ನೂ, ಬುದ್ಧಿಶಕ್ತಿಯ ವಿಷಯವನ್ನೂ, ಇವನು ದುರ್ಜನರನ್ನೂ ಕೂಡ ಸಜ್ಜನರನ್ನಾಗಿ ಮಾಡುವ ವಿಧಾನಗಳನ್ನೂ, ಅಪಕಾರಗಳಿಗೂ ಉಪಕಾರ ಮಾಡು ವುದರಲ್ಲಿ ಇವನಿಗೆ ಇರುವ ನಿಸರ್ಗವಾದ ಬುದ್ಧಿಯನ್ನೂ ನೋಡಿದರೆ, ಇವನೇ ಆ ಮಹಾತ್ಮನಾದ ಯೂಲಿಸೆಸ್ಸನ ಮಗನಾಗಿರಬೇಕೆಂದು ತೋರುತ್ತದೆ. ಇವನ ಪ್ರಾರ್ಥನೆಗನುಸಾರವಾಗಿ ನಿನ್ನ ಸರ್ವಾಧಿಕಾರವನ್ನೂ ನಿನಗೆ ವಹಿಸಿರುತ್ತೇನೆ. ನಿನಗೆ ಮಾಡಿದ ಶಿಕ್ಷೆಯು ವಾಪಸು ತೆಗೆದುಕೊಳ್ಳಲ್ಪಟ್ಟಿರುತ್ತದೆ. ಅಪಕಾರ ಮಾಡಿದವರಿಗೂ ಉಪಕಾರ ಮಾಡಬೇಕೆಂಬ ವಿಷಯದಲ್ಲಿ ಇವನು ಹಾಕಿರುವ ಮೇಲ್ಪಂಗ್ತಿಯು ಸತ್ಪುರುಷರಿಗೆಲ್ಲಾ ಅನುಷ್ಠೇಯವಾದದ್ದು. ಇದನ್ನು ಅನುಷ್ಠಿ ಸಿದವರಿಗೆ ಇಹಪರ ಸೌಖ್ಯಗಳು ಎಂದಿಗೂ ತಪ್ಪುವುದಿಲ್ಲ. ನಮ್ಮ ಪೂರ್ವಾ ರ್ಜಿತ ಸತ್ಕರ್ಮಗಳ ರಾಶಿಯಿಂದ ಇವರು ನಮ್ಮ ದೇಶಕ್ಕೆ ಬರುವ ಹಾಯಿತು. ಅದರಿಂದ ನಮಗೆ ಉಂಟಾಗಿರತಕ್ಕ ಪ್ರಯೋಜನಕ್ಕೆ ಪಾರವೇ ಇಲ್ಲ. ಮೆಂಟರ ನನ್ನು ಶೀಘ್ರದಲ್ಲಿಯೇ ಕರೆಸು. ಇವನ ಪ್ರಸನ್ನತೆಗೂ ಪಾತ್ರರಾಗೋಣ. ನಮ್ಮ ಅಪರಾಧಗಳು ಕ್ಷಮಿಸಲ್ಪಡುವಂತೆ ಮಾಡಿಕೊಂಡು, ಇವರಿಗೆ ಸಕಲ ಸಹಾಯ ಗಳನ್ನೂ ಮಾಡಿ, ಇವರ ದೇಶಕ್ಕೆ ಕಳುಹಿಸೋಣ. ಇವರ ದೇಶಕ್ಕೆ ಮುತ್ತಿಗೆ ಹಾಕಿರತಕ್ಕ ದುರಾತ್ಮರನ್ನು ಜಯಿಸಿ, ಆ ದೇಶದ ರಾಜ್ಯಭಾರಕ್ಕೆ ತಕ್ಕ ಏರ್ಪಾಡು ಗಳನ್ನು ಮಾಡಿ, ಯೂಲಿಸೆಸ್, ಪೆನಿಲೋಪ್ ಮತ್ತು ಟೆಲಿಮಾಕಸ್ಸರು ನಮ್ಮ ದೇಶಕ್ಕೆ ಬಂದು, ನಮಗೆ ಸಾನ್ನಿಧ್ಯ ಸುಖವನ್ನು ಕೊಡುವಂತೆ ಮಾಡಿಕೊಳ್ಳೋ ಣ.'' ಈ ರೀತಿಯಲ್ಲಿ ನಸಾಟ್ರಿಸ್ಸನು ಹೇಳಿದ್ದನ್ನು ಕೇಳಿ, ಮೆಟೋಫಿಸ್ಸನು—

(ಆತ್ಮಗತ) '' ಈ ಹುಡುಗನು ವಿಚಿತ್ರಪುರುಷನಾಗಿರಬೇಕು. ಇವನ **ಗುರು** ವಾದ ಮೆಂಟರನು ಇನ್ನೂ ಅದ್ಭುತವಾದ ವ್ಯಕ್ತಿಯಾಗಿರಬೇಕು. **ಭಯಂಕರ**

ವಾದ ಸಿಂಹನೆಲ್ಲಿ? ಚಿಕ್ಕ ಹುಡುಗನೆಲ್ಲಿ? ಸಿಂಹವನ್ನು ಕತ್ತು ಮಿಸುಕಿ ಕೊಂದು ಹಾಕುವುದೆಂದರೇನು? ಇದು ಯಾರಿಗೆ ಸಾಧ್ಯ? ಈ ಅದ್ಭುತವಾದ ಶಕ್ತಿಯು ಇವನಿಗೆ ಹೇಗೆ ಬಂತು? ಕಾಡು ಕುರುಬರೆಲ್ಲಿ? ಅವರು ಅನುರಕ್ತರಾಗಿ ತಮ್ಮ ಸರ್ವಸ್ವವನ್ನೂ, ಪ್ರಾಣಗಳನ್ನೂ ಇವನಿಗೆ ಒಪ್ಪಿಸುವ ಸಂಕಲ್ಪವನ್ನು ಮಾಡುವುದು ಎಲ್ಲಿ? ಇವೆಲ್ಲಾ ಬಹಳ ವಿಚಿತ್ರವಾಗಿವೆ. ನಾನು ಮನಃಪೂರ್ವಕವಾಗಿ ಇವನನ್ನು ವಿಕ್ರಯಿಸಿರುವೆನು. ಇವನು ಗ್ರೀಸ್ ದೇಶದವನಾದಾಗ್ಯೂ, ಫಿನೀಷಿಯನ್ನೆಂದು ನಂಬಿಕೆಯು ಉಂಟಾಗುವಂತೆ ಮಾಡುವುದಕ್ಕೆ ನಾನು ಬಹಳ ಮೆಹನತ್ತು ಮಾಡಿದೆನು. ನಿಜವಾಗಿ ಮೆಂಟರಿಗೂ, ಟೆಲಿಮಾಕಸ್ಸನಿಗೂ ಅಪಕಾರವನ್ನು ಮಾಡಿದೆನು. ಇವರಿಂದ ನನಗೇನು ಅಪಕಾರವಾಗುವುದೋ ಎಂಬ ಭಯವೇ ನನಗೆ ಇತ್ತು. ನನ್ನನ್ನು ಗಲ್ಲಿಗೆ ಹಾಕಿಸುವ ಶಕ್ತಿಯೂ ಕೂಡ ಇವನಿಗೆ ಇರುವುದು. ಇವನ ಮಾತು ವೇದವಾಕ್ಕಿನಂತೆ ಸಸಾಟ್ರಿಸ್ ಭಾವಿಸುವ ಸಂಭವವು ಉಂಟಾಗಿರುವುದು. ಹೀಗಿದ್ದಾಗ್ಯೂ, ಇವನು ನನ್ನನ್ನು ರಕ್ಷಿಸುವ ಏರ್ಪಾಡನ್ನು ಮಾಡಿರುವನು. ನಾನು ಮಾಡಿದ ಅಪಕಾರಕ್ಕೆ ಪ್ರತಿಯಾಗಿ ಮಹೋಪಕಾರವನ್ನು ಮಾಡಿರುವನು. ಕಾಡು ಮೃಗಗಳಿಗೆ ಸಮಾನರಾದ ಕಾಡು ಕುರುಬರೆಲ್ಲಾ ಇವನಲ್ಲಿ ಅನುರಕ್ತರಾಗಿರುವರು. ಅವರೆಲ್ಲರೂ ನಾನು ಇವನಿಗೆ ಅಪಕಾರ ಮಾಡಿದೆನೆಂದು ನನ್ನನ್ನು ದ್ವೇಷಿಸುವುದಕ್ಕೂ, ನನ್ನಲ್ಲಿ ತಿರಸ್ಕಾರವನ್ನು ತೋರಿಸುವುದಕ್ಕೂ ಉಪಕ್ರಮಿಸಿರುವರು. ಇವನ ಉಪಕಾರವೂ ಕೂಡ ನನಗೆ ಅಪಕಾರವಾಗಿ ಪರಿಣಮಿಸಿರುವುದು. ಕಾಡು ಜನಗಳ ಮನೋವೃತ್ತಿಯು ಊರು ಜನಗಳ ಮನಸ್ಸನ್ನೂ ವ್ಯಾಪಿಸುತ್ತಿರುವುದು. ಟೆಲಿಮಾಕಸ್ಸನು ಮೂರ್ತಿಮತ್ತಾದ ದೇವತೆಯಾಗಿದ್ದರೆ ಹೇಗೋ ಹಾಗೆ ಕಾಣಲ್ಪಡುವುದಕ್ಕೆ ಉಪಕ್ರಮವಾಗಿರುವುದು. ನಾನು ಪಿಶಾಚವಾಗಿದ್ದರೆ ಹೇಗೋ ಹಾಗೆ ಕಾಣಲ್ಪಡುವುದಕ್ಕೂ ಆರಂಭವಾಗಿರುವುದು. ನಿಜವಾಗಿ ನೋಡಿದರೆ, ಈ ಭಾವನೆಯು ಯಥಾರ್ಥವಾಗಿರುವುದು. ಈಗ ಏನು ಮಾಡಬೇಕು! ಸರ್ವರ ತಿರಸ್ಕಾರಕ್ಕೂ ಗುರಿಯಾಗಿ, ಬದುಕಿರುವುದಕ್ಕಿಂತಲೂ ಸಾಯುವುದು ಮೇಲು. ಪರಿಣಾಮದಲ್ಲಿ ಅಧರ್ಮವು ಧರ್ಮದಿಂದ ಜಯಿಸಲ್ಪಡುವುದೆಂದು ಹೇಳುತ್ತಾರೆ. ಅದಕ್ಕೆ ದೃಷ್ಟಾಂತವು ಈಗ ಉಂಟಾಯಿತು. ಸಸಾಟ್ರಿಸ್ಸನು ಟೆಲಿಮಾಕಸ್ಸನಂತೆಯೇ ಧರ್ಮಪರವಶನಾಗಿರುವನು. ಧರ್ಮವು ಜಯಿಸಿದರೆ, ಅಧರ್ಮವು ಭಸ್ಮೀಭೂತವಾಗುವುದು. ಹಾಗಾದರೆ, ಅದರ ಜೊತೆಯಲ್ಲಿ ನಾನೂ ಭಸ್ಮವಾಗಬೇಕು. ಸಸಾಟ್ರಿಸ್ಸನೂ, ಟೆಲಿಮಾಕಸ್ಸನೂ, ಮೆಂಟರನೂ, ಧರ್ಮಿಷ್ಠರಾದ ಸಕಲ ಜನಗಳೂ ನನಗೆ ಶತ್ರುಗಳು. ಇವರನ್ನೆಲ್ಲಾ ಮೂಲೋತ್ಪಾಟನ ಮಾಡಿದ ಹೊರತು,

ನಾನು ನೆಮ್ಮದಿಯಾಗಿರುವುದಕ್ಕೆ ಆಗುವುದಿಲ್ಲ. ಇದಕ್ಕೆ ಏನಾದರೂ ಉಪಾಯವನ್ನು ಮಾಡಬೇಕು. ಪರಾಕ್ರಮದಿಂದ ಈ ಕೆಲಸವು ಆಗುವುದಿಲ್ಲ. ಉಪಾಯದಿಂದ ಆಗದೆ ಇರತಕ್ಕ ಕೆಲಸಗಳೇ ಇರುವುದಿಲ್ಲ. ಇವರನ್ನೆಲ್ಲಾ ಮೂಲೋತ್ಪಾಟನ ಮಾಡಿ, ನನ್ನ ಇಷ್ಟಾರ್ಥಸಿದ್ಧಿಯನ್ನು ಮಾಡಿಕೊಳ್ಳುವೆನು. ಇರಲಿ. ನನ್ನ ಸಾಮರ್ಥ್ಯವನ್ನು ತೋರಿಸುತ್ತೇನೆ.''

ಈ ಸಸಾಟ್ರಿಸ್ಸನು ಟೆಲಿಮಾಕಸ್ಸನ ಉಪದೇಶದಿಂದ ಅಸಾಧಾರಣವಾದ ಸೌಜನ್ಯವನ್ನು ವಹಿಸಿ, ನನಗೆ ಮಾಡಿದ ಶಿಕ್ಷೆಯನ್ನು ವಾಪಸು ತೆಗೆದುಕೊಂಡದ್ದಲ್ಲದೆ, ನಾನು ನಿರಪರಾಧಿಯಾಗಿರಬಹುದೆಂದು ತಿಳಿದುಕೊಂಡು, ನನ್ನ ಅಧಿಕಾರವನ್ನೂ ಕೂಡ ನನಗೆ ಕೊಟ್ಟಿರುವನು. ಈ ಇಬ್ಬರೂ ನನಗೆ ಉಪಕಾರಿಗಳಾಗಿ ಪರಿಣಮಿಸಿರುವರು. ಮೆಂಟರನನ್ನು ಕಳೆಸಬೇಕೆಂದು ನನಗೆ ಆಜ್ಞೆಯಾಗಿರುವುದು. ಅವನು ಮಿತಭಾಷಿ. ಅವನ ಮನೋಭಾವವು ಗೊತ್ತಾಗುವುದಿಲ್ಲ. ಅವನು ವೃದ್ಧನಾಗಿದ್ದಾಗ್ಯೂ, ಟೆಲಿಮಾಕಸ್ಸನಿಗಿಂತ ಹೆಚ್ಚಾದ ಧೈರ್ಯಸ್ಥೈರ್ಯಗಳುಳ್ಳವನು. ಅವನು ಅಸಾಧಾರಣವಾದ ಯೋಗೀಶ್ವರನಾಗಿರುವಂತೆ ತೋರುತ್ತದೆ. ನಮ್ಮ ದೊರೆಯು ಟೆಲಿಮಾಕಸ್ಸನ ಗುಣಾತಿಶಯಗಳಿಗೆ ದಾಸನಾಗಿರುತ್ತಾನೆ. ಮೆಂಟರನು ಬಂದ ಕೂಡಲೆ, ಅವನಿಗೆ ದಾಸನಾಗುತ್ತಾನೆ. ಇದುವರೆಗೂ ನನ್ನ ಅಧಿಕಾರವು ಹೇಗೆ ಅಪ್ರತಿಹತವಾಗಿತ್ತೋ ಹಾಗೆ ಮುಂದೆ ಇರಲಾರದು. ಈ ಮೂರು ಜನಗಳೂ ಪರಿಹರಿಸಲ್ಪಡಬೇಕು. ಹಾಗೆ ಇಲ್ಲದಿದ್ದರೆ, ನಾನು ಇವರಿಗೆ ದಾಸನಾಗಿರಬೇಕು. ದಾಸತ್ವವು ಬಹಳ ಹೇಯವಾದದ್ದು. ಸ್ವರ್ಗದಲ್ಲಿ ದಾಸನಾಗಿರುವುದಕ್ಕಿಂತಲೂ ನರಕದಲ್ಲಿ ಪ್ರಭುತ್ವ ಮಾಡತಕ್ಕದು ಉತ್ತಮ. ಈ ಸಸಾಟ್ರಿಸ್ಸನು ದೇಹವನ್ನು ಬಿಡುವಂತಾದರೆ, ನನ್ನ ಸಂಕಲ್ಪಗಳೆಲ್ಲಾ ನೆರವೇರುವುವು. ಅನಂತರ ಟೆಲಿಮಾಕಸ್ಸನನ್ನೂ, ಮೆಂಟರನನ್ನೂ ಲೀಲೆಯಿಂದ ನಿಗ್ರಹಿಸಬಹುದು. ಅವರ ಮೇಲೆ ಬಲವಾದ ಅಪರಾಧಗಳನ್ನೇನಾದರೂ ಹೊರಿಸಿ, ಅವರನ್ನು ಗಲ್ಲಿಗೂ ಹಾಕಿಸಬಹುದು. ಈ ರೀತಿಯಲ್ಲಿ ಮಾಡದಿದ್ದರೆ, ನಾನು ಅಧಿಕಾರವನ್ನು ಬಿಟ್ಟು, ತಪೋವನವನ್ನು ಪ್ರವೇಶಿಸಬೇಕಾಗುತ್ತದೆ. ಅದು ಉಪಾದೇಯವಾದದ್ದಲ್ಲ. ಬದುಕಿರುವವರೆಗೂ ಅಪ್ರತಿಹತವಾದ, ದೃಷ್ಟವಾದ ಲೌಕಿಕ ಸುಖಗಳನ್ನು ಅನುಭವಿಸುವುದು ಉತ್ತಮವೇ ಹೊರತು, ಅದೃಷ್ಟವಾದ ಪಾರಲೌಕಿಕ ಸುಖಗಳನ್ನು ಅಪೇಕ್ಷಿಸುವುದು ವಿವೇಕವಲ್ಲ. ದೃಷ್ಟವಾದ ಸುಖಗಳು ನಿಜವಾದವುಗಳು. ಅದೃಷ್ಟಸುಖಗಳು ಸಂಕಲ್ಪ ಪ್ರಪಂಚಗತವಾದವುಗಳು. ಆದುದರಿಂದ ಸಸಾಟ್ರಿಸ್ಸನು ದೇಹವನ್ನು ಬಿಡುವಂತೆಯೂ, ಟೆಲಿಮಾಕಸ್ಸನೂ, ಮೆಂಟರನೂ ಅವನ ಅಕಾಲ ಮರಣಕ್ಕೆ ಕಾರಣಭೂತರಾದಂತೆಯೂ ಮಾಡುವೆನು

ಸಾಧ್ಯವಾದರೆ, ಅದು ಕರ್ತವ್ಯವಾದದ್ದು. ಅದರಿಂದ ಇಷ್ಟಪ್ರಾಪ್ತಿಯೂ, ಅರಿಷ್ಟನಿವಾರಣೆಯೂ ಎರಡೂ ಆಗುವುವು. ಅರಣ್ಯದ ಸಿಂಹವನ್ನು ಕೊಂದು, ಅಸಹಾಯಶೂರನೆಂದು ಹೆಸರುವಾಸಿಯನ್ನು ಪಡೆದು, ತನ್ನ ರುಜುಮಾರ್ಗದಿಂದಲೂ, ಸೌಜನ್ಯದಿಂದಲೂ ಟೆಲಮಾಕಸ್ಸನು ವಿಜೃಂಭಿಸುತ್ತಲಿದ್ದಾನೆ. ಪುರುಷ ಸಿಂಹನಾದ ನನ್ನನ್ನು ತನ್ನ ಅಮಾನುಷವಾದ ಪ್ರೀತಿಯಿಂದ ಜಯಿಸಿದೆನೆಂದು ತಿಳಿದುಕೊಂಡಿದ್ದಾನೆ. ಅವನು ಹಾಗೆ ತಿಳಿದುಕೊಳ್ಳಲಿ. ನಮ್ಮ ಪ್ರಭುವೂ ಹಾಗೆ ತಿಳಿದುಕೊಳ್ಳಲಿ. ನಸಾಟ್ರಿಸ್ಸನು ದೇಹವನ್ನು ಬಿಡಲಿ. ಅವನ ಮರಣಕ್ಕೆ ಟೆಲಿಮಾಕಸ್ಸನೇ ಕಾರಣಭೂತನೆಂದು ನಂಬಿಕೆಯು ಹುಟ್ಟಿಸಲ್ಪಡಲಿ. ಮೆಂಟರು ಬರಲಿ. ಟೆಲಮಾಕಸ್ಸನಿಗೆ ಪ್ರಭುತ್ವ ಕೊಡಿಸುವುದಕ್ಕೋಸ್ಕರ ನಸಾಟ್ರಿಸ್ಸನ ಅಕಾಲ ಮರಣಕ್ಕೆ ಮೆಂಟರೂ ಕಾರಣಭೂತನೆಂದು ಪ್ರತ್ಯಯವು ಹುಟ್ಟಿಸಲ್ಪಡಲಿ. ಕೋಪಪರವಶರಾದ ಜನಗಳಿಂದ ಇವರಿಬ್ಬರೂ ಕೊಲ್ಲಲ್ಪಡಲಿ. ಈ ಮಹಾ ಕೌಟಿಲ್ಯ ವಿದ್ಯೆಯಿಂದ ಪುರುಷಸಿಂಹನಾದ ನಾನು ಶತ್ರುರಹಿತನಾಗುವೆನು.

(ಪ್ರಕಾಶ) ಈ ರೀತಿಯಲ್ಲಿ ಸಂಕಲ್ಪವನ್ನು ಮಾಡಿಕೊಂಡು, ನಸಾಟ್ರಿಸ್ಸನನ್ನು ಕುರಿತು "ಎಲೈ ಮಹಾ ಪ್ರಭುವೇ,—ಮೆಂಟರೂ, ಟೆಲಿಮಾಕಸ್ಸೂ ಇವರಿಬ್ಬರೂ ಫಿನೀಷಿಯರೆಂದು ಬಂದ ಕೈಫೀಯತ್ತುಗಳನ್ನು ನಾನು ನಂಬದೆನು. ಇದರಿಂದ ಅಗಾಧವಾದ ಪಾಪವು ನನಗೆ ಉಂಟಾಯಿತು. ಭಯಂಕರವಾದ ಸಿಂಹವನ್ನು ನಿರಾಯುಧನಾಗಿ ಕೊಂದ ಈ ಮಹಾತ್ಮನು ಪುರುಷಸಿಂಹನೆಂಬುವುದಕ್ಕೆ ಸಂದೇಹವೇ ಇಲ್ಲ. ಇವನು ಯೂಲಿಸೆಸ್ಸನ ಮಗನೆಂಬುದಕ್ಕೆ ಇದಕ್ಕಿಂತ ಬೇರೆ ದೃಷ್ಟಾಂತವು ಆವಶ್ಯಕವಿಲ್ಲ. ಅದು ಹಾಗಿರಲಿ. ಈ ಕಾಡು ಕುರುಬರು ವಿದ್ಯಾವಿಹೀನರು. ಅನಾಗರಿಕರು. ದಯಾರಹಿತರು. ಸಾರಾಸಾರಜ್ಞಾನವಿಹೀನರು. ಸತ್ಯದಲ್ಲಿಯೂ, ಧರ್ಮದಲ್ಲಿಯೂ ಪರಾಙ್ಮುಖರು. ಇಂಥಾ ಜನಗಳೆಲ್ಲರೂ ಈ ಮಹಾನುಭಾವನ ಮಹಿಮೆಯಿಂದ ದಯಾರಸವುಳ್ಳವರಾಗಿಯೂ, ನಾಗರೀಕರಾಗಿಯೂ, ಕೃತಜ್ಞರಾಗಿಯೂ, ಸತ್ಯದಲ್ಲಿಯೂ, ಧರ್ಮದಲ್ಲಿಯೂ ಅಭಿಮಾನಿಗಳಾಗಿಯೂ, ಅಸಾಧಾರಣವಾದ ದೈವಭಕ್ತಿ ಮತ್ತು ರಾಜಭಕ್ತಿಯುಳ್ಳವರಾಗಿಯೂ ಮಾಡಲ್ಪಟ್ಟಿರುವರು. ಮನುಷ್ಯ ಮಾತ್ರದವನಿಗೆ ಈ ಶಕ್ತಿಯು ಬರತಕ್ಕದ್ದಲ್ಲ. ಇವನು ದೇವತಾಂಶ ಸಂಭೂತನೆಂದು ಧಾರಾಳವಾಗಿ ಹೇಳಬಹುದು. ಮಕ್ಕಳನ್ನು ನೋಡಿದರೆ, ತಂದೆಗಳ ಮಹಿಮೆಯು ಗೊತ್ತಾಗುವುದು. ತಂದೆಗಳೇ ಮಕ್ಕಳಾಗಿ ಹುಟ್ಟುವರು. ಟೆಲಿಮಾಕಸ್ಸನ ಮಹಿಮೆಯಿಂದ ಯೂಲಿಸೆಸ್ಸನ ಮಹಿಮೆಯು ಗೊತ್ತಾಗುವುದು. ಯೂಲಿಸೆಸ್ಸನ ಗುಣಾತಿಶಯಗಳೆಲ್ಲಾ ಟೆಲಿಮಾಕಸ್ಸನಲ್ಲಿ ಮೂರ್ತೀಭವಿಸಿರುವುವು. ನನ್ನ ಅದೃಷ್ಟವಶದಿಂದ ಇಂಥಾ

ಮಹಾತ್ಮನ ಸೇವೆಯು ನನಗೆ ಲಭ್ಯವಾಯಿತು. ಇವನ ಅಸಾಧಾರಣವಾದ ದಯೆಯಿಂದ ನನ್ನ ಅಪರಾಧಗಳನ್ನು ಕ್ಷಮಿಸುವ ಸಂಕಲ್ಪವು ನಿನಗೂ ಉಂಟಾಯಿತು. ಇದಕ್ಕಾಗಿ ನಾನು ಟೆಲಿಮಾಕಸ್ಸನಿಗೆ ಎಷ್ಟು ಕೃತಜ್ಞನಾಗಿದ್ದಾಗ್ಯೂ, ಅದು ಅಲ್ಪವಾಗಿಯೇ ಇರುವುದು. ಇವನ ಮಹಿಮೆಯೇ ಹೀಗಿರುವಾಗ್ಯ, ಹಿರಿಯನಾಗಿಯೂ, ಇವನಿಗೆ ಗುರುವಾಗಿಯೂ ಇರುವ ಮೆಂಟರನ ಮಹಿಮೆಯು ಹೇಗಿರುವುದೋ ಅದನ್ನು ಊಹಿಸಬಹುದೇ ಹೊರತು, ಹೇಳುವುದಕ್ಕಾಗುವುದಿಲ್ಲ. ಅವನು ಬುದ್ಧಿಯಲ್ಲಿ ಬೃಹಸ್ಪತಿಯನ್ನೂ ಕೂಡ ಮೀರಿಸಿರಬಹುದೆಂದು ತೋರುತ್ತದೆ. ಅವನನ್ನು ಈಗಲೇ ಕರೆಸುವೆನು. ಅವನ ಹಿತೋಪದೇಶ ಸುಖವನ್ನು ನಿನ್ನ ಜೊತೆಯಲ್ಲಿ ನಾನೂ ಅನುಭವಿಸುವೆನು. ಇವರಿಬ್ಬರಿಗೂ ಬೇಕಾದ ಸಹಾಯಗಳನ್ನು ಮಾಡಿ, ಅವರ ದೇಶಕ್ಕೆ ಅವರು ತಲಪುವಂತೆಯೂ, ಟೆಲಿಮಾಕಸ್ಸನು ಮಾತಾಪಿತೃಗಳ ಸಾನ್ನಿಧ್ಯವನ್ನು ಹೊಂದುವ ಸುಖವನ್ನು ಪಡೆಯುವಂತೆಯೂ, ಅವರ ಶತ್ರುಗಳೆಲ್ಲಾ ಮೂಲೋತ್ಪಾಟನ ಮಾಡಲ್ಪಡುವಂತೆಯೂ ಮಾಡೋಣ. ಈ ಕೆಲಸಗಳನ್ನೆಲ್ಲಾ ನಿರ್ವಹಿಸುವುದಕ್ಕೆ ಆಜ್ಞೆಯಾದರೆ, ನಾನೇ ಹೋಗಿ ಬರುವೆನು. ಈ ಟೆಲಿಮಾಕಸ್ಸನು ನನಗೆ ಮಾಡಿರುವ ಉಪಕಾರಕ್ಕೆ ಯಥಾಶಕ್ತಿ ಪ್ರತ್ಯುಪಕಾರವನ್ನು ಮಾಡುವುದಕ್ಕೆ ಅವಕಾಶವನ್ನು ಕೊಟ್ಟರೆ, ನಾನು ಬಹಳ ಕೃತಜ್ಞನಾಗಿರುತ್ತೇನೆ.''

ಈ ರೀತಿಯಲ್ಲಿ ಮೆಟ್ರೋಫಿಸ್ಸನು ಹೇಳಿದ್ದನ್ನು ಕೇಳಿ, ಸಸಾಟ್ರಿಸ್ಸನು ಬಹಳ ಸಂತುಷ್ಟನಾದನು. ಮೆಂಟೆರನನ್ನು ಕರೆಸುವುದಕ್ಕೆ ದೂತರು ಕಳುಹಿಸಲ್ಪಟ್ಟರು. ಸಸಾಟ್ರಿಸ್ಸನು ಪುತ್ರನಿರ್ವಿಶೇಷವಾಗಿ ನನ್ನನ್ನು ಕಾಣುತ್ತಾ, ಬಹಳ ಸುಖದಿಂದ ಇದ್ದನು. ಎರಡು ಮೂರು ದಿವಸಗಳಲ್ಲಿಯೇ ನನಗೆ ಪಿತೃನಿರ್ವಿಶೇಷನಾದ ಮೆಂಟರು ಬಂದನು. ಸಸಾಟ್ರಿಸ್ಸನೂ, ಮೆಟ್ರೋಫಿಸ್ಸನೂ, ನಾನೂ ಅವನನ್ನು ಎದುರುಗೊಂಡು, ಅರಮನೆಗೆ ಕರೆದುಕೊಂಡು ಬಂದು, ಅತ್ಯಂತ ಸಂಭ್ರಮದಿಂದ ಆದರಿಸಿದೆವು. ಕುಶಲಪ್ರಶ್ನೆಗಳು ನಡೆದ ತರುವಾಯ, ಸಸಾಟ್ರಿಸ್ಸನು ವಾಸ್ತವಾಂಶವು ಗೊತ್ತಾಗುವುದಕ್ಕೆ ಸಂಭವಿಸಿದ ವಿದ್ಯಮಾನಗಳನ್ನೂ, ತಾನು ಮೆಟ್ರೋಫಿಸ್ಸಿಗೆ ಮಾಡಿದ್ದ ಶಿಕ್ಷೆಯ ವಿಷಯವನ್ನೂ, ಟೆಲಿಮಾಕಸ್ಸನ ಉಪದೇಶದಿಂದ ಅವನ ಅಪರಾಧವನ್ನು ಕ್ಷಮಿಸಿ, ಅವನು ಪೂರ್ವದಲ್ಲಿದ್ದ ಅಧಿಕಾರದಲ್ಲೇ ಇಟ್ಟಿದ್ದುದನ್ನೂ, ಅವನು ತಾನು ಮಾಡಿದ ಅಪರಾಧಗಳಿಗೋಸ್ಕರ ಸಂತಾಪ ಪಡುತ್ತಲಿರುವುದನ್ನೂ ತಿಳಿಸಿದನು. ನಾನೂ ಕೂಡ ಸಸಾಟ್ರಿಸ್ಸನು ಹೇಳಿದ್ದನ್ನೆಲ್ಲಾ ಅನುಮೋದಿಸಿ, ಮೆಟ್ರೋಫಿಸ್ಸನು ಬಹಳ ಗುಣಶಾಲಿಯೆಂದು ಹೇಳಿದನು.

ಮೆಟೋಫಿಸ್ಸನೂ ಕೂಡ ತನ್ನ ಅಪರಾಧಗಳನ್ನೆಲ್ಲಾ ನಿರೂಪಿಸಿ, ಕ್ಷಮಾಪಣೆಯನ್ನು ಬೇಡಿದನು. ಈ ಮಾತುಗಳನ್ನೆಲ್ಲಾ ಕೇಳಿ, ಮೆಟೋಫಿಸ್ಸನನ್ನು ಕುರಿತು ಮೆಂಟರು ಹೇಳಿದ್ದೇನೆಂದರೆ :—

"ಎಲೈ ಮೆಟೋಫಿಸ್ಸನೇ,—ಈ ಪ್ರಪಂಚವು ಜ್ಞಾನಾಜ್ಞಾನಮಯವಾಗಿರುವುದು. ನಮಗೆ ತಿಳಿದ ವಿಷಯಗಳು ಏಕದೇಶವಾಗಿರುವುವು. ತಿಳಿಯದ ವಿಷಯಗಳು ಮಹಾಮೇರುವಿನಂತೆ ಇರುವುವು. ಅಜ್ಞಾನದಿಂದ ಅಪರಾಧಗಳು ನಡೆಯಬಹುದು. ಅಂಥಾ ಅಪರಾಧಗಳು ಅಪರಾಧಗಳಲ್ಲ. ಮನಃಪೂರ್ತಿಯಾಗಿ ಯಾವ ಅಪರಾಧಗಳು ನಡೆಯುವುವೋ ಅದಕ್ಕೆ ನಾವು ಉತ್ತರವಾದಿಗಳು. ಅಜ್ಞಾನದಿಂದ ನಾವು ಮಾಡತಕ್ಕ ಕೆಲಸಗಳಿಗೆ ದೇವರು ನಮ್ಮನ್ನು ಉತ್ತರವಾದಿಗಳನ್ನಾಗಿ ಮಾಡುವುದಿಲ್ಲ. ಅವುಗಳಿಗೋಸ್ಕರ ನಮಗೆ ಶಿಕ್ಷೆಯು ಆಗುವುದಿಲ್ಲ. ಮನಃಪೂರ್ವಕವಾಗಿ ಮಾಡಿದ ಅಪರಾಧಗಳಿಗೆ ಉಪಕ್ರಮದಲ್ಲಿ ಶಿಕ್ಷೆಯು ತಪ್ಪಿದಾಗ್ಯೂ, ಪರಿಣಾಮದಲ್ಲಿ ಶಿಕ್ಷೆಯು ಎಂದಿಗೂ ತಪ್ಪುವುದಿಲ್ಲ. ಪ್ರಾಜ್ಞನಾದ ನಿನಗೆ ಹೇಳತಕ್ಕದ್ದು ಅಪ್ರಕೃತ. ನೀನು ಅಜ್ಞಾನದಿಂದ ಫಿನೀಷಿಯರ್ನರೆಂದು ತಿಳಿದುಕೊಂಡು, ದಾಸತ್ವಕ್ಕೆ ನಮ್ಮನ್ನು ಗುರಿಮಾಡಿ ವಿಕ್ರಯಿಸಿದರೆ, ಆ ಅಪರಾಧವು ನಿನ್ನದಲ್ಲ. ನಾವು ಫಿನೀಷಿಯರ್ನರಲ್ಲವೆಂದು ನಿನಗೆ ನಂಬಿಕೆಯು ಉಂಟಾಗುವಂತೆ ಮಾಡದೆ ಇದ್ದುದು ನಮ್ಮ ತಪ್ಪು. ಇದಕ್ಕಾಗಿ ನೀನು ವ್ಯಸನಪಡಬೇಡ. ನಿನ್ನ ಸಂತಾಪವೆಲ್ಲಾ ನಿಜವಾಗಿದ್ದರ, ದೇವರು ನಿನಗೆ ಮಂಗಳವನ್ನು ಮಾಡುವನು. ಸಕಲ ಫಲಗಳೂ ಕರ್ಮಾಯತ್ತವಾಗಿರುವುವು. ನಿನಗೆ ನಿನ್ನ ಕರ್ಮಗಳಿಗನುರೂಪವಾದ ಫಲವು ಆಗಿಯೇ ಆಗುವುದು. ಈ ಫಲವು ಸನ್ಮಂಗಳರೂಪವಾಗಿರಲೆಂದು ನಾನು ಕೋರುತ್ತೇನೆ."

ಈ ರೀತಿಯಲ್ಲಿ ಮೆಂಟರನು ಹೇಳಿ, ಮೆಟೋಫಿಸ್ಸನ ಮುಖವನ್ನು ನೋಡಿದನು. ಮಹಾತ್ಮರಿಗೆ ಮನೋಭಾವವು ಮುಖವನ್ನು ನೋಡಿದ ಕೂಡಲೇ ಗೊತ್ತಾಗುವುದೇನಾಶ್ಚರ್ಯವಲ್ಲ. ಅಪರಾಧಿಗಳನ್ನು ಗೊತ್ತುಮಾಡುವ ಡಿಟೆಕ್ಟಿವ್ ಶಾಸ್ತ್ರವು ಸುಳ್ಳಲ್ಲ. ಮನೋವಿಕಾರಗಳು, ಅಂಥಾ ವಿಕಾರಗಳಿಗೆ ಗುರಿಯಾದವನ ಕಣ್ಣುಗಳಲ್ಲಿ ಕನ್ನಡಿಯಲ್ಲಿ ಹೇಗೋ ಹಾಗೆ ಕಾಣುವುವು. ಪ್ರಭುಗಳು ದುಷ್ಟನಿಗ್ರಹ ಶಿಷ್ಟಪರಿಪಾಲನವೇ ಕರ್ತವ್ಯವಾಗಿ ಉಳ್ಳವರು. ಪರಿಪಾಲಿಸಲ್ಪಟ್ಟವರು ಪ್ರೀತಿಸುವರು. ನಿಗ್ರಹಿಸಲ್ಪಟ್ಟವರಲ್ಲಿ ಅನೇಕರು ದ್ವೇಷಿಸುವರು. ಇದಕ್ಕೋಸ್ಕರವೇ ಪ್ರಭುತ್ವವು ಪುಷ್ಪದಿಂದ ಶೋಭಿತವಾದ ಹಂಸತೂಲಿಕಾತಲ್ಪಗಳಲ್ಲವೆಂದು ಪ್ರಾಜ್ಞರು ಹೇಳುವರು. ಇದರಿಂದಲೇ ಪ್ರಭುಗಳಿಗೆ ಆತ್ಮರಕ್ಷಣೆಗೋಸ್ಕರ ಬಿಚ್ಚುಕತ್ತಿ ಚಪರೆ ಮೊದಲಾದವುಗಳು ಸದಾ ಇಡಲ್ಪಟ್ಟಿರುವುವು. ಪ್ರಭುವಿನ ಪಾರ್ಶ್ವದಲ್ಲಿ

ಸದಾ ಜಾಣರಾದ, ಡಿಟೆಕ್ಟಿವ್ ವಿದ್ಯಾವಿಶಾರದರಾದ ಜನಗಳು ಇಡಲ್ಪಟ್ಟಿರುವರು. ಮುಖವನ್ನು ನೋಡಿ, ಜನಗಳ ಮನೋಗತವನ್ನು ತಿಳಿದುಕೊಳ್ಳುವುದು ಕಷ್ಟವಾದ ವಿದ್ಯೆಯಲ್ಲ. ಹರ್ಷಸಂತಾಪಗಳನ್ನು ತೋರಿಸುವುದಕ್ಕೆ ಮುಖವು ಆದರ್ಶಪ್ರಾಯವಾಗಿರುವುದು. ಒಬ್ಬ ಪ್ರಭುವಿನ ಭೇಟಿಗೆ ಒಬ್ಬ ಮನುಷ್ಯನು ಜಾಜ್ವಲ್ಯಮಾನವಾದ ಉಡಿಗೆ ತೊಡಿಗೆಗಳನ್ನು ಹಾಕಿಕೊಂಡು, ಪರಿವಾರ ಸಮೇತನಾಗಿ ಬಂದನು. ಭೇಟಿಗೆ ಬಂದಿದ ಸಾವಿರಾರು ಜನಗಳ ಮಧ್ಯದಲ್ಲಿ ಆತನು ಕೂತಿದ್ದನು. ಆ ಪ್ರಭುವು ಭೇಟಿ ಕೊಡುವುದಕ್ಕೆ ಬರುವಾಗ್ಯೆ, ಡಿಟೆಕ್ಟಿವ್ ಅಧಿಕಾರಿಯು ಭೇಟಿಗೆ ಬಂದಿರತಕ್ಕವರ ಮುಖಗಳನ್ನು ಇಣ್ಸ್ಪೆಕ್ಟ್ (ಪರೀಕ್ಷೆ) ಮಾಡಿಕೊಂಡು ಹೋದನು. ದರ್ಬಾರು ಹಾಲ್‌ನಿಂದ ಹೊರಕ್ಕೆ ಹೋಗಿ, ಆಯುಧಪಾಣಿಗಳಾದ ಪೊಲೀಸಿನವರನ್ನು ಕರೆದುಕೊಂಡು ಬಂದು, ಆ ಮನುಷ್ಯನನ್ನು ದಸ್ತಗಿರಿ ಮಾಡಿಸಿದನು. ಪ್ರಭುವು ಬಂದು ವಿಚಾರಣೆ ಮಾಡಿದನು. ಡಿಟೆಕ್ಟಿವ್ ಅಧಿಕಾರಿಯು ಇವನ ಜೇಬನ್ನು ಶೋಧಿಸಿ ಎಂದು ಹೇಳಿದನು. ಜಾರುಮಾಡಲ್ಪಟ್ಟ ರಿವಾಲ್ವರು ಒಂದು ಅವನ ಜೇಬಿನಲ್ಲಿ ಇದ್ದಿತು. ಇದಕ್ಕೆ ಕಾರಣವೇನೆಂದು ಪ್ರಭುವು ಕೇಳಲು, "ಈ ಡಿಟೆಕ್ಟಿವ್ ಆಫೀಸರು ನಿನ್ನ ಭಾಗದ ದೇವರು. ಅವನು ನಿನ್ನನ್ನು ರಕ್ಷಿಸಿರುವನು. ಭೇಟಿಯ ಕಾಲದಲ್ಲಿ ನಿನ್ನನ್ನು ಕೊಲ್ಲಬೇಕೆಂಬ ಸಂಕಲ್ಪದಿಂದ ನಾನು ಬಂದೆನು, ನನ್ನ ಮಿತ್ರನಾದ ಪರಂತಪನಿಗೆ ಗಡೀಪಾರು ರೂಪವಾದ ಶಿಕ್ಷೆಯನ್ನು ನೀನು ಮಾಡಿರುವೆ. ಅದಕ್ಕಾಗಿ ನಿನ್ನನ್ನು ಸಂಹರಿಸುವುದಕ್ಕೆ ನಾನು ಬಂದೆನು, ನಿನಗೆ ಆಯುಸ್ಸು ಇನ್ನೂ ಹೆಚ್ಚಾಗಿರುವುದು, ನನಗೆ ಆಯುಸ್ಸು ಮುಗಿದಿರಬೇಕು, ಹಾಗಿಲ್ಲದಿದ್ದರೆ, ನಾನು ಮಾಡಿದ ಏರ್ಪಾಡುಗಳೆಲ್ಲಾ ಈ ಡಿಟೆಕ್ಟಿವ್ ಅಧಿಕಾರಿಗೆ ತಿಳಿಯುವುದಕ್ಕೆ ಎಂದಿಗೂ ಅವಕಾಶವಾಗುತ್ತಿರಲಿಲ್ಲ. ಈಗ ನಿನ್ನ ಮನಸ್ಸಿಗೆ ಬಂದ ಶಿಕ್ಷೆಯನ್ನು ಮಾಡು" ಎಂದು ಹೇಳಿದನು. ಮೆಟೋಫಿಸ್ಸನ ಮುಖವನ್ನು ಮೆಂಟನು ನೋಡುತ್ತಿದ್ದಾಗ, ಈ ಕಥೆಯು ನನ್ನ ಸ್ಮೃತಿಪಥಕ್ಕೆ ಬಂದಿತು. ದರ್ಬಾರು ಬರಖಾಸ್ತಾದ ಕೂಡಲೆ, ನಾನು ಮೆಂಟರನ ಬಳಿಗೆ ಹೋಗಿ, ಮೆಟೋಫಿಸ್ಸನ ಸ್ವಭಾವವು ಹೇಗಿರಬಹುದೆಂದು ಕೇಳಿದೆನು. ಅದಕ್ಕೆ

"ಮೆಟೋಫಿಸ್ಸನ ಮನೋಭಾವವು ಸರಿಯಾಗಿಲ್ಲ. ಅವನ ಮಾತುಗಳು ಅವನ ಮನೋಭಾವದಂತೆ ಇರುವುದಿಲ್ಲ. ಭೂಗರ್ಭದಲ್ಲಿ ಉಂಟಾಗುವ ಪ್ರಚ್ಛನ್ನವಾದ ಔಷ್ಣ್ಯದಿಂದ ಲೋಹಾದಿಗಳೆಲ್ಲಾ ಕರಗಿ ಹೇಗೆ ಪರ್ವತಾಗ್ರಗಳಿಂದ ಉನ್ಮುಖವಾಗುತ್ತವೋ ಹಾಗೆ ಇವನ ಮನೋಭಾವವು ಇರುವುದು. ಅನಿರ್ವಚನೀಯವಾದ ಹೇಷ್ಯವೇನೋ ಇರುವುದು. ನಮಗೂ, ಸಸಾಟ್ರಿಸ್ಸನಿಗೂ ಏನೋ ವಿಪತ್ತು ಉಂಟಾಗಬಹುದು. ಬಂದದ್ದನ್ನೆಲ್ಲಾ ಅನುಭವಿಸಿಯೇ ತೀರಬೇಕು. ಇವನ

ಕೋಪಾಗ್ನಿಯು ನಮಗೆ ಕೇಡನ್ನು ಮಾಡಬಹುದು. ಆದರೆ, ಅದರಿಂದ ಅವನಿಗೆ ಮಂಗಳವು ಆಗುವುದಿಲ್ಲ. ಬಂದ ವಿಪತ್ತುಗಳನ್ನು ಅನುಭವಿಸುವುದಕ್ಕೆ ನಾವು ಸಿದ್ಧರಾಗಿಬೇಕು.''

ಈ ರೀತಿಯಲ್ಲಿ ಮೆಂಟರನು ಹೇಳಿದನು. ಇದನ್ನು ಕೇಳಿ, ನನಗೆ ತುಂಬಾ ವಿಷಾದವಾಯಿತು. ದಿಕ್ಕು ತೋರಲಿಲ್ಲ. ಕಳವಳ ಉಂಟಾಯಿತು ನಮ್ಮ ಕಷ್ಟಕ್ಕೆ ಪಾರವಿಲ್ಲದೆ ಹೋಗುವುದೋ ಏನೋ ಎಂಬ ಭಯವು ಉಂಟಾಯಿತು. ಈ ಭಯದಲ್ಲಿ ಮಲಗುವುದಕ್ಕೆ ಹೊರಟೆನು. ಅನೇಕ ವಿಧವಾದ ದುಸ್ವಪ್ನಗಳು ಆದವು. ಬೆಳಗಾಗುವುದರೊಳಗಾಗಿ ಸಸಾಟ್ರಿಸ್ಸನು ಕಾಲಾಧೀನನಾದನೆಂದು ವರ್ತಮಾನ ಹುಟ್ಟಿತು. ಅವನ ಅಕಾಲ ಮರಣಕ್ಕೆ ಅರಮನೆಯಲ್ಲಿ ವಾಸವಾಗಿರ ತಕ್ಕವರಲ್ಲಿ ಯಾರೋ ಕಾರಣಭೂತರೆಂಬದಾಗಿ ಗುಮಾನಿಯೂ ಕೂಡ ಎಲ್ಲಾ ಕಡೆಗಳಲ್ಲಿಯೂ ಹರಡಿಕೊಂಡಿತು. ಈ ವರ್ತಮಾನವನ್ನು ಕೇಳಿದ ಕೂಡಲೆ, ನನ ಗೆ ಅಪರಿಹಾರ್ಯವಾದ ವ್ಯಸನವು ಉಂಟಾಯಿತು. ಮೆಂಟರನ ಭಯವು ಈ ರೂಪ ವಾಗಿ ಪರಿಣಮಿಸಿತು. ಮೆಟೋಫಿಸ್ಸನು ಇಷ್ಟು ದುರಾತ್ಮನೆಂದು ನಾನು ಭಾವಿ ಸಿರಲಿಲ್ಲ. ಸಸಾಟ್ರಿಸ್ ಎಂಬುವನಿಗೆ ಬಾಕರಿಸ್ ಎಂಬ ಒಬ್ಬ ಮಗನಿದ್ದನು. ಅವನು ನಿರಕ್ಷರಕುಕ್ಷಿಯಾಗಿದ್ದನು ಅವನಿಗೆ ಭೂತದಯೆಯು ಇರಲಿಲ್ಲ. ಇವರು ಕ್ಷೇಮಚಿಂತಕರು, ಇವರು ಶತ್ರುಗಳು ಎಂಬ ತಿಳುವಳಿಕೆಯು ಅವನಿಗೆ ಇರಲಿಲ್ಲ ಅಪ್ರತಿಹತವಾದ ವಿಷಯಾಸಕ್ತಿಗೆ ಇವನು ದಾಸಾನುದಾಸನಾಗಿದ್ದನು. ಅಷ್ಟಮ ದಗಳಿಂದಲೂ ಇವನು ಪೀಡಿತನಾಗಿದ್ದನು. ಲೋಕವೆಲ್ಲಾ ತನ್ನ ಸೌಖ್ಯಕ್ಕೋ ಸ್ಕರ ಇರುವುದೆಂಬ ಭಾವನೆಯು ಇವನಿಗೆ ಪರಿಪೂರ್ಣವಾಗಿತ್ತು. ಸದಾ ವಿಷಯ ಸುಖಗಳಲ್ಲಿ ಇವನು ಮಗ್ನನಾಗಿರುತ್ತಿದ್ದನು. ಹೊನ್ನು, ಹೆಣ್ಣು, ಮಣ್ಣುಗಳಲ್ಲಿ ಇವನು ಕೇವಲ ಆಸಕ್ತನಾಗಿದ್ದನು ಇಂದ್ರ, ಚಂದ್ರ, ದೇವೇಂದ್ರನೆಂದು ಇವ ನನ್ನು ಹೊಗಳತಕ್ಕ ಸ್ತುತಿಪಾಠಕರೂ, ಪಾತಕಿಯರೂ ಇವನನ್ನು ಆವರಿಸಿ ಕೊಂಡಿದ್ದರು. ವಾಸ್ತವಾಂಶವನ್ನು ಹೇಳತಕ್ಕವರು ಇವನ ಬಳಿಗೆ ಹೋಗುವು ದಕ್ಕೂ ಅವಕಾಶವನ್ನು ಹೊಂದುತ್ತಿರಲಿಲ್ಲ. ನಿರಂಕುಶಪ್ರವರ್ತಕರಲ್ಲಿ ಇವನು ಅಗ್ರಗಣ್ಯನಾಗಿದ್ದನು. ಸಸಾಟ್ರಿಸ್ಸನ ವಿಷಯದಲ್ಲಿ ಇದ್ದ ಪ್ರೀತಿಯನ್ನು ಪ್ರಜೆಗಳು ಇವನಲ್ಲಿಯೂ ಇಟ್ಟಿದ್ದರು. ಆದರೆ, ಈ ಪ್ರೀತಿಗೆ ಅವನು ಅರ್ಹನಾಗಿರಲಿಲ್ಲ. ಮೆಟೋಫಿಸ್ಸನು ತನ್ನ ಇಂದ್ರಜಾಲ ಮಹೇಂದ್ರಜಾಲ ವಿದ್ಯೆಗಳಿಂದ ಸಸಾಟ್ರಿಸ್ಸ ನಿಗೆ ಅಕಾಲ ಮರಣ ಉಂಟಾಗುವಂತೆ ಮಾಡಿದ್ದಲ್ಲದೆ, ಅದಕ್ಕೆ ನಾನೂ, ಮೆಂಟ ರನೂ ಕಾರಣಭೂತರೆಂದು ಬಾಕರಿಸ್ಸನಿಗೆ ನಂಬಿಕೆಯನ್ನುಂಟುಮಾಡಿ, ನಮ್ಮನ್ನು ತಕ್ಷಣದಲ್ಲಿಯೇ ದಸ್ತಗಿರಿ ಮಾಡಿಸಿ, ಜೈಲಿನಲ್ಲಿ ಇರಿಸಿದನು. ಸಿಂಹ, ಹುಲಿ,

ಚಿರತೆ ಮೊದಲಾದವುಗಳನ್ನು ಕೊಡತಕ್ಕ ಬೋನುಗಳಲ್ಲಿ ನಾವು ಇಡಲ್ಪಟ್ಟೆವು. ಮಹಾತ್ಮರೆಂದು ನಮ್ಮನ್ನು ಪೂಜಿಸುತ್ತಿದ್ದವರೆಲ್ಲಾ ಮಹಾ ಪಾಪಿಗಳೆಂಬ ದಾಗಿಯೂ, ನಮ್ಮನ್ನು ಬೈಯ್ಯುವುದಕ್ಕೂ, ರೋಧನ ಮಾಡುವುದಕ್ಕೂ ಉಪಕ್ರಮಿಸಿದರು. ಇಥಾಕಾ ಪಟ್ಟಣಕ್ಕೆ ಮೆಂಟರನ ಜೊತೆಯಲ್ಲಿ ಹೋಗಬ ಹುದೆಂದು ನನಗೆ ಉಂಟಾಗಿದ್ದ ಸಂಕಲ್ಪವು ಮರೀಚಿಕಾವಸ್ಥೆಯನ್ನು ಹೊಂದಿತು. ನಾವು ನಿರಪರಾಧಿಗಳಾಗ್ಯೂ, ಇಂಥಾ ಅವಸ್ಥೆಯು ನಮಗೆ ಉಂಟಾಯಿ ತಲ್ಲಾ ಎಂದು ನಮಗೆ ತುಂಬಾ ವಿಷಾದವಾಯಿತು. ಬಹಳ ಧರ್ಮಿಷ್ಠ ನಾದ ಸಸಾಟ್ರಿಸ್ಸನನ್ನು ನಾವು ಕೊಂದೆವೆಂದು ಈ ದುರಾತ್ಮನು ವರ್ತಮಾನ ಹುಟ್ಟಿಸಿದ್ದರಿಂದ, ಜನಗಳು ನಮ್ಮನ್ನು ಚೂರುಚೂರಾಗಿ ಕತ್ತರಿಸಬೇಕೆಂಬುವಷ್ಟು ಕೋಪವನ್ನು ಹೊಂದಿದರು. ಇಂಥಾ ಅವಮಾನಕ್ಕೆ ಗುರಿಯಾಗುವುದಕ್ಕಿಂತ ದೇಹವನ್ನು ಬಿಡುವುದೇ ಉತ್ತಮವೆಂಬ ಭಾವನೆಯು ನನಗೆ ಉಂಟಾಯಿತು. ಶೀಘ್ರದಲ್ಲಿಯೇ ನಾವಿಬ್ಬರೂ ಗಲ್ಲಿಗೆ ಹಾಕಲ್ಪಡುವೆವೆಂಬದಾಗಿಯೂ ನನಗೆ ತೋ ರಿತು. ನಾವು ಇಡಲ್ಪಟ್ಟಿದ್ದ ಜೈಲು ಸಮುದ್ರ ತೀರದಲ್ಲಿತ್ತು. ಅಲ್ಲಿ ಹಗಲು ರಾತ್ರಿ ಗಳನ್ನು ಅತ್ಯಂತ ವ್ಯಸನದಿಂದ ನಾನು ಕಳೆಯುತ್ತಿದ್ದೆನು. ಹುಚ್ಚನಂತೆ ಬೋನಿನ ರಂಧ್ರಗಳಿಂದ ಸಮುದ್ರದ ಅಲೆಗಳನ್ನು ನೋಡುತ್ತಾ, ಶತಪಥಗಳನ್ನು ತುಳಿಯು ತ್ತಿದ್ದೆನು. ತೀರಕ್ಕೆ ಬರತಕ್ಕ ಹಡಗುಗಳನ್ನೂ, ತೀರದಿಂದ ಹೊರಡತಕ್ಕ ಹಡಗು ಗಳನ್ನೂ ನೋಡುತ್ತಾ, ನನಗೆ ಈ ಗತಿಯು ಬಂದಿತಲ್ಲಾ ಎಂದು ವ್ಯಸನ ಪಡುತ್ತಾ ಇದ್ದೆನು. ಈ ವ್ಯಸನದಲ್ಲಿ ಮುಳುಗಿ ತಪಿಸುತ್ತಿರುವಾಗ, ನನ್ನ ಬುದ್ಧಿಗೆ ನಾನಾ ವಿಧವಾದ ವಿಕಾರಗಳು ಉಂಟಾದವು. ಈ ವಿಕಾರದಲ್ಲಿ ನನಗೆ ಉಂಟಾದ ಸಂಕ ಲ್ಪಗಳನ್ನು ಹೇಳುವುದು ಅಸಾಧ್ಯ. ಆಗ ನನಗೆ ತೋರಿದ್ದೇನೆಂದರೆ —

"ಇದೇನು ವಿಚಿತ್ರ! ಈ ಪ್ರಪಂಚದಲ್ಲಿ ನಡೆಯುವ ವಿದ್ಯಮಾನಗಳಿಗೆ ಕಾರ ಣಭೂತನಾದವನೊಬ್ಬನಿರುವನೇ? ಲೋಕದಲ್ಲಿ ಸತ್ಯಕ್ಕೂ ಧರ್ಮಕ್ಕೂ ಅವಕಾಶ ವಿರುವುದೇ? ಸಕಲ ಸದ್ಗುಣಗಳಿಗೂ ನಿಧಿಯಾದ ಪರಬ್ರಹ್ಮನೊಬ್ಬನಿರುವನೇ? ಸೃಷ್ಟಿಸ್ಥಿತಿಪ್ರಳಯ ಕರ್ಮಗಳಿಗೆ ಅವನು ಕಾರಣಭೂತನೇ? ದುಷ್ಟನಿಗ್ರಹ ಶಿಷ್ಟ ಪರಿಪಾಲನೆಯು ಅವನ ಬಿರುದೇ? ಹಾಗಾದರೆ, ಸಸಾಟ್ರಿಸ್ ಸಾಯುವುದಕ್ಕೆ ಕಾರಣವೇನು? ನಿರಪರಾಧಿಗಳಾದ ನನಗೂ ಮೆಂಟರಿಗೂ ಈ ಅವಸ್ಥೆಯು ಬರು ವುದಕ್ಕೆ ಕಾರಣವೇನು? ಜಗದೀಶ್ವರನೊಬ್ಬನಿದ್ದ ಪಕ್ಷದಲ್ಲಿ, ಅವನಿಂದ ನಾವು ರಕ್ಷಿಸಲ್ಪಡಬೇಕಲ್ಲವೇ? ಈ ಮೆಟೋಫಿಸ್ಸನು ಶಿಕ್ಷಿಸಲ್ಪಡಬೇಕಲ್ಲವೇ? ಈ ರಕ್ಷಣೆಯಲ್ಲಿಯೂ, ಶಿಕ್ಷೆಯಲ್ಲಿಯೂ ಜಗದೀಶ್ವರನು ಪರಾಙ್ಮುಖನಾಗಿರುವುದಕ್ಕೆ ಕಾರಣವೇನು? ಜಗದೀಶ್ವರನು ಗಾಢವಾದ ನಿದ್ರೆಯಲ್ಲಿರುವನೇ? ಅಥವಾ ಇರು

ವುದಿಲ್ಲವೇ? ಈ ಪ್ರಪಂಚವೇ ಅನಾಯಕವಾದದ್ದೇ? ದುರ್ಮಾರ್ಗಪ್ರವರ್ತಕರು ಒಳ್ಳೇ ಸ್ಥಿತಿಯಲ್ಲಿರುವುದನ್ನೂ, ಸನ್ಮಾರ್ಗಪ್ರವರ್ತಕರು ಕೆಟ್ಟ ಸ್ಥಿತಿಯಲ್ಲಿರುವುದನ್ನೂ ಬಲವಾದ ಪ್ರಾಣಿಗಳು ಬಲವಿಲ್ಲದ ಪ್ರಾಣಿಗಳನ್ನು ಸಂಹರಿಸುವುದನ್ನೂ, ಸತ್ಯವಂತರೂ, ಧರ್ಮಿಷ್ಠರೂ ಕಷ್ಟಕ್ಕೆ ಗುರಿಯಾಗುವುದನ್ನೂ, ಪಾಪಿಷ್ಠರು ಪ್ರಬಲರಾಗುವುದನ್ನೂ ನೋಡಿದರೆ, ಈ ಪ್ರಪಂಚವು ಅನಾಯಕವಾದ್ದೆಂಬದಾಗಿಯೂ, ದೇವರೂ, ಸ್ವರ್ಗವೂ ಸುಳ್ಳೆಂಬದಾಗಿಯೂ, ವೇದಶಾಸ್ತ್ರಪುರಾಣೇತಿಹಾಸಗಳೆಲ್ಲಾ ಉನ್ಮತ್ತರಿಂದ ಬರೆಯಲ್ಪಟ್ಟ ಗ್ರಂಥಗಳೆಂಬದಾಗಿಯೂ ಪಾಪಕ್ಕೆ ಇರತಕ್ಕ ಪ್ರಾಶಸ್ತ್ಯವು ಪುಣ್ಯಕ್ಕೆ ಇರುವುದಿಲ್ಲವೆಂಬದಾಗಿಯೂ, ಇಂಥಾ ಪಾಪಮಯವಾದ ಪ್ರಪಂಚದಲ್ಲಿ ಇರುವುದಕ್ಕಿಂತಲೂ ದೇಹವನ್ನು ಬಿಡುವುದು ಉತ್ತಮವೆಂಬದಾಗಿಯೂ ಯೋಚಿಸುತ್ತಾ, ಒಂದೊಂದು ನಿಮಿಷವನ್ನು ಒಂದೊಂದು ಯುಗದಂತೆ ನಾನು ಈ ಬೋನಿನಲ್ಲಿ ಕಾಲವನ್ನು ಕಳೆಯುತ್ತಿದ್ದೆನು." ಆಗ ಪುನಃ ಒಂದು ಅಶರೀರವಾಕ್ಕು ಆಯಿತು. ಅದರಿಂದ ನನ್ನ ಶ್ರೋತ್ರಪಥಕ್ಕೆ ಬಿದ್ದದ್ದೇನೆಂದರೆ:—

"ಎಲೈ ಟಿಲಿಮಾಕಸ್ಸನೆ,—ನಿನ್ನ ಮನೋಭಾವವು ಪರೀಕ್ಷಿಸಲ್ಪಡುತ್ತಿರುವುದು. ಸಂಪತ್ತು ಬಂದಾಗ ಹಿಗ್ಗತಕ್ಕವರೂ, ವಿಪತ್ತು ಬಂದಾಗ ತಗ್ಗತಕ್ಕವರೂ ಲೋಕದಲ್ಲಿ ಬೇಕಾದ ಹಾಗೆ ಇರುವರು. ಅಂಥಾವರು ಪ್ರಭುತ್ವ ಮಾಡುವುದಕ್ಕೆ ಅರ್ಹರಲ್ಲ. ವಿಪತ್ತು ಬಂದ ಕಾಲದಲ್ಲಿ ಯಾರು ಹೆದರುವುದಿಲ್ಲವೋ, ಸಮಸ್ತ ಶುಭಾಶುಭಗಳೂ ಕರ್ಮಕ್ಕನುಸಾರವಾಗಿ ಬರುವುದನ್ನು ತಿಳಿದುಕೊಂಡು, ಬಂದ ಸಂಪತ್ತು ವಿಪತ್ತುಗಳನ್ನು ಯಾರು ಹರ್ಷವಿಷಾದಗಳಿಲ್ಲದೆ ಅನುಭವಿಸುವರೋ ಅವರು ಪ್ರಜಾರಂಜನೆಯನ್ನು ಮಾಡುವುದಕ್ಕೆ ದಕ್ಷರು. ನಿರಾಸೆಗೆ ಗುರಿಯಾಗಬೇಡ. ಈಗ ಧೈರ್ಯವನ್ನು ಅವಲಂಬಿಸು. ನಿನಗೆ ಮಂಗಳವಾಗುವುದು." ಎಂಬವಾಕ್ಕು ಕೇಳಬಂದಿತು.

ದಶದಿಕ್ಕುಗಳಿಗೂ ನನ್ನ ದೃಷ್ಟಿಯನ್ನು ಪ್ರಸರಿಸಿ ನೋಡಿದೆನು. ಎಲ್ಲಿಯೂ ಯಾರೂ ಇರಲಿಲ್ಲ. ಇದು ಜಗದೀಶ್ವರನ ಲೀಲೆಯೆಂದು ಗೊತ್ತುಮಾಡಿಕೊಂಡೆನು. ಇದೂ ಒಂದು ಅಶರೀರ ವಾಕ್ಕೆಂದು ತೋರಿತು. ನಾನು ಭ್ರಾಂತಿಯಿಂದ ಮೋಹಪರವಶನಾಗಿದ್ದೆನು. ಹೀಗಿರುವಾಗ್ಗೆ ಹಟತ್ತಾಗಿ ಲೇಶವೂ ನಿರೀಕ್ಷಣೆಯಿಲ್ಲದೆ ನಾನು ಇರುವ ತೀರಕ್ಕೆ ಬರುತ್ತಿದ್ದ ಅನೇಕ ಹಡಗುಗಳ ಧ್ವಜಸ್ತಂಭಗಳು ನನ್ನ ನೇತ್ರಪಥಕ್ಕೆ ಬಿದ್ದವು. ಈ ಹಡಗುಗಳು ಆದ್ಯಂತಗಳಿಲ್ಲದ ಕಾಡು ಗಿಡಗಳಂತೆ ಕಾಣಬಂದವು. ಅನುಕೂಲವಾದ ವಾಯುವಿನ ಸಹಾಯದಿಂದ ಹಡಗುಗಳೂ, ಬಹು ಜನಗಳಿಂದ ನಡೆಸಲ್ಪಡುತ್ತಿದ್ದ ದೋಣಿಗಳೂ ಇವುಗಳೆಲ್ಲಾ ನಾನು ಇರತಕ್ಕ ತೀರಕ್ಕೆ ಬಂದವು. ಎಲ್ಲೆಲ್ಲಿಯೂ ಗಲಿಬಿಲಿ ಶಬ್ದವು ಉಪಕ್ರಮವಾಗಿ ದಶದಿಕ್ಕು

ಗಳನ್ನೂ ವ್ಯಾಪಿಸಿತು. ಈಜಿಪ್ಟ್ ದೇಶದವರು ಶೀಘ್ರದಲ್ಲಿಯೇ ಆಯುಧಪಾಣಿಗಳಾಗಿ ಆತ್ಮರಕ್ಷಣೋಪಾಯವನ್ನು ಮಾಡಿಕೊಳ್ಳುವುದಕ್ಕೆ ಉಪಕ್ರಮಿಸಿದರು. ಶೀಘ್ರದಲ್ಲಿಯೇ ಇವುಗಳಲ್ಲಿ ಕೆಲವು ಫಿನೀಷಿಯರ್ ಹಡಗುಗಳೆಂಬದಾಗಿಯೂ, ಕೆಲವು ಸೈಪ್ರಸ್ ದ್ವೀಪದ ಹಡಗುಗಳೆಂಬದಾಗಿಯೂ ಗೊತ್ತಾಯಿತು. ನಾನು ಬಾಲ್ಯದಲ್ಲಿ ಗಣಿತಶಾಸ್ತ್ರದಲ್ಲಿಯೂ, ನಾವೆಯ ಶಾಸ್ತ್ರದಲ್ಲಿಯೂ ಕೂಲಂಕಷವಾಗಿ ವ್ಯಾಸಂಗ ಮಾಡಿದೆನು. ನಾನು ಬಂದೀಖಾನೆಗೆ ಹಾಕಲ್ಪಟ್ಟ ಮೇಲೆ ಈ ದೇಶದ ಕಕ್ಷಿಗಳೆರಡಕ್ಕೆ ಪರಸ್ಪರ ದ್ವೇಷವುಂಟಾಯಿತು. ಅವುಗಳಲ್ಲಿ ಒಂದು ಕಕ್ಷಿಯವರು ಇನ್ನೊಂದು ಕಕ್ಷಿಯವರನ್ನು ಮೂಲೋತ್ಪಾಟನ ಮಾಡಬೇಕೆಂಬ ಸಂಕಲ್ಪದಿಂದ ಫಿನೀಷಿಯರ್‌ರ ಸಹಾಯವನ್ನು ಕೇಳಿದರು. ಹೀಗೆ ಕೇಳುವುದಕ್ಕೆ ಬಾಕರಿಸ್ಸನ ದೌರಾತ್ಮ್ಯವೇ ಕಾರಣವಾಗಿತ್ತು. ಬಾಕರಿಸ್ಸನು ಮುಖಂಡನಾಗಿ ಯುದ್ಧಕ್ಕೆ ಹೊರಟನು. ಘೋರವಾದ ಯುದ್ಧವು ನಡೆಯಿತು. ಅನೇಕ ಲಕ್ಷ ಜನಗಳು ಕೊಲ್ಲಲ್ಪಟ್ಟರು. ಎಲ್ಲೆಲ್ಲಿಯೂ ರಕ್ತಪ್ರವಾಹವು ಹರಿಯುವುಕ್ಕೆ ಉಪಕ್ರಮವಾಯಿತು. ಈ ಪ್ರಭುವಿನ ರಥದ ಚಕ್ರಗಳು ರಕ್ತಮಯವಾದವು. ಎಲ್ಲೆಲ್ಲಿಯೂ ಹೆಣಗಳು ಬಿದ್ದಿದ್ದವು. ರಥಗಳ ಸಂಚಾರಕ್ಕೆ ಈ ಹೆಣಗಳೇ ಅಡಚಣೆಯಾದವು. ಈ ದೊರೆಯು ಸುಂದರನಾಗಿಯೂ, ಬಲಿಷ್ಠನಾಗಿಯೂ ಮತ್ತು ಇವನು ಕೇವಲ ಭಯಂಕರನಾಗಿಯೂ ಇದ್ದನು. ಇವನ ಕಣ್ಣುಗಳು ಬೆಂಕಿಯಂತೆ ಉರಿಯುತ್ತಿದ್ದವು. ಇವನಲ್ಲಿ ಸಿರಾಸೆಯು ತೋರುತ್ತಿತ್ತು. ಬಹಳ ಅಪಾಯಕರವಾದ ಸ್ಥಳಗಳಿಗೂ ನುಗ್ಗಿ ಇವನು ಯುದ್ಧ ಮಾಡುತ್ತಿದ್ದನು. ಇವನಿಗೆ ಎಷ್ಟು ಶಕ್ತಿ ಇತ್ತೋ ಅಷ್ಟು ವಿವೇಕವಿದ್ದಂತೆ ತೋರಿಬರಲಿಲ್ಲ. ತಪ್ಪುಗಳನ್ನು ತಿದ್ದಿಕೊಳ್ಳುವುದಕ್ಕೂ, ಜಯವಾಗುವಂತೆ ಏರ್ಪಾಡುಗಳನ್ನು ಮಾಡುವುದಕ್ಕೂ ಇವನಿಗೆ ಶಕ್ತಿಯು ಇರಲಿಲ್ಲ. ಸನ್ನಿಹಿತವಾದ ವಿಪತ್ತುಗಳನ್ನು ಇವನು ನಿರ್ಲಕ್ಷ್ಯದಿಂದ ಕಾಣುತ್ತಿದ್ದನು. ತನ್ನ ಸೈನ್ಯಗಳನ್ನು ಸೇರಿಸಿ, ಹೇಗೆ ವ್ಯೂಹರಚನೆಯನ್ನು ಮಾಡಬೇಕೋ, ಆತ್ಮರಕ್ಷಣೆಯನ್ನು ಹೇಗೆ ಮಾಡಿಕೊಳ್ಳಬೇಕೋ ಶತ್ರುಗಳ ವ್ಯೂಹವನ್ನು ಹೇಗೆ ಭೇದಿಸಬೇಕೋ ಅದು ಇವನಿಗೆ ಚನ್ನಾಗಿ ತಿಳಿದಿರಲಿಲ್ಲ. ಬರಿಯ ಧೈರ್ಯವೂ, ಸಾಹಸವೂ ಪ್ರಯೋಜನಕಾರಿಯಾಗುವುದಿಲ್ಲ. ಉಪಾಯಗಳ ಸಂಯೋಗದಿಂದ ಪ್ರಯೋಜನವಾಗುವುದು. ಹಾಗೆ ಸಂಯೋಗ ಮಾಡುವ ಶಕ್ತಿಯು ಇವನಿಗೆ ಇರಲಿಲ್ಲವೆಂದು ಗೊತ್ತಾಯಿತು. ಕಷ್ಟಪಟ್ಟವರಿಗೆ ಕಷ್ಟಕಾಲದಲ್ಲ ಹೇಗೆ ನಡೆದುಕೊಳ್ಳಬೇಕೋ ಅದು ಗೊತ್ತಾಗುವುದು. ಶ್ರೀಮಂತರಿಗೆ ಅದು ಗೊತ್ತಾಗುವುದಿಲ್ಲ. ಪ್ರಭುತ್ವ ಮಾಡತಕ್ಕವರ ಬಳಿಯಲ್ಲಿ ಸ್ತುತಿಪಾಠಕರು ಸೇರುವರು. ಪ್ರಭುಗಳ ತಪ್ಪುಗಳೂ, ನ್ಯೂನಾತಿರಿಕ್ತಗಳೂ ಗುಣಗಳಂತೆ ಶ್ಲಾಘ

ಸಲ್ಪಡುವುವು. ಸಂಪತ್ತು, ಪದವಿ, ಅಧಿಕಾರ ಮೊದಲಾದವುಗಳೆಲ್ಲಾ ನಿಷ್ಕಂಟಕವಾದವುಗಳೆಂದು ಪರಿವಾರ ದೇವತೆಗಳು ಇವರಿಗೆ ಪ್ರತ್ಯಯವನ್ನುಂಟುಮಾಡುವರು. ಪ್ರಭುಗಳ ಸಂಕಲ್ಪಕ್ಕೆ ಯಾವ ಪ್ರತಿಬಂಧಕವೂ ಒದಗುವುದಿಲ್ಲವೆಂಬ ನಂಬಿಕೆಯು ಇವರಿಗೆ ಹುಟ್ಟಿಸಲ್ಪಡುವುದು. ತಾವೇ ದೇವತಾಂಶ ಪುರುಷರೆಂಬದಾಗಿ ಇಂಥಾ ಪ್ರಭುಗಳು ತಿಳಿದುಕೊಳ್ಳುವರು. ಪ್ರತಿಭಟಿಸಿದವರ ಮೇಲೆ ಇವರಿಗೆ ಕೋಪವುಂಟಾಗುವುದು. ಆ ಕೋಪದಲ್ಲಿ ಯುಕ್ತಾಯುಕ್ತ ಪರಿಜ್ಞಾನವು ಇವರಿಗೆ ಹೋಗುವುದು. ದುರಾಗ್ರಹಪರವಶರಾಗಿ, ಮಾಡಬಾರದ ಕೆಲಸಗಳನ್ನು ಮಾಡಿ, ಅನರ್ಥಕ್ಕೆ ಗುರಿಯಾಗುವರು. ಅಲೆಗ್ಝಾಂಡರ್ ದಿ ಗ್ರೇಟ್ ಎಂಬ ಪ್ರಭುವು ಅರಿಸ್ಟೋಟಲ್ ಎಂಬ ತನ್ನ ಗುರುವಿನ ಪ್ರಸಾದದಿಂದ ಸಕಲ ವಿದ್ಯಾವಿಶಾರದನಾದನು. ಶಿಷ್ಯನೆಂಬ ಭಾವನೆಯಿಂದ ಅವನು ಮಾಡಿದ ಕೆಲವು ತಪ್ಪುಗಳನ್ನು ತೋರಿಸಿದ ಕೂಡಲೆ, ಅಲೆಗ್ಝಾಂಡರನು ಗುರುವಧೆಯನ್ನೂ ಕೂಡ ಮಾಡಿ, ಮಹಾ ಪಾಪಿಯಾದನು. ಪ್ರಭುಗಳಲ್ಲಿ ಇದ್ದದ್ದು ಇದ್ದ ಹಾಗೆ ಹೇಳುವುದು ಕಷ್ಟ. ಹಾಗೆ ಹೇಳಿದರೆ, ಅವರಿಗೆ ಕೆಂಡದಂಥಾ ಕೋಪವು ಬರುವುದುಂಟು. ಪ್ರಿಯವಾದಿಗಳಾದ ಜನಗಳು ಬೇಕಾದ ಹಾಗೆ ಸಿಕ್ಕುವರು. ಸ್ತುತಿಪಾಠಗಳಿಂದ ಸಂತೋಷಪರರಾಗಿ, ಅಪಾತ್ರದಲ್ಲಿ ಪ್ರಸನ್ನತೆಯನ್ನು ತೋರಿಸುವ ಪ್ರಭುಗಳು ಬೇಕಾದಹಾಗೆ ಸಿಕ್ಕುವರು. ಅಪ್ರಿಯವಾದಾಗ್ಯೂ, ಪರಿಣಾಮದಲ್ಲಿ ಶ್ರೇಯಸ್ಕರವಾಗುವ ಹಿತೋಕ್ತಿಗಳನ್ನು ನಿರ್ಭಯವಾಗಿ ಹೇಳತಕ್ಕವರು ಅಪೂರ್ವ. ಅಂಥಾ ಹಿತೋಕ್ತಿಗಳನ್ನು ಕೇಳತಕ್ಕವರೂ ಅಪೂರ್ವ. ಈ ಬಾಕರಿಸ್ಸನಲ್ಲಿ ಪರಾಕ್ರಮ ಒಂದು ಮಾತ್ರ ಪರಾಕಾಷ್ಠದೆಸೆಯನ್ನು ಹೊಂದಿತ್ತು. ಪರಿಣಾಮ ಫಲವನ್ನು ನೋಡಿ, ಉದ್ಯೋಗ ಮಾಡುವ ಶಕ್ತಿಯು ಇವನಿಗೆ ಇರಲಿಲ್ಲ. ಇವನು ಬಹು ಧೈರ್ಯದಿಂದ ಯುದ್ಧಮಾಡಿದನು. ಆದರೆ, ಇವನ ಭೃತ್ಯರು ಘನಮಪಿಯರ್ಕರ ಪಟುಗಳನ್ನು ತಡೆಯಲಾರದೆ, ತಮ್ಮ ಯಜಮಾನನ್ನು ಶತ್ರುಗಳ ವಶಕ್ಕೆ ಬಿಟ್ಟು, ಓಡಿಹೋದರು. ಭೃತ್ಯರ ಅನುರಾಗಕ್ಕೆ ಪಾತ್ರರಾಗುವುದು ಸುಲಭವಲ್ಲ. ದಯಾರ್ದ್ರಹೃದಯರಿಗೂ, ಅದ್ಭುತಸಿದ್ಧಿಯುಳ್ಳವರಿಗೂ ಈ ಶಕ್ತಿಯು ಬರುವುದು. ಸಾಮಾನ್ಯ ಜನಗಳಿಗೆ ಬರುವುದಿಲ್ಲ.

ಬೈರಾಂಖಾನನನ್ನು ಷರ್ ಖಾನನು ಆಗ್ರಾ ಯುದ್ಧದಲ್ಲಿ ಸೋಲಿಸಿ, ಅಟ್ಟಿಕೊಂಡು ಹೋದನು. ಅವನೂ ಅವನ ಭೃತ್ಯನೊಬ್ಬನೂ ಇಬ್ಬರೂ ಯುದ್ಧರಂಗದಿಂದ ಓಡಿ ಹೋದರು. ಷರ್ ಖಾನನ ಕಡೆಯವರು ಇವರನ್ನು ಹಿಡಿಯುವುದಕ್ಕೆ ಅಟ್ಟಿಕೊಂಡು ಹೋದರು ಕೊನೆಗೆ ತುಂಬಾ ಆಯಾಸವನ್ನು ಹೊಂದಿ; ಬೈರಾಂಖಾನನೂ, ಅವನ ಭೃತ್ಯನೂ ಧಮಿಕ್ಕನಾಪ ಒಬ್ಬ ಅಟಟಟಾ ಗುಡವ

ಲನ್ನು ಪ್ರವೇಶಿಸಿದರು. ಸ್ವಲ್ಪ ಹೊತ್ತಿನಲ್ಲಿ ಷರ್‌ಖಾನನ ಸೈನ್ಯದವರು, ಅವರಿಬ್ಬರೂ ಆ ಗುಡಿಸಲಿಗೆ ಬಂದರೆಂದು ವರ್ತಮಾನವನ್ನು ಕೇಳಿ, ಅಲ್ಲಿಗೆ ಬಂದರು. ಅವರು ಬರುವಾಗ್ಯೆ ಬೈರಾಮುಖಾನನ ಭೃತ್ಯನು ಅವನಿಗೆ ಹೇಳಿದ್ದೇನೆಂದರೆ :—

"ಚಿಕ್ಕ ವಯಸ್ಸಿನಿಂದ ನನ್ನನ್ನು ನೀನು ಪುತ್ರನಿರ್ವಿಶೇಷವಾಗಿ ಸಾಕಿದೆ. ಇದಕ್ಕೆ ಪ್ರತಿಫಲವನ್ನುಂಟುಮಾಡುವ ಕಾಲವು ಈಗ ಬಂದಿದೆ. ನಿನ್ನ ಉಡಿಗೆ ತೊಡಿಗೆಗಳನ್ನು ನನಗೆ ಕೊಡು. ಈ ಕುರುಬನ ಉಡಿಗೆಗಳನ್ನು ನೀನು ಹಾಕಿಕೊ. ಶತ್ರುಗಳ ಮೇಲೆ ಬಿದ್ದು, ಸಾಧ್ಯವಾದಷ್ಟು ಜನಗಳನ್ನು ಕೊಂದು ಬದುಕುವುದಕ್ಕೆ ಅವಕಾಶವಿಲ್ಲದೆ ಹೋದರೆ, ನಾನು ದೇಹವನ್ನು ಬಿಡುವೆನು. ಈ ಮನೆಗೆ ಹಿಂದೆ ಒಂದು ಬಾಗಿಲು ಇರುವುದು. ಕುರುಬನ ವೇಷದಿಂದ ನೀನು ಹೊರಟು ಹೋಗು. ಜೀವವನ್ನು ರಕ್ಷಿಸಿಕೊಂಡಿದ್ದರೆ, ಚಕ್ರಾಧಿಪತ್ಯವನ್ನೂ ಕೂಡ ನೀನು ಆಳಬಲ್ಲೆ. ನನ್ನಲ್ಲಿ ದಯೆಯನ್ನು ಇಟ್ಟು ಈ ಸಲಹೆಗೆ ಒಪ್ಪು." ಎಂದು ಹೇಳಿದನು.

"ನನಗೆ ಚಕ್ರಾಧಿಪತ್ಯವೂ ಬೇಡ. ಈ ಅಖಂಡ ಬ್ರಹ್ಮಾಂಡದ ಆಧಿಪತ್ಯವನ್ನು ನನಗೆ ಕೊಟ್ಟಾಗ್ಯೂ, ಅದಕ್ಕೆ ಪ್ರತಿಯಾಗಿ ನಿನ್ನ ಪ್ರಾಣಕ್ಕೆ ಅಪಾಯ ತರುವುದು ನನಗೆ ಇಷ್ಟವಿಲ್ಲ. ಹುಟ್ಟಿದ ಮೇಲೆ ಸಾಯುತಕ್ಕದ್ದು ತಪ್ಪುವುದಿಲ್ಲ. ಭೃತ್ಯನನ್ನು ಬಲಿಕೊಟ್ಟು, ನಾನು ಎಷ್ಟು ಯುಗಗಳು ಬದುಕುವೆನು ? ಇದಕ್ಕೆ ನಾನು ಎಂದಿಗೂ ಒಪ್ಪುವುದಿಲ್ಲ. ನಮ್ಮಿಬ್ಬರಿಗೂ ವಿಪತ್ತು ಬಂದಿದೆ. ಇಬ್ಬರೂ ಅದನ್ನು ಅನುಭವಿಸೋಣ. ಜಗದೀಶ್ವರನ ಇಷ್ಟವಿದ್ದಂತೆ ನಡೆಯಲಿ." ಎಂದು ಬೈರಾಮುಖಾನನು ಹೇಳಿದನು.

ಈ ರೀತಿಯಲ್ಲಿ ಅವನು ಮಾಡಿದ ಸಂಕಲ್ಪವನ್ನು ನೋಡಿ, ಈ ಭೃತ್ಯನು ಒಂದು ಬಟ್ಟೆಯ ಚಂಡನ್ನು ಮಾಡಿ, ಬೈರಾಮುಖಾನನ ಬಾಯಿಗೆ ತುರುಕಿ, ಕೈಕಾಲುಗಳನ್ನು ಕಟ್ಟಿಹಾಕಿ, ಅವನನ್ನು ಆ ಗುಡಿಸಲಿನ ಒಂದು ಮೂಲೆಯಲ್ಲಿ ಕೆಡವಿ; ಅವನ ಪೋಷಕನ್ನು ತೆಗೆದುಕೊಂಡು, ತಾನು ಹಾಕಿಕೊಂಡು ಸಿದ್ಧವಾಗುವುದಕ್ಕೆ ಸರಿಯಾಗಿ ಷರ್‌ಖಾನನ ಸೈನ್ಯದವರು ಆ ಗುಡಿಸಲಿನ ಬಾಗಿಲನ್ನು ಕಿತ್ತುಹಾಕಿ, ಒಳಕ್ಕೆನುಗ್ಗಿದರು. ಈ ಭೃತ್ಯನಿಗೂ, ಅವರಿಗೂ ಭಯಂಕರವಾದ ಯುದ್ಧವು ಆಯಿತು. ಅವರಲ್ಲಿ ಅನೇಕರನ್ನು ಇವನು ಕೊಂದನು. ಕೊನೆಗೆ ಅವರಲ್ಲಿ ಕೆಲವರು ಇವನ ಶಿರಚ್ಛೇದನವನ್ನು ಮಾಡಿ, ಇವನೇ ಬೈರಾಂಖಾನನೆಂದು ತಿಳಿದುಕೊಂಡು, ಸದರಿ ಶಿರಸ್ಸನ್ನು ತೆಗೆದುಕೊಂಡು ಷರ್‌ಖಾನನ ಬಳಿಗೆ ಹೊರಟು ಹೋದರು.

ಈ ಭೃತ್ಯನು ಹೇಳಿದಂತೆ ಬೈರಾಂಖಾನನು ಹುಮಾಯೂನನ ಚಕ್ರಾಧಿಪತ್ಯಕ್ಕೂ, ಅಕ್ಬರನ ಕಾಲದಲ್ಲಿ ರೀಜಂಟಾಗಿ ಚಕ್ರಾಧಿಪತ್ಯವನ್ನು ಮಾಡುವ ಸ್ಥಿತಿಗೂ ಬಂದನು. ಭೃತ್ಯರಲ್ಲಿ ಬೈರಾಂಖಾನನಂತೆ ಪುತ್ರನಿರ್ವಿಶೇಷವಾದ ಪ್ರೀತಿಯನ್ನು ಇಟ್ಟರೆ, ಪಿತೃನಿರ್ವಿಶೇಷವಾದ ಪ್ರೀತಿಯನ್ನು ಅವರು ಇಡುವುದೇನಾಶ್ಚರ್ಯ!

ಡಾಕರಿಸ್ಸನ ಭೃತ್ಯರು ಇವನನ್ನು ಶತ್ರುಗಳಿಗೆ ಒಪ್ಪಿಸಿ, ತಮ್ಮ ಪ್ರಾಣರಕ್ಷಣೋಪಾಯದಲ್ಲಿ ಆಸಕ್ತರಾದದ್ದನ್ನು ನೋಡಿದರೆ, ಇವನಿಗೂ, ಇವನ ಭೃತ್ಯರಿಗೂ ಇದ್ದ ಪರಸ್ಪರ ಪ್ರೀತಿಯು ಎಂಥಾದ್ದೋ ಅದು ಗೊತ್ತಾಗುವುದು. ಇವನ ಭೃತ್ಯರು ಓಡಿಹೋದ ಕೂಡಲೆ, ಫಿಸೀಷಿಯರ್‌ರಲ್ಲಿ ಕೆಲವರು ಇವನ ಕಡೆಗೆ ನುಗ್ಗಿದರು. ಇವನು ಭಯಭ್ರಾಂತನಾದನು. ಲಗಾಮುಗಳು ಇವನ ಕೈಯಿಂದ ಜಾರಿದವು. ರಥವು ನಿಲ್ಲಿಸಲ್ಪಟ್ಟಿತು. ಸೈಪ್ರೆಸ್ ದ್ವೀಪದ ಒಬ್ಬ ಯೋಧನು ಈತನ ಶಿರಸ್ಸನ್ನು ಛೇದಿಸಿ, ಅದನ್ನು ಫಿಸೀಷಿಯರ್‌ರಿಗೂ, ಅವರು ಯಾರ ಪಕ್ಷದಲ್ಲಿ ಯಾರ ರಕ್ಷಣೆಗೆ ಸಹಾಯ ಮಾಡುವುದಕ್ಕೆ ಬಂದಿದ್ದರೋ ಅವರಿಗೂ ತೋರಿಸಿದನು. ಈ ದೊರೆಯ ಶಿರಸ್ಸು ಸರ್ವರಿಗೂ ಕಾಣುವಂತೆ ಬಾವುಟದ ಮೇಲೆ ಚಡಾಯಿಸಲ್ಪಟ್ಟಿತು. ಅತ್ಯಂತ ಮನೋಹರವಾಗಿದ್ದ ಈ ಪ್ರಭುವಿನ ಮುಖವು ನೋಡತಕ್ಕವರಿಗೆ ಭಯವನ್ನುಂಟುಮಾಡಿತು. ಕಣ್ಣುಗಳು ಇಳಿಬಿದ್ದಿದ್ದವು. ಮುಖವು ಬಿಳಚಿಕೊಂಡು ವಿಕಾರವಾಗಿತ್ತು. ಬಾಯಿಯು ಏನೋ ಹೇಳುವುದಕ್ಕೆ ಉಪಕ್ರಮ ಮಾಡಿದವನ ಬಾಯಿನಂತೆ ಅರ್ಧಮಟ್ಟಿಗೆ ತೆರೆಯಲ್ಪಟ್ಟಿತ್ತು. ಅಹಂಕಾರವೂ, ದರ್ಪವೂ ಮುಖದಲ್ಲಿ ಮೂರ್ತಿಮತ್ತಾಗಿದ್ದವು. ಮರಣವನ್ನು ಹೊಂದಿದ್ದರೂ ಮುಖದಲ್ಲಿ ಪ್ರಭುಚಿಹ್ನೆಗಳು ಹೋಗಿರಲಿಲ್ಲ. ಛೇದಿಸಲ್ಪಟ್ಟ ಈ ತಲೆಯನ್ನು ನೋಡಿದ ಕೂಡಲೆ, ಚಿತ್ರವಿಚಿತ್ರವಾದ ಮನೋವಿಕಾರಗಳು ನನಗೆ ಉಂಟಾದವು. ನನಗೆ ತೋರಿದ್ದೇನೆಂದರೆ :—

ಪ್ರಭುಗಳ ಅವಸ್ಥೆಗಿಂತ ಕಾಡು ಕುರುಬರ ಸ್ಥಿತಿಯೂ ಕೂಡ ಉತ್ತಮವಾದದ್ದಲ್ಲವೇ? ಕಷ್ಟಕಾಲದಲ್ಲಿ ಅವರ ಹೆಂಡತಿ ಮಕ್ಕಳೂ, ಭೃತ್ಯರೂ ಅವರನ್ನು ಈ ರೀತಿಯಲ್ಲಿ ಬಿಡುವುದಿಲ್ಲ. ಪ್ರಭುತ್ವ ಮಾಡುವುದು ಸುಲಭವಲ್ಲ. ಎಲ್ಲಾ ಪ್ರಜೆಗಳೂ ಬೈರಾಮುಖಾನನನ್ನು ಅವನ ಭೃತ್ಯನು ಪ್ರೀತಿಸಿದ ಹಾಗೆ ಪ್ರೀತಿಸುವಂತೆ ಮಾಡುವ ಶಕ್ತಿಯು ಪ್ರಭುವಿಗೆ ಇದ್ದರೆ, ಪ್ರಭುತ್ವ ಮಾಡಬೇಕು. ಹಾಗೆ ಇಲ್ಲದಿದ್ದರೆ, ವೈರಾಗ್ಯವನ್ನು ಆಶ್ರಯಿಸಿ, ತಪೋವನವನ್ನು ಪ್ರವೇಶಿಸಿ, ಜಗದೀಶ್ವರನ ಲೀಲೆಗಳನ್ನು ಪರಿಶೀಲಿಸುತ್ತಾ, ಕಾಲಕ್ಷೇಪ ಮಾಡಬೇಕು. ಸಸಾಟ್ರಿಸ್ಸನು ಚಕ್ರವರ್ತಿಗಳಲ್ಲಿ ಅಗ್ರಗಣ್ಯನು. ಅನೇಕ ದೇಶಗಳನ್ನು ಜಯಿಸಿ, ಸಾಮಂತ ರಾಜರಿಂದ ಮನಃಪೂರ್ವಕವಾಗಿ ಎಳೆಯಲ್ಪಟ್ಟ ರಥವನ್ನು ಅಲಂಕರಿಸಿದನು. ಅಂಥವನ ಮಗನಾಗಿ, ಚಕ್ರವರ್ತಿ

ಪದವಿಯಲ್ಲಿದ್ದವನಿಗೆ ಈ ಗತಿಯು ಉಂಟಾಯಿತು. ಮಿಕ್ಕವರ ಪಾಡೇನು! ದೇವರು ಯಾರಿಗೆ ಹೆಚ್ಚು ಸಂಪತ್ತನ್ನೂ, ಹೆಚ್ಚು ಅಧಿಕಾರವನ್ನೂ, ಲೋಕೋತ್ತರವಾದ ಪದವಿಯನ್ನೂ ಕೊಡುವನೋ ಅವರಿಂದ ಹೆಚ್ಚು ಮಹತ್ತನ್ನು ಅಪೇಕ್ಷಿಸುವನೆಂದು ತೋರುತ್ತದೆ. ಈ ಚಕ್ರವರ್ತಿಯು ತನ್ನ ತಂದೆಯಂತೆ ಪ್ರಜಾರಂಜನೆಯಲ್ಲಿ ಆಸಕ್ತನಾಗಲಿಲ್ಲ. ಅವರ ಕ್ಷೇಮವೇ ತನ್ನ ಕ್ಷೇಮವೆಂದೂ, ಅವರ ಲಾಭನಷ್ಟಗಳೇ ತನ್ನ ಲಾಭನಷ್ಟಗಳೆಂದೂ ತಿಳಿದುಕೊಂಡು, ಅದನ್ನು ಅನುಷ್ಠಾನಕ್ಕೆ ತಂದುಕೊಳ್ಳಲಿಲ್ಲ. ಚಕ್ರವರ್ತಿ ಪದವಿಯು ದೋಷಗಳನ್ನು ಮುಚ್ಚುವುದೆಂದು ತಿಳಿದುಕೊಂಡನು. ಐಶ್ವರ್ಯ ಮದದಿಂದಲೂ ಪ್ರತಿನಿವಿಷ್ಟನಾದನು. ಹಾಗಾಗುವುದರಿಂದ, ಪರಿಣಾಮ ಫಲವೇನಾಗುವದೋ ಅದನ್ನು ಯೋಚಿಸಲಿಲ್ಲ. ಯೋಚಿಸುವ ಶಕ್ತಿಯನ್ನೂ ಅವನು ಸಂಪಾದಿಸಿಕೊಳ್ಳಲಿಲ್ಲ. ಉದರ ನಿಮಿತ್ತವಾಗಿ ನೀನೇ ಇಂದ್ರ, ಚಂದ್ರ, ದೇವೇಂದ್ರನೆಂದು ಹೊಗಳತಕ್ಕವರ ಮಾತು ನಿಜವೆಂದು ಭಾವಿಸಿದನು. ಸತ್ಯಕ್ಕೂ, ಧರ್ಮಕ್ಕೂ ಸಂಪೂರ್ಣವಾದ ಅವಕಾಶವನ್ನು ಕೊಡಲಿಲ್ಲ. ದುಷ್ಟನಿಗ್ರಹ ಶಿಷ್ಟಪರಿಪಾಲನವನ್ನು ಸರಿಯಾಗಿ ಮಾಡಲಿಲ್ಲ. ತನ್ನ ಅಧಿಕಾರದ ಚಲಾವಣೆಗೆ ತಾನು ದೇವರಿಗೂ, ಮನುಷ್ಯರಿಗೂ ಉತ್ತರವಾದಿಯೆಂದು ತಿಳಿದುಕೊಳ್ಳಲಿಲ್ಲ. ದೇಶದಲ್ಲಿ ಕಕ್ಷಿಗಳಿಗೆ ಅವಕಾಶಕೊಟ್ಟನು. ತನ್ನದೇ ಒಂದು ಕಕ್ಷಿಯನ್ನು ಮಾಡಿಕೊಂಡನು. ಪ್ರತಿಕಕ್ಷಿಗಳುಂಟಾಗುವುದಕ್ಕೆ ಅವಕಾಶ ಕೊಟ್ಟನು. ಒಂದು ಕಕ್ಷಿಗೆ ತಾನು ಸೇರಿದ್ದರಿಂದ, ಪ್ರತಿಕಕ್ಷಿಗಳನ್ನು ಮೂಲೋತ್ಪಾಟನ ಮಾಡುವುದು ಸುಲಭವೆಂದು ತಿಳಿದುಕೊಂಡನು.

ನಮ್ಮನ್ನು ಯಾರಾದರೂ ಸ್ತುತಿಸಿದರೆ, ಹೀಗೆ ಸ್ತುತಿಸುವುದಕ್ಕೆ ಕಾರಣವೇನೆಂದು ಪರ್ಯಾಲೋಚಿಸಬೇಕು. 'ಸ್ತುತಿಸತಕ್ಕವರು ಮನಃಪೂರ್ವಕವಾಗಿ ಸ್ತುತಿಸುತ್ತಾರೆಯೇ? ಅಥವಾ ಲಾಭದ ಮೇಲೆ ದೃಷ್ಟಿಯಿಟ್ಟು ಸ್ತುತಿಸುತ್ತಾರೆಯೇ?' ಎಂಬುದನ್ನು ಪರ್ಯಾಲೋಚಿಸಬೇಕು. ಲಾಭದ ಮೇಲೆ ದೃಷ್ಟಿಯಿಟ್ಟು ಸ್ತುತಿಸಿದರೆ, ಅವರ ಇಷ್ಟಾರ್ಥವನ್ನು ಸಲ್ಲಿಸುವುದು ಧರ್ಮವೇ ಅಧರ್ಮವೇ? ಅದರ ಪರಿಣಾಮ ಫಲವು ಹೇಗಾಗುವುದು? ಎಂದು ಪರ್ಯಾಲೋಚಿಸಬೇಕು. ನಮ್ಮನ್ನು ಯಾರಾದರೂ ನಿಂದಿಸಿದರೆ, ಅವರು ಹೀಗೆ ನಿಂದಿಸುವುದಕ್ಕೆ ಕಾರಣವೇನು? ಎಂದು ಪರ್ಯಾಲೋಚಿಸಬೇಕು. ನಮ್ಮಲ್ಲಿ ಇರತಕ್ಕ ದುರ್ಗುಣಗಳು ನಿಂದೆಗೆ ಕಾರಣವಾಗಿದ್ದರೆ ಅವುಗಳನ್ನು ತಿದ್ದಿಕೊಳ್ಳಬೇಕು. ನಾವು ಮಾಡಿದ ದುಷ್ಟನಿಗ್ರಹದಿಂದ ದುರಾಗ್ರಹವನ್ನು ಹೊಂದಿ, ನಮ್ಮನ್ನು ನಿಂದಿಸಿದರೆ, ಅಂಥಾ ನಿಂದೆಯ ವಿಷಯದಲ್ಲಿ ಉದಾಸೀನರಾಗಬೇಕು. ವಾಸ್ತವಾಂಶವು ಪ್ರಕಾಶವಾಗುವಂತೆ ಮಾಡಿಸಬೇಕು. ಈ ವಿಷಯಗಳೆಲ್ಲಾ ಈ ಚಕ್ರವರ್ತಿಗೆ ತಿಳಿಯುವುದಕ್ಕೆ ಅವಕಾ

ತವಾಗಲಿಲ್ಲ. ಜ್ಞಾನವು ಮೋಕ್ಷಕ್ಕೂ, ಅಜ್ಞಾನವು ಬಂಧನಕ್ಕೂ ಕಾರಣವಾಗುವುದೆಂದು ಹಿರಿಯರು ಹೇಳುತ್ತಾರೆ. ಈ ಭಾಗದಲ್ಲಿ ಇದಕ್ಕಿಂತಲೂ ಬೇರೆ ದೃಷ್ಟಾಂತವು ಬೇಕಾಗಿಲ್ಲ. ಬಹಳ ಪಾಪ ಮಾಡಿದವರು ಪ್ರಭುಗಳಾಗುವರು. ಬಹಳ ಪುಣ್ಯ ಮಾಡಿದವರೂ ಪ್ರಭುಗಳಾಗುವರು. ಪಾಪ ಮಾಡಿದವರು ಪ್ರಭುಗಳಾದ ಮೇಲೆ, ಹೆಚ್ಚು ಪಾಪಗಳನ್ನು ಮಾಡಿ, ಈ ಚಕ್ರವರ್ತಿಯಂತೆ ಇಹಪರಗಳೆರಡನ್ನೂ ಕಳೆದುಕೊಳ್ಳುವರು. ಪುಣ್ಯವಂತರು ಜಿತೇಂದ್ರಿಯರಾಗಿ, ಮನೋವಾಕ್ಕರ್ಮಗಳಲ್ಲಿಯೂ ಪರಿಶುದ್ಧರಾಗಿ, ಪ್ರಜಾರಂಜನೈಕಪರಾಯಣರಾಗಿ, ಧರ್ಮಯುಗಾಲಂಕಾರಭೂತರಾದ ಹರಿಶ್ಚಂದ್ರಾದಿಗಳಂತೆ ಸಮಸ್ತ ಜನಗಳಿಂದಲೂ ಪೂಜಿಸಲ್ಪಟ್ಟು, ಮನುಷ್ಯರಾದಾಗ್ಯೂ, ಜಗದೀಶ್ವರನ ಅವತಾರ ಪುರುಷರಂತೆ ಪೂಜಿಸಲ್ಪಡುವರು. ಇಂಥಾ ಯಶಸ್ಸೂ, ಸಂಪತ್ತೂ ಪುಣ್ಯಪರಿಪಾಕದಿಂದಲ್ಲದೆ, ಇನ್ಯಾವುದರಿಂದಲೂ ಬರುವುದಿಲ್ಲ. ಸರ್ವರಿಗೂ ಇಹಪರ ಸಾಧನೆಗಳಿಗೆ ಕಷ್ಟವೂ, ದಾರಿದ್ರ್ಯವೂ ಪರಮೌಷಧವೆಂದು ಪೂರ್ವಾಪರಜ್ಞರು ಹೇಳುತ್ತಾರ. ಇದು ನಿಜವಾದ ಮಾತು. ಕಷ್ಟಪಟ್ಟವರಿಗೆ ಸುಖದ ಮಹಿಮೆಯು ತಿಳಿಯುವುದು. ನಾನು ಅಜ್ಞಾನಿಯಂತೆ ಕಷ್ಟಕ್ಕೆ ಹೆದರಿ, ಸಂತಾಪ ಪಡುತ್ತಿದ್ದೆನು. ಇಂಥಾ ಕಾಲದಲ್ಲಿ ನನ್ನ ಶ್ರೋತ್ರಪಥಕ್ಕೆ ಬಿದ್ದ ಅಶರೀರ ವಾಕ್ಯೂ, ಅನಂತರದಲ್ಲಿ ಉಂಟಾದ ಭಯಂಕರವಾದ ಯುದ್ಧವೂ, ಪರಿಣಾಮದಲ್ಲಿ ಆದ ಚಕ್ರವರ್ತಿಯ ವಧೆಯೂ, ಇವುಗಳೆಲ್ಲಾ ಮನುಷ್ಯನು ಒಂದು ವಿಧವಾಗಿ ಸಂಕಲ್ಪ ಮಾಡಿದರೆ, ಜಗದೀಶ್ವರನು ಇನ್ನೊಂದು ವಿಧವಾಗಿ ಸಂಕಲ್ಪ ಮಾಡುವನೆಂದು ತೋರಿಸುವುದಕ್ಕೆ ಸಾಧಕವಾದವು. ಈ ಜಗತ್ತಿನಲ್ಲಿ ಧರ್ಮವಿರುವುದಿಲ್ಲವೆಂಬದಾಗಿಯೂ, ಅಧರ್ಮಕ್ಕೆ ಈ ಲೋಕವು ಮಾತ್ರಸ್ಥಾನವೆಂಬದಾಗಿಯೂ, ಜಗದೀಶ್ವರನೂ, ಸ್ವರ್ಗಾದಿಗಳೂ ಮಿಥ್ಯವೆಂಬದಾಗಿಯೂ, ವೇದಶಾಸ್ತ್ರಪುರಾಣೇತಿಹಾಸಗಳು ಉನ್ಮತ್ತಪ್ರಲಾಪಗಳೆಂಬದಾಗಿಯೂ ನನಗೆ ಭಾವನೆಯುಂಟಾಗಿತ್ತು. ಈ ಭಾವನೆಗಳೆಲ್ಲಾ ತಪ್ಪೆಂದು ಈಗ ನನಗೆ ಗೊತ್ತಾಯಿತು. ಪ್ರಭುಗಳು ಮೊದಲ್ಗೊಂಡು ದಾಸರವರೆಗೂ ಎಲ್ಲರೂ ಜಗದೀಶ್ವರನಿಂದ ಏರ್ಪಡಿಸಲ್ಪಟ್ಟ ವಿಧಿನಿಷೇಧಗಳಿಗೆ ಬದ್ಧರಾಗಿರುತ್ತಾರೆ. ಸಕಲ ವೇದಶಾಸ್ತ್ರಗಳಲ್ಲಿಯೂ ಈ ವಿಧಿನಿಷೇಧಗಳು ಏರ್ಪಡಿಸಲ್ಪಟ್ಟಿರುವುವು. ಮನೋವಾಕ್ಕರ್ಮಗಳಲ್ಲಿಯೂ ಯಾರು ನಿಷೇಧಗಳನ್ನು ಬಿಡುವರೋ, ವಿಧಿಗಳನ್ನು ಅವಲಂಬಿಸುವರೋ, ಅವರು, ಅವರ ಕರ್ಮಗಳಿಗೆ ಅನುರೂಪವಾದ ಫಲವನ್ನು ಹೊಂದುವರು. ದುಷ್ಕರ್ಮಗಳಿಗೆ ದುಷ್ಫಲಗಳಾಗುವುವು. ಸತ್ಕರ್ಮಗಳಿಗೆ ಸತ್ಫಲಗಳಾಗುವುವು. ಅಮೃತಪಾನವನ್ನು ಮಾಡಿದವರು ಸ್ವರ್ಗಸುಖವನ್ನು ಅನುಭವಿಸುವರು. ವಿಷಪಾನವನ್ನು ಮಾಡಿದವರು ನರಕಕ್ಲೇಶವನ್ನು ಅನುಭವಿಸುವರು. ಕಣ್ಣು, ಕಿವಿ, ಬುದ್ಧಿಗಳನ್ನು ಸರಿಯಾಗಿ

ವಿನಿಯೋಗಿಸತಕ್ಕವರಿಗೆ ಈ ವಿಷಯಗಳು ಸ್ಪಷ್ಟವಾಗಿ ಗೊತ್ತಾಗುವುವು. ಅಪ್ರತಿಹತವಾದ ಶಕ್ತಿಯುಳ್ಳವರೂ ಕೂಡ, ದುರ್ವಿಷಯಗಳಲ್ಲಿ ಆಸಕ್ತರಾಗಿ, ಇಂದ್ರಿಯಪರವಶರಾಗಿ ಯಾವ ಕಷ್ಟವನ್ನು ತಾನೇ ಪಡಲಿಲ್ಲ? ಸಕಲ ಸಂಪತ್ತುಗಳೊಡನೆ ದೇಹವನ್ನು ಕೂಡ ಕಳೆದುಕೊಂಡಿರುವುದಿಲ್ಲವೇ? ಜಿತೇಂದ್ರಿಯರಾಗಿ ಆರ್ಜಿಸಿದ ಸಕಲ ಸಂಪತ್ತುಗಳನ್ನೂ ರಾವಣಾದಿಗಳಂತೆ ಅಜಿತೇಂದ್ರಿಯರಾಗಿ ಎಷ್ಟು ಜನಗಳು ಕಳೆದುಕೊಂಡಿಲ್ಲ? ಮನೋವಾಕ್ಕರ್ಮಗಳಲ್ಲಿ ನಿರ್ದುಷ್ಟರಾಗಿಯೂ, ಧರ್ಮಮಾರ್ಗೈಕಪರಾಯಣರಾಗಿಯೂ ಇದ್ದ ಶ್ರೀ ರಾಮನೇ ಮೊದಲಾದವರಿಗೆ ಎಷ್ಟು ವಿಪತ್ತುಗಳು ಬಂದಾಗ್ಯೂ, ಆ ವಿಪತ್ತುಗಳೆಲ್ಲಾ ಉಷ್ಣವಲಯದ ಸೂರ್ಯನ ಎದುರಿಗೆ ಕರಗಿಹೋಗುವ ಮಂಜಿನಂತೆ ಅದೃಶ್ಯವಾಗಲಿಲ್ಲವೇ? ಇದನ್ನು ಸರಿಯಾಗಿ ತಿಳಿದುಕೊಳ್ಳದೆ, ಕೇವಲ ಮೂಢನಾಗಿ, ಈ ಬಂದೀಖಾನೆಯು ನನಗೆ ಅವಮಾನಕರವಾದ್ದರಿಂದಲೂ, ಇದನ್ನು ಅನುಭವಿಸುವುದಕ್ಕಿಂತ ಸಾಯುವುದು ಮೇಲೆಂದೂ ನಾನು ಭಾವಿಸಿದ್ದೆನು. ಇದು ಶುದ್ಧ ತಪ್ಪು. ಇದು ಬಂದೀಖಾನೆಯಲ್ಲ. ಇದು ಜ್ಞಾನಮಂಟಪ. ಪ್ರಪಂಚದ ಸೃಷ್ಟಿಸ್ಥಿತಿಪ್ರಳಯಗಳ ಕಾರಣಗಳು ಇಲ್ಲಿ ಮನಸ್ಸಿಗೆ ಗೋಚರವಾಗುವ ಹಾಗೆ ಪ್ರಾಸಾದಗಳಲ್ಲಿಯೂ, ಅರಮನೆಗಳಲ್ಲಿಯೂ, ಹಂಸತೂಲಿಕಾತಲ್ಪಗಳ ಮೇಲೆಯೂ ಗೊತ್ತಾವುದೇ? ಎಂದಿಗೂ ಗೊತ್ತಾಗುವುದಿಲ್ಲ. ಚಕ್ರವರ್ತಿ ಪದವಿಯು ನನಗೆ ಬೇಡ. ಇಥಾಕಾದ ಪ್ರಭುತ್ವವೂ ನನಗೆ ಬೇಡ. ಅಷ್ಟೈಶ್ವರ್ಯಗಳೂ ನನಗೆ ಬೇಡ. ಅಪ್ರತಿಹತವಾದ ಅಧಿಕಾರವೂ ನನಗೆ ಬೇಡ. ತಪೋವನಕ್ಕೆ ಸದೃಶವಾದ ಈ ಜ್ಞಾನಮಂಟಪವೇ ನನಗೆ ಸ್ವರ್ಗಪ್ರಾಯವಾಗಿರುವುದು. ಸಿಂಹಾಸನವನ್ನು ಅಲಂಕರಿಸಿರುವಾಗ, ನಮಗೆ ಚತುರ್ಭುಜಗಳಿರುವಂತೆಯೂ, ನಾವೇ ಅವತಾರಪುರುಷರೆಂಬದಾಗಿಯೂ, ಸಕಲ ಪುರುಷಾರ್ಥಗಳೂ ನಮ್ಮ ಹಸ್ತಗತವಾಗಿರುವುವೆಂಬದಾಗಿಯೂ, ಇಚ್ಛಾಮಾತ್ರದಿಂದ ಬೇಕಾದ ಕೆಲಸಗಳನ್ನು ನಾವು ಮಾಡಬಹುದೆಂಬದಾಗಿಯೂ, ನಾವೇ ಜಗದೀಶ್ವರನ ಪ್ರತಿನಿಧಿಗಳೆಂಬದಾಗಿಯೂ ತಿಳಿದುಕೊಂಡು, ಅಜ್ಞಾನಸಾಗರದಲ್ಲಿ ಮುಳುಗಿ ತೇಲುತ್ತಲಿರುತ್ತೇವೆ. ದೈವಯೋಗದಿಂದ ಈ ಬೋನಿನ ರೂಪವಾದ ಜ್ಞಾನಮಂಟಪವು ನನಗೆ ಲಭ್ಯವಾಯಿತು. ಇದಕ್ಕಾಗಿ ಜಗದೀಶ್ವರನಿಗೆ ನಾನು ತುಂಬಾ ಕೃತಜ್ಞನಾಗಿರುವೆನು. ನನ್ನನ್ನು ಈ ಬೋನಿಗೆ ಕೂಡಿದವರು ನನಗೆ ಶಿಕ್ಷೆಯನ್ನು ಮಾಡಿದಂತೆ ತಿಳಿದುಕೊಂಡಿರುವರು. ಅವರು ಮಾಡಿರುವ ಶಿಕ್ಷೆಯು ನನ್ನ ಭಾಗಕ್ಕೆ ಉಪಕಾರವಾಗಿ ಪರಿಣಮಿಸಿತು. ಅದಕ್ಕಾಗಿ ನಾನು ಅವರಿಗೆ ತುಂಬಾ ಕೃತಜ್ಞನಾಗಿರುವೆನು. ಒಂದು ವೇಳೆ ನನಗೆ ಸ್ವಾತಂತ್ರ್ಯವು ಬಂದರೆ, ಈ ಬೋನಿನಲ್ಲಿ ಕೂಡಲ್ಪಟ್ಟದ್ದರಿಂದ ನನಗುಂಟಾದ ಜ್ಞಾನವು ಉತ್ತರೋತ್ತರ ಈ

ದೇಹಯಾತ್ರೆಯಲ್ಲಿ ಮಾಡಬೇಕಾದ ಕರ್ತವ್ಯಗಳಿಗೆ ಎಷ್ಟೋ ಪ್ರಯೋಜನವಾಗುವುದು. ಈ ಜೈಲಿನಲ್ಲೇ ದೇಹವನ್ನು ಬಿಡುವ ಸಂಭವವು ಬಂದ ಪಕ್ಷದಲ್ಲಿ ಅದೂ ಕೂಡ ನನಗೆ ಅಸಾಧಾರಣವಾದ ಸಂತುಷ್ಟಿಯನ್ನುಂಟುಮಾಡುವುದು. ನಾಟಕ ರೂಪವಾದ ಪ್ರಪಂಚದ ವ್ಯಾಪಾರಗಳಲ್ಲಿ ಪಾತ್ರರಾಗುವುದಕ್ಕಿಂತಲೂ ಪ್ರೇಕ್ಷಕರಾಗುವುದರಲ್ಲಿ ತುಂಬಾ ಸಂತೋಷವುಂಟು. ಈ ಸಂತೋಷವು ಜಗದೀಶ್ವರನ ಮಹಿಮೆಯಿಂದಲೂ, ಮೆಟೋಫಿಸ್ಸನ ಕೌಟಿಲ್ಯದಿಂದಲೂ ನನಗೆ ಪ್ರಾಪ್ತವಾಗಿರುವುದು. ನನ್ನ ಭಾಗಕ್ಕೆ ಮೆಟೋಫಿಸ್ಸನು ದೊಡ್ಡ ಉಪಕಾರಿಯಾದನು. ದೇವರು ನನ್ನನ್ನು ಪರೀಕ್ಷಿಸುವುದಕ್ಕೋಸ್ಕರ ಈ ಜ್ಞಾನಮಂಟಪವು ನನಗೆ ದೊರೆಯುವಂತೆ ಮಾಡಿರಬೇಕು. ಮೆಟೋಫಿಸ್ಸನು ನನ್ನನ್ನು ನಿಗ್ರಹಿಸಬೇಕೆಂದು, ನಾನು ಈ ಜೈಲಿನಲ್ಲಿ ಇಡಲ್ಪಡುವಂತೆ ಮಾಡಿದನು. ಈ ಎರಡು ಪ್ರಯತ್ನಗಳೂ ನನ್ನ ಅಜ್ಞಾನ ನಿವಾರಣೆಗೂ, ಜ್ಞಾನಪ್ರಾಪ್ತಿಗೂ ಸಾಧಕಗಳಾದವು. ಈ ಇಬ್ಬರಿಗೂ ಸಕಲ ಸನ್ಮಂಗಳಗಳೂ ಆಗಲೆಂದು ನಾನು ಕೋರುತ್ತೇನೆ. ಮೆಟೋಫಿಸ್ಸನಿಗೆ ನನ್ನನ್ನು ನಿಗ್ರಹಿಸಬೇಕೆಂಬ ಸಂಕಲ್ಪವನ್ನು ಜಗದೀಶ್ವರನು ಉಂಟುಮಾಡಿರಬೇಕು. ಇದೆಲ್ಲಾ ಜಗದೀಶ್ವರನ ಲೀಲೆಯೆಂದು ನನಗೆ ತೋರುತ್ತದೆ. ಈಶ್ವರನ ಇಚ್ಛೆಯು ಇದ್ದಂತಾಗಲಿ.

ಅತ್ಯುತ್ಕಟವಾದ ಪಾಪಪುಣ್ಯಗಳಿಗೆ ಈ ಲೋಕದಲ್ಲಿಯೇ, ಈ ಜನ್ಮದಲ್ಲಿಯೇ ಅನುರೂಪವಾದ ಫಲವು ಆಗುವುದೆಂದು ಧರ್ಮಶಾಸ್ತ್ರಜ್ಞರು ಹೇಳಿರುವರು. ಪುಣ್ಯಕ್ಕೆ ಪ್ರತಿಫಲಗಳು ಪ್ರತಿನಿಮಿಷದಲ್ಲಿಯೂ ಆಗುತ್ತಲಿರುವುವು. ಅದು ನಮಗೆ ಗೊತ್ತಾಗುವುದಿಲ್ಲ. ಅದನ್ನು ನಾವು ತಿಳಿದುಕೊಳ್ಳದೆ ಇರುವುದಕ್ಕೆ ನಮ್ಮ ಔದಾಸೀನ್ಯವೇ ಮುಖ್ಯಕಾರಣ. ಪಾಪವು ಉತ್ಕಟಾವಸ್ಥೆಗೆ ಬಂದರೆ, ಪ್ರತಿಫಲವು ಈ ಜನ್ಮದಲ್ಲಿಯೇ ಆಗುವುದಕ್ಕೆ ಬಾಕರಿಸ್ಸನ ಪರಿಣಾಮವೇ ದೃಷ್ಟಾಂತವಾಗಿರುವುದು. ಮೆಟೋಫಿಸ್ಸನ ಇಂದ್ರಜಾಲ ಮಹೇಂದ್ರಜಾಲ ವಿದ್ಯೆಗಳಿಗೆ ಮರುಳಾಗಿ, ನಿರಪರಾಧಿಗಳಾದ ನನ್ನನ್ನೂ ಮೆಂಟರನನ್ನೂ ಇವನು ದುಸ್ಸಹವಾದ ಕಷ್ಟಕ್ಕೆ ಗುರಿಮಾಡಿದನು. ಇವನಿಗೆ ಇಷ್ಟುಬೇಗ, ಇಷ್ಟು ಭಯಂಕರವಾದ ಶಿಕ್ಷೆಯಾಗುವುದೆಂದು ನಾನು ಭಾವಿಸಿರಲಿಲ್ಲ. ಇದೇನಾಶ್ಚರ್ಯ! ಅವನ ಅಧಿಕಾರವೂ, ಮೆಟೋಫಿಸ್ಸನ ಅಧಿಕಾರವೂ ಅಪ್ರತಿಹತವಾಗಿದ್ದವು. ಇವರಿಗೆ ಪ್ರತಿಕಕ್ಷಿಯೊಂದು ಉಂಟಾಗುವುದೇ ಅಸಂಭವ. ಈ ಪ್ರತಿಕಕ್ಷಿಗಳು ಪ್ರಳಯ ಕರ್ಮದಲ್ಲಿ ಆಸಕ್ತರಾಗುವುದು ಮತ್ತೂ ಅಸಂಭವ. ಫಿನೀಷಿಯರ್ನರು ದುರ್ಬಲವಾದ ಕಕ್ಷಿಯ ಜೊತೆಯಲ್ಲಿ ಸೇರಿದ್ದನ್ನೂ, ಅವರು ಈ ದೇಶಕ್ಕೆ ಬಂದು, ಬಾಕರಿಸ್ಸನ ಮೇಲೂ, ಮೆಟೋಫಿಸ್ಸನ ಮೇಲೂ ಯುದ್ಧಮಾಡಿದ್ದನ್ನೂ, ಇವರಿಗೆ ಪ್ರತಿಕಕ್ಷಿಗಳಾದವರು

ಅವರ ಜೊತೆಯಲ್ಲಿ ಸೇರಿದ್ದನ್ನೂ ನೋಡಿದರೆ, ಪಾಪಿಷ್ಠರಿಗೆ ಶಿಕ್ಷೆಯನ್ನೂ, ಪುಣ್ಯವಂತರಿಗೆ ಅವರ ಪುಣ್ಯಕ್ಕೆ ಅನುರೂಪವಾದ ಫಲವನ್ನೂ ಕೊಡುವುದರಲ್ಲಿ ಜಗದೀಶ್ವರನು ಹೇಗೆ ಜಾಗರೂಕನಾಗಿರುವನೋ ಅದು ಸ್ಪಷ್ಟವಾಗುವುದು. ದುರ್ಮಾರ್ಗಪ್ರವರ್ತಕನಾದ ಬಾಕರಿಸ್ಸನಿಗೆ ಅವನ ಅಪರಾಧಕ್ಕೆ ಅನುರೂಪವಾದ ಶಿಕ್ಷೆಯಾಯಿತು. ಮೆಟೋಫಿಸ್ಸನಿಗೆ ಅವನ ಪಾಪಕ್ಕೆ ಅನುರೂಪವಾದ ಶಿಕ್ಷೆಯು ಆಗಿರಬಹುದು. ಅಥವಾ ಆಗಬಹುದು. ಅದು ಎಂದಿಗೂ ತಪ್ಪುವುದಿಲ್ಲ. ಇದೂ ಶೀಘ್ರದಲ್ಲಿಯೇ ಗೊತ್ತಾಗುವುದೆಂಬದಾಗಿಯೂ, ಅಪರಾಧಿಯಾದ ಬಾಕರಿಸ್ಸನಿಗೆ ಶಿಕ್ಷೆಯು ಹೇಗೆ ಉಂಟಾಯಿತೋ ಅದೇ ರೀತಿಯಲ್ಲಿ ನಿರಪರಾಧಿಗಳಾದ ನನಗೂ, ಮೆಂಟರಿಗೂ ಬಂಧವಿಮೋಚನೆಯು ಆಗಬಹುದೆಂಬದಾಗಿಯೂ, ನಾವು ನಿರಪರಾಧಿಗಳೆಂದು ತಿಳಿಯುವ ಸಂಭವವು ಶೀಘ್ರದಲ್ಲಿಯೇ ಬರಬಹುದೆಂಬದಾಗಿಯೂ, ಹಾಗೆ ತಿಳಿದ ಕೂಡಲೆ, ಜನಗಳಿಗೆ ನನ್ನ ಮೇಲೆ ಇದ್ದ ದ್ವೇಷವೆಲ್ಲಾ ಮೆಟೋಫಿಸ್ಸನ ಮೇಲೆ ಬರುವುದೆಂಬದಾಗಿಯೂ ನನಗೆ ಉಂಟಾದ ಮನೋಭಾವವು ಬದಲಾಯಿಸಿತು. ಪ್ರಪಂಚದಲ್ಲಿ ದೇವರ ಸಂಕಲ್ಪಕ್ಕೆ ವಿರೋಧವಾಗಿ ತೃಣವೂ ಚಲಿಸುವುದಿಲ್ಲವೆಂಬ ನಂಬಿಕೆಯು ಉಂಟಾಯಿತು.

ಹೀಗಿರುವಾಗ್ಯೆ, ಅದ್ಭುತವಾದ ಕೋಲಾಹಲ ಶಬ್ದವೊಂದು ಉಂಟಾಯಿತು. ಬಾಕರಿಸ್ಸನು ಕೊಲ್ಲಲ್ಪಟ್ಟ ತರುವಾಯ, ಅವನ ಸೈನ್ಯದವರು ಫಿನೀಷಿಯನ್‌ರಿಗೆ ಶರಣಾಗತರಾದರು. ಟಮೂರ್ಕ್ಯಟಿಸ್ ಎಂಬ ಒಬ್ಬ ರಾಜಕುಮಾರನು ಬಾಕರಿಸ್ಸನ ಸ್ಥಾನಕ್ಕೆ ನೇಮಿಸಲ್ಪಟ್ಟನು. ಫಿನೀಷಿಯನ್‌ರೂ, ಸೈಪ್ರಸ್ ದ್ವೀಪನಿವಾಸಿಗಳೂ ಟಮೂರ್ಕ್ಯಟಿಸ್ ನೊಡನೆ ಕೌಲನ್ನು ಮಾಡಿಕೊಂಡರು. ಈ ಕೌಲಿನ ಪ್ರಕಾರ ಫಿನೀಷಿಯಾ ದೇಶದ ಖೈದಿಗಳೆಲ್ಲಾ ಬಂದೀಖಾನೆಯಿಂದ ಬಿಡಲ್ಪಡಬೇಕೆಂದು ಏರ್ಪಾಡಾಯಿತು. ನಾನೂ ಒಬ್ಬ ಫಿನೀಷಿಯನ್ ಎಂದು ಖೈದಿನಲ್ಲಿ ಇಡಲ್ಪಟ್ಟಿದ್ದೆನು. ನನ್ನನ್ನು ಬಿಡುಗಡೆ ಮಾಡಿ, ಫಿನೀಷಿಯನ್‌ರ ಜೊತೆಯಲ್ಲಿ ಈಜಿಪ್ಟ್ ದೇಶವನ್ನು ಬಿಟ್ಟು ಹೋಗುವಂತೆ ಏರ್ಪಾಡಾಯಿತು. ಈ ಏರ್ಪಾಡಿನ ಪ್ರಕಾರ ಫಿನೀಷಿಯನ್‌ರ ಜೊತೆಯಲ್ಲಿ ನಾನೂ ಹೊರಟೆನು. ಅನುಕೂಲವಾದ ವಾಯುವು ಬೀಸುತ್ತಿತ್ತು. ಅನೇಕ ಹಡಗುಗಳು ಈಜಿಪ್ಟ್ ದೇಶವನ್ನು ಬಿಟ್ಟು ಹೊರಟವು. ಸಂಧ್ಯಾರಾಗವು, ಪರ್ವತಗಳೂ, ವೃಕ್ಷಗಳೂ ಹೊಂಬಣ್ಣವಾಗುವಂತೆ ಮಾಡಿತು. ಅನೇಕ ಶುಭಶಕುನಗಳು ಆದವು. ನನ್ನನ್ನು ಫಿನೀಷಿಯನ್ ಎಂಬದಾಗಿ ತಿಳಿದುಕೊಂಡು, ಈಜಿಪ್ಟ್ ದೇಶದವರು ಬಂಧವಿಮೋಚನೆಯನ್ನು ಮಾಡಿದರು. ಇದೇ ಆ ಕೋಲಾಹಲಕ್ಕೆ ಮುಖ್ಯಕಾರಣ.

# ಮೂರನೇ ಅಧ್ಯಾಯ.

ನಾನು ಯಾವ ಹಡಗಿನಲ್ಲಿ ಪ್ರಯಾಣ ಮಾಡಿದೆನೋ ಆ ಹಡಗಿನ ಯಜಮಾನನು ನಾರ್‌ಬಾಲ್ ಎಂಬವನಾಗಿದ್ದನು. ಇವನು ನನ್ನನ್ನು ನೋಡಿದ ಕೂಡಲೆ, “ ನೀನು ಯಾರು ? ನೀನು ಯಾವ ದೇಶದವನು ? ಫಿನೀಷಿಯಾ ರಾಜ್ಯದಲ್ಲಿ ನಿನ್ನ ಊರು ಎಲ್ಲಿರುವುದು ?” ಎಂದು ನನ್ನನ್ನು ಕೇಳಿದನು. ನಾರ್‌ಬಾಲನ ಪ್ರಶ್ನೆಗಳಿಗೆ ನಾನು ಉತ್ತರವನ್ನು ಕೊಟ್ಟದ್ದೇನೆಂದರೆ :—

“ ನಾನು ಫಿನೀಷಿಯಾ ರಾಜ್ಯದವನಲ್ಲ. ಫಿನೀಷಿಯಾ ದೇಶದ ಹಡಗಿನಲ್ಲಿ ನಾನು ಪ್ರಯಾಣ ಮಾಡುತ್ತಿದ್ದೆನು. ನಾನೂ ಫಿನೀಷಿಯಾ ರಾಜ್ಯದವನಾಗಿರಬೇಕೆಂದು ದಸ್ತಗಿರಿ ಮಾಡಲ್ಪಟ್ಟು ಸೆರೆಯಲ್ಲಿ ಇಡಲ್ಪಟ್ಟಿದ್ದೆನು. ಬಹು ಕಾಲದಿಂದ ದುಸ್ಸಹವಾದ ದಾಸತ್ವವನ್ನು ಅನುಭವಿಸಿದೆನು. ಈಗ ದೈವಯೋಗದಿಂದ ನನಗೆ ಬಂಧವಿಮೋಚನೆಯಾಯಿತು.” ಅದಕ್ಕೆ ನಾರ್‌ಬಾಲನು,—ಹಾಗಾದರೆ, “ ನೀನು ಯಾವ ದೇಶಸ್ಥನು ? ಎಲ್ಲಿ ಹೋಗುತ್ತಿದ್ದೆ ?” ಎಂದು ಕೇಳಿದನು. ನಾನು ಅದಕ್ಕೆ ಹೇಳಿದ್ದೇನೆಂದರೆ.—

“ ಇಥಾಕಾ ದೇಶದ ದೊರೆಯಾದ ಯೂಲಿಸೆಸ್ಸನ ಮಹಿಮೆಯನ್ನು ನೀನು ಕೇಳಿರಬಹುದು. ಟ್ರಾಯ್ ದೇಶವನ್ನು ಮೂಲೋತ್ಪಾಟನ ಮಾಡಿದ ಪ್ರಭುಗಳಲ್ಲಿ ಅವನು ಸುಪ್ರಸಿದ್ಧನು. ನಾನೇ ಅವನ ಮಗನು. ನನ್ನನ್ನು ಟೆಲಿಮಾಕಸ್ಸೆಂದು ಕರೆಯುತ್ತಾರೆ. ಟ್ರಾಯ್ ದೇಶವು ಮೂಲೋತ್ಪಾಟನವಾದ ತರುವಾಯ, ದೇಶಾಟನವನ್ನು ಮಾಡುವುದಕ್ಕೆ ನಮ್ಮ ತಂದೆಯು ಹೊರಟುಹೋದನು. ಬಹು ದಿವಸಗಳವರೆಗೂ ಅವನು ವಾಪಸು ಬರಲಿಲ್ಲ. ಅವನನ್ನು ಹುಡಿಕಿಕೊಂಡು ನಾನು ದೇಶಾಟನವನ್ನು ಮಾಡುತ್ತಿದ್ದೇನೆ. ಅನೇಕ ದೇಶಗಳಿಗೆ ಹೋಗಿ, ನಮ್ಮ ತಂದೆಯ ವರ್ತಮಾನವನ್ನು ವಿಚಾರಿಸಿದೆನು. ಹೋದಕಡೆಯಲ್ಲೆಲ್ಲಾ ಅವನು ಇಲ್ಲಿಗೆ ಬಂದು, ಆಗ ತಾನೆ ಪ್ರಯಾಣ ಮಾಡಿದನೆಂದು ಹೇಳುತ್ತಾ ಬಂದರು. ಅವನನ್ನೂ, ಅವನನ್ನು ಹುಡುಕಿಕೊಂಡು ನಾನೂ ಪ್ರಯಾಣ ಮಾಡುತ್ತಿದ್ದೆವು. ಈ ಸಂದರ್ಭದಲ್ಲಿ ಫಿನೀಷಿಯರ್ಸರ ಹಡಗಿನಲ್ಲಿ ನಾನು ಸಂಚಾರಮಾಡುತ್ತಿದ್ದಾಗ, ಈ ದೇಶೀಯರಿಂದ ದಸ್ತಗಿರಿ ಮಾಡಲ್ಪಟ್ಟೆನು. ನನ್ನನ್ನು ಫಿನೀಷಿಯರ್ ಎಂಬದಾಗಿ ಸಸಾಟ್ರಿಸ್ಸನಿಗೆ ತಿಳಿಸಿ, ಮೆಟೋಫಿಸ್ಸನು ನನ್ನನ್ನು ಕಾಡುಕುರುಬರಿಗೆ ವಿಕ್ರಯಿಸಿದನು. ದೈವಯೋಗದಿಂದ ಬಿಡುಗಡೆಯಾಗುವ ಸಂಭವವು ಬಂದಿತು. ಪುನಃ ಮೆಟೋಫಿಸ್ಸನು ಸಸಾಟ್ರಿಸ್ಸನ ಮರಣಕ್ಕೆ ನಾನು ಕಾರಣಭೂತನೆಂದು ಪ್ರತ್ಯಯವನ್ನುಂಟುಮಾಡಿ, ನನ್ನನ್ನು ಸೆರೆಯಲ್ಲಿ ಇಟ್ಟನು. ಈಗ

ದೈವಯೋಗದಿಂದ ಬಿಡಲ್ಪಟ್ಟಿರುವೆನು.” ಇದೇ ನನ್ನ ವೃತ್ತಾಂತ. ನಾನು ನಿರ್ಭಾಗ್ಯನು. ಮನೋವಾಕ್ಕರ್ಮಗಳಲ್ಲಿ ಪರಿಶುದ್ಧನಾಗಿದ್ದಾಗ್ಯೂ, ಅನೇಕ ಕ್ಲೇಶಗಳಿಗೆ ಗುರಿಯಾಗಿರುವೆನು. ನಮ್ಮ ತಂದೆಯನ್ನು ನೋಡಬೇಕೆಂಬ ಅಭಿಲಾಷೆಯೊಂದು ವಿನಾ ಇನ್ಯಾವ ಆಸೆಯೂ ನನಗೆ ಇಲ್ಲ. ಆ ಆಸೆಯೂ ಕೂಡ ಪರಿಪೂರ್ಣವಾಗುವಂತೆ ತೋರುವುದಿಲ್ಲ. ನಮ್ಮ ತಾಯಿಗೆ ಅನಿರ್ವಚನೀಯವಾದ ವಿಪತ್ತು ಉಂಟಾಗಿದೆ. ನಾನು ಶೀಘ್ರದಲ್ಲಿಯೇ ನಮ್ಮ ತಂದೆಯನ್ನು ಕರೆದುಕೊಂಡು ಹೋಗದಿದ್ದರೆ, ಆಕೆಯು ವಿಷವನ್ನು ತೆಗೆದುಕೊಂಡು ದೇಹವನ್ನು ಬಿಟ್ಟು, ಪಾತಿವ್ರತ್ಯ ರಕ್ಷಣೆಯನ್ನು ಮಾಡಿಕೊಳ್ಳುವ ಅವಸ್ಥೆಯು ಬಂದಿರುವುದು. ಕಷ್ಟ ಕಾಲದಲ್ಲಿ ಧೈರ್ಯವನ್ನು ಹೇಳುತ್ತಿದ್ದ ನನ್ನ ತಂದೆಗೆ ಸಮಾನನಾದ ಮೆಂಟಗನನ್ನು ಈ ಪೆಟೋಫ್ರನ್ನನು ಬಂದೀಖಾನೆಗೆ ಹಾಕಿರುವನು. ಅವನನ್ನು ಎಲ್ಲಿ ಇಟ್ಟಿರುವನೋ, ಅವನ ಗತಿ ಏನಾಯಿತೋ ತಿಳಿಯದು. ಕಾರಾಗೃಹದಿಂದ ಬಿಡುಗಡೆಯಾಯಿತೆಂಬ ಸಂತೋಷವೂ ಕೂಡ ನನಗೆ ಇರುವುದಿಲ್ಲ. ಜಗದೀಶ್ವರನು ನನನ್ನು ಏತಕ್ಕೆ ಹೀಗೆ ಪರೀಕ್ಷಿಸುತ್ತಾನೋ ತಿಳಿಯದು. ದೇಹತ್ಯಾಗವನ್ನು ಮಾಡಬೇಕೆಂದು ಎರಡಾವರ್ತಿ ಸಾಹಸ ಮಾಡಿದೆನು. ಅದೂ ನನಗೆ ಅಸಾಧ್ಯವಾಯಿತು. ಈ ಸಾಹಸವನ್ನು ಮಾಡಕೂಡದೆಂದು ಎರಡಾವರ್ತಿಯೂ ಅಶರೀರವಾಕ್ಕು ನುಡಿಯಿತು. ಈ ದುರ್ದೆಶೆಯು ತಪ್ಪುವ ಕಾಲವು ಬರಬಹುದೆಂದು ಪ್ರಾಣಧಾರಣೆಯನ್ನು ಮಾಡಿಕೊಂಡಿರುವೆನು. ಅದೂ ಬರುವುದೋ ಇಲ್ಲವೋ ಹೇಳುವುದಕ್ಕೆ ಆಗುವುದಿಲ್ಲ. ಇದೇ ನನ್ನ ಸಂಕ್ಷೇಪವಾದ ವೃತ್ತಾಂತ.”

ಈ ವೃತ್ತಾಂತವನ್ನು ಕೇಳಿ, ಸರೊಬಿಲನು ಬಹಳ ಆಶ್ಚರ್ಯಪಟ್ಟು ನನ್ನನ್ನು ದೃಷ್ಟಿಸಿ ನೋಡಿದನು. ಜಗದೀಶ್ವರನ ಪ್ರಸನ್ನತೆಗೆ ನಾನು ಪಾತ್ರನೆಂದು ಭಾವಿಸಿಕೊಂಡನು. ಸ್ವಭಾವವಾಗಿ ಇವನು ದಯಾದ್ರ್ರಹೃದಯನು. ಸತ್ಯವೂ, ಧರ್ಮವೂ, ಔದಾರ್ಯವೂ ಇವನ ಕಣ್ಣುಗಳಲ್ಲಿ ನರ್ತನ ಮಾಡುವಂತೆ ಕಾಣುತ್ತಿದ್ದವು. ನನ್ನಲ್ಲಿ ಇವನಿಗೆ ಅನಿರ್ವಚನೀಯವಾದ ದಯೆಯು ಉಂಟಾಯಿತು. ದೇವರಿಂದ ಪ್ರೇರಿಸಲ್ಪಟ್ಟಿದ್ದರೆ ಹೇಗೋ ಹಾಗೆ ಅವನು ನನ್ನನ್ನು ಕುರಿತು ಒಂದು ಸಂಭಾಷಣವನ್ನು ಮಾಡಿದನು. ಅವನು ಹೇಳಿದ್ದೇನಂದರೆ:—

“ ನೀನು ಯೂಲಿಸಸ್ಸನ ಮಗನೇ ಹೌದು. ನಿಮ್ಮ ತಂದೆಯ ರೂಪು ಆಕಾರಗಳಲ್ಲಿ ನೀನೇ ಯೂಲಿಸಸ್ಸನಂತೆ ಕಾಣುತ್ತಿರುತ್ತೀಯೆ. ಅವನ ಗುಣಾತಿಶಯಗಳೂ ಕೂಡ ನಿನ್ನಲ್ಲಿ ಕಾಣುವುವು. ಆದರೆ ಅವನ ಧೈರ್ಯಸ್ಥೈರ್ಯಗಳು

ಮಾತ್ರ ಅವನಲ್ಲಿ ಹೊಂದಿರುವಷ್ಟು ಪರಾಕಾಷ್ಠದೆಸೆಯನ್ನು ನಿನ್ನಲ್ಲಿ ಹೊಂದಿರುವಂತೆ ತೋರುವುದಿಲ್ಲ. ಇದಕ್ಕೆ ನಿನ್ನ ಬಾಲ್ಯವೇ ಕಾರಣವಾಗಿರಬಹುದು. ದೇವರು ನಿನ್ನನ್ನು ಪರೀಕ್ಷಿಸುತ್ತಲಿರುವುದು ನಿಜ. ಈ ಪರೀಕ್ಷೆಯಲ್ಲಿ ನೀನು ತೇರ್ಗಡೆ ಹೊಂದದಿದ್ದರೆ, ದೇವರ ಪ್ರಸನ್ನತೆಗೆ ನೀನು ಎಂದಿಗೂ ಪಾತ್ರನಾಗಲಾರೆ. ಭಯಪಡಬೇಡ. ನಿರಾಸೆಯುಳ್ಳವನಾಗಬೇಡ. ಸತ್ಯಸಂಧರಾಗಿಯೂ, ಧರ್ಮಿಷ್ಠರಾಗಿಯೂ ಇರತಕ್ಕವರಿಗೆ ಪರೀಕ್ಷಾರ್ಥವಾಗಿ ಇಂಥಾ ಕಷ್ಟಗಳು ಬರುವುವು. ಆದರೆ ಅವರ ಸತ್ಯವೂ, ಧರ್ಮವೂ ಅವರನ್ನು ಕಾಪಾಡುವುವು. ಮೇಘವು ಸ್ವಲ ಹೊತ್ತು ಸೂರ್ಯನನ್ನು ಆಚ್ಛಾದಿಸಿ, ಅದೃಶ್ಯವಾಗುವಂತೆ ಮಾಡುವುದು. ಪರಿಣಾಮದಲ್ಲಿ ಅವನ ತಾಪದಿಂದ ಅದು ಕರಗಿಹೋಗುವುದು. ಇದು ಎಲ್ಲರಿಗೂ ಅನುಭವ ಸಿದ್ಧವಾದದ್ದು. ಅದು ಹಾಗಿರಲಿ ಯೂಲಿಸಸ್ಸನು ರಾಜತಂತ್ರ ವಿಶಾರದರಲ್ಲಿ ಅಗ್ರಗಣ್ಯನು. ದೇಶಹಿತಾರ್ಥವಾಗಿ ಅನೇಕ ಕಾರ್ಯಗಳು ಮಾಡಲ್ಪಡಬೇಕಾಗುತ್ತವೆ. ಫಲೋದಯವಾಗುವವರೆಗೂ ರಾಜ್ಯಭಾರ ರಹಸ್ಯಗಳು ರಕ್ಷಿಸಲ್ಪಡಬೇಕೆಂದು ರಾಜತಂತ್ರಜ್ಞರು ಹೇಳುತ್ತಾರೆ. ಮಕ್ಕಳು ರಹಸ್ಯ ಸಂರಕ್ಷಣೆಯನ್ನು ಮಾಡುವುದಕ್ಕೆ ಅಸಮರ್ಥರು. ರಹಸ್ಯವನ್ನು ರಕ್ಷಿಸಿಕೊಳ್ಳದಿದ್ದರೆ, ಅನೇಕ ವಿಪತ್ತುಗಳು ಬರುವುವು. ಈ ಭಾಗದಲ್ಲಿ ನಿಮ್ಮ ತಂದೆಯು ಅದ್ವಿತೀಯ ಶಕ್ತಿಯುಳ್ಳವನಾಗಿದ್ದನೆಂದು ನಾನು ಕೇಳಿದ್ದೇನೆ. ನಿಮ್ಮ ತಂದೆಯಲ್ಲಿ ಮೂರ್ತಿಮತ್ತಾಗಿದ್ದ ಈ ಅದ್ಭುತ ಶಕ್ತಿಯ ವಿಷಯದಲ್ಲಿ ನಿನಗೇನಾದರೂ ಗೊತ್ತಿರುವುದೇ?'' ಈ ಪ್ರಶ್ನೆಗೆ ನಾನು ಹೇಳಿದ್ದೇನಂದರೆ :—

ಟ್ರಾಯ್ ದೇಶಕ್ಕೆ ಮುತ್ತಿಗೆ ಹಾಕುವುದಕ್ಕೆ ನಮ್ಮ ತಂದೆಯು ಹೊರಡುವಾಗ, ನಾನು ಬಾಲ್ಯಾವಸ್ಥೆಯಲ್ಲಿದ್ದೆನು. ಪ್ರಯಾಣ ಮಾಡುವ ಸಂದರ್ಭದಲ್ಲಿ, ಅವನು ನನ್ನನ್ನು ಕರೆದು, ತೊಡೆಯ ಮೇಲೆ ಕೂರಿಸಿಕೊಂಡು ಹೇಳಿದ್ದೇನಂದರೆ :—

"ಎಲೈ ಟೆಲಿಮಾಕಸ್ಸನೇ,—ನೀನು ನನಗೆ ಪ್ರಾಣಪ್ರಾಯನಾದವನು. ಕಾರ್ಯಗೌರವದಿಂದ ನಿನ್ನನ್ನು ಬಿಟ್ಟು ಹೋಗಬೇಕಾಗಿದೆ. ಮಹಾಯುದ್ಧವು ಸನ್ನಿಹಿತವಾಗಿದೆ. ಈ ಯುದ್ಧದಲ್ಲಿ ಸಾಯುವೆನೋ ಬದುಕುವೆನೋ ಗೊತ್ತಿಲ್ಲ. ನನ್ನ ಹಿತೋಪದೇಶವನ್ನು ತಿಳಿದುಕೊಳ್ಳುವುದಕ್ಕೆ ನಿನಗೆ ಯೋಗ್ಯತೆಯು ಬರುವುದಕ್ಕೆ ಮುಂಚೆಯೇ ನಿನ್ನನ್ನು ಬಿಟ್ಟು ಹೊರಟು ಹೋಗುವ ಅವಸ್ಥೆಯು ಬಂದಿರುವುದು. ನಿನ್ನ ತಾಯಿಯೂ, ನಿನ್ನ ಬಂಧುಮಿತ್ರರೂ ನಿನ್ನನ್ನು ಕಾಪಾಡಬೇಕಾಗಿರುವುದು. ಮಕ್ಕಳಿಗೆ ಬಾಲ್ಯದಲ್ಲಿ ಎಂಥಾ ಶಿಕ್ಷಣವು ದೊರೆಯುವುದೋ ಅದಕ್ಕೆ ಅನುರೂಪವಾದ ಪದವಿಯು ಬರುವುದು. ಎಂಥಾ ಸಹವಾಸವು ದೊರೆ

ಯುವುದೋ ಅದಕ್ಕೆ ಅನುರೂಪವಾದ ಅವಸ್ಥೆಯು ಬರುವುದು. ನಿನ್ನನ್ನು ಕೇವಲ ಧರ್ಮಿಷ್ಠನನ್ನಾಗಿ ಮಾಡಬೇಕೆಂದು ನಾನು ಸಂಕಲ್ಪ ಮಾಡಿದ್ದೆನು. ಈ ಸಂಕಲ್ಪವು ನೆರವೇರುವುದಕ್ಕೆ ಅವಕಾಶವಾಗಲಿಲ್ಲ. ನಿಮ್ಮ ತಾಯಿಗೆ ನಿನ್ನನ್ನು ಒಪ್ಪಿಸಿರುವೆನು. ರಾಜಯೋಗ್ಯವಾದ ಪದವಿಗೆ ಅನುರೂಪವಾದ ಶಿಕ್ಷಣವನ್ನು ಕೊಡುವ ಶಕ್ತಿಯನ್ನು ದೇವರು ಆಕೆಗೆ ದಯಪಾಲಿಸುವನೆಂದು ನಾನು ಕೋರುತ್ತೇನೆ. ಅದು ಹೇಗಾದರೂ ಇರಲಿ. ನನ್ನ ಹಿತೋಪದೇಶವನ್ನು ತಿಳಿದುಕೊಳ್ಳುವುದಕ್ಕೆ ಬೇಕಾದಷ್ಟು ವಯಸ್ಸು ನಿನಗೆ ಇನ್ನೂ ಬಂದಿಲ್ಲ. ಆದಾಗ್ಯೂ ಒಂದೆರಡು ಮಾತುಗಳನ್ನು ಹೇಳುವುದು ನನಗೆ ಕರ್ತವ್ಯವಾದದ್ದು. ಸ್ತುತಿಸತಕ್ಕವರೆಲ್ಲರೂ ಮಿತ್ರರೆಂದು ತಿಳಿದುಕೊಳ್ಳಬೇಡ ನಿಂದಿಸತಕ್ಕವರೆಲ್ಲರೂ ಶತ್ರುಗಳೆಂದು ತಿಳಿದುಕೊಳ್ಳಬೇಡ. ಮನೋವಾಕ್ಕರ್ಮಗಳಲ್ಲಿ ಪರಿಶುದ್ಧನಾಗಿರು. ಎಷ್ಟು ಕಷ್ಟಗಳು ಬಂದಾಗ್ಯೂ, ಸತ್ಯವನ್ನೂ, ಧರ್ಮವನ್ನೂ ಬಿಡಬೇಡ. ರುಜುಮಾರ್ಗವನ್ನು ಅವಲಂಬಿಸು. ದಯೆಯುಳ್ಳವನಾಗಿರು. ಪ್ರತಿಫಲವನ್ನು ಅಪೇಕ್ಷಿಸದೆ, ಸರ್ವರಿಗೂ ಉಪಕಾರ ಮಾಡುವುದನ್ನು ಕಲಿತುಕೊ. ರಹಸ್ಯವನ್ನು ರಕ್ಷಿಸಿಕೊ. ಅನೃತವನ್ನು ಎಂದಿಗೂ ಆಡಬೇಡ. ಸುಳ್ಳು ಹೇಳತಕ್ಕವರು ಮನುಷ್ಯರಾಗಿರುವುದಕ್ಕೆ ಅನರ್ಹರು. ರಾಜರಾಗಿರುವುದಕ್ಕೆ ಅನರ್ಹರೆಂದು ಹೇಳಬೇಕಾದದ್ದೇ ಇಲ್ಲ. ಸಾಮಾನ್ಯ ಜನಗಳು ಸುಳ್ಳು ಹೇಳಿದರೂ, ಮಾಡಬಾರದ್ದನ್ನು ಮಾಡಿದರೂ ಅದಕ್ಕೆ ಗಮನ ಕೊಡತಕ್ಕವರು ವಿರಳರಾಗಿರುವರು. ಪ್ರಭುಪದವಿಗೆ ಬರತಕ್ಕವನು ಅಥವಾ ಆ ಪದವಿಯಲ್ಲಿರತಕ್ಕವನು ಸುಳ್ಳು ಹೇಳಿದರೆ, ಅದು ಏಕಾಂತವಾಗಿರುವುದಿಲ್ಲ. ಲೋಕಾಂತವಾಗುವುದರಲ್ಲಿ ಸಂದೇಹವಿಲ್ಲ. ನೀನು ಸುಳ್ಳನೆಂದು ಪ್ರಭುವಿಗೆ ಯಾರೂ ಹೇಳುವುದಿಲ್ಲ. ಭೃತ್ಯರೂ ಕೂಡ ಸುಳ್ಳು ಹೇಳತಕ್ಕ ಪ್ರಭುವಿನಲ್ಲ ನಂಬಿಕೆಯನ್ನಿಡುವುದಿಲ್ಲ. ವಾಚಾಳನಾಗಿರುವುದು ಸುಲಭ. ಮೌನಿಯಾಗಿರುವುದು ಬಹಳ ಕಷ್ಟ. ಮುನಿಗಳಲ್ಲಿಯೂ ಅನೇಕರು ಎಷ್ಟುಮಟ್ಟಿಗೆ ಮೌನವನ್ನು ಅವಲಂಬಿಸಬೇಕೋ ಅಷ್ಟು ಮಟ್ಟಿಗೆ ಅವಲಂಬಿಸದೆ ಅನರ್ಥಕ್ಕೆ ಗುರಿಯಾಗಿರುವರು. ಇದರ ರಹಸ್ಯಗಳನ್ನು ತಿಳಿದುಕೊಳ್ಳುವ ವಯಸ್ಸು ನಿನಗೆ ಬಂದಿಲ್ಲ. ಆದುದರಿಂದ ಹೆಚ್ಚಾದ ರಾಜಧರ್ಮಗಳನ್ನು ನಿನಗೆ ಹೇಳಿ ಪ್ರಯೋಜನವಿಲ್ಲ. ಸತ್ಯವೂ, ಧರ್ಮವೂ, ರಹಸ್ಯ ರಕ್ಷಣೆಯೂ ಲೋಕಹಿತೈಷಿಗಳಾದ ಪ್ರಭುಗಳಿಗೆ ವಜ್ರಕವಚಗಳು. ಇವುಗಳನ್ನು ರಕ್ಷಿಸಿಕೊಂಡರೆ, ನೀನು ಪ್ರಜೆಗಳಿಗೆ ಚಿಂತಾಮಣಿಯಾಗಿಯೂ, ಕಲ್ಪವೃಕ್ಷವಾಗಿಯೂ ಪರಿಣಮಿಸುವೆ. ಅದರಿಂದ ಧನ್ಯತೆಯು ನಿನಗೆ ಉಂಟಾಗುವುದು. ದೇವರು ಈ ಗುಣಾತಿಶಯಗಳನ್ನು ನಿನಗೆ ಕೊಟ್ಟು ರಕ್ಷಿಸಲೆಂದು ನಾನು ಪ್ರಾರ್ಥಿಸು

ತ್ತೇನೆ." ಈ ರೀತಿಯಲ್ಲಿ ನನಗೆ ಹೇಳಿ, ನಮ್ಮ ತಾಯಿಯನ್ನು ಕುರಿತು ಈತನು ಹೇಳಿದ್ದೇನೆಂದರೆ.

"ಎಲೌ ಪೆನಿಲೋಪಳೇ,—ದುಷ್ಟನಿಗ್ರಹಕ್ಕೋಸ್ಕರ ನಾನು ನಮ್ಮ ದೇಶವನ್ನೂ ಪ್ರಾಣಪ್ರಿಯಳಾದ ನಿನ್ನನ್ನೂ, ಬಾಲ್ಯಾವಸ್ಥೆಯಲ್ಲಿರುವ ಟೆಲಿಮಾಕಸ್ಸನನ್ನೂ ಬಿಟ್ಟು ಹೋಗಬೇಕಾಗಿದೆ. ನಿಮ್ಮ ಯೋಗಕ್ಷೇಮಚಿಂತೆಯು ಮುಖ್ಯವಾದುದಾದಾಗ್ಯೂ, ದುರ್ಮಾರ್ಗನಾದ ಪಾರಿಸ್‌ನಿಂದ ಧರ್ಮಕ್ಕೆ ಉಂಟಾಗಿರತಕ್ಕ ಕ್ಲೇಶವನ್ನು ತಪ್ಪಿಸುವುದು ಧರ್ಮಿಷ್ಠರಿಗೆಲ್ಲಾ ಕರ್ತವ್ಯವಾದದ್ದು. ಪ್ರಭುತ್ವ ಮಾಡತಕ್ಕವರು ಈ ಪ್ರಪಂಚದಲ್ಲಿ ಜಗದೀಶ್ವರನ ಪ್ರತಿನಿಧಿಗಳೆಂದು ತಿಳಿದುಕೊಂಡು, ಮನೋವಾಕ್ಕರ್ಮಗಳಲ್ಲಿಯೂ ಪರಿಶುದ್ಧರಾಗಿ, ಋಜುಮಾರ್ಗಾವಲಂಬಿಗಳಾಗಿ, ದುಷ್ಟನಿಗ್ರಹ ಶಿಷ್ಟಪರಿಪಾಲನವನ್ನು ಮಾಡಬೇಕು. ಈ ದುರಾತ್ಮನಾದ ಪಾರಿಸ್ ಎಂಬ ರಾಜಪುತ್ರನು ಆರ್ಗಾಸ್ ಸಂಸ್ಥಾನದ ಪ್ರಭುವಾದ ಮೆನಲಯಾಸ್ ಎಂಬುವನ ಪತ್ನಿಯನ್ನು ಅಪಹರಿಸಿಕೊಂಡು ಹೋಗಿರುವನು. ಈ ಅಪಹರಣದಿಂದ ಧರ್ಮಕ್ಕೆ ಕುಠಾರಪ್ರಾಯನಾಗಿ ಪರಿಣಮಿಸಿರುವನು ಸಾಮಾನ್ಯ ಜನಗಳು ಅಧರ್ಮಗಳನ್ನು ಮಾಡಿದರೆ, ಅವರನ್ನು ನೋಡಿ, ಅವರ ಸಹವಾಸದಲ್ಲಿರತಕ್ಕವರು ಅಧರ್ಮಪ್ರವರ್ತಕರಾಗುವರು. ರಾಜಕುಮಾರರೂ, ಪ್ರಭುಗಳೂ ಅಧರ್ಮಪ್ರವರ್ತಕರಾದರೆ, ಧರ್ಮಕ್ಕೆ ಗತೀಸಾರು ಆಗುವುದು. ದುರ್ಬಲರನ್ನು ಬಲಿಷ್ಠರು ಮೂಲೋತ್ಪಾಟನ ಮಾಡುವರು. ಇದೇನಾಶ್ಚರ್ಯವಲ್ಲ. "ಯಥಾ ರಾಜಾ ತಥಾಪ್ರಜಾಃ" ಎಂಬದಾಗಿ ಗಾಥೆಯೂ ಕೂಡ ಹುಟ್ಟಿರುವುದು. ನಿಮ್ಮನ್ನು ಬಿಟ್ಟು ಹೋಗುವುದಕ್ಕೆ ನನಗೆ ಇಷ್ಟವಿಲ್ಲ. ಟೆಲಿಮಾಕಸ್ಸನಿಗೆ ರಾಜಯೋಗ್ಯವಾದ ವಿದ್ಯಾಭ್ಯಾಸವನ್ನು ಮಾಡಿಸಬೇಕೆಂದು ನಾನು ಸಂಕಲ್ಪ ಮಾಡಿದ್ದೆನು. ಅದಕ್ಕೆ ಈಗ ಸನ್ನಿಹಿತವಾಗಿರುವ ಮಹಾ ಯುದ್ಧವು ಪ್ರತಿಬಂಧಕವಾಯಿತು. ಈ ಕೆಲಸವನ್ನು ನಿನಗೆ ಒಪ್ಪಿಸಿರುತ್ತೇನೆ. ನೀನು ಸಕಲ ವಿದ್ಯಾವಿಶಾರದಳು. ಇವನಿಗೆ ಸದ್ವಿದ್ಯಾಭ್ಯಾಸ ಮಾಡಿಸಿ ರಕ್ಷಿಸುವುದಕ್ಕೆ ತಕ್ಕ ಅರ್ಹತೆಯುಳ್ಳವಳು. "ತಾಯಿಯಂತೆ ಮಕ್ಕಳು" ಎಂಬ ಗಾಥೆಯು ನಿಜವಾದದ್ದು. ಲೋಕದಲ್ಲಿ ದಿಗಂತವಿಶ್ರಾಂತವಾದ ಕೀರ್ತಿಯನ್ನು ಸಂಪಾದಿಸಿದ ಮಹಾತ್ಮರ ಚರಿತ್ರೆಗಳನ್ನು ಪರಿಶೀಲಿಸಿದರೆ, ಅವರ ಮಾತೃಶ್ರೀಯವರೇ ಅವರ ಮಹಿಮೆಗೆ ಕಾರಣಭೂತರೆಂದು ಗೊತ್ತಾಗುತ್ತದೆ. ಟೆಲಿಮಾಕಸ್ಸನನ್ನು ಸಕಲ ವಿದ್ಯಾವಿನಯಸಂಪನ್ನನನ್ನಾಗಿ ಮಾಡುವ ಭಾರವು ನಿನಗೆ ಸೇರಿರುವುದು. ಈ ಭಾರವನ್ನು ವಹಿಸುವ ಶಕ್ತಿಯನ್ನು ದೇವರು ನಿನಗೆ ಸಂಪೂರ್ಣವಾಗಿ ಕೊಡಲೆಂದು ನಾನು ಕೋರುತ್ತೇನೆ. ಮಕ್ಕಳ

ತಂದೆತಾಯಿಗಳ ನಡೆನುಡಿಗಳನ್ನು ನೋಡಿ ಅದರಂತೆ ನಡೆಯುತ್ತಾರೆ. ನಿನ್ನ ಸಚ್ಚರಿತ್ರೆಯು ಈ ಟಿಲಿಮಾಕಸ್ಸನಿಗೆ ಮೇಲ್ಪಂಕ್ತಿಯಾಗಿರುವಂತೆ ಮಾಡಿಕೊ. ಸಹವಾಸದಿಂದ ಸದ್ಗುಣಗಳೂ, ದುರ್ಗುಣಗಳೂ ಬರುತ್ತವೆ. ಇವನಿಗೆ ಸಮೀಚೀನವಾದ ಸಹವಾಸವು ದೊರೆಯುವಂತೆ ಮಾಡು. ಬಾಲಕರ ಮನಸ್ಸು ಜೇನು ಮೇಣದಂತೆ ಇರುವುದು. ಅದನ್ನು ಬೇಕಾದ ಆಕಾರಕ್ಕೆ ಇಳಿಸಬಹುದು. ನಮ್ಮ ವಂಶಕ್ಕೆ ಇವನು ಅಪಕೀರ್ತಿಯನ್ನು ತರದಂತೆ ಮಾಡು. ಬಾಲ್ಯದಲ್ಲಿ ಸುಳ್ಳು, ಕಟವಟ ಮೊದಲಾದ ದುರ್ಗುಣಗಳು ಸಹವಾಸ ದೋಷದಿಂದ ಬರುವುವು. ತಂದೆತಾಯಿಗಳೂ, ಪಾಲಕರೂ ಇದಕ್ಕೆ ಕಾರಣಭೂತರಾಗುವುದುಂಟು. ಇವನು ಸುಳ್ಳುಗಾರನಾಗದಂತೆಯೂ, ಸುಮಾರ್ಗಾವಲಂಬಿಯಾಗುವಂತೆಯೂ ಮಾಡು. ರಾಜರನ್ನೂ, ರಾಜಕುಮಾರರನ್ನೂ ಇಂದ್ರ, ಚಂದ್ರ, ಮಹೇಂದ್ರರೆಂದು ಸ್ತುತಿಸಿ, ಅದರಿಂದ ಪ್ರಯೋಜನವನ್ನು ಪಡೆಯಬೇಕೆಂಬ ಅಭಿಸಂಧಿಯುಳ್ಳವರು ಅನೇಕರಿರುವರು. ಅಂಥವರ ಸ್ತುತಿಪಾಠಗಳಿಗೆ ಮರುಳಾಗದಂತೆ ಮಾಡಿ, ಇವನನ್ನು ರಕ್ಷಿಸು. ಸಾಮಾನ್ಯವಾದ ಜನಗಳಿಗೂ ದೋಷಗಳನ್ನು ಉದ್ಘಾಟಿಸಿದರೆ ದುರಾಗ್ರಹವು ಬರುವುದು. ನಮ್ಮ ದೋಷವನ್ನು ಪ್ರೀತಿಯಿಂದ ತೋರಿಸಿದಾಗ್ಯೂ, ಅಪ್ರೀತಿಯಿಂದ ಉದ್ಘಾಟಿಸಿದಾಗ್ಯೂ ಅಂಥವರಲ್ಲಿ ದುರಾಗ್ರಹವನ್ನು ಮಾಡದೆ, ನಮ್ಮಲ್ಲಿ ಏನು ತಪ್ಪಿರುವುದು ಎಂದು ಪರೀಕ್ಷಿಸಿಕೊಂಡು, ಅದನ್ನು ತಿದ್ದಿಕೊಳ್ಳುತ್ತಾ ಬಂದರೆ, ನಾವು ದೇವರಿಗೆ ಸಮಾನರಾಗುವೆವು. ಇಂಥಾ ಶಕ್ತಿಯನ್ನು ಇವನಿಗೆ ಉಂಟುಮಾಡು. ಧರ್ಮಿಷ್ಠನಾಗಿಯೂ, ದಯಾರ್ದ್ರಹೃದಯನಾಗಿಯೂ, ಸತ್ಯಸಂಧನಾಗಿಯೂ ಇವನು ಪರಿಣಮಿಸುವಂತೆ ಮಾಡು. ಇದೆಲ್ಲಕ್ಕಿಂತಲೂ ಮುಖ್ಯವಾದ ಗುಣಾತಿಶಯವೊಂದಿರುವುದು. ರಾಜಮಂತ್ರಗಳೂ, ರಹಸ್ಯಗಳೂ ರಕ್ಷಿಸಲ್ಪಡದಿದ್ದರೆ, ಅನೇಕ ಅನರ್ಥಗಳು ಉಂಟಾಗುವುವು. ಈ ವಿಷಯಗಳನ್ನೆಲ್ಲಾ ನಾನು ಟಿಲಿಮಾಕಸ್ಸನಿಗೆ ಸೂಕ್ಷ್ಮವಾಗಿ ತಿಳಿಸಿರುತ್ತೇನೆ. ಅವುಗಳನ್ನು ಸಮಗ್ರವಾಗಿ ತಿಳಿಸಿ, ಅವನು ನಿನ್ನ ಮಗನಾಗಿರುವುದಕ್ಕೆ ಹೇಗೆ ಅರ್ಹನನ್ನಾಗಿ ಮಾಡಬೇಕೋ ಹಾಗೆ ಮಾಡುವ ಭಾರವು ನಿನಗೆ ಸೇರಿರುವುದು. ಈ ಭಾರವನ್ನು ವಹಿಸುವ ಶಕ್ತಿಯನ್ನು ದೇವರು ನಿನಗೆ ಕೊಟ್ಟು ಕಾಪಾಡಲಿ ”

ಈ ರೀತಿಯಲ್ಲಿ ನನ್ನ ತಂದೆಯು ಪ್ರಯಾಣ ಮಾಡುವ ಸಮಯದಲ್ಲಿ ನಮ್ಮ ತಾಯಿಗೆ ಅಪ್ಪಣೆ ಕೊಡಿಸಿದನು. ರಹಸ್ಯ ರಕ್ಷಣೆಯ ವಿಷಯದಲ್ಲಿ ಇಷ್ಟು ಮಾತ್ರ ನನಗೆ ತಿಳಿಯುವುದು ಎಂದು ನಾನು ನಾಪ್‌ಚಾಲ್‌ನಿಗೆ ಶ್ರುತಪಡಿಸಿದೆನು.

ಸುಳ್ಳು ಹೇಳುವುದು ಮಹಾ ಪಾತಕವೆಂಬದಾಗಿಯೂ, ಸುಳ್ಳು ಹೇಳತಕ್ಕವನು ಪ್ರಭುವಾಗಿರುವುದಕ್ಕೆ ಅರ್ಹನಲ್ಲನೆಂಬದಾಗಿಯೂ, ನಮ್ಮ ತಂದೆಯು ಹೇಳುತ್ತಿದ್ದನು. ಇದನ್ನು ಕೇಳಿದ ಕೂಡಲೆ, ಸುಳ್ಳನ್ನು ಹೇಳುವುದಿಲ್ಲವೆಂದು ನಾನು ನಿಷ್ಕರ್ಷೆ ಮಾಡಿದೆನು. ಈ ನಿಷ್ಕರ್ಷೆಯನ್ನು ಅನುಷ್ಠಾನಕ್ಕೆ ತಂದುಕೊಳ್ಳುವಾಗ್ಗೆ ಬಹಳ ಕಷ್ಟವಾಯಿತು. ಅನುಷ್ಠಾನ ಸಮಯ ಬಂದಾಗ ಮುನಿಗಳೂ ಕೂಡ ಅಪಂಡಿತರಾಗುವರೆಂದು ಹೇಳುವುದನ್ನು ನಾನು ಕೇಳಿ ಇದ್ದೆನು. ಅದು ನಿಜವೆಂದು ಗೊತ್ತಾಗುವ ಸಂದರ್ಭಗಳು ಉಂಟಾದವು. ನಮ್ಮ ತಂದೆಯು ದೇಶಾಟನಕ್ಕೆ ಹೋದನು. ರಾಜ್ಯಭಾರವು ಮಂತ್ರಿಗಳಿಗೆ ವಹಿಸಲ್ಪಟ್ಟಿತು. ನಮ್ಮ ತಾಯಿ ಬಹಳ ರೂಪವತಿಯಾಗಿದ್ದಳು. ಸೌಂದರ್ಯಕ್ಕೆ ಅನುರೂಪವಾದ ಪಾತಿವ್ರತ್ಯವು ಇವಳಲ್ಲಿದ್ದಿತು. ನಮ್ಮ ತಾಯಿಯು ಸಾಮಾನ್ಯ ಸ್ತ್ರೀಯೆಂದು ಭಾವಿಸಿ, ಅನೇಕ ಪ್ರಭುಗಳು ನಮ್ಮ ರಾಜಧಾನಿಗೆ ಬಂದರು. ನಾನೂ, ಮಂತ್ರಿಗಳೂ ಅವರ ಪದವಿಗೆ ಅನುರೂಪವಾದ ಮರ್ಯಾದೆಗಳನ್ನು ಮಾಡಿ ಸತ್ಕರಿಸಿದೆವು. ಈ ದುರಾತ್ಮರು ನಮ್ಮ ತಾಯಿಯನ್ನು ಕುರಿತು ಹೇಳಿದ್ದೇನೆಂದರೆ :—

ಎಲೌ ಸೀತಿಲೋಪಳೇ,—" ನಿನ್ನ ಗಂಡನು ದೇಶಾಟನಕ್ಕೆ ಹೋಗಿ ಬಹಳ ದಿನಗಳಾದವು. ಆತನ ಯೋಗಕ್ಷೇಮ ವಿಷಯವನ್ನು ನಾವು ವಿಚಾರಿಸಿದೆವು. ಆತನು ಮೃತಪಟ್ಟಂತೆ ತಿಳಿಯಬರುತ್ತದೆ. ನಮ್ಮಲ್ಲಿ ನಿನಗೆ ಇಷ್ಟವಾದವರನ್ನು ವರಿಸು. ನಿನ್ನನ್ನೂ, ನಿನ್ನ ಮಗನನ್ನೂ ನಾವು ರಕ್ಷಿಸುತ್ತೇವೆ." ಎಂದು ಹೇಳಿದರು. ಇವರ ದೌರಾತ್ಮ್ಯವು ನನಗೆ ಅಪ್ರತಿಹತವಾದ ಕೋಪವನ್ನು ಉಂಟುಮಾಡಿತು. ತಕ್ಷಣದಲ್ಲಿಯೇ ಅವರ ಶಿರಚ್ಛೇದವನ್ನು ಮಾಡಬೇಕೆಂದು ಕತ್ತಿಯನ್ನು ತರುವುದಕ್ಕೆ ಹೋದೆನು. ನಮ್ಮ ತಾಯಿಯು ಇದನ್ನು ತಿಳಿದುಕೊಂಡು, ನನ್ನನ್ನು ಕರೆದು ಹೇಳಿದ್ದೇನೆಂದರೆ.—" ಮಗುವೇ ! ದುಡುಕಬೇಡ. ಇದು ನಮಗೆ ವಿಷಮ ಕಾಲ. ಇದು ಪರಾಕ್ರಮಕ್ಕೆ ಕಾಲವಲ್ಲ. ಉಪಾಯದಿಂದ ನಮಗೆ ಬಂದಿರುವ ಆಪತ್ತನ್ನು ತಪ್ಪಿಸಿಕೊಳ್ಳಬೇಕು. ಅದು ಅಸಾಧ್ಯವಾದರೆ, ಆಗ ಶಸ್ತ್ರಪರಿಗ್ರಹ ಮಾಡಬೇಕು. ಭಯಪಡಬೇಡ. ಈ ದುಷ್ಟರು ಕಾಮಾಂಧರಾಗಿದ್ದಾರೆ. ಇವರನ್ನು ಇವರ ಅಧರ್ಮವೇ ಮೂಲೋತ್ಪಾಟನ ಮಾಡುವುದು. ಪತಿವ್ರತೆಯರ ಕಣ್ಣೀರು ಒಂದು ತೊಟ್ಟು ನೆಲಕ್ಕೆ ಬಿದ್ದರೆ, ಅದು ಪ್ರಳಯಕಾಲದ ಅಗ್ನಿಯಂತೆ ದುರಾತ್ಮರ ವಂಶವನ್ನೇ ಸುಟ್ಟು ಬೂದಿಮಾಡುವುದೆಂಬುದು ನಿನಗೆ ತಿಳಿಯದೆ ? ಈ ದುಂತರು ಬಲಿಷ್ಠರಾಗಿದ್ದಾರೆ. ಸೈನ್ಯಸಮೇತರಾಗಿ ಬಂದಿದ್ದಾರೆ. ನಾನು ಹೆಂಗಸು, ನೀನು ಹುಡುಗ, ಯಜಮಾನರು ದೂರದೇಶದಲ್ಲಿರುವರು. ಮಂತ್ರಿಗಳು ಹೂರರು. ಆದಾಗ್ಯೂ ಮೊದಲನೇ

ಮೂರು ಉಪಾಯಗಳನ್ನು ಪ್ರಯೋಗಿಸಿ, ಅವುಗಳಿಂದ ಕಾರ್ಯಸಾಧನೆಯಾಗದಿದ್ದರೆ, ದಂಡೋಪಾಯವನ್ನು ಮಾಡಬೇಕು. ಶಾಂತಿಯನ್ನು ವಹಿಸು. ಮೌನವನ್ನು ಅವಲಂಬಿಸು. ತಾಳಿದವರು ಬಾಳುವರು. ನಾವು ಧರ್ಮದಿಂದ ಇದ್ದರೆ, ನಮ್ಮನ್ನು ದೇವರು ರಕ್ಷಿಸುವನು. ಭಯಪಡಬೇಡ.'' ಎಂದು ಹೇಳಿದಳು. ಇದು ನಿಜವೆಂದು ನನಗೂ ತೋರಿತು. ನಾನು ಕೋಪವನ್ನೆಲ್ಲಾ ಅಡಗಿಸಿಕೊಂಡು, ನನ್ನ ಸ್ಥಳಕ್ಕೆ ಹೋದೆನು. ಆಗ ನನ್ನ ತಾಯಿಯು ಈ ದುರಾತ್ಮರನ್ನು ಕುರಿತು ಹೇಳಿದ್ದೇನೆಂದರೆ.—ಎಲೈ ಪ್ರಭುಗಳಿರಾ! ನೀವು ಹೇಳಿದ ಮಾತನ್ನು ಕೇಳಿದೆನು. ನನ್ನ ಪತಿಯು ಕಾಲಾಧೀನನಾಗಿದ್ದರೆ, ಸ್ವಯಂವರಕ್ಕೆ ಇದು ಸಮವಲ್ಲ. ಒಂದು ವರ್ಷದವರೆಗೂ ಔರ್ಧ್ವದೈಹಿಕ ಕ್ರಿಯೆಗಳು ನಡೆಯಬೇಕು. ಈಗ ಸ್ವಯಂವರವನ್ನು ಮಾಡಿಕೊಂಡರೆ, ನಾನು ಆಚಂದ್ರಾರ್ಕವಾದ ನಿಂದೆಗೆ ಗುರಿಯಾಗುವೆನು. ನಿಮಗೂ ಬಹಳ ಅಪಯಶಸ್ಸು ಬರುವುದು. ಈ ಭಾಗದಲ್ಲಿ ದುಡುಕಬಾರದು. ಒಂದು ವರ್ಷ ಪರೀಕ್ಷಿಸಿ. ಅನಂತರ ದೈವಸಂಕಲ್ಪವಿದ್ದಂತೆ ಆಗಲಿ.''

ಈ ರೀತಿಯಲ್ಲಿ ನಮ್ಮ ತಾಯಿಯು ಹೇಳಲು, ಅವರಲ್ಲಿ ಚರ್ಚೆಗೆ ಉಪಕ್ರಮವಾಯಿತು. ಕೆಲವರು ಬಲಾತ್ಕಾರವಾಗಿ ನಮ್ಮ ತಾಯಿಯ ಪಾತಿವ್ರತ್ಯಕ್ಕೆ ಭಂಗವನ್ನು ಉಂಟುಮಾಡಬೇಕೆಂದು ಅಭಿಪ್ರಾಯ ಪಟ್ಟರು. ಮತ್ತೆ ಕೆಲವರು ನಮ್ಮ ತಾಯಿಯು ಹೇಳಿದಂತೆ ಪರೀಕ್ಷಿಸುವುದು ಉತ್ತಮವೆಂದು ಹೇಳಿದರು. ಅವರಲ್ಲಿಯೇ ಭೇದಭಾವವು ಹುಟ್ಟಿತು. ಆಗ ನಮ್ಮ ಮಂತ್ರಿಗಳೂ, ನಾವೂ ಬಹಳ ವಿನಯದಿಂದಲೂ, ಸಾಮದಾನಭೇದಗಳ ಪ್ರಯೋಗದಿಂದಲೂ ಒಂದು ವರ್ಷ ಅವಧಿಯು ಕೊಡಲ್ಪಡುವಂತೆ ಮಾಡಿದೆವು. ಕೊನೆಗೆ ಎಲ್ಲರೂ ಇದಕ್ಕೆ ಒಪ್ಪಿದರು. ಆದರೆ, ಈ ಅವಧಿಯು ಪೂರೈಸುವವರೆಗೂ ಇವರೆಲ್ಲರೂ ನಮ್ಮ ದೇಶದಲ್ಲಿಯೇ ಇರುವುದಕ್ಕೆ ಅವಕಾಶವನ್ನು ಕೇಳಿದರು. ಅದಕ್ಕೆ ಅವಕಾಶವನ್ನು ಕೊಟ್ಟೆವು. ಅವರ ಆತಿಥ್ಯಕ್ಕೆ ಬೇಕಾದ ಏರ್ಪಾಡುಗಳನ್ನು ಮಾಡಿದೆವು. ನಮ್ಮ ತಾಯಿಯು ಆಗ ಒಂದು ರಹಸ್ಯವನ್ನು ಹೇಳಿದಳು. ಅದನ್ನು ಇದುವರೆಗೂ ಯಾರಿಗೂ ನಾನು ಹೇಳಿರುವುದಿಲ್ಲ. ಈ ರಹಸ್ಯಕ್ಕೆ ಸಂಬಂಧಪಟ್ಟ ಕೆಲಸದ ಫಲವು ಪೂರೈಸುವವರೆಗೂ ಆ ರಹಸ್ಯವನ್ನು ಯಾರಿಗೂ ಹೇಳುವುದೂ ಇಲ್ಲ. ಪ್ರಭುತ್ವ ಮಾಡತಕ್ಕವರಿಗೆ ನೀನು ಸೂಚಿಸಿದಂತೆ ರಹಸ್ಯವನ್ನು ರಕ್ಷಿಸುವುದು ದೊಡ್ಡ ಗುಣ. ಈ ಶಕ್ತಿಯಿಲ್ಲದವರು ಪ್ರಭುತ್ವ ಮಾಡುವುದಕ್ಕೆ ಅನರ್ಹರು ಮಂತ್ರಿಗಳಾಗಿರುವುದಕ್ಕೂ ಅನರ್ಹರು. ರಹಸ್ಯವನ್ನು ಬೈಲಾಗದಂತೆ ಇಟ್ಟುಕೊಳ್ಳುವುದರಲ್ಲಿ ಕೆಲವರು ಸುಳ್ಳನ್ನು ಹೇಳುವರು. ಸುಳ್ಳನ್ನು ಹೇಳದೆ ರಹಸ್ಯವನ್ನು ರಕ್ಷಿಸಿಕೊಳ್ಳು

ವುದು ಬಹಳ ಕಷ್ಟ. ನಮ್ಮ ತಂದೆತಾಯಿಗಳ ಶಿಕ್ಷಣದಿಂದಲೂ, ಪುಂಟರನ ಉಪದೇಶದಿಂದಲೂ ಈ ರಹಸ್ಯ ರಕ್ಷಣೆ ಮಾಡುವ ಶಕ್ತಿಯನ್ನು ನಾನು ಸ್ವಲ್ಪ ಮಟ್ಟಿಗೆ ಸಂಪಾದಿಸಿಕೊಂಡಿರುವೆನು. ಈ ಮಾತನ್ನು ಕೇಳಿ ನಾರ್‍ಬಲ್ಲನು ಹೇಳಿದ್ದೇನೆಂದರೆ :—

" ರಹಸ್ಯ ರಕ್ಷಣೆಯಲ್ಲಿ ನೀನು ಸಮರ್ಥನೆಂದು ನನಗೆ ತುಂಬಾ ಸಂತೋಷವಾಯಿತು. ಈಗ ನನಗೆ ಒಂದು ರಹಸ್ಯವು ಹೇಳಲ್ಪಡಬೇಕಾಗಿರುವುದು. ಫಿನೀಷಿಯರ್ರು ಅಪ್ರತಿಹತವಾದ ಶಕ್ತಿಯುಳ್ಳವರು. ಅವರ ನಾವೆಯ ಬಲವು ಅದ್ಭುತವಾಗಿರುವುದು. ಸಕಲ ಜನಾಂಗದವರೂ ಅವರಿಗೆ ಹೆದರುವರು. ಇವರ ವ್ಯಾಪಾರವು ಜಿಬ್ರಾಲ್ಟರ್ ಜಲಸಂಧಿಯವರೆಗೂ ವ್ಯಾಪಿಸಿಕೊಂಡಿರುವುದು. ಈ ವ್ಯಾಪಾರದ ಮಹಿಮೆಯಿಂದ ಪ್ರಪಂಚದಲ್ಲಿ ಎಲ್ಲಾ ಜನಾಂಗಗಳಿಗಿಂತಲೂ ಹೆಚ್ಚಾದ ಸಂಪತ್ತನ್ನು ಇವರು ಶೇಖರಿಸಿಕೊಂಡಿರುವರು. ಸಸಾಟ್ರಿಸ್ಸನು ಜಗದೇಕವೀರನಾದನು. ಅವನೂ ಕೂಡ ಇವರಿಗೆ ಭಯಪಡುತ್ತಿದ್ದನು. ಪೂರ್ವದಿಕ್ಕಿನಲ್ಲಿ ಈ ಸಮಸ್ತ ರಾಜ್ಯಗಳನ್ನೂ ಜಯಿಸಿದನು. ಆದರೆ ಫಿನೀಷಿಯರ್ರನ್ನು ಜಯಿಸುವುದು ಬಹಳ ಕಷ್ಟವಾಯಿತು. ಪರಾಜಿತರಾದಾಗ ಇವರು ಸಸಾಟ್ರಿಸ್ಸಿಗೆ ಪೊಗದಿಯನ್ನು ಕೊಡುವುದಾಗಿ ಒಪ್ಪಿಕೊಂಡರು. ಆದನ್ನು ಇದುವರೆಗೂ ಕೊಟ್ಟಿಲ್ಲ. ಅದನ್ನು ಕೊಡುವ ಸಂಭವವೂ ಇಲ್ಲ. ಸಾಮಂತರಾಗಿರುವಾಗಲೇ [illegible] ಒಪ್ಪಿಕೊಂಡಿದ್ದರು. ಈಗ ಸ್ವಾತಂತ್ರ್ಯವನ್ನು ಪಡೆಯಬೇಕೆಂದು [illegible]ಕೊಂಡಿರುವರು. ಸಸಾಟ್ರಿಸ್ಸನು ಕಾಲಾಧೀನನಾದನು. ಇದು ಅವರಿಗೆ ಬಹಳ ಸಂತೋಷವನ್ನುಂಟುಮಾಡಿತು. ಇಂಕರಿಸ್ಸನ ಪ್ರಭುತ್ವದಲ್ಲಿ ಈಜಿಪ್ಟ್ ದೇಶದವರಲ್ಲಿ ಐಕಮತ್ಯವು ಹೋಯಿತು. ಎರಡು ಕಕ್ಷಿಗಳಾದವು. ಒಂದು ಕಕ್ಷಿಯವರು ಇವರ ಸಹಾಯವನ್ನು ಕೇಳಲು, ಅವರು ಅತ್ಯಂತ ಸಂತೋಷದಿಂದ ಅವರಿಗೆ ಸಹಾಯ ಮಾಡುವುದಾಗಿ ಒಪ್ಪಿದರು. ಇಂಕರಿಸ್ಸನು ಕೊಲ್ಲಲ್ಪಟ್ಟನು. ಇವರ ಅಧಿಕಾರವು ಅಪ್ರತಿಹತವಾಯಿತು. ಈಗ ಈಜಿಪ್ಟ್ ದೇಶದಲ್ಲಿ ಇವರೇ ಸರ್ವಾಧಿಕಾರಿಗಳಾದರು. ಇದರಿಂದ ಸಾರ್ವಭೌಮಪದವಿಯೂ ಕೂಡ ಇವರಿಗೆ ಹಸ್ತಗತವಾಯಿತು. ಈಜಿಪ್ಟ್ ದೇಶದವರು ಎರಡು ಕಕ್ಷಿಗಳಾದದ್ದೇ ಫಿನೀಷಿಯರ್ರಿಗೆ ಪ್ರಾಶಸ್ತ್ಯವೂ, ಕೀರ್ತಿಯೂ, ಅಪರಿಮಿತವಾದ ದ್ರವ್ಯವೂ, ಅಸಾಧಾರಣವಾದ ಅಧಿಕಾರವೂ ಬರುವುದಕ್ಕೆ ಅವಕಾಶವಾಯಿತು.

" ಎಲೈ ಟೆಲಮಾಕಸ್ಸನೇ,—ಲೋಕದಲ್ಲಿ ಜನಗಳು ಇತರರನ್ನು ರಕ್ಷಿಸುವುದಕ್ಕೆ ಪ್ರಯತ್ನ ಮಾಡುವರು. ಆದೇ ಕಾಲದಲ್ಲಿ ಬಂಧನಕ್ಕೆ ಒಳಪಡುವರು.

ನಮ್ಮ ದೊರೆಯಾದ ಪಿಗ್‌ಮೇಲಿಯನ್ ಎಂಬುವನ ಸಹೋದರಿಯೊಬ್ಬಳಿರುವಳು. ಅವಳನ್ನು ಡೈಡೋ ಎಂಬದಾಗಿ ಕರೆಯುತ್ತಾರೆ. ಅವಳ ಗಂಡನಾದ ಸಿಚಿಯಸ್ ಎಂಬುವನನ್ನು ಈ ಪಿಗ್‌ಮೇಲಿಯನ್ನನು ಕೊಲ್ಲಿಸಿದನು. ಈಕೆಯು ಬಹಳ ವ್ಯಸನದಿಂದ ತನ್ನಲ್ಲಿ ವಿಶ್ವಾಸವುಳ್ಳವರೊಡನೆ ಅರಮನೆಯನ್ನು ಬಿಟ್ಟು ಓಡಿಹೋಗಿರುವಳು. ಆಫ್ರಿಕಾ ಖಂಡದ ತೀರದಲ್ಲಿ ಕಾರ್ಥೇಜ್ ಎಂಬ ಪಟ್ಟಣಕ್ಕೆ ಶಂಕುಸ್ಥಾಪನೆಯನ್ನು ಮಾಡಿರುವಳು. ಧರ್ಮಿಷ್ಠರಾಗಿಯೂ, ಸ್ವಾತಂತ್ರ್ಯದಲ್ಲಿ ಆಸಕ್ತರಾಗಿಯೂ ಇರುವ ಅನೇಕ ಮಹಾ ಜನಗಳು ಈಕೆಯನ್ನು ಅನುಸರಿಸಿ ಹೋಗಿರುವರು. ಈ ಪಟ್ಟಣವು ದಿನೇದಿನೇ ಸಕಲ ಸಂಪತ್ತುಗಳಿಗೂ ನಿಲಯವಾಗುತ್ತಲಿರುವುದು. ಈಕೆಗೂ, ಈಕೆಯ ಪ್ರಜೆಗಳಿಗೂ ನಿಸರ್ಗವಾದ ಪ್ರೀತಿಯು ಇರುವುದು. ಪ್ರಜೆಗಳ ಸಂಪತ್ತೇ ತನ್ನ ಸಂಪತ್ತೆಂದು ಈಕೆಯು ತಿಳಿದುಕೊಂಡಿರುವಳು. ಈಕೆಯ ಪ್ರಜೆಗಳು ಸರ್ವಸ್ವವನ್ನೂ ಈಕೆಗೆ ಒಪ್ಪಿಸುವುದಕ್ಕೆ ಸಿದ್ಧರಾಗಿರುವರು. ಪ್ರಾಣವನ್ನು ಒಪ್ಪಿಸುವುದಕ್ಕೂ ಕೂಡ ಸಿದ್ಧರಾಗಿರುವರು. ಪಿಗ್‌ಮೇಲಿಯನ್ನನಿಗೆ ಈಕೆಯ ಮೇಲೆ ದ್ವೇಷವಿರುವುದು. ಆದರೆ, ಆ ದ್ವೇಷದಿಂದ ಈಕೆಗೆ ಯಾವ ಬಾಧಕವೂ ಆಗುವಂತೆ ತೋರುವುದಿಲ್ಲ. ಈ ದ್ವೇಷದಿಂದ ಇವನಿಗೆ ವಿಪತ್ತು ಬರುವ ಸಂಭವವು ಇರುವುದು. ಈವನ ಸ್ವಂತ ಪ್ರಜೆಗಳೇ ಇವನಲ್ಲಿ ನಂಬಿಕೆಯುಳ್ಳವರಾಗಿರುವುದಿಲ್ಲ. ಅವರಲ್ಲಿ ಇವನಿಗೂ ವಿಶ್ವಾಸವಿರುವುದಿಲ್ಲ. ಭಯದಿಂದ ಅವರು ವಿಧೇಯರಾಗಿರುವರು. ಯಾವಾಗ ಇವರು ಒಗ್ಗಟ್ಟಾಗಿ ತನ್ನನ್ನು ಸಂಹರಿಸುವರೋ ಎಂಬ ಭಯವು ಇವನಿಗೂ ಇರುವುದು. ಹೀಗಿದ್ದಾಗ್ಯೂ, ಪ್ರೀತಿಯಿಂದಲೂ, ಔದಾರ್ಯದಿಂದಲೂ ಪ್ರಜೆಗಳನ್ನು ಸ್ವಾಧೀನ ಮಾಡಿಕೊಳ್ಳುವ ಬುದ್ಧಿಯು ಇವನಿಗೆ ಉಂಟಾಗಿರುವುದಿಲ್ಲ. ಇವನ ರಾಜ್ಯದಲ್ಲಿ ಐಶ್ವರ್ಯವಂತರಾಗಿರುವುದೇ ಅಪರಾಧವಾಗಿ ಪರಿಣಮಿಸಿರುವುದು. ಇವನು ದುರಾಸೆಯುಳ್ಳವನು. ಹೊಟ್ಟೆಕಿಚ್ಚು ಇವನಲ್ಲಿ ಮೂರ್ತಿ ಮತ್ತಾಗಿರುವುದು. ಯಾರಲ್ಲೂ ಇವನಿಗೆ ನಂಬಿಕೆಯು ಇರುವುದಿಲ್ಲ. ಇವನು ಕಿರಾತಸ್ವಭಾವವುಳ್ಳವನು. ಐಶ್ವರ್ಯವಂತರನ್ನು ಇವನು ಹಿಂಸಿಸುತ್ತಾನೆ. ಬಡವರನ್ನು ಹೆದರಿಸುತ್ತಾನೆ. ಇವನಿಗೆ ಐಶ್ವರ್ಯವಂತರಲ್ಲಿ ಎಷ್ಟು ದ್ವೇಷವು ಇರುವುದೋ, ಸತ್ಯವಂತರಲ್ಲಿ ಅದಕ್ಕಿಂತ ಹೆಚ್ಚಾದ ದ್ವೇಷವು ಇರುವುದು. ಸತ್ಯಸಂಧರಾದವರು ಇವನಲ್ಲಿ ಪ್ರೀತಿಯುಳ್ಳವರಾಗಿರುವುದಿಲ್ಲ. ಅವರನ್ನು ಇವನು ದ್ವೇಷಿಸುವುದಕ್ಕೆ ಇದೇ ಮುಖ್ಯಕಾರಣ. ಕೆಟ್ಟಕೆಲಸಗಳನ್ನು ಮಾಡಬೇಕೆಂದು ಇವನು ಆಜ್ಞೆಯನ್ನು ಮಾಡುತ್ತಾನೆ. ಸಜ್ಜನರು 'ಇದು ಸರಿಯಲ್ಲ, ನಿನ್ನ ಪದವಿಗೆ ಇದು ಅನರ್ಹ

ವಾದ್ದು; ನಾವು ಈ ಕೆಲಸವನ್ನು ಮಾಡಲಾರೆವು; ಕ್ಷಮಿಸಬೇಕು.' ಎಂದು ಹೇಳಿ, ಅವನ ಆಜ್ಞೆಯನ್ನು ಉಲ್ಲಂಘಿಸುತ್ತಲಿರುವರು. 'ನಾನು ಪ್ರಭುವಾಗಿದ್ದಾಗ್ಯೂ, ನನ್ನ ಆಜ್ಞೆಯನ್ನು ಇವರು ಉಲ್ಲಂಘಿಸುವರಲ್ಲಾ,' ಎಂದು ಇವನು ಅವರನ್ನು ದ್ವೇಷಿಸುತ್ತಿರುವನು. ಸತ್ಯವನ್ನು ಮೂಲೋತ್ಪಾಟನ ಮಾಡುವುದರಲ್ಲಿ ಇವನು ಬದ್ಧಕಂಕಣನಾಗಿರುವನು. ಸತ್ಯವಂತರು ಮಾತ್ರವೇ ಅಲ್ಲದೆ, ದುರ್ಮಾರ್ಗಪ್ರವರ್ತಕರೂ ಕೂಡ ಇವನಲ್ಲಿ ಅನುರಕ್ತರಾಗಿರುವುದಿಲ್ಲ. ಯಾವಾಗ ಏನು ವಿಪತ್ತು ಬರುವುದೋ ಎಂದು ಎಲ್ಲರೂ ಇವನಲ್ಲಿ ಭಯವುಳ್ಳವರಾಗಿರುವರು. ಇವನಿಗೂ ಅವರಲ್ಲಿ ಭಯವು ಇರುವುದು. ತನ್ನ ನೆರಳನ್ನು ನೋಡಿ, ಯಾರೋ ಶತ್ರುಗಳು ಬಂದಂತೆ ಇವನು ಭಯಪಡುವನು. ಇವನಿಗೆ ಸರಿಯಾಗಿ ನಿದ್ದೆಯು ಬರುವುದಿಲ್ಲ. ಕಣ್ಣನ್ನು ಮುಚ್ಚಿದ ಕೂಡಲೇ ಭಯಂಕರವಾದ ಸ್ವಪ್ನಗಳು ಆಗುವುವು. ತಾನು ಯಾರಿಗೆ ಅಪಕಾರ ಮಾಡಿರುವನೋ ಅವರು ತನ್ನನ್ನು ಕೊಲ್ಲುವುದಕ್ಕೆ ಬಂದಂತೆ ತೋರುವುದು. ಕೂಗಿಕೊಂಡು ಏಳುವನು. ಯಾವಾಗ್ಯೂ ಕತ್ತಿಯನ್ನು ಸಮೀಪದಲ್ಲಿ ಇಟ್ಟುಕೊಂಡಿರುವನು. ಆತ್ಮರಕ್ಷಣೆಯಲ್ಲಿ ಯಾವಾಗ್ಯೂ ಸನ್ನದ್ಧನಾಗಿರುವನು. ಎಲ್ಲರಲ್ಲಿಯೂ ಇವನಿಗೆ ಸಂದೇಹವು ಇರುವುದು. ಅನ್ನಪಾನಗಳಲ್ಲಿ ವಿಷವೇನಾದರೂ ಹಾಕಲ್ಪಟ್ಟಿದೆಯೋ ಏನೋ, ಎಂದು ಸಂದೇಹದಿಂದ ಆ ಅನ್ನೋದಕಗಳನ್ನು ಅವರು ತಿನ್ನುವಂತೆ ಮಾಡಿ, ಅನಂತರ ತಾನು ತಿನ್ನುವನು. ತನ್ನನ್ನು ಸಂಹರಿಸುವುದಕ್ಕೆ ಯಾರು ಏನು ಉಪಾಯಗಳನ್ನು ಮಾಡಿರುವರೋ ಎಂದು ಯಾವಾಗ್ಯೂ ಸಂದೇಹದಿಂದ ಅವನು ಪೀಡಿತನಾಗಿರುವನು. ಇವನು ಲೋಭಿಗಳಲ್ಲಿ ಅಗ್ರಗಣ್ಯನಾಗಿರುವನು. ದ್ರವ್ಯವನ್ನೂ, ಭೋಗ್ಯವಸ್ತುಗಳನ್ನೂ ಬೇಕಾದ ಹಾಗೆ ಇಟ್ಟುಕೊಂಡಿರುವನು. ಅವನ್ನು ನೋಡುತ್ತಾ, ಹಿಗ್ಗುತ್ತಾ ಇರುವನು. ಕಳವು ಮೊದಲಾದವುಗಳಿಂದ ಅನೇಕ ಪದಾರ್ಥಗಳು ಹೋಗುವುವು. ಆಗ ತುಂಬಾ ವಿಷಾದಪಡುತ್ತಾ, ನೌಕರರನ್ನೆಲ್ಲಾ ದಂಡಿಸುತ್ತಾ, ದುರಾಗ್ರಹಪರವಶನಾಗಿರುವನು. ಸಂಗೀತ, ಸಾಹಿತ್ಯ ಮೊದಲಾದವುಗಳಲ್ಲಿ ಇವನಿಗೆ ಅಭಿರುಚಿಯು ಇರುವುದಿಲ್ಲ. ರೂಪಾಯಿಗಳನ್ನು ಎಣಿಸುವಾಗ, ಉಂಟಾಗುವ ಧ್ವನಿಯೇ ಇವನ ಭಾಗಕ್ಕೆ ಸಂಗೀತವಾಗಿರುವುದು. ದ್ವೇಷಾಸೂಯೆಗಳಿಂದ ಜನಗಳನ್ನು ಸಂಹರಿಸುವುದೇ ಇವನಿಗೆ ಸಾಹಿತ್ಯವಾಗಿರುವುದು. ಯಾವಾಗ್ಯೂ ಅರಮನೆಯಲ್ಲಿ ಏಕಾಂತವಾದ ಸ್ಥಳದಲ್ಲಿ ವಿಚಾರಪರನಾಗಿರುವನು. ಇವನ ಸ್ನೇಹಿತರೂ ಕೂಡ ಧಾರಾಳವಾಗಿ ಇವನ ಬಳಿಗೆ ಹೋಗುವುದಕ್ಕೆ ಆಗುವುದಿಲ್ಲ. ಯಾರು ಬಂದಾಗ್ಯೂ ತನ್ನನ್ನು ಸಂಹರಿಸುವರೋ ಏನೋ, ಎಂಬ ಭಯವು ಇವನಿಗೆ ಇರುವುದು. ಕತ್ತಿಯನ್ನು ಒರೆಯಿಂದ ತೆಗೆದುಕೊಂಡು ಕೆಲವು ಭೃತ್ಯ

ರೂ, ಭರ್ಜಿಗಳನ್ನು ಸಿದ್ಧವಾಗಿಟ್ಟುಕೊಂಡು ಕೆಲವು ಭೃತ್ಯರೂ, ಅರಮನೆಯ ಸುತ್ತಲೂ ಇರುವರು. ಇವನ ಸಮೀಪದಲ್ಲಿಯೂ ಬಿಚ್ಚು ಕತ್ತಿ ಪಹರೆಯು ಇರುವುದು. ಇವನ ವಾಸಸ್ಥಾನವು ಮುವ್ವತ್ತು ಕೊಠಡಿಗಳುಳ್ಳದ್ದಾರುವುದು. ಇವುಗಳಿಗೆಲ್ಲಾ ಕಬ್ಬಿಣದ ಬಾಗಿಲುಗಳೂ, ಲಾಳಮುಂಡಿಗೆಗಳೂ ಇರುವುವು. ಈ ಮುವ್ವತ್ತು ಕೊಠಡಿಗಳಿಗೂ ಒಂದರಿಂದ ಒಂದಕ್ಕೆ ಹೋಗುವುದಕ್ಕೆ ಬಾಗಿಲುಗಳು ಇರುವವು. ಈ ಕೊಠಡಿಗಳ ಇವನು ಯಾವುದರಲ್ಲಿ ವಾಸಮಾಡುತ್ತಾನೋ ಗೊತ್ತಾಗುವುದಿಲ್ಲ. ತನ್ನ ಶತ್ರುಗಳು ತನ್ನನ್ನು ಸಂಹರಿಸದೆ ಇರುವಂತೆ ಮಾಡಿಕೊಳ್ಳಬೇಕೆಂದು ಒಂದೊಂದು ಕೊಠಡಿಯಲ್ಲಿ ಒಂದೊಂದು ದಿನವನ್ನು ಕಳೆಯುವನು. ಪ್ರಪಂಚದಲ್ಲಿ ಸ್ನೇಹವೂ, ಪ್ರೀತಿಯೂ ಇರುವುದೆಂದು ಇವನು ತಿಳಿದುಕೊಂಡಿರುವುದಿಲ್ಲ. ಮಿತ್ರರಿರುವರೆಂಬ ಭಾವನೆಯು ಇವನಿಗೆ ಇರುವುದಿಲ್ಲ. ಇವನ ಕಣ್ಣುಗಳು ಹಳ್ಳದಲ್ಲಿರುವಂತೆ ಕಾಣುತ್ತವೆ. ಯಾವಾಗ್ಯೂ ದಶದಿಕ್ಕುಗಳಿಗೂ ದೃಷ್ಟಿಯನ್ನು ಪ್ರಸರಿಸುತ್ತಲಿರುತ್ತಾನೆ. ಅಲ್ಪ ಸ್ವಲ್ಪ ಶಬ್ದವಾದಾಗ್ಯೂ, ಬೆಚ್ಚಿಬಿದ್ದು ನಡುಗುತ್ತಾನೆ. ಇವನ ಮುಖವು ಬಿಳಚಿಕೊಂಡಿರುತ್ತದೆ. ದೇಹವು ಕೃಶವಾಗಿರುತ್ತದೆ. ಮುಖದಲ್ಲಿ ವಿಚಾರವು ಪ್ರಜ್ವಲಿಸುತ್ತದೆ. ಯಾವಾಗ್ಯೂ ಹುಬ್ಬುಗಳನ್ನು ಗಂಟುಹಾಕಿಕೊಂಡಿರುತ್ತಾನೆ. ಇವನು ಮಾತನಾಡುವುದೇ ಅಪೂರ್ವ. ಆಗಾಗ್ಗೆ ನಿಟ್ಟುಸುರು ಬಿಡುತ್ತಾನೆ. ಅಯ್ಯೋ! ಅಪ್ಪಾ! ಎಂಬದಾಗಿ ಆಗಾಗ್ಗೆ ಎಂದುಕೊಳ್ಳುತ್ತಾನೆ. ಅದರಿಂದ ಇವನ ಮನೋವಿಕಲ್ಪಗಳು ಗೊತ್ತಾಗಬೇಕಾಗಿದೆ. ಇವನ ಪರಿಪಚಾರಕರು ಅತ್ಯಂತ ರುಚಿಯಾದ ಭಕ್ಷ್ಯ ಭೋಜ್ಯಗಳನ್ನು ಭೋಜನಕ್ಕೆ ಸಿದ್ಧಮಾಡುತ್ತಾರೆ. ಅವುಗಳಲ್ಲಿ ಇವನಿಗೆ ಯಾವುದೂ ರುಚಿಸುವುದಿಲ್ಲ. ತನಗೆ ಏನು ವಿಪತ್ತು ಬರುವುದೋ ಎಂದು ಪ್ರತಿ ನಿಮಿಷದಲ್ಲಿಯೂ ಯೋಚಿಸುತ್ತಾನೆ. ಯಾರಿಂದ ವಿಪತ್ತು ಉಂಟಾಗಬಹುದೆಂದು ತೋರುತ್ತದೋ ಅವರನ್ನು ನಿರ್ದಯೆಯಿಂದ ಸಂಹರಿಸುತ್ತಾನೆ. ಇಂಥಾ ಸಂಹಾರಗಳು ನನಗೆ ಕ್ಷೇಮಕರವಾದುವೆಂಬದಾಗಿ ತಿಳಿದುಕೊಂಡು ಇದಾನೆ. ಪ್ರೀತಿಯಿಂದ ಪ್ರೀತಿಯೂ, ದ್ವೇಷದಿಂದ ದ್ವೇಷವೂ ಹುಟ್ಟುವುವೆಂಬ ಭಾವನೆಯೇ ಇವನಿಗೆ ಇರುವುದಿಲ್ಲ. ನಮ್ಮ ಧೊರೆಯು ಇಂಥಾ ಸ್ವಭಾವವುಳ್ಳವನು. ಇವನ ಅರಮನೆಯಲ್ಲಿರತಕ್ಕ ಊಳಿಗದವರೂ, ಬಿಚ್ಚುಕತ್ತಿ ಪಹರೆಯವರೂ ಯಾವಾಗ ತನನ್ನು ಸಂಹರಿಸುವರೋ ಎಂಬ ಭಯವು ಇವನಿಗೆ ಇರುತ್ತದೆ. ಹಾಗೆ ಅವರು ಅವನನ್ನು ಸಂಹರಿಸಿದರೆ ಅದೇನೂ ಆಶ್ಚರ್ಯವಲ್ಲ. ಇಂಥಾ ಧೊರೆಯಲ್ಲಿ ನಾನು ನೌಕರಿ ಮಾಡಬೇಕಾಗಿರುವುದು. ಅವನ ಸ್ವಭಾವವು ಹೇಗಾದರೂ ಇರಲಿ. ಅವನು ನನ್ನನ್ನು ಸಂಹರಿಸಲಿ ಅಥವಾ ರಕ್ಷಿಸಲಿ. ಅವನನ್ನು ರಕ್ಷಿಸುವ ಉಪಾಯ

ವನ್ನು ಮಾಡುವುದು ನನಗೆ ಕರ್ತವ್ಯ. ಈ ಕರ್ತವ್ಯವನ್ನು ಮಾಡುವುದು ನನ್ನ ಧರ್ಮ. ಈ ಧರ್ಮವನ್ನು ಮನೋವಾಕ್ಕರ್ಮಗಳಲ್ಲಿಯೂ ನಾನು ಮಾಡುವೆನು. ಅವನಿಂದ ಸಂಬಳವನ್ನು ಹೊಂದಿ, ಅವನಿಗೆ ಎರಡು ಬಗೆಯುವುದು ನನಗೆ ಧರ್ಮವಲ್ಲ. ಪ್ರಭುವಾದವನು ಕೆಟ್ಟವನಾದಾಗ್ಯೂ, ಸೇವಕರು ಅವನನ್ನು ತಿದ್ದಬೇಕು. ಅದು ಅಸಾಧ್ಯವಾದರೆ, ಹಾಗೆ ತಿದ್ದುವ ಪ್ರಯತ್ನದಲ್ಲಿ ದೇಹವನ್ನು ಬಿಡಬೇಕು. ಹೀಗೆ ಮಾಡುವುದೇ ನನ್ನ ಕರ್ತವ್ಯ. ಆ ಕರ್ತವ್ಯವನ್ನು ನಾನು ಮಾಡುವುದರಲ್ಲಿ ಬದ್ಧಸಂಕಲ್ಪನಾಗಿರುತ್ತೇನೆ. ಆದರೆ, ನನಗೆ ಒಂದು ಬಲವಾದ ವ್ಯಾಕುಲವು ಉಂಟಾಗಿರುವುದು. ನಿನ್ನ ಪೂರ್ವಾಪರಗಳನ್ನು ಕೇಳಿದಾರಭ್ಯ ನನಗೆ ನಿನ್ನಲ್ಲಿ ಅತ್ಯಂತ ಪ್ರೀತಿಯು ಉಂಟಾಗಿರುವುದು. ಈಗ ಪಿಗ್‌ಮೇಲಿಯನ್ನನು ನಿನ್ನನ್ನು ನೋಡುವ ಸಂಭವವು ಉಂಟಾಗುವುದು. ನೀನು ಯೂಲಿಸೆಸ್ಸನ ಮಗನೆಂಬದಾಗಿಯೂ, ಟೆಲಮಾಕಸ್ಸನೆಂಬದಾಗಿಯೂ ಹೇಳಿಕೊಳ್ಳಬೇಡ. ಹಾಗೆ ಹೇಳಿಕೊಂಡರೆ, ತಕ್ಷಣದಲ್ಲಿಯೇ ನಿನ್ನನ್ನು ಸೈರೆಯಲ್ಲಿಟ್ಟು, ನಿಮ್ಮ ತಂದೆಯಿಂದ ಭಾರಿ ವಿಮೋಚನ ದ್ರವ್ಯವನ್ನು ಅಪೇಕ್ಷಿಸುವನು. ಪುನಃ ಬಂದೀಖಾನೆಯಲ್ಲಿರುವ ಅವಸ್ಥೆಯು ನಿನಗೆ ಬರುವುದು. ದೇವರು ನಿನಗೆ ಮಂಗಳವನ್ನು ಮಾಡಬೇಕು.''

ಈ ರೀತಿಯಲ್ಲಿ ನಾರ್ ಬಲ್‌ನು ಹೇಳಿದ ಕೂಡಲೆ, ನನಗೆ ಆಶ್ಚರ್ಯವಾಯಿತು. ಪಿಗ್‌ಮೇಲಿಯನ್ನನು ಅಸಾಧಾರಣವಾದ ರಾಜಭಕ್ತಿಯುಳ್ಳವನಾದಾಗ್ಯೂ, ನನ್ನಲ್ಲಿ ಇವನಿಗೆ ವಿಶೇಷವಾದ ಕರುಣೆಯೂ, ಪ್ರೀತಿಯೂ ಹುಟ್ಟುವುದಕ್ಕೆ ಜಗದೀಶ್ವರನೇ ಕಾರಣನಾಗಿರಬೇಕೆಂದು ನಾನು ತಿಳಿದುಕೊಂಡೆನು. ಇವನ ಉಪದೇಶದಂತೆ ನಡೆಯಬೇಕೆಂದು ನಿಷ್ಕರ್ಷೆ ಮಾಡಿಕೊಂಡೆನು. ಆದಾಗ್ಯೂ ಪೂರ್ವಾಪರಜ್ಞಾನವಿಲ್ಲದೆ ಪಿಗ್‌ಮೇಲಿಯನ್ನನು ಈ ಅವಸ್ಥೆಗೆ ಬಂದಿರುವುದನ್ನು ಪರ್ಯಾಲೋಚಿಸಿ, ನಾನು ತುಂಬಾ ವಿಷಾದ ಪಡುತ್ತಿದ್ದೆನು. ಇವನಲ್ಲಿ ನನಗೆ ತುಂಬಾ ಕನಿಕರವುಂಟಾಯಿತು.

"ಈ ಪಿಗ್‌ಮೇಲಿಯನ್ನನು ಬಹಳ ಅದೃಷ್ಟಹೀನನು. ಅಪ್ರತಿಹತವಾದ ಅಧಿಕಾರದಲ್ಲಿಯೂ, ಅಮಿತವಾದ ಧನಕನಕಾದಿಗಳಲ್ಲಿಯೂ ಸೌಖ್ಯವು ಇರುವುದೆಂದು ಇವನು ತಿಳಿದುಕೊಂಡಿರುವನು. ಈ ಅಧಿಕಾರವೂ, ಐಶ್ವರ್ಯವೂ ಇವನ ಅನಿರ್ವಚನೀಯವಾದ ಕ್ಲೇಶಕ್ಕೆ ಕಾರಣವಾಗಿ ಪರಿಣಮಿಸಿರುವುವು. ಈಗ ಕೆಲವು ದಿವಸಗಳ ಕೆಳಗೆ ನಾನು ಕುರುಬನಾಗಿದ್ದೆನು. ಒಂದು ಕಾಸಿನ ಆಸ್ತಿಯೂ, ಲೇಶ ಅಧಿಕಾರವೂ ನನಗೆ ಇರಲಿಲ್ಲ. ಆಗ ನನಗಿದ್ದಷ್ಟು ಸೌಖ್ಯವೂ, ಸಂತೋಷವೂ, ತೃಪ್ತಿಯೂ, ದೇವೇಂದ್ರನಿಗೂ ಕೂಡ ಲಭ್ಯವಾಗಲಾರದು. ನನಗೆ ವಿಷ

ಹಾಕುತ್ತಾರೆಂಬದಾಗಿಯೂ, ನನ್ನನ್ನು ಸಂಹರಿಸುತ್ತಾರೆಂಬದಾಗಿಯೂ ನನಗೆ ಸ್ವಪ್ನದಲ್ಲಿಯೂ ಕೂಡ ಭಾವನೆಯು ಉಂಟಾಗುತ್ತಿರಲಿಲ್ಲ. ಎಲ್ಲಾ ಕುರುಬರೂ ನನ್ನನ್ನು ಪ್ರೀತಿಸುತ್ತಿದ್ದರು. ನಾನೂ ಅವರನ್ನು ಪ್ರೀತಿಸುತ್ತಲಿದ್ದೆನು. ಈ ಪಿಗ್ಮೇಲಿಯನ್ನನಿಗೆ ಬೇಕಾದಷ್ಟು ದ್ರವ್ಯವು ಇರುವುದು. ಆ ದ್ರವ್ಯಕ್ಕೂ, ಇವನಿಗೂ ಸಂಬಂಧವೇನು! ದೇಹವನ್ನು ಬಿಟ್ಟುಹೋಗುವಾಗ್ಗೆ ಅದು ಇವನ ಜೊತೆಯಲ್ಲಿ ಹೋಗುವುದೇ! ಕಾಡಿನಲ್ಲಿರುವ ಮರಗಳಿಗಿಂತಲೂ ಇದಕ್ಕೆ ಹೆಚ್ಚು ಬೆಲೆಯು ಎಲ್ಲಿಂದ ಬಂದೀತು! ಕಾಡುಗಿಡಗಳೂ ಕೂಡ ಇದಕ್ಕಿಂತ ಉತ್ತಮವಲ್ಲವೇ? ಅವುಗಳಿಂದ ಬೇಜಾರಾದವನಿಗೆ ನೆರಳಾದರೂ ಸಿಕ್ಕುವುದು. ಈ ದ್ರವ್ಯದಿಂದ ಅದೂ ಕೂಡ ದೊರೆಯುವುದಿಲ್ಲ. ಬಡ ಕುರುಬನಾಗಿರುವವನಿಗೆ ಯಾವ ಭಯವೂ ಇರುವುದಿಲ್ಲ. ಪಿಗ್ಮೇಲಿಯನ್ನನಿಗೆ ಅಂತಹ ದ್ರವ್ಯದ ಮೇಲಿನ ಆಸೆಯಿಂದ ಯಾರು ತನ್ನನ್ನು ಸಂಹರಿಸುವರೋ ಎಂಬ ಭಯವು ತಪ್ಪುವುದಿಲ್ಲ. ಈ ದ್ರವ್ಯವೇ ಇವನ ಸೌಖ್ಯಕ್ಕೆ ವಿಷವಾಗಿರುವುದು. ಇವನ ಅಧಿಕಾರವು ಇವನಿಗೆ ಮೃತ್ಯುವಾಗಿರುವುದು. ಇವನು ಮನಸ್ಸಿಗೆ ಜನಗಳನ್ನು ಶತ್ರುಗಳೆಂದು ತಿಳಿದುಕೊಂಡು ಸಂಹರಿಸುವುದರಿಂದ, ಇವನಲ್ಲಿ ನಂಬಿಕೆಯು ಯಾರಿಗೂ ಇರುವುದಿಲ್ಲ. ತಮಗೆ ಏನು ವಿಪತ್ತು ಬರುವುದೋ ಎಂಬ ಭಯವು ಇವನ ಭೃತ್ಯರಲ್ಲಿ ಪ್ರತಿಒಬ್ಬರಿಗೂ ಉಂಟಾಗಿರುವುದು. ಇತರರ ಮೇಲೆ ನಿರಂಕುಶವಾದ ಅಧಿಕಾರವು ತನಗೆ ಇರುವುದೆಂದು ಇವನು ತಿಳಿದುಕೊಂಡಿರುವನು. ದುರ್ವಿಷಯಗಳಿಗೆ ಬೀಳದಂತೆ ತನ್ನ ಮೇಲೆ ತಾನು ಅಧಿಕಾರವನ್ನು ಹೊಂದದೆ ಪರತಕ್ಕವನು ಇತರರ ಮೇಲೆ ಯಾವ ಅಧಿಕಾರವನ್ನು ತಾನೆ ಹೊಂದಿಯಾನು? ನಾನು ಬಂದೀಖಾನೆಯಲ್ಲಿದ್ದಾಗ, ನನಗೆ ಅನೇಕ ವಿಧವಾದ ಮನೋವಿಕಾರಗಳಿದ್ದುವು. ಹೀಗೆ ಬದುಕುವುದಕ್ಕಿಂತಲೂ ಸಾಯುವುದು ಮೇಲೆಂದು ನನಗೆ ತೋರುತ್ತಿತ್ತು. ಪಿಗ್ಮೇಲಿಯನ್ನನಂತೆ ಪ್ರಭುಪದವಿಯಲ್ಲಿರುವುದಕ್ಕಿಂತಲೂ ನನ್ನ ಕಾರಾಗೃಹದಲ್ಲಿ ಇರುವುದೂ ಕೂಡ ಮೇಲು. ದೇವರು ನಿಷ್ಪಕ್ಷಪಾತಿ. ಈ ಪಿಗ್ಮೇಲಿಯನ್ನನಿಗೆ ಅಸಾಧಾರಣವಾದ ಸಂಪತ್ತನ್ನೂ, ಅಧಿಕಾರವನ್ನೂ ಕೊಟ್ಟಿದ್ದಾನೆ. ಆದರೆ, ಅದನ್ನು ಅನುಭವಿಸುವ ಪುಣ್ಯವು ಮಾತ್ರ ಇವನಿಗೆ ಇರುವುದಿಲ್ಲ. ಖಜಾನೆಯನ್ನು ಕಾಯುವುದಕ್ಕೆ ಪಹರೆಯವರು ಇರುವಂತೆ ಇವನೂ ಕೂಡ ಇರುವನು. ಧನಪಿಶಾಚಗಳಿಗೂ ಸರ್ಪಗಳಿಗೂ ಧನದಿಂದ ಉಂಟಾಗತಕ್ಕ ಸೌಖ್ಯದ ಅನುಭವವು ಎಂದಿಗಾದರೂ ಬರುವುದೇ? ಆ ಧನಕ್ಕೆ ಅವರು ರಕ್ಷಕರಾಗಿರುವರೇ ಹೊರತು, ಅನುಭವಿಸುವುದಕ್ಕೆ ಅವರು ಅರ್ಹರಾಗುವುದಿಲ್ಲ. ಪ್ರಜೆಗಳ ಅಕೃತ್ರಿಮವಾದ ಪ್ರೀತಿಗೆ ಪಾತ್ರನಾಗುವ ಶಕ್ತಿ ಇದ್ದರೆ ಪ್ರಭುವಾಗಿರಬೇಕು. ಹಾಗೆ

ಇಲ್ಲದಿದ್ದರೆ, ಸಂಸಾರದಲ್ಲಿರತಕ್ಕ ಹೆಂಡತಿ, ಮಕ್ಕಳು, ಬಂಧುಮಿತ್ರರೇ ಮೊದಲಾದ ನೆರೆಹೊರೆಯುವರು, ಇವರ ಪ್ರೀತಿಗೆ ಪಾತ್ರನಾಗಿ ಕುರುಬನಾಗಿರುವುದು ಮೇಲು. ಪಿಗ್‌ಮೇಲಿಯನ್ನನ ವಿಷಯದಲ್ಲಿ ನಾರ್‌ಬಲ್‌ನು ಹೇಳಿರುವುದೆಲ್ಲಾ ನಿಜವಾದ ಪಕ್ಷದಲ್ಲಿ, ಇವನು ಮಹಾ ಪಾಪಿಯು. ಇವನ ಸಂದರ್ಶನವೂ, ಇವನೊಡನೆ ಸಂಭಾಷಣವೂ ಇವೆರಡೂ ಅಪೇಕ್ಷಣೀಯವಾದವುಗಳಲ್ಲ. ಬಲಾತ್ಕಾರವಾಗಿ ಇವುಗಳು ಸಂಭವಿಸಿದ ಪಕ್ಷದಲ್ಲಿ, ಉಪಾಯದಿಂದ ಪಾಪದ ಸೋಂಕನ್ನು ತಪ್ಪಿಸಿಕೊಂಡು, ದೇವರ ಧ್ಯಾನದಿಂದ ಆ ಪಾಪವನ್ನು ಪರಿಹಾರ ಮಾಡಿಕೊಳ್ಳಬೇಕು. ಪಿಗ್‌ಮೇಲಿಯನ್ನನನ್ನು ನೋಡುವುದಕ್ಕೆ ಮುಂಚೆ ನನ್ನ ಅಭಿಪ್ರಾಯವು ಈ ರೀತಿಯಲ್ಲಿತ್ತು.

ಇವನನ್ನು ನೋಡುವುದು ಯಾರಿಗೂ ಸಾಧ್ಯವಾಗಿರಲಿಲ್ಲ. ಇವನಲ್ಲಿ ಎಲ್ಲರಿಗೂ ಭಯವಿತ್ತು. ದೂರದಿಂದ ಇವನನ್ನು ನೋಡುತ್ತಿದ್ದರು. ಇವನ ಸಾನ್ನಿಧ್ಯಕ್ಕೆ ಹೋಗುವುದೇ ಅಸಾಧ್ಯವಾಗಿತ್ತು. ಯಾವಾಗ್ಯೂ ಬಿಚ್ಚುಕತ್ತಿ ಪಹರೆಯವರ ಮಧ್ಯದಲ್ಲಿ ಇರುತ್ತಿದ್ದನು. ಸಸಾಟ್ರಿಸ್ ನೊಡನೆ ಇವನನ್ನು ಹೋಲಿಸಿದೆನು. ಸಸಾಟ್ರಿಸ್ಸನು ಶಾಂತನಾಗಿದ್ದನು. ತಾಯಿಯು ಸುತ್ತಲೂ ಮಕ್ಕಳು ಪ್ರೀತಿಯಿಂದ ಸೇರುವಂತೆ ಇವನಲ್ಲಿ ಪ್ರಜೆಗಳು ಸೇರುತ್ತಿದ್ದರು. ಯಾವ ಕಾಲದಲ್ಲಿ ಯಾರು ಬೇಕಾದರೂ ಇವನ ಬಳಿಗೆ ಹೋಗುವುದಕ್ಕೆ ಅವಕಾಶವನ್ನು ಹೊಂದುತ್ತಿದ್ದರು. ಇವನು ಎಲ್ಲರಲ್ಲಿಯೂ ವಿಶ್ವಾಸವುಳ್ಳವನಾಗಿದ್ದನು. ಇವನನ್ನು ಎಲ್ಲರೂ ವಿಶ್ವಾಸದಿಂದ ಕಾಣುತ್ತಿದ್ದರು. ಈಜಿಪ್ಟ ದೇಶದಲ್ಲಿ ಇವನ ಸ್ನೇಹವೂ, ಪರಿಚಯವೂ ಇಲ್ಲದೆ ಇದ್ದವರೇ ಇರಲಿಲ್ಲ. ಪರದೇಶೀಯರಿಗೂ ಕೂಡ ಇವನು ಭೇಟಿಯನ್ನು ಕೊಡುತ್ತಿದ್ದನು. ಅವರ ಯೋಗಕ್ಷೇಮಗಳನ್ನು ಕೇಳಿ, ಅವರ ಇಷ್ಟಾರ್ಥಗಳಲ್ಲಿ ಸಾಧ್ಯವಾದವುಗಳನ್ನೆಲ್ಲಾ ನೆರವೇರಿಸುತ್ತಿದ್ದನು ಈತನಿಗೆ ಬಿಚ್ಚುಕತ್ತಿ ಪಹರೆಗಳು ಇರಲಿಲ್ಲ. ಈತನ ಸನ್ನಿಧಿಗೆ ಹೋಗಬೇಕೆಂದು ಅಪೇಕ್ಷಿಸಿದವರಿಗೆ ಯಾವ ಅಡ್ಡಿಯೂ ಇರಲಿಲ್ಲ. ಇವನಿಗೆ ಅಂಗರಕ್ಷಣೆಯ ಸೈನ್ಯಗಳು ಇರಲಿಲ್ಲ. ಸಕಲ ಪ್ರಜೆಗಳೂ ಅವನಿಗೆ ಅಂಗರಕ್ಷಕರಾಗಿದ್ದರು. ಅವನಿಗೆ ಯಾರ ಭಯವೂ ಇರಲಿಲ್ಲ. ಯಾರಿಗೂ ಅವನ ಭಯವೂ ಇರಲಿಲ್ಲ. ಹೆಂಡತಿ ಮಕ್ಕಳಲ್ಲಿ ಎಷ್ಟು ಸೌಲಭ್ಯವುಳ್ಳವನಾಗಿದ್ದನೋ ಪ್ರಜೆಗಳಲ್ಲೂ ಅಷ್ಟು ಸೌಲಭ್ಯವುಳ್ಳವನಾಗಿದ್ದನು. ಇವನಿಗೂ, ಪಿಗ್‌ಮೇಲಿಯನ್ನನಿಗೂ ಯಾವ ಭಾಗದಲ್ಲಿಯೂ ಹೋಲಿಕೆಯಿರಲಿಲ್ಲ. ದುಷ್ಪ್ರವೇಶ್ಯವಾದ ಅರಮನೆಯಲ್ಲಿ ಅಂಗರಕ್ಷಕರಾದ ಪಹರೆಯವರಿಂದ ಆವರಿಸಲ್ಪಟ್ಟಿದ್ದಾಗ್ಯೂ, ಯಾವಾಗ ಯಾರು ತನ್ನನ್ನು ಸಂಹರಿಸುವರೋ ಎಂಬ ಭಯವು ಪಿಗ್‌ಮೇಲಿಯನ್ನನಿಗೆ ಇತ್ತು.

ಸಾವಿರಾರು ಜನಗಳ ಗುಂಪಿನ ಮಧ್ಯದಲ್ಲಿದ್ದಾಗೂ, ನಸಾಟ್ರಿಸ್ಸನೂ ತನ್ನ ಸ್ವಂತ ಮಕ್ಕಳ ಮಧ್ಯದಲ್ಲಿ ಇದ್ದಂತೆ ಇದನು. ಅವರವರ ಕರ್ಮಗಳಿಗೆ ಅನುಸಾರವಾಗಿ ಬುದ್ಧಿಯೂ, ಸ್ವಭಾವವೂ ಆಗುವುವು. ಜನ್ಮಾಂತರ ಕರ್ಮಕ್ಕೆ ಅನುಸಾರವಾಗಿ ಅವುಗಳು ಆಗುವುವೆಂದು ಮಹಾಜನಗಳು ಹೇಳುವುದುಂಟು. ಅದು ನಿಜವಾದುದು. ಬೀಜದಂತೆ ವೃಕ್ಷವೂ, ವೃಕ್ಷದಂತೆ ಬೀಜವೂ ಇದ್ದೇ ಇರುವುವು. ಪ್ರತಿ ದಿವಸವೂ ನಮಗೆ ಜನ್ಮಪುನರ್ಜನ್ಮಗಳು ಆಗುತ್ತಲೇ ಇರುತ್ತವೆ. ನಮ್ಮ ಶರೀರಗತವಾದ ಪಂಚಭೂತಗಳೂ ಕೂಡ ಪ್ರತಿನಿಮಿಷದಲ್ಲಿಯೂ ಬದಲಾಯಿಸಲ್ಪಡುತ್ತಲಿರುವುವು. ನಮ್ಮ ಬುದ್ಧಿಗೆ ಸಂಬಂಧಪಟ್ಟ ಭೂತವಸ್ತುಗಳೂ ಕೂಡ ಹಾಗೆಯೇ ಬದಲಾಯಿಸುತ್ತಲಿರುವುವು. ಹೊಸ ಭೂತವಸ್ತುಗಳು ನಮ್ಮ ಶರೀರಕ್ಕೆ ಸೇರುತ್ತಲಿರುವುವು. ಈ ನಿಮಿಷಕ್ಕೆ ಹಿಂದಿನ ನಿಮಿಷವು ಜನ್ಮಾಂತರ. ಈ ದಿವಸಕ್ಕೆ ಹಿಂದಿನ ದಿವಸವೂ, ಈ ವರ್ಷಕ್ಕೆ ಹಿಂದಿನ ವರ್ಷವೂ, ಈ ಯುಗಕ್ಕೆ ಹಿಂದಿನ ಯುಗವೂ ಜನ್ಮಾಂತರಗಳು. ಅದೇ ರೀತಿಯಲ್ಲಿ ಮುಂದಿನ ನಿಮಿಷವೂ, ಮುಂದಿನ ವರ್ಷವೂ, ಮುಂದಿನ ಯುಗವೂ ಕೂಡ ಜನ್ಮಾಂತರಗಳೆನ್ನಿಸಿಕೊಳ್ಳುವುವು. ಹಿಂದಿನ ಜನ್ಮಾಂತರಗಳಲ್ಲಿ ಮಾಡಿದ ಕರ್ಮಗಳಿಗೆ ಅನುಸಾರವಾಗಿ ಈಗಿನ ಬುದ್ಧಿಪರಿಪಾಕವು ಆಗುವುದು. ಈಗಿನ ಕರ್ಮಗಳಿಗೆ ಅನುಸಾರವಾಗಿ ಮುಂದಿನ ಬುದ್ಧಿಪರಿಪಾಕವು ಆಗುವುದು. ಇದು ಸುಳ್ಳಲ್ಲ. ಇದಕ್ಕೆ ನಸಾಟ್ರಿಸ್ಸನು ಹೇಗೋಹಾಗೆ ಪಿಗ್‌ಮೇಲಿಯನ್ನನೂ ದೃಷ್ಟಾಂತವಾಗಿರುವನು.'' ಹೀಗೆ ನನ್ನ ಮನಸ್ಸಿಗೆ ತೋರಿತು.

ಹೀಗೆ ಯೋಚನೆಯನ್ನು ಮಾಡುತ್ತಲಿರುವಾಗ, ಈಜಿಪ್ಟ್ ದೇಶಕ್ಕೆ ಯುದ್ಧಕ್ಕಾಗಿ ಹೋಗಿದ್ದ ಸೈನ್ಯವನ್ನು ಸೈಪ್ರಸ್ ದೇಶಕ್ಕೆ ಕಳುಹಿಸುವುದೆಂದು ಪಿಗ್‌ಮೇಲಿಯನ್ನನು ನಾರ್‌ಬಲ್‌ನಿಗೆ ಆಜ್ಞೆಮಾಡಿದನು. ನಾರ್‌ಬಲ್‌ನು ಇದೇ ಸುಸಮಯವೆಂದು ನನ್ನನ್ನು ಬಿಡುಗಡೆ ಮಾಡಿದನು. ಸೈನ್ಯಗಳು ಸೈಪ್ರಸ್ಸಿಗೆ ಕಳುಹಿಸಲ್ಪಡುವುದಕ್ಕೆ ಮುಂಚೆ ಪಿಗ್‌ಮೇಲಿಯನ್ನನ ಎದುರಿಗೆ ರವ್ಯೂ (ಪ್ರದರ್ಶನ) ಆಗಬೇಕಾಯಿತು. ಪ್ರತಿ ಒಂದು ವಿಷಯವನ್ನೂ ಖುದ್ದಾಗಿ ಬಹಳ ಜಾಗರೂಕತೆಯಿಂದ ನೋಡುವ ಪದ್ಧತಿಯು ಇವನಲ್ಲಿ ಇತ್ತು. ಇವನಿಗೆ ಯಾರಲ್ಲಿಯೂ ನಂಬಿಕೆಯು ಇರುತ್ತಿರಲಿಲ್ಲ. ಇವನು ಅತ್ಯಂತ ಸಂಶಯಾತ್ಮನಾಗಿದ್ದನು. ತಪಶೀಲುವಾರಾಗಿ ಪ್ರತಿಯೊಂದನ್ನೂ ಖುದ್ದಾಗಿ ನೋಡುವುದಕ್ಕೆ ಇದೇ ಮುಖ್ಯಕಾರಣ. ಇವನಲ್ಲಿ ಅನೇಕ ದುರ್ಗುಣಗಳಿದ್ದಾಗ್ಯೂ; ಇದು ಅವುಗಳನ್ನೆಲ್ಲಾ ಮರೆಸತಕ್ಕ ಸುಗುಣವಾಗಿ ಪರಿಣಮಿಸಿತ್ತು. ಪ್ರಭುಗಳ ಸಮೀಪದಲ್ಲಿ ಅನೇಕ ತಂತ್ರಿಗಳೂ, ದ್ರೋಹಿಗಳೂ ಸೇರುವುದುಂಟು. ಅವರನ್ನು

ನಂಬಿದರೆ, ಪ್ರಭುಗಳು ವಂಚಿಸಲ್ಪಡುವುದೂ ಉಂಟು. ಅಂತಹ ಜನರನ್ನು ಗೊತ್ತುಮಾಡಿ, ಅವರಲ್ಲಿ ನಂಬಿಕೆಯನ್ನು ಇಡದೆ ಇರುವುದು ಪ್ರಭುಗಳಿಗೆ ಕರ್ತವ್ಯವಾದುದು. ಆದರೆ, ಸತ್ಯಸಂತರಾಗಿಯೂ, ಋಜುಮಾರ್ಗವುಳ್ಳವರಾಗಿಯೂ ಇರತಕ್ಕವರಲ್ಲಿ ನಂಬಿಕೆಯನ್ನು ಇಡದೆ ಇದ್ದರೆ, ಸರಿಯಾಗಿ ಕೆಲಸಗಳು ನಡೆಯುವುದಿಲ್ಲ. ಬುದ್ಧಿಶಾಲಿಗಳಿಗೆ ಜನಗಳ ನಡೆನುಡಿಗಳಿಂದಲೇ ಕೌಟಿಲ್ಯವೂ, ಪ್ರಾಮಾಣಿಕತೆಯೂ ಗೊತ್ತಾಗುವುದು. ಲೋಕವ್ಯವಹಾರಜ್ಞಾನವಿಲ್ಲದವರಿಗೆ ಇದು ಗೊತ್ತಾಗುವುದಿಲ್ಲ. ಅಯೋಗ್ಯರನ್ನು ನಂಬಿ, ಪಿಗ್ಮೇಲಿಯನ್ನನು ಮೋಸಹೋಗಿದ್ದನು. ಆದುದರಿಂದ ಲೋಕದಲ್ಲಿ ಎಲ್ಲರೂ ಮೋಸಗಾರರೆಂಬ ಭಾವನೆಯು ಇವನಿಗೆ ಉಂಟಾಗಿತ್ತು. ದುರ್ಮಾರ್ಗಪ್ರವರ್ತಕರನ್ನು ಸತ್ಪುರುಷರೆಂಬದಾಗಿಯೂ, ಸತ್ಪುರುಷರನ್ನು ದುರ್ಮಾರ್ಗಪ್ರವರ್ತಕರೆಂಬದಾಗಿಯೂ ಸಾರಾಸಾರವಿಚಾರಹೀನರು ತಿಳಿದುಕೊಳ್ಳುವುದುಂಟು. ಪಿಗ್ಮೇಲಿಯನ್ನನು ಪ್ರಪಂಚದಲ್ಲಿ ಸತ್ಪುರುಷರೇ ಇಲ್ಲವೆಂಬದಾಗಿಯೂ, ಎಲ್ಲರೂ ದುರ್ಮಾರ್ಗಪ್ರವರ್ತಕರೆಂಬದಾಗಿಯೂ, ಎಲ್ಲರೂ ತಮ್ಮ ಲಾಭದ ಮೇಲೆ ದೃಷ್ಟಿಯುಳ್ಳವರೆಂಬದಾಗಿಯೂ, ತಮ್ಮ ಪ್ರಯೋಜನಾರ್ಥವಾಗಿ ಬೇಕಾದ ಪಾಪಗಳನ್ನು ಮಾಡುವುದಕ್ಕೆ ಎಲ್ಲರೂ ಸಿದ್ಧರಾಗಿರುತ್ತಾರೆಂಬದಾಗಿಯೂ, ಪ್ರಾಮಾಣಿಕತೆಯೂ ಕೂಡ ಸ್ವಪ್ರಯೋಜನಾರ್ಥವಾಗಿ ಅವಲಂಬಿಸಲ್ಪಡುವುದೆಂಬದಾಗಿಯೂ, ಸತ್ಯಗುಣವು ಶಾಸ್ತ್ರದಲ್ಲಿ ಮಾತ್ರ ಇರುವುದೆಂಬದಾಗಿಯೂ, ವೇಷದಲ್ಲಿಯೂ ಇರುವುದೆಂಬದಾಗಿಯೂ, ಅನುಷ್ಠಾನದಲ್ಲಿ ಇರುವುದಿಲ್ಲವೆಂಬದಾಗಿಯೂ, ಎಲ್ಲರೂ ಸ್ವಾರ್ಥರೆಂಬದಾಗಿಯೂ, ಎಲ್ಲರೂ ನಡೆಯಲ್ಲಿ ಒಂದು ವಿಧವಾಗಿಯೂ, ಮಾತಿನ ಒಂದು ಪಥವಾಗಿಯೂ, ಕಾರ್ಯತಃ ಒಂದು ವಿಧವಾಗಿಯೂ ಇರುತ್ತಾರೆಂಬದಾಗಿಯೂ ತಿಳಿದುಕೊಂಡು, ಈ ಪ್ರಪಂಚವು ಮೋಸಗಾರರಿಗೆ ಆವಾಸಭೂಮಿಯೆಂಬದಾಗಿ ಭಾವಿಸಿದ್ದನು. ಇಂಥಾ ಪಿಗ್ಮೇಲಿಯನ್ನನ ಬಳಿಗೆ ಸೈಪ್ರಸ್ ದೇಶಕ್ಕೆ ಹೋಗಬೇಕೆಂದು ಆಜ್ಞೆಯಾಗಿದ್ದ ಸೈನ್ಯವು ಬರಮಾಡಲ್ಪಟ್ಟಿತು. ಈ ಸೈನ್ಯದಲ್ಲಿ ನಾನೂ ಇದ್ದೆನು. ಅವನು ಯಾರ, ನಾನು ಯಾರ ಎಂದು ಈ ಘೋರೆಯು ತಿಳಿದುಕೊಳ್ಳಲಿಲ್ಲ. ಪಿಗ್ಮೇಲಿಯನ್ನನು ಇದನ್ನು ಎಲ್ಲಿ ಗೊತ್ತುಮಾಡುವನೋ, ಅದರಿಂದ ತನಗೆ ಏನು ವಿಪತ್ತು ಬರುವುದೋ ಎಂದು ನಾರ್ಬಲ್‌ನು ನಡುಗುತ್ತಿದ್ದನು. ಸೈಪ್ರಸ್ಸಿಗೆ ಹೋಗತಕ್ಕ ಸೈನಿಕರಲ್ಲಿ ನಾನೂ ಒಬ್ಬನಾಗಿರಬೇಕೆಂದು ಪಿಗ್ಮೇಲಿಯನ್ನನು ತಿಳಿದುಕೊಂಡ ಕೂಡಲೆ, ಅವನ ಭಯವು ಕಡಮೆಯಾಯಿತು. ಹಡಗಿನ ಪ್ರಯಾಣಕ್ಕೆ ಪ್ರತಿಕೂಲವಾದ ವಾಯುವು ಬೀಸುತ್ತಿದ್ದುದರಿಂದ, ಟೈರ್ ಪಟ್ಟಣದಲ್ಲಿಯೇ ನಾನು ಸ್ವಲ್ಪ ಕಾಲ ಇರಬೇಕಾಯಿತು. ಫಿನೀಷಿಯರು

ಪ್ರಪಂಚದಲ್ಲೆಲ್ಲಾ ಅದ್ಭುತವಾದ ಶಕ್ತಿಯುಳ್ಳವರೆಂದು ಪ್ರಸಿದ್ಧರಾಗುವುದಕ್ಕೆ ಕಾರಣವೇನೋ ಅದನ್ನು ವಿಚಾರಿಸಿ ತಿಳಿದುಕೊಳ್ಳುತ್ತಾ ಅಲ್ಲಿ ಕಾಲಹರಣವನ್ನು ಮಾಡಿದೆನು. ಪಿಗ್‌ಮೇಲಿಯನ್ನನ ರಾಜಧಾನಿಯಾದ ಈ ಟೈರ್ ಪಟ್ಟಣವು ಬಹಳ ಪ್ರಸಿದ್ಧವಾದುದು ಇದು ಒಂದು ದ್ವೀಪದ ಮೇಲೆ ಸಮುದ್ರ ತೀರದಲ್ಲಿಕಟ್ಟಲ್ಪಟ್ಟಿತ್ತು. ಇದು ಅತ್ಯಂತ ಫಲವತ್ತಾದ ಪ್ರದೇಶವಾಗಿತ್ತು. ಅಲ್ಲಿನ ಅರಮನೆಗಳೂ, ಮಠಗಳೂ, ಉಪಪನ್ನರಾದ ಮಹಾಜನಗಳ ಪ್ರಾಸಾದಗಳೂ, ರಾಜಬೀದಿಗಳೂ, ದೇವಸ್ಥಾನಗಳೂ, ಉಪವನಗಳೂ ಆರಾಮಗಳೂ ನೇತ್ರಗಳಿಗೆ ಹೇಗೋ ಹಾಗೆ ಮನಸ್ಸಿಗೂ ಪರಮಾನಂದವನ್ನುಂಟುಮಾಡುತ್ತಿದ್ದವು. ಪಶ್ಚಿಮ ದಿಕ್ಕಿನಿಂದ ಬೀಸತಕ್ಕ ಗಾಳಿಯು ಅತ್ಯಂತ ಆನಂದಕರವಾಗಿತ್ತು. ಈ ಪಟ್ಟಣವು ಲಿಬನಸ್ ಪರ್ವತದ ತಪ್ಪಲಲ್ಲಿ ಇರುವುದು. ಈ ಪರ್ವತಶಿಖರವು ಮೇಘಗಳಲ್ಲಿ ಅದೃಶ್ಯವಾಗಿತ್ತು. ಹಿಮವು ಇದರ ಶಿಖರವನ್ನು ಸ್ಫಟಿಕ ಶಿಖರದಂತೆ ಮಾಡಿತ್ತು. ಈ ಪರ್ವತಾಗ್ರದಿಂದ ಹಿಮದೊಡನೆ ಮಿಶ್ರವಾದ ಗಿರಿನದಿಗಳು ಆಕಾಶಗಂಗೆಯೋಪಾದಿಯಲ್ಲಿ ಕೆಳಕ್ಕೆ ಬೀಳುತ್ತಿದ್ದವು. ಈ ಪರ್ವತದ ತಪ್ಪಲಲ್ಲಿ ಗಗನಚುಂಬಿಗಳಾದ ವೃಕ್ಷಗಳು ಬೆಳೆದುಕೊಂಡಿದ್ದವು. ಅನೇಕ ವಿಧವಾದ ಬಳ್ಳಿಗಳು ಈ ವೃಕ್ಷಗಳ ಸ್ಥಾವರಿಸಿಕೊಂಡು, ಎಲ್ಲೆಲ್ಲಿಯೂ ಸ್ವಭಾವಸಿದ್ಧವಾದ ಲತಾಗೃಹಗಳನ್ನು ಕಲ್ಪಿಸಿದ್ದವು. ಈ ಕಾಡಿನ ಸಮೀಪದಲ್ಲಿದ್ದ ಪರ್ವತದ ತಪ್ಪಲುಗಳಲ್ಲಿ ನಿರ್ಮಲವಾದ ನೀರಿನಿಂದ ತುಂಬಿದ ನದಿನದಗಳು ಹರಿಯುತ್ತಿದ್ದವು ದನಗಳೂ, ಕುರಿಗಳೂ ಮೇಯುತ್ತಿದ್ದವು. ಈ ಪ್ರಾಂತ್ಯದಲ್ಲಿ ವಸಂತಕಾಲವು ನಿತ್ಯವಾಗಿತ್ತು. ಎಲ್ಲೆಲ್ಲಿಯೂ ಫಲಪುಷ್ಪಗಳೂ, ಗಿಡಗಳೂ ವಿಸ್ತಾರವಾಗಿದ್ದವು. ಈ ಪ್ರಾಂತ್ಯವು ಉಷ್ಣವಲಯಕ್ಕೆ ಸೇರಿದ್ದಾದಾಗ್ಯೂ, ಅಲ್ಲಿ ಕೋಮಲವಾಗಿ ಬೆಳೆದಿದ್ದ ವೃಕ್ಷಗಳ ಮಹಿಮೆಯಿಂದ ಸಮಶೀತೋಷ್ಣವುಳ್ಳದ್ದಾಗಿತ್ತು. ಹೀಗೆ ಆಗುವುದಕ್ಕೆ ಸಮುದ್ರದ ಸಾನ್ನಿಧ್ಯವೂ ಒಂದು ಕಾರಣವಾಗಿತ್ತು. ನೋಡತಕ್ಕವರ ಕಣ್ಣುಗಳಿಗೆ ಈ ಪಟ್ಟಣವು ಸಮುದ್ರದ ಮೇಲೆ ತೇಲತಕ್ಕ ವಿಶಾಲವಾದ ಹಸರು ತೆಪ್ಪದಂತೆ ಕಾಣುತ್ತಿತ್ತು.

ಈ ಪಟ್ಟಣದಲ್ಲಿ ಸಮಸ್ತ ದೇಶದ ವರ್ತಕರೂ ಸೇರಿ ಇದ್ದರು. ಈ ಪಟ್ಟಣದ ವರ್ತಕರು ಪ್ರಪಂಚಕ್ಕೆ ಸೇರಿದ ಅತ್ಯಂತ ಐಶ್ವರ್ಯವುಳ್ಳ ವರ್ತಕರಲ್ಲಿ ಮುಖಂಡರಾಗಿದ್ದರು. ವ್ಯಾಪಾರ ವಿಷಯದಲ್ಲಿ ಈ ಪಟ್ಟಣವು ಪ್ರಪಂಚಕ್ಕೆಲ್ಲಾ ರಾಜಧಾನಿಯಾಗಿದ್ದರೆ ಹೇಗೋ ಹಾಗೆ ಕಾಣುತ್ತಿತ್ತು. ಇವರ ಹಡಗುಗಳು ಸಮುದ್ರವನ್ನೆಲ್ಲಾ ಆಕ್ರಮಿಸಿ, ಸಮುದ್ರದ ನೀರು ದೃಷ್ಟಿಪಥಕ್ಕೆ ಬೀಳದಂತೆ ಮಾಡಿ

ಇದ್ದವು. ಇವರ ಹಡಗುಗಳ ಧ್ವಜಸ್ತಂಭಗಳು ದೂರಕ್ಕೆ ವಿಶಾಲವಾದ ಕಾಡಿನಂತೆ ಕಾಣುತ್ತಿದ್ದವು. ಈ ಪಟ್ಟಣದ ಜನಗಳಲ್ಲಿ ಅನೇಕರು ವರ್ತಕರಾಗಿದ್ದರು. ಅಲ್ಲಿನ ಕೈಗಾರಿಕೆಗಳು ಅತ್ಯಂತ ಪ್ರಸಿದ್ಧವಾಗಿದ್ದವು ಸಾಮಾನ್ಯವಾದ ಮಜಲಿನ್ ಬಟ್ಟೆಗಳು ಮೊದಲ್ಗೊಂಡು, ಶೋಭಾಯಮಾನವಾದ ಥಳಥಳಿಸುವ ಚಿತ್ರವಿಚಿತ್ರವಾದ ಅಂಚುಗಳಿಂದ ಪ್ರಜ್ವಲಿಸುವ ಪೀತಾಂಬರಗಳವರೆಗೂ ಅನೇಕ ವಿಧವಾದ ಬಟ್ಟೆಗಳು ಈ ಪಟ್ಟಣದಲ್ಲಿ ತಯಾರಾಗುತ್ತಿದ್ದವು. ಈ ಪಣ್ಣದಲ್ಲಿ ನೇಯಲ್ಪಟ್ಟ ಬಟ್ಟೆಗಳು ಎಲ್ಲಾ ಖಂಡಗಳಲ್ಲಿಯೂ, ಪ್ರಭುಗಳ ಅರಮನೆಗಳಲ್ಲಿಯೂ, ಉಪಪನ್ನರಾದವರ ಪ್ರಾಸಾದಗಳಲ್ಲಿಯೂ ಅನೇಕರಿಂದ ಧರಿಸಲ್ಪಡುತ್ತಿದ್ದವು. ಇಲ್ಲಿನ ವರ್ತಕರಲ್ಲಿ ಚಿನ್ನ, ಬೆಳ್ಳಿ ಮೊದಲಾದ ಲೋಹಗಳೂ, ರತ್ನಪಡಿಗಳೂ, ಸುಗಂಧ ದ್ರವ್ಯಗಳೂ, ನಾನಾವಿಧವಾದ ಪ್ರಾಣಿಗಳೂ ಎಲ್ಲೆಲ್ಲಿಯೂ ವಿಸ್ತಾರವಾಗಿದ್ದವು.

ಇವುಗಳನ್ನೆಲ್ಲಾ ನೋಡಿ, ನನಗೆ ತುಂಬಾ ಸಂತೋಷವಾಯಿತು. ಈ ಪಟ್ಟಣದ ಬೀದಿಗಳನ್ನೂ, ಸಂದಿಗಳನ್ನೂ, ಸಮಸ್ತ ಭಾಗಗಳನ್ನೂ ಪರಿಶೀಲಿಸಿ ನೋಡಿದೆನು. ಸೋಮಾರಿಗಳು ಎಲ್ಲಿಯೂ ಇರಲಿಲ್ಲ. ಆಬಾಲವೃದ್ಧರೂ ಕೂಡ ಯಾವುದಾದರೂ ಒಂದು ಲಾಭಕರವಾದ ಕೆಲಸವನ್ನು ಮಾಡುತ್ತಿದ್ದರು. ಅನೇಕ ದೇಶಗಳಲ್ಲಿ ಜನಗಳು ಗುಂಪುಗುಂಪಾಗಿ ಸೇರುವುದುಂಟು. ಇಲ್ಲಿಯೂ ಗುಂಪುಗಳನ್ನು ನೋಡಿದೆನು. ಒಗ್ಗಟ್ಟಾಗಿ ಸೇರಿ ಕೆಲಸ ಮಾಡತಕ್ಕವರ ಗುಂಪುಗಳು ನನ್ನ ನೇತ್ರಪಥಕ್ಕೆ ಬಿದ್ದವೇ ಹೊರತು, ಸೋಮಾರಿಗಳ ಗುಂಪು ನನ್ನ ದೃಷ್ಟಿಗೆ ಎಲ್ಲಿಯೂ ಬೀಳಲಿಲ್ಲ. ಹೆಂಗಸರೂ ಕೂಡ ಹತ್ತಿಯನ್ನು ನೂಲುತ್ತಾ, ಕಸೂತಿ ಮೊದಲಾದ ಕೆಲಸಗಳನ್ನು ಮಾಡುತ್ತಾ, ಬಹಳ ಬೆಲೆಯುಳ್ಳ ಉಡಿಗೆಗಳನ್ನು ತಯಾರ್ಮಾಡುತ್ತಾ ಇದ್ದರು. ನಾರ್‌ಬಲ್‌ನನ್ನು ಕುರಿತು, “ಎಲೈ ನಾರ್‌ಬಲ್‌ನೇ,—ಈ ಪ್ರಪಂಚದ ಸಂಪತ್ತೆಲ್ಲಾ ಈ ಪಟ್ಟಣದಲ್ಲಿ ಸೇರಿರುವಂತೆ ತೋರುತ್ತದೆ. ಇಷ್ಟು ಸಂಪತ್ತು ಈ ದೇಶದಲ್ಲಿ ಸೇರುವುದಕ್ಕೆ ಕಾರಣವೇನು!” ಎಂದು ಕೇಳಿದೆನು. ಅದಕ್ಕೆ ಅವನು ಹೇಳಿದ್ದೇನೆಂದರೆ:—

ಈ ಪಟ್ಟಣವು ಸಮುದ್ರದ ತೀರದಲ್ಲಿರುವುದು. ಹಡಗುಗಳು ಇಳಿಯುವುದಕ್ಕೂ, ಹೋಗುವುದಕ್ಕೂ ಅನುಕೂಲ್ಯಗಳಿರುವುವು. ಇದರಿಂದಲೇ ಈ ಫಿನೀಷಿಯರ್‌ರು ವರ್ತಕರಲ್ಲಿ ಮುಖಂಡರಾದರು. ಇತರ ದೇಶೀಯರು ಪ್ರಸಿದ್ಧಿಗೆ ಬರುವುದಕ್ಕೆ ಮುಂಚೆಯೇ ಈ ಫಿನೀಷಿಯರ್‌ರು ಪ್ರಸಿದ್ಧಿಗೆ ಬಂದರು. ಪಂಚಭೂತಗಳು ದೇವತೆಗಳೆಂದು ಅನೇಕ ಜನಾಂಗದವರು ಅವುಗಳನ್ನು ಪೂಜಿಸುವುದುಂಟು. ಈ ಫಿನೀಷಿಯರ್‌ರು ಈ ಭೂತವಸ್ತುಗಳನ್ನು ತಮ್ಮ ಇಷ್ಟಾರ್ಥಪ್ರಾ

ಪ್ತಿಗೆ ಸಾಧಕಗಳಾಗುವಂತೆ ಮಾಡಿಕೊಂಡರು. ಸಮುದ್ರದ ಮೇಲೆ ಸಂಚಾರ ಮಾಡುವುದು ಅಪಾಯಕರವೆಂದು ಜನಗಳು ಭಾವಿಸುತ್ತಿದ್ದಾಗ, ಫಿನೀಷಿಯರ್ಲು ಅದನ್ನು ವೇಗವಾದ ಅಶ್ವಗಳನ್ನು ಹೇಗೋ ಹಾಗೆ ಉಪಯೋಗಿಸುವುದಕ್ಕೆ ಉಪಕ್ರಮಿಸಿದರು. ಸಮುದ್ರದ ನೀರಿನಿಂದ ಯಂತ್ರಗಳನ್ನು ನಡೆಸುವುದಕ್ಕೆ ಉಪಕ್ರಮಿಸಿದರು. ನೀರಿನ ಆವಿಯು ಯಂತ್ರಗಳನ್ನು ನಡೆಸುವುದಕ್ಕೆ ಆರಂಭವಾಯಿತು. ನೀರಿನಿಂದ ನಿರ್ಮಾಣ ಮಾಡಲ್ಪಟ್ಟ ವಿದ್ಯುಚ್ಛಕ್ತಿಯು ಈಗ ಹೇಗೆ ಉಪಯೋಗಿಸಲ್ಪಡುತ್ತದೋ ಅದಕ್ಕೂ ಅವರು ಅಸ್ತಿಭಾರವನ್ನು ಹಾಕಿದರು. ಈಜಿಪ್ಟ್ ಮತ್ತು ಬ್ಯಾಬಿಲೋನಿಯರ್ ಶಾಸ್ತ್ರಗಳನ್ನು ಅವರು ಅನುಷ್ಠಾನಕ್ಕೆ ತಂದುಕೊಂಡರು. ನಕ್ಷತ್ರಗಳ ಸಹಾಯದಿಂದ ಸಮುದ್ರದ ಮೇಲೆ ದೇಶಾಂತರಗಳಿಗೆ ದಾರಿಯನ್ನು ಗೊತ್ತುಮಾಡಿದರು. ಸಮುದ್ರದಿಂದ ವಿಭಕ್ತವಾದ ಜನಾಂಗಗಳನ್ನೆಲ್ಲಾ ಪರಸ್ಪರ ಸಂಬಂಧವುಳ್ಳವರನ್ನಾಗಿ ಮಾಡಿದರು. ಈ ಜನಗಳು ಬಹಳ ಬುದ್ಧಿಶಾಲಿಗಳು. ವಿಶೇಷ ಸಾಹಸಿಗಳು. ಬೇಜಾರಿಲ್ಲದೆ ಕೆಲಸ ಮಾಡತಕ್ಕವರು. ಕೈಗಾರಿಕೆಗಳಲ್ಲಿ ನಿಪುಣರು. ಯಾವುದರಲ್ಲಿಯೂ ಮಿತಿಮಾರಿ ನಡೆಯತಕ್ಕವರಲ್ಲ. ಇವರಲ್ಲಿ ದುಂದುಗಾರಿಕೆಯು ಇರುವುದಿಲ್ಲ. ಧರ್ಮಶಾಸ್ತ್ರಗಳಿಗೆ ಅನುಸಾರವಾಗಿ ನಡೆದುಕೊಳ್ಳುವುದರಲ್ಲಿ ಇವರು ವಿಶೇಷ ಆಸಕ್ತರು. ಐಕಮತ್ಯವು ಇವರಲ್ಲಿ ಮೂರ್ತೀಭವಿಸಿರುವುದು. ದೇಶಾಂತರದವರಲ್ಲಿ ಇವರಿಗೆ ಬಳಿಕೆಯು ವಿಶೇಷವಾಗಿರುವುದು. ಇವರು ಎಲ್ಲರಲ್ಲಿಯೂ ಸ್ನೇಹವುಳ್ಳವರಾಗಿಯೂ, ಮರ್ಯಾದೆಯುಳ್ಳವರಾಗಿಯೂ, ನಂಬಿಕೆಯುಳ್ಳವರಾಗಿಯೂ ಇರುತ್ತಾರೆ. ಎಲ್ಲರಿಗೂ ಉಪಕಾರವನ್ನು ಮಾಡಿ, ಅವರಿಂದ ಪ್ರತಿಫಲವಾಗಿ ಬರತಕ್ಕ ಲಾಭವನ್ನು ಇವರು ಹೊಂದುವರು. ಇವರ ಸಂಪತ್ತಿಗೆ ಇದೇ ಮುಖ್ಯ ಕಾರಣ. ಎಲ್ಲರಿಗೂ ನಷ್ಟವಾಗಿ ತಾವು ಬದುಕಬೇಕೆಂಬ ಅಭಿಲಾಷೆಯು ಇವರಿಗೆ ಲೇಶವೂ ಇರುವುದಿಲ್ಲ. 'ಸಕಲರೂ ಸುಖವಾಗಿರಲಿ, ಅವರ ಸಹಾಯದಿಂದ ನಾವೂ ಬದುಕೋಣ' ಎಂಬ ಅಭಿಪ್ರಾಯವು ಇವರಲ್ಲಿ ನಿಸರ್ಗವಾಗಿರುವುದು. ಇದರಿಂದ ಎಲ್ಲೆಲ್ಲಿ ಹೋದಾಗ್ಯೂ, ಇವರನ್ನು ಎಲ್ಲರೂ ಸಮೀಪಕ್ಕೆ ಕರೆಯುವರು. ಇವರಲ್ಲಿ ಯಾರಿಗೂ ಹೊಟ್ಟೆಕಿಚ್ಚು ಇರುವುದಿಲ್ಲ. ಎಲ್ಲರೂ ಬದುಕಲೆಂಬ ಅಭಿನಿವೇಶವು ಇವರಿಗೆ ಇರುವುದರಿಂದ, ಇವರನ್ನು ನೋಡಿ ಯಾರೂ ಹೊಟ್ಟೆಕಿಚ್ಚು ಪಡುವುದಿಲ್ಲ. ಇವರಲ್ಲಿ ಆಬಾಲವೃದ್ಧರೂ ಉದ್ಯೋಗಿಗಳಾಗಿರುವುದರಿಂದಲೂ, ತಾವು ಸಂಪಾದಿಸಿದ ಸಮಸ್ತವನ್ನೂ ಇವರು ಯಾರಿಗೂ ಅನ್ಯಾಯವಾಗದಂತೆ ಅವರವರ ಮೆಹನತ್ತಿಗನುಸಾರವಾಗಿ ಎಲ್ಲರೂ ಒಪ್ಪಿ ಹಂಚಿಕೊಳ್ಳುವುದರಿಂದಲೂ, ಯಾವ ಮನಸ್ತಾಪಕ್ಕೂ, ದ್ವೇಷಕ್ಕೂ ಇವರಲ್ಲಿ ಅವಕಾಶವೇ ಇರುವುದಿಲ್ಲ.

ಇವರು ದೇಶಾಟನವನ್ನು ಮಾಡಿ, ವಿಶಾಲವಾದ ಮನೋವೃತ್ತಿಯನ್ನು ಸಂಪಾದಿಸಿಕೊಂಡಿರುವರು. ಜಗದೀಶ್ವರನೇ ತಂದೆಯೆಂಬದಾಗಿಯೂ, ಲೋಕದಲ್ಲಿ ಇರತಕ್ಕ ಸಮಸ್ತ ಜನಗಳೂ ಸಹೋದರರೆಂಬದಾಗಿಯೂ, ಎಲ್ಲರೂ ಕ್ಷೇಮವಾಗಿದ್ದರೆ ನಾವೂ ಕ್ಷೇಮವಾಗಿರುವೆವೆಂಬದಾಗಿಯೂ, ಯಾರಿಗೆ ಕಷ್ಟ ಬಂದಾಗ್ಯೂ, ಅದು ನಮ್ಮ ಕಷ್ಟವೆಂಬದಾಗಿಯೂ, ಸರ್ವರೂ ಅರೋಗದೃಢಕಾಯರಾಗಿ, ಈತಿಬಾಧೆಗಳಿಗೆ ಗುರಿಯಾಗದೆ ಇದ್ದ ಹೊರತು, ಜನಗಳು ತಮ್ಮ ತಮ್ಮ ಕೆಲಸಗಳನ್ನು ಸರಿಯಾಗಿ ಮಾಡಿ, ಭೋಗ್ಯವಸ್ತುಗಳನ್ನು ನಿರ್ಮಿಸುವುದಕ್ಕಾಗುವುದಿಲ್ಲವೆಂಬದಾಗಿಯೂ, ಭೇದಭಾವಗಳಿಂದ ಇಂಥಾ ನ್ಯೂನತೆಗಳಿಗೆ ಅವಕಾಶವನ್ನು ಕೊಟ್ಟರೆ, ಪ್ರಪಂಚದ ಹುಟ್ಟುವಳಿಯು ಕಡಮೆಯಾಗಿ, ತಿನ್ನತಕ್ಕವರು ಹೆಚ್ಚಾಗಿ, ಧಾರಣವಾಸಿಗಳು ಚಡಾವಾಗಿ, ಸಕಲ ಜನಗಳಿಗೂ ಕಷ್ಟ ಉಂಟಾಗುವುದೆಂಬದಾಗಿಯೂ ಇವರು ತಿಳಿದುಕೊಂಡಿರುವರು. ಸರ್ವ ಜನಗಳ ಹಿತದಲ್ಲಿಯೂ ಇವರು ನಿಸರ್ಗವಾಗಿ ಆಸಕ್ತಿಯುಳ್ಳವರಾಗುವುದಕ್ಕೆ ಈ ವಿಶಾಲವಾದ ಬುದ್ಧಿಯೇ ಮುಖ್ಯ ಕಾರಣ. ಇಂಥಾ ಬುದ್ಧಿಯು ದೇಶಾಟನದಿಂದಲೂ, ಪಂಡಿತಭಾಷಣದಿಂದಲೂ ಅಲ್ಲದೆ, ಬೇರೆ ಯಾವುದರಿಂದಲೂ ಲಭ್ಯವಾಗುವುದಿಲ್ಲ. ಇವರಿಗೆ ಈ ಎರಡೂ ಲಭ್ಯವಾದವು. ಇದರಿಂದಲೇ ಫಿನೀಷಿಯರ್ನರೇ ಇತರ ಎಲ್ಲಾ ಜನಗಳಿಗಿಂತಲೂ ಮುಂದಾಳುಗಳಾಗಿರುವರು."

ಈ ರೀತಿಯಲ್ಲಿ ನಾರ್‌ಬಲ್‌ನು ಹೇಳಿದನು. ಇದನ್ನು ಕೇಳಿ, ನನಗೆ ಪರಮಾನಂದವಾಯಿತು. ನಮ್ಮ ತಂದೆಯು ಸಮಸ್ತ ದೇಶಗಳನ್ನೂ ನೋಡುವುದಕ್ಕೆ ಹೊರಡುವ ಸಂಭವ ಉಂಟಾದದ್ದೂ, ಅವನನ್ನು ಹುಡುಕಿಕೊಂಡು ಹೊರಡುವ ಸಂಭವವು ನನಗೆ ಲಭ್ಯವಾದದ್ದೂ, ಈ ದೇಶಾಟನದಲ್ಲಿ ವಿಪತ್ಪರಂಪರೆಗಳು ಬಂದದ್ದೂ, ಅವುಗಳನ್ನೆಲ್ಲಾ ಜಯಿಸುವ ಶಕ್ತಿಯು ಲಭ್ಯವಾದದ್ದೂ, ಇವೆಲ್ಲಾ ನನ್ನ ಕ್ಷೇಮಾರ್ಥವಾಗಿ ಆಗಿರುವುವೆಂಬ ಭಾವನೆಯು ನನಗೆ ಉಂಟಾಯಿತು. ಆಗ ನಾರ್‌ಬಲ್‌ನನ್ನು ಕುರಿತು ನಾನು ಹೇಳಿದ್ದೇನೆಂದರೆ:—

" ಎಲೈ ನಾರ್‌ಬಲ್‌ನೇ,—ಟೈರ್ ಪಟ್ಟಣವು ಹೇಗೆ ಸಂಪದಭಿವೃದ್ಧಿಗೆ ಮಾತೃಸ್ಥಾನವಾಗಿರುವುದೋ ಹಾಗೆಯೇ ಇಥಾಕಾ ದ್ವೀಪವೂ ಆಗುವಂತೆ ಮಾಡಬೇಕೆಂದು ನನಗೆ ಬಹಳ ಕುತೂಹಲ ಉಂಟಾಗಿದೆ. ಇದಕ್ಕೆ ಏನು ಮಾಡಬೇಕು ? ನೀನು ಅನೇಕ ದೇಶಗಳನ್ನು ನೋಡಿದ್ದೀಯೆ. ಈ ವಿಷಯದಲ್ಲಿ ಫಿನೀಷಿಯರ್ನರು ಮಾಡಿದ ಕೃಷಿಗಳೆಲ್ಲಾ ನಿನಗೆ ಚನ್ನಾಗಿ ತಿಳಿದು ಇವೆ. ಈ ವಿಷಯದಲ್ಲಿ ನಿನ್ನ ಅಭಿಪ್ರಾಯವನ್ನು ಹೇಳು" ಎಂದು ಕೇಳಿದೆನು. ಅದಕ್ಕೆ ನಾರ್‌ಬಲ್‌ನು ಹೇಳಿದ್ದೇನೆಂದರೆ :—

"ಇದು ಕಷ್ಟವಲ್ಲ. ದೇಶಾಟನವನ್ನು ಮಾಡು. ಯಾವ ಯಾವ ದೇಶಗಳಲ್ಲಿ ಸಂಪದಭಿವೃದ್ಧಿಯ ಕೆಲಸಗಳು ಹೇಗೆ ನಡೆಯುತ್ತಿವೆಯೋ ಅದನ್ನು ಖುದ್ದಾಗಿ ನೋಡು. ಯಾವ ಯಾವ ಸಂಪದಭಿವೃದ್ಧಿಯ ಕೆಲಸಗಳಲ್ಲಿ ಯಾರ್ಯಾರು ನಿಪುಣರೋ ಅದನ್ನು ಗೊತ್ತುಮಾಡಿಕೊ. ಅವರನ್ನು ಚತುರೋಪಾಯಗಳಿಂದಲೂ ಸ್ವಾಧೀನಪಡಿಸಿಕೊ. ಅವರಿಗೆ ಪ್ರೋತ್ಸಾಹವನ್ನು ಕೊಟ್ಟು, ಇಥಾಕಾ ದ್ವೀಪಕ್ಕೆ ಬರಮಾಡಿಕೊ. ಅವರು ತಿಳಿದುಕೊಂಡಿರುವ ವಿದ್ಯೆಗಳನ್ನು ನಿನ್ನ ಪ್ರಜೆಗಳಿಗೆ ಮನಃಪೂರ್ವಕವಾಗಿ ಕಲಿಸುವಂತೆ ಮಾಡು. ಈ ಪ್ರಯತ್ನಗಳನ್ನು ಮಾಡುವುದರಲ್ಲಿ, ಅತಿ ಆಸೆಯಿಂದ ಲೋಭಿಯಾಗಬೇಡ. ತಮ್ಮ ದೇಶವನ್ನು ಬಿಟ್ಟು, ನಿನ್ನ ದೇಶಕ್ಕೆ ಬಂದು, ನಿನ್ನ ಪ್ರಜೆಗಳಿಗೆ ಸಂಪದಭಿವೃದ್ಧಿಯ ಕೆಲಸಗಳಲ್ಲಿ ಮಾರ್ಗದರ್ಶನವನ್ನು ಮಾಡಿದ್ದಕ್ಕೋಸ್ಕರ ಅವರಿಗೆ ಉದಾರವಾದ ಪ್ರತಿಫಲ ಉಂಟಾಗುವಂತೆ ಮಾಡು. ಹಾಗೆ ನೀನು ಮಾಡಿದೆಯೆಂಬ ಸಮಾಚಾರವು ಕ್ರಮಕ್ರಮವಾಗಿ ಎಲ್ಲಾ ದೇಶಗಳಿಗೂ ಹರಡುತ್ತದೆ. ಕುಶಲ ವಿದ್ಯೆಗಳಲ್ಲಿ ನಿಪುಣರಾದವರು ಅಪ್ರಾರ್ಥಿತವಾಗಿಯೇ ನಿನ್ನಲ್ಲಿ ಬರುವಂತಾಗುತ್ತದೆ. ಅವರಿಗೆ ಪ್ರೋತ್ಸಾಹವನ್ನು ಕೊಟ್ಟ ಹಾಗೆಲ್ಲಾ ಸರ್ವತೋಮುಖವಾಗಿ ಕೈಗಾರಿಕೆಗಳೂ ಮತ್ತು ವ್ಯಾಪಾರವೂ ಹೆಚ್ಚುವುವು. ಪರದೇಶೀಯರ ವಿಷಯದಲ್ಲಿಯೂ, ಸ್ವಜನಗಳ ವಿಷಯದಲ್ಲಿಯೂ ನೀನು ಹೇಗೆ ನಡೆದುಕೊಳ್ಳಬೇಕೋ ಅದನ್ನು ತಿಳಿದುಕೊಳ್ಳುವುದು ಆವಶ್ಯಕ. ಲೋಕವ್ಯವಹಾರ ಜ್ಞಾನವಿಲ್ಲದವರು ಘರದಾ ಹೆಂಗಸರಂತೆ ಯಾರಿಗೂ ಭೇಟಿಯನ್ನು ಕೊಡುವುದಿಲ್ಲ. ಭೇಟಿಯನ್ನು ಕೊಟ್ಟರೆ ಅವರು ನಾನಾವಿಧವಾದ ಯಾಚನೆಗಳನ್ನು ಮಾಡುವರೆಂಬದಾಗಿಯೂ, ಅವರ ಇಷ್ಟಾರ್ಥವನ್ನು ನೆರವೇರಿಸುವುದು ಕಷ್ಟವೆಂಬದಾಗಿಯೂ, ಯಾಚಕರಿಗೆ ಇಲ್ಲವೆಂದು ಹೇಳುವುದು ಇನ್ನೂ ಕಷ್ಟವೆಂಬದಾಗಿಯೂ ತಿಳಿದುಕೊಳ್ಳುವುದು ಶುದ್ಧ ತಪ್ಪು. ಪ್ರಭುಗಳಾದವರು ಎಲ್ಲರನ್ನೂ ನೋಡಬೇಕು. ಅವರು ಹೇಳುವ ಮಾತುಗಳನ್ನು ಕೇಳಬೇಕು. ಅವರ ಪ್ರಾರ್ಥನೆಗಳನ್ನು ಆಲಿಸಬೇಕು. ನ್ಯಾಯವಾದ ಪ್ರಾರ್ಥನೆಗಳು ನಡೆಸಲ್ಪಡಬೇಕು. ಅನ್ಯಾಯವಾದ ಪ್ರಾರ್ಥನೆಗಳು ನಡೆಸಲ್ಪಡಕೂಡದು. ಮನಸ್ಸಿಗೆ ವ್ಯಥೆಯಾಗದಂತೆ ಅನ್ಯಾಯವಾದ ಪ್ರಾರ್ಥನೆಗಳು ತಿರಸ್ಕರಿಸಲ್ಪಡಬೇಕಾಗುತ್ತದೆ. ಯಾಚಿಸಿದವನ ಮನಸ್ಸು ನೋಯದಂತೆ, ತನಗೂ ವಿಷಾದವಾಗದಂತೆ ಇಲ್ಲವೆಂದು ಹೇಳುವ ರೀತಿಯು ಇರುವುದು. ಪ್ರಭುತ್ವ ಮಾಡತಕ್ಕವರು ಈ ರೀತಿಯನ್ನು ಚನ್ನಾಗಿ ತಿಳಿದುಕೊಳ್ಳಬೇಕು. ಇಲ್ಲವೆಂದು ಹೇಳುವುದಕ್ಕೆ ಮುಂಚೆ, ಅದಕ್ಕೆ ಕಾರಣವನ್ನು ತಪಶೀಲುವಾರಾಗಿ ತಿಳಿಸಿದರೆ, ಪ್ರಾರ್ಥಿಸಿದವರು ತೃಪ್ತರಾಗಿ ಹೊರಟು ಹೋಗುವರು. ಈ ದೇಶವನ್ನು

ಈಗ ನೋಡಿ, ನೀನು ಆಶ್ಚರ್ಯಪಡುತ್ತೀಯೆ. ಪೂರ್ವದಲ್ಲಿ ಈ ರಾಜಧಾನಿಯು ಹೇಗೆ ಇತ್ತೋ ಅದನ್ನು ನೀನು ನೋಡಿ ಇದ್ದರೆ, ಈಗಿನ ಸ್ಥಿತಿಯನ್ನು ನೋಡಿ ನೀನು ವಿಷಾದ ಪಡುತ್ತಿದ್ದೆ. ಪೂರ್ವದಲ್ಲಿ ಇದು ಸ್ವರ್ಗವಾಗಿತ್ತು. ಈಗ ಈ ಪಿಗ್‌ಮೇಲಿಯನ್ನನ ದೌರಾತ್ಮ್ಯದಿಂದ ನರಕವಾಗಿ ಪರಿಣಮಿಸಿರುವುದು. ಪೂರ್ವದಲ್ಲಿ ಸಮಸ್ತ ಜನಾಂಗದವರೂ ಈ ದೇಶಾಧಿಪತಿಗಳಿಗೆ ಕಾಣಿಕೆಗಳನ್ನು ಮನಃಪೂರ್ತಿಯಾಗಿ ಒಪ್ಪಿಸಿ ಪೂಜಿಸುತ್ತಿದ್ದರು. ಈಗ ಒಪ್ಪಿಕೊಂಡಿರುವ ಪೊಗದಿಯನ್ನು ಕೊಡುವುದನ್ನೂ ಕೂಡ ಅನೇಕರು ನಿಲ್ಲಿಸಿರುವರು. ಕಾಣಿಕೆಗಳೂ, ಪೂಜೆಯೂ ಸ್ಮೃತಿಪಥವನ್ನೈದಿರುವುವು. ಪೂರ್ವದಲ್ಲಿ ಪ್ರಭುತ್ವ ಮಾಡಿದವರ ಮಹಿಮೆಯು ಅಲ್ಲಲ್ಲ ದೃಷ್ಟಿಪಥಕ್ಕೆ ಬೀಳುತ್ತಲಿದೆ. ಇದನ್ನು ನೋಡಿ ನೀನು ಆಶ್ಚರ್ಯಪಡುತ್ತೀಯೆ. ಪೂರ್ವದ ಸ್ಥಿತಿಯನ್ನು ನೋಡಿದ್ದರೆ, ನೀನು ವಿಸ್ಮಯದಿಂದ ಪರವಶನಾಗುತ್ತಿದ್ದೆ. ಈ ಪಿಗ್‌ಮೇಲಿಯನ್ನನು ಪರದೇಶೀಯರಿಗೂ, ಸ್ವದೇಶೀಯರಿಗೂ, ಇಬ್ಬರಿಗೂ ಭಯಸ್ಥಾನನಾಗಿರುತ್ತಾನೆ. ಪರದೇಶದಿಂದ ಬರತಕ್ಕ ವರ್ತಕರ ವ್ಯಾಪಾರಕ್ಕೆ ನಿರ್ಬಂಧಗಳು ಮಾಡಲ್ಪಟ್ಟಿರುವುವು ಪೂರ್ವದಲ್ಲಿ ಹೀಗಿರಲಿಲ್ಲ. ಈ ಪಿಗ್‌ಮೇಲಿಯನ್ನನಿಗೆ ದುರಾಸೆಯೆಂಬ ಪಿಶಾಚವು ಹಿಡಿದಿರುವುದು. ವ್ಯಾಪಾರಕ್ಕೆ ನಿರ್ಬಂಧವನ್ನುಂಟುಮಾಡುವ ಅನೇಕ ರೂಲುಗಳನ್ನು ಮಾಡಿರುವನು. ಆ ರೂಲುಗಳನ್ನು ಅತಿಕ್ರಮಿಸಿ ನಡೆಯತಕ್ಕವರ ಸರಕುಗಳನೆಲ್ಲಾ ಮುಟ್ಟುಗೋಲು ಹಾಕಿಕೊಳ್ಳುವನು. ಅವರನ್ನು ಭಾರಿ ದಂಡನೆಗಳಿಗೆ ಗುರಿಮಾಡುವನು. ಪ್ರಜೆಗಳ ಸಂಪತ್ತೇ ತನ್ನ ಸಂಪತ್ತೆಂದು ಪ್ರತಿ ಒಬ್ಬ ಪ್ರಭುವೂ ತಿಳಿದುಕೊಳ್ಳಬೇಕು. ಈ ಪಿಗ್‌ಮೇಲಿಯನ್ನನ ಪ್ರಭುತ್ವದಲ್ಲಿ ಯಾರಾದರೂ ಐಶ್ವರ್ಯವಂತರೆಂದು ಗೊತ್ತಾದರೆ, ಕೂಡಲೆ ಅವರ ಸಂಪತ್ತು ಅಪಹರಿಸಲ್ಪಡುವುದು. ಗೊತ್ತಿಲ್ಲದ ಹಾಗೆ ಕಂದಾಯಗಳು ಹಾಕಲ್ಪಟ್ಟಿರುವುವು. ಪಿಗ್‌ಮೇಲಿಯನ್ನನು ತಾನೇ ಸ್ವಂತವಾಗಿ ವ್ಯಾಪಾರ ಮಾಡುತ್ತಾನೆ. ವರ್ತಕರು ಅವನೊಡನೆ ವ್ಯಾಪಾರ ಮಾಡುವುದಕ್ಕೆ ಹೆದರುತ್ತಾರೆ. ಪೂರ್ವದಲ್ಲಿ ಟೈರ್ ಪಟ್ಟಣಕ್ಕೆ ಸಮಸ್ತ ದೇಶಗಳಿಂದಲೂ ವರ್ತಕರು ಬರುತ್ತಿದ್ದರು. ಈಗ ಅವರು ಬಹಳ ವಿರಳರಾದರು. ಈಗ ಈ ಪಟ್ಟಣದಲ್ಲಿರತಕ್ಕ ವರ್ತಕರನ್ನು ನೋಡಿ, ನೀನು ಆಶ್ಚರ್ಯ ಪಡುತ್ತೀಯೆ. ಈ ಪಿಗ್‌ಮೇಲಿಯನ್ನನು ಪ್ರಭುತ್ವಕ್ಕೆ ಬರುವುದಕ್ಕೆ ಮುಂಚೆ, ಈ ಪಟ್ಟಣದ ವ್ಯಾಪಾರವು ಹೇಗಿತ್ತೋ ಈಗ ಅದರಲ್ಲಿ ಒಂದು ಶತಾಂಶವೂ ಇರುವುದಿಲ್ಲ. ಸಂಪದಭಿವೃದ್ಧಿಗೆ ಅವಕಾಶಗಳು ಪೂರ್ವದಲ್ಲಿ ಹೇಗಿತ್ತೋ ಈಗ ಅದರಲ್ಲಿ ಸಹಸ್ರಾಂಶದಲ್ಲಿ ಒಂದು ಪಾಲೂ ಇರುವುದಿಲ್ಲ. ಈ ದೇಶದ ಸಂಪಲ್ಲಕ್ಷ್ಮಿಯು ಸತ್ತುಹೋಗಿರುವಳು. ಅವಳ ಶವವನ್ನು ಮಾತ್ರ ನೀನು ನೋಡಿರುತ್ತೀಯೆ. ಅವಳು ಜೀವವಂತ

ಳಾಗಿರುವಾಗ ನೀನು ನೋಡಲಿಲ್ಲ. ಇಥಾಕಾ ಪಟ್ಟಣವನ್ನು ಈಗಿನ ಟೈರ್ ಪಟ್ಟಣದಂತೆ ಮಾಡಿಕೊಳ್ಳುವುದೇನೂ ಪ್ರಯೋಜನವಿಲ್ಲ. ಈ ಪಿಗ್ಮೇಲಿಯನ್ನನು ಪ್ರಭುತ್ವಕ್ಕೆ ಬರುವುದಕ್ಕೆ ಮುಂಚೆ, ಈ ಪಟ್ಟಣದಲ್ಲಿ ಸಂಪಲ್ಲಕ್ಷ್ಮಿಯು ಹೇಗೆ ಜೀವವತಿಯಾಗಿ ತಾಂಡವವಾಡುತ್ತಿದ್ದಳೋ ಹಾಗೆ ಮಾಡಿಕೊಳ್ಳುವುದು ಕಷ್ಟವಲ್ಲ. ನೀನು ವಿಶೇಷ ಪ್ರಾಜ್ಞನಾಗಿ ಕಾಣುತ್ತೀಯೆ. ದೈವಯೋಗದಿಂದ ಇಥಾಕಾ ದ್ವೀಪವು ಪೂರ್ವದ ಟೈರ್ ಪಟ್ಟಣದಂತೆ ಪರಿಣಮಿಸುವ ಹಾಗೆ ಸರ್ವೇಶ್ವರನು ಅನುಗ್ರಹಿಸಲಿ ಎಂದು ನಾನು ಕೋರುತ್ತೇನೆ."

ನಾವಿಕರಲ್ಲಿ ಫನೀಷಿಯನ್ನರು ಇಷ್ಟು ಅದ್ವಿತೀಯರಾಗುವುದಕ್ಕೆ ಕಾರಣವೇನೆಂದು ನಾನು ನಾರ್‌ಬಲ್‌ನನ್ನು ಕೇಳಿದೆನು. ಅದಕ್ಕೆ ಅವನು ಹೇಳಿದ್ದೇನೆಂದರೆ :—

"ಫನೀಷಿಯನ್ನರ ದೇಶದಲ್ಲಿ ವಿಸ್ತಾರವಾದ ಕಾಡು ಇರುವುದು. ಹಡಗುಗಳನ್ನು ಕಟ್ಟುವುದಕ್ಕೆ ಅನುಕೂಲವಾದ ಮರಗಳು ಈ ದೇಶದಲ್ಲಿ ಬೇಕಾದ ಹಾಗೆ ಸಿಕ್ಕುವುವು. ಈ ಮರಗಳೆಲ್ಲಾ ರಿಜರ್ವ್ ಮಾಡಲ್ಪಟ್ಟಿರುವುವು. ಅವುಗಳು ಹಡಗುಗಳನ್ನು ಕಟ್ಟುವುದಕ್ಕೂ ಮನೆ, ಮಠ ಮೊದಲಾದವುಗಳನ್ನು ಕಟ್ಟುವುದಕ್ಕೂ ವಿನಿಯೋಗಿಸಲ್ಪಡುವುವು. ಈ ದೇಶದಲ್ಲಿ ಮರಗೆಲಸದಲ್ಲಿ ನಿಪುಣರಾದವರು ಬೇಕಾದ ಹಾಗೆ ಇರುತ್ತಾರೆ. ಹೀಗಿರುವುದಕ್ಕೆ ಸರ್ಕಾರದವರ ವಿತರಣೆಯೇ ಮುಖ್ಯ ಕಾರಣ. ವ್ಯಾಪಾರಕ್ಕೆ ಹಡಗುಗಳು ಅತ್ಯಾವಶ್ಯಕ. ಇದನ್ನು ತಿಳಿದುಕೊಂಡು, ಸರ್ಕಾರದವರು ಹಡಗುಗಳನ್ನು ಕಟ್ಟುವುದರಲ್ಲಿ ಉದ್ಯುಕ್ತರಾದ ಮರಗೆಲಸದವರಿಗೆ ಉದಾರವಾಗಿ ಸಹಾಯ ಮಾಡುವುದಕ್ಕೆ ಉಪಕ್ರಮಿಸಿದರು. ಈ ಕಸಬಿನಲ್ಲಿ ಪ್ರತಿಫಲವು ಹೆಚ್ಚಾಗಿ ದೊರೆಯುವುದನ್ನು ನೋಡಿ, ಬಹು ಜನಗಳು ಈ ಕಸಬನ್ನು ಅವಲಂಬಿಸುವುದಕ್ಕೆ ಉಪಕ್ರಮಿಸಿದರು. ಈ ಉದ್ಯೋಗವನ್ನು ಅವಲಂಬಿಸಿದವರಿಗೆ ನಿರುಪಾಧಿಕವಾದ ಜೀವನವಾಗುವುದರಿಂದಲೂ, ಈ ಕೆಲಸದಲ್ಲಿ ನಿಪುಣರಾದವರಿಗೆ ತುಂಬಾ ಮರ್ಯಾದೆಯು ಲಭ್ಯವಾಗುವುದರಿಂದಲೂ, ಈ ಉದ್ಯೋಗವನ್ನು ಪೋಷಿಸತಕ್ಕವರು ಅಧಿಕವಾದರು. ಹಡಗನ್ನು ಕಟ್ಟತಕ್ಕ ವಿದ್ಯೆಯೂ, ಹಡಗನ್ನು ನಡೆಸತಕ್ಕ ವಿದ್ಯೆಯೂ ಈ ಎರಡೂ ಅತ್ಯಂತ ಪ್ರಯೋಜನಕರಗಳಾದ ವಿದ್ಯೆಗಳೆಂದು ಭಾವಿಸಲ್ಪಟ್ಟವು. ತುಂಬಾ ಕೌಶಲ್ಯವುಳ್ಳ ಬಡಗಿಯರಿಗೆ ಸರ್ಕಾರದವರು ತುಂಬಾ ಗೌರವವನ್ನು ಮಾಡುವುದಕ್ಕೆ ಉಪಕ್ರಮಿಸಿದರು. ಹಡಗು ನಡೆಸುವುದರಲ್ಲಿ ಬುದ್ಧಿಶಾಲಿಗಳಾದವರಿಗೂ ಅಸಾಧಾರಣವಾದ ಮರ್ಯಾದೆಯು ಮಾಡಲ್ಪಡುತ್ತಾ ಬಂದಿತು. ಈ ಕಸಬನ್ನು ಅವಲಂಬಿಸುವುದರಿಂದ ಕೆಲಸಗಾರರೂ ಮತ್ತು ಅವರ ಕುಟುಂಬದವರೂ ಕೇವಲ ಉಪಪನ್ನರಾಗುತ್ತಾ

ಬಂದರು. ಹಡಗು ನಡೆಸತಕ್ಕವರಿಗೆ ಏನಾದರೂ ತೊಂದರೆಯು ಬಂದರೆ, ಅವರ ಕುಟುಂಬರಕ್ಷಣೆಯನ್ನು ಮಾಡುವುದಕ್ಕೂ ಏರ್ಪಾಡು ಮಾಡಿದರು. ಕೆಲವು ವರ್ಷಗಳು ಪೂರಾ ಮೆಹನತ್ತು ಮಾಡಿದವರಿಗೆ ಪೆನ್ಷನ್ ಕೊಟ್ಟು, ವಾರ್ಧಿಕ್ಯದಲ್ಲಿ ಸುಖವಾಗಿರುವ ಏರ್ಪಾಡೂ ಮಾಡಲ್ಪಟ್ಟಿತ್ತು. ಈ ಏರ್ಪಾಡಿನಿಂದ ಜನಗಳೂ ಕೂಡ ತಮ್ಮ ಮಕ್ಕಳಿಗೆ ನಾವೆಯ ಕಸಬನ್ನು ಕಲಿಸುವುದಕ್ಕೆ ಉಪಕ್ರಮ ಮಾಡಿದರು. ನಡೆಯುವ ಯೋಗ್ಯತೆಯು ಮಕ್ಕಳಿಗೆ ಬಂದ ಕೂಡಲೆ, ದೋಣಿಗಳನ್ನು ನಡೆಸುವುದು, ಹಗ್ಗಗಳ ಸಹಾಯದಿಂದ ಹಡಗುಗಳ ಧ್ವಜಸ್ತಂಭಗಳಿಗೆ ಹತ್ತುವುದು, ಎಂಥಾ ಬಿರುಗಾಳಿ ಬಂದಾಗ್ಯೂ ಲಕ್ಷ್ಯಮಾಡದೆ, ಹಡಗುಗಳನ್ನು ನಡೆಸುವುದು, ಇವುಗಳೆಲ್ಲಾ ಬಾಲ್ಯದಿಂದ ಫಿನೀಷಿಯನ್ ನಾವಿಕರಿಗೆ ಅಭ್ಯಾಸವಾದವು. ನಾವೆಗಳನ್ನು ನಡೆಸುವವರಿಗೆ ಅನೇಕ ಕಷ್ಟಗಳು ಬರುವುದುಂಟು. ಗಾಳಿಯು ಬಲವಾಗಿ ಬೀಸುವುದು, ಬೆಟ್ಟದ ಹಾಗೆ ಅಲೆಗಳು ಏಳುವುದು, ಸೈಕ್ಲೋನ್ ಮೊದಲಾದ ಚಂಡಮಾರುತವು ಬೀಸುವುದು, ಸಿಡಿಲು ಬೀಳುವುದು, ಬಂಡೆಗಳಿಗೆ ಹಡಗುಗಳು ತಗುಲಿ ಮುಳುಗಿಹೋಗುವುದು, ಹಡಗುಗಳಲ್ಲಿದ್ದವರೆಲ್ಲರೂ ಮೃತಪಡುವುದು, ಇವುಗಳೆಲ್ಲಾ ನಾವಿಕರಿಗೆ ಆಗಾಗ್ಗೆ ಸಂಭವಿಸುವುವು. ವಿಪತ್ತುಗಳಿಗೆ ಗುರಿಯಾದವರು ವಿಪತ್ತನ್ನು ಹೇಗೆ ಪರಿಹರಿಸಿಕೊಳ್ಳಬೇಕೋ ಅದು ಗೊತ್ತಾಗುವುದು. ಅದನ್ನು ಜಯಿಸುವ ಶಕ್ತಿಯು ಬರುವುದು. ಆಗರ್ಭ ಶ್ರೀಮಂತರಾದವರು ಕಷ್ಟ ಬಂದಾಗ ಅದನ್ನು ಜಯಿಸುವ ಸಾಮರ್ಥ್ಯವನ್ನು ಹೊಂದುವುದು ಅಪೂರ್ವ. ಕಷ್ಟದಲ್ಲಿ ಹುಟ್ಟಿ ಬೆಳೆದವರು ವಿಪತ್ಪರಂಪರೆಗಳನ್ನು ಸುಲಭವಾಗಿ ತಪ್ಪಿಸಿಕೊಳ್ಳುವರು. ಇವರಿಗೆ ಉಂಟಾದ ಕಷ್ಟಜೀವನವೇ ಇವರ ಅದ್ಭುತ ಶಕ್ತಿಗೆ ಕಾರಣವಾಗಿರುವುದು. ಫಿನೀಷಿಯನ್ ಗೌರ್ನಮೆಂಟಿನವರು ತಮ್ಮ ರಾಜತಂತ್ರದ ಮಹಿಮೆಯಿಂದ ವಿಘ್ನಗಳನ್ನು ಜಯಿಸುವ ಶಕ್ತಿಯನ್ನು ಇವರಲ್ಲಿ ಪ್ರತಿಒಬ್ಬರಿಗೂ ಉಂಟುಮಾಡಿರುವರು. ಇವರು ಲೋಕೈಕವೀರರಾಗುವುದಕ್ಕೆ ಇದೇ ಮುಖ್ಯ ಕಾರಣ.''

ಈ ರೀತಿಯಲ್ಲಿ ನಾರ್ಬಲ್‌ನು ಹೇಳಿದ ಕೂಡಲೆ, ಆಗರ್ಭ ಶ್ರೀಮಂತರು ನಿಜವಾಗಿ ದುರದೃಷ್ಟಶಾಲಿಗಳೆಂದು ನನಗೆ ತೋರಿತು. ಯಾರಿಗೆ ವಿಪತ್ಪರಂಪರೆಗಳು ಗೊತ್ತಿಲ್ಲದ ಹಾಗೆ ಬರುತ್ತವೋ, ಯಾರು ಅವುಗಳನ್ನೆಲ್ಲಾ ನೋಡಿ ಭಯಪಡದೆ, ಭುಜಬಲದಿಂದಲೂ, ಬುದ್ಧಿಬಲದಿಂದಲೂ ಅವುಗಳನ್ನು ಜಯಿಸುವರೋ, ಯಾರು ಕಾರ್ಯತಃ ವಿಘ್ನಗಳಿಗೆ ಭಯಪಡುವುದಿಲ್ಲವೋ, ಅವರು ಸಕಲ ಇಷ್ಟಾರ್ಥಸಿದ್ಧಿಯನ್ನೂ ಹೊಂದುವರೆಂಬದಾಗಿ ನನಗೆ ಗೊತ್ತಾಯಿತು. ಪುಣ್ಯವಂತರಾಗಿ

ಯೂ, ಶ್ರೀಮಂತರಾಗಿಯೂ ಇರತಕ್ಕವರು ದರಿದ್ರರಾಗಿಯೂ, ಅನ್ನಕ್ಕಿಲ್ಲದ ವರಾಗಿಯೂ ಇರತಕ್ಕವರ ಹಾಗೆ ವಿಪತ್ತುಗಳು ಬಂದಾಗ, ಧೈರ್ಯದಿಂದ ವಿಜಯ ವನ್ನು ಹೊಂದುವುದಕ್ಕೆ ಅರ್ಹರಾಗುವುದು ಅಪೂರ್ವವೆಂದು ನನಗೆ ಗೊತ್ತಾ ಯಿತು. "ದಾರಿದ್ರ್ಯಂ ಪರಮೌಷಧಂ" ಎಂಬುವುದು ನಿಜವೆಂದು ನನಗೆ ತೋರಿತು. ಸಾಹಸವೂ, ಪೌರುಷವೂ ಪುರುಷ ಲಕ್ಷಣವೆಂಬದಾಗಿ ಕೂಡ ಗೊತ್ತಾಯಿತು.

ನಾನು ಹೀಗೆ ಯೋಚನೆಯನ್ನು ಮಾಡುತ್ತಿರುವಾಗ, ನಾರ್‌ಬಲ್‌ನು ನನ್ನನ್ನು ಫಿನೀಷಿಯರ್ನರ ನಾವೆಗಳ ಕಾರ್ಖಾನೆಗೂ, ಆಯುಧಶಾಲೆಗಳಿಗೂ, ವರ್ಕ್-ಷಾಪುಗಳಿಗೂ ಕರೆದುಕೊಂಡು ಹೋದನು. ಅಲ್ಲಿ ನೋಡಿದ ಪ್ರತಿ ಒಂದು ವಸ್ತುವಿನ ವಿಷಯವನ್ನೂ ನಾನು ವಿಚಾರಿಸಿದೆನು. ಕೆಲಸಗಾರರು ಮಾಡುತ್ತಿದ್ದ ಕೆಲಸಗಳನ್ನೆಲ್ಲಾ ನೋಡಿದೆನು. ನನ್ನ ನೋಟ್ ಬುಕ್ಕಿಗೆ ಅನೇಕ ವಿಷಯಗಳನ್ನು ದಾಖಲ್ಮಾಡಿದೆನು. ಈ ರೀತಿಯಲ್ಲಿ ಫಿನೀಷಿಯರ್ನರ ಕೆಲಸವನ್ನು ಅಜಮಾಯಿಷಿ ಮಾಡುತ್ತಿದ್ದಾಗ ನಾರ್‌ಬಲ್‌ನು ಹೇಳಿದ್ದೇನೆಂದರೆ:—

"ಸಾವಧಾನವಾಗಿ ಇವುಗಳನ್ನೆಲ್ಲಾ ಪರಿಶೀಲಿಸುವುದಕ್ಕೆ ಅವಕಾಶವಿಲ್ಲ. ಪಿಗ್‌ಮೇಲಿಯನ್ನನ ಗೂಢಚಾರರು ಎಲ್ಲೆಲ್ಲಿಯೂ ತಿರುಗುತ್ತಲಿದ್ದಾರೆ. ನೀನು ಪರದೇಶೀಯನೆಂದು ಯಾರಾಗಾದರೂ ಗುಮಾನಿ ಬಂದರೆ, ತಕ್ಷಣದಲ್ಲಿಯೇ ನೀನು ದಸ್ತಗಿರಿ ಮಾಡಲ್ಪಡುವಿ. ಅನಂತರ ನಿನಗೆ ಏನು ವಿಪತ್ತು ಬರುವುದೋ, ನಿನಗೆ ಆಶ್ರಯವನ್ನು ಕೊಟ್ಟಿರುವೆನೆಂದು ನನಗೆ ಏನು ವಿಪತ್ತು ಬರುವುದೋ, ಇವೆ ರಡೂ ಹೇಳುವುದಕ್ಕಾಗುವುದಿಲ್ಲ. ಆದುದರಿಂದ ನೀನು ಸಾವಕಾಶ ಮಾಡ ಬೇಡ. ಶೀಘ್ರದಲ್ಲಿಯೇ ಪ್ರಯಾಣವನ್ನು ಮಾಡು."

ಈ ರೀತಿ ನಾರ್‌ಬಲ್‌ನು ಹೇಳಲು, ನಾನೂ ಹೊರಡಬೇಕೆಂದು ಸಂಕಲ್ಪ ಮಾಡಿಕೊಂಡೆನು. ಆದರೆ, ಪ್ರತಿಕೂಲವಾದ ವಾಯುವು ಬೀಸುತ್ತಿತ್ತು. ಹಡಗು ಹೊರಡುವುದಕ್ಕೆ ಅನುಕೂಲವಾಗಿರಲಿಲ್ಲ. ನಾರ್‌ಬಲ್‌ನೊಡನೆ ನೇವು ಪಟ್ಟಣ ವನ್ನು ನೋಡುತ್ತಾ, ಅಲ್ಲಿನ ಜನಗಳಿಗೆ ಅನೇಕ ವಿಷಯಗಳಲ್ಲಿ ಪ್ರಶ್ನೆಗಳನ್ನು ಹಾಕುತ್ತಾ, ಅವರುಗಳಿಂದ ಉತ್ತರಗಳನ್ನು ತೆಗೆದುಕೊಳ್ಳುತ್ತಾ ನಾನು ಇದ್ದೆನು. ಆಗ ಪಿಗ್‌ಮೇಲಿಯನ್ನನ ಅಧಿಕಾರಿಗಳಲ್ಲಿ ಒಬ್ಬನು ನಾರ್‌ಬಲ್‌ನ ಬಳಿಗೆ ಬಂದು ಹೇಳಿದ್ದೇನೆಂದರೆ:—

"ಈಜಿಪ್ಟ್ ದೇಶದಿಂದ ನೀನು ಯಾವ ಹಡಗಿನಲ್ಲಿ ಬಂದೆಯೋ, ಆ ಹಡಗಿ ನಲ್ಲಿ ನಿನ್ನ ಜೊತೆಯಲ್ಲಿ ಯಾರೋ ಒಬ್ಬ ಮನುಷ್ಯನು ಬಂದಿರುವುದಾಗಿಯೂ,

ಅವನು ಸೈಪ್ರೆಸ್ ದ್ವೀಪನಿವಾಸಿಯಲ್ಲವೆಂದು ವರ್ತಮಾನವಿರುವುದಾಗಿಯೂ, ಪರದೇಶೀಯನೆಂದು ಗೊತ್ತಾಗಿರುವುದೆಂಬದಾಗಿಯೂ ಪಿಗ್‌ಮೇಲಿಯನ್ನನಿಗೆ ರಿಪೋರ್ಟಾಗಿರುವುದು. ಆ ಮನುಷ್ಯನನ್ನು ದಸ್ತಗಿರಿ ಮಾಡಬೇಕು. ಅವನು ಯಾವ ದೇಶದವನೋ ಅದನ್ನು ಪತ್ತೆ ಮಾಡಬೇಕು. ಹಾಗೆ ಇಲ್ಲದಿದ್ದರೆ ನಿನಗೆ ಮರಣ ದಂಡನೆಯು ಆಗುವುದು.''

ಈ ರೀತಿಯಲ್ಲಿ ನಾರ್‌ಬಲ್‌ನಿಗೆ ಅವನು ಹೇಳಿದಾಗ, ನಾನು ಸ್ವಲ್ಪ ದೂರದಲ್ಲಿ ಒಂದು ಫಿನೀಷಿಯನ್ ಹಡಗನ್ನು ಪರೀಕ್ಷಿಸುತ್ತಿದ್ದೆನು. ಅದು ಬಹಳ ಲಕ್ಷಣವಾದ ಹಡಗಾಗಿತ್ತು. ಆ ಹಡಗನ್ನು ಕಟ್ಟಿದವನೊಡನೆ ನಾನು ಮಾತನಾಡುತ್ತಿದ್ದೆನು. ಈ ಅಧಿಕಾರಿಯು ಆಡಿದ ಮಾತನ್ನು ಕೇಳಿ, ನಾರ್‌ಬಲ್‌ನು ಭಯಭ್ರಾಂತನಾಗಿ, ಈ ಮನುಷ್ಯನು ಸೈಪ್ರೆಸ್ ದ್ವೀಪದ ನಿವಾಸಿ. ಅವನನ್ನು ತಕ್ಷಣದಲ್ಲಿಯೇ ಪತ್ತೆ ಮಾಡುವೆನು. ಎಂದು ಹೇಳಿ, ಅವನನ್ನು ಕಳುಹಿಸಿ ಕೊಟ್ಟನು. ಅನಂತರ ನನ್ನ ಬಳಿಗೆ ಬಂದು ನಡೆದ ವಿದ್ಯಮಾನಗಳನ್ನು ತಿಳಿಸಿ ಹೇಳಿದ್ದೇನೆಂದರೆ:—

'' ನಮಗೇನೋ ವಿಪತ್ತು ಬರುವುದೆಂದು ನನಗೆ ಭಯವಾಗುತ್ತಿತ್ತು. ವಿಪತ್ತು ಬಂದಿತು. ನಾವಿಬ್ಬರೂ ಕೆಟ್ಟೆವು. ನೀನು ಸೈಪ್ರೆಸ್ ದ್ವೀಪ ನಿವಾಸಿಯಲ್ಲವೆಂದು ಪಿಗ್‌ಮೇಲಿಯನ್ನನು ತಿಳಿದುಕೊಂಡಿದ್ದಾನೆ. ನಿನ್ನನ್ನು ದಸ್ತಗಿರಿ ಮಾಡಿ ಕರೆದುಕೊಂಡು ಬರದಿದ್ದರೆ, ನನಗೆ ಮರಣದಂಡನೆಯನ್ನು ಮಾಡುವುದಾಗಿಯೂ ಹೇಳಿ ಕಳುಹಿಸಿ ಇದ್ದಾನೆ. ಈಗ ಮಾಡತಕ್ಕದ್ದೇನು? ದೇವರ ಸಹಾಯವಿಲ್ಲದಿದ್ದರೆ, ನಾವಿಬ್ಬರೂ ನಾಶವಾಗುವುದು ಸಿದ್ಧವು. ಪಿಗ್‌ಮೇಲಿಯನ್ನನ ಬಳಿಗೆ ನಿನ್ನನ್ನು ಕರೆದುಕೊಂಡು ಹೋಗಬೇಕು. ನೀನು ಸೈಪ್ರೆಸ್ ದ್ವೀಪ ನಿವಾಸಿಯೆಂದು ಪ್ರಮಾಣಪೂರ್ವಕವಾಗಿ ಹೇಳಿದರೆ, ಅದನ್ನು ಅವನು ನಂಬುವಂತೆ ನಾನು ಮಾಡುವೆನು. ನಿಮ್ಮ ತಂದೆಯನ್ನು ನಾನು ಬಲ್ಲೆನೆಂದು ಹೇಳುವೆನು. ನಮ್ಮ ಮಾತುಗಳನ್ನು ನಂಬಿ, ಸೈಪ್ರೆಸ್ ದ್ವೀಪಕ್ಕೆ ಹೋಗುವುದಕ್ಕೆ ಪಿಗ್‌ಮೇಲಿಯನ್ನನು ನಿನಗೆ ಆಜ್ಞೆಯನ್ನು ಕೊಡುವನು. ವಿಪತ್ತು ಬಂದ ಕಾಲದಲ್ಲಿ ಪ್ರಾಣವನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಸುಳ್ಳನ್ನು ಹೇಳುವುದು ಪಾತಕವಲ್ಲ.'' ಹೀಗೆ ನಾರ್‌ಬಲ್‌ನು ಹೇಳಲು, ಅದಕ್ಕೆ ನಾನು ಹೇಳಿದ್ದೇನೆಂದರೆ:—

'' ನೀನು ನಿರಪರಾಧಿ. ನಿನಗೆ ಶಿಕ್ಷೆಯಾಗುವುದು ನನಗೆ ಸಮ್ಮತವಲ್ಲ. ನಿನ್ನ ಪ್ರಾಣವನ್ನು ಉಳಿಸಿಕೊಳ್ಳುವುದಕ್ಕೆ ನೀನು ಪ್ರಯತ್ನ ಮಾಡು. ಬಂದ ವಿಪತ್ತನ್ನು ಅನುಭವಿಸುವುದಕ್ಕೆ ನಾನು ಸಿದ್ಧನಾಗಿರುವೆನು. ನಿರ್ಭಯವಾಗಿ ನಾನು ಸಾಯಬಲ್ಲೆನು. ನನ್ನಿಂದ ನಿನಗೆ ಯಾವ ಕಷ್ಟವೂ ಬರದಂತೆ ಮಾಡು

ವೆನು. ಆದರೆ, ಆತ್ಮರಕ್ಷಣೆಗೋಸ್ಕರವೂ ಕೂಡ ನಾನು ಸುಳ್ಳು ಹೇಳತಕ್ಕವನಲ್ಲ. ನಾನು ಗ್ರೀಸ್ ದೇಶಸ್ಥನು. ಸೈಪ್ರಸ್ ದ್ವೀಪ ನಿವಾಸಿಯೆಂದು ನಾನು ಹೇಳಿದರೆ, ದೇವರು ಮೆಚ್ಚುವನೇ ? ಮನುಷ್ಯರು ಮೆಚ್ಚುವರೇ ? ಸುಳ್ಳು ಹೇಳಿ ಎಷ್ಟು ದಿವಸ ಬದುಕಬೇಕು ? ಹುಟ್ಟಿದವರು ಸತ್ತೇ ಸಾಯಬೇಕು. ಇದು ಎಂದಿಗಾದರೂ ತಪ್ಪುವುದೇ ? ನಾನು ಎಂದಿಗೂ ಅನೃತವನ್ನು ನುಡಿಯುವುದಿಲ್ಲ. ಸುಳ್ಳು ಹೇಳುವುದು ಮಹಾಪಾತಕವು. ಆದರಿಂದ ಇಹಪರಗಳೆರಡೂ ನಷ್ಟವಾಗುವುವು. ನಮ್ಮ ಸತ್ಯಕ್ಕೋಸ್ಕರ ನಮ್ಮನ್ನು ದೇವರು ರಕ್ಷಿಸಿದರೆ ರಕ್ಷಿಸಲಿ ; ಹಾಗಿಲ್ಲದಿದ್ದರೆ, ದೇಹವನ್ನು ಬಿಡುವುಕ್ಕೆ ಸಿದ್ಧವಾಗೋಣ. ಅನೇಕ ವಿಪತ್ಪರಂಪರೆಗಳನ್ನು ಅನುಭವಿಸಿ, ನನಗೂ ಬೇಜಾರಾಗಿರುವುದು. ಆದರಿಂದ ವ್ಯಸನವಿಲ್ಲದೆ, ಸಾಯುವದಕ್ಕೆ ಸಿದ್ಧನಾಗಿರುವೆನು. ಅನಿರ್ವಚನೀಯವಾದ ಕೃಪೆಯಿಂದ ನನಲ್ಲಿ ಪುತ್ರನಿರ್ವಿಶೇಷವಾದ ಪ್ರೀತಿಯನ್ನು ಇಟ್ಟಿರುವ ನಿನಗೆ ಈ ವಿಪತ್ತು ಬಂದಿತಲ್ಲಾ ಎಂದು ನಾನು ತುಂಬಾ ವಿಷಾದಿಸುತ್ತೇನೆ.'' ಎಂದು ನಾನು ನಾರ್‌ಬಲ್ನಿಗೆ ಹೇಳುತ್ತಿದ್ದಾಗ, ಒಬ್ಬ ಮನುಷ್ಯನು ಬಹಳ ವೇಗವಾಗಿ ನಮ್ಮ ಬಳಿಗೆ ಬಂದನು. ನಾರ್‌ಬಲ್‌ನೊಡನೆ ಇವನು ಏಕಾಂತವಾಗಿ ಮಾತನಾಡಿ ಹೊರಟು ಹೋದನು. ಇದರಿಂದ ಜಗದೀಶ್ವರನ ಮಹಿಮೆಯು ನನಗೆ ಚನ್ನಾಗಿ ಗೊತ್ತಾಯಿತು. ಧರ್ಮಿಷ್ಠರಿಗೆ ಉಂಟಾಗತಕ್ಕ ಭಯವು ಎಷ್ಟು ಹಠಾತ್ತಾಗಿರುವುದೋ ಅಷ್ಟು ಹಠಾತ್ತಾಗಿಯೇ ಅದರ ನಿವಾರಣೆಯೂ ಆಗುವುದು. ದೇವರಿಗೆ "ಭಯಕೃದ್ಭಯನಾಶನಃ" ಎಂಬದಾಗಿ ಹೇಳುವುದುಂಟು. ಅದಕ್ಕೆ ಈಗ ದೃಷ್ಟಾಂತ ಉಂಟಾಯಿತು.

ಪಿಗ್‌ಮೇಲಿಯನ್ನನಿಗೆ ಟೋಫಾ ಎಂಬ ಒಬ್ಬ ಪಟ್ಟಮಹಿಷಿಯು ಇದ್ದಳು. ಆಸ್ಟಾರ್ಬ್ ಎಂಬ ಒಬ್ಬ ರಖಾವುದಾರಳೂ ಇದಳು. ಈ ರಖಾವ್‌ದಾರಳು ಬಹಳ ಸುಂದರಿಯಾಗಿಯೂ, ಬುದ್ಧಿಶಾಲಿನಿಯಾಗಿಯೂ ಇದ್ದಳು. ಇವಳ ನಡೆನುಡಿಗಳು ಅತ್ಯಂತ ರಮಣೀಯಗಳಾಗಿದ್ದವು. ಇವಳು ಬಹಳ ದುರಾತ್ಮಳು. ತನ್ನ ದೌರಾತ್ಮ್ಯವನ್ನು ಅನೇಕ ವಿಧವಾದ ಇಂದ್ರಜಾಲ ಮಹೇಂದ್ರಜಾಲ ವಿದ್ಯೆಗಳಿಂದ ಆಚ್ಛಾದಿಸಿ, ಹಸನ್ಮುಖಿಯಾಗಿರುವ ಶಕ್ತಿಯು ಇವಳಿಗೆ ಇದ್ದಿತು. ತನ್ನ ಸೌಂದರ್ಯದಿಂದಲೂ, ತನ್ನ ಹಾವಭಾವಗಳಿಂದಲೂ, ತನ್ನ ಮನೋಹರವಾದ ಗಾನದಿಂದಲೂ ಪಿಗ್‌ಮೇಲಿಯನ್ನನನ್ನು ತನಗೆ ದಾಸಾನುದಾಸನಾಗಿರುವಂತೆ ಇವಳು ಮಾಡಿಕೊಂಡಿದ್ದಳು. ಈ ಧೊರೆಗೂ, ಇವನ ಹೆಂಡತಿಗೂ ಇವಳು ಮನಸ್ತಾಪವನ್ನು ತಂದುಹಾಕಿದ್ದಳು. ಈ ಪಿಗ್‌ಮೇಲಿಯನ್ನನು ಮೋಹಪರವಶನಾಗಿ, ಅವಳು ಹೇಳುವ ಮಾತುಗಳನ್ನು ವೇದವಾಕ್ಯನಂತೆ ಗಣಿಸುತ್ತಿದನು.

ಹೀಗಿರುವಾಗ್ಯೆ, ಟ್ಯೆರ್ ಪಟ್ಟಣದಲ್ಲಿ ಮೆಲಾಂಕರ್ ಎಂಬ ಒಬ್ಬ ಯುವಕನು ಇದ್ದನು. ಇವನು ಸೌಂದರ್ಯದಲ್ಲಿ ಮನ್ಮಥನಿಗೆ ಸದೃಶನಾಗಿದ್ದನು. ಈ ಆಸ್ಟಾಬರ್ ಎಂಬುವಳು ಅವನಲ್ಲಿ ಅನುರಕ್ತಳಾದಳು. ಅವನು ಇವಳಲ್ಲಿ ಉದಾಸೀನನಾದನು. ಈ ಆಸ್ಟಾಬರ್ ಎಂಬುವಳು ತನ್ನ ಪ್ರಾರ್ಥನೆಗಳನ್ನು ನಿರಾಕರಿಸಿದನೆಂಬ ಕೋಪದಿಂದ ಅವನಿಗೆ ಶಿಕ್ಷೆಯನ್ನು ಮಾಡಬೇಕೆಂದು ಈಜಿಪ್ಟ್ ದೇಶದಿಂದ ನಾರ್‌ಬಲ್ ನೊಡನೆ ಟ್ಯೆರ್ ಪಟ್ಟಣಕ್ಕೆ ಬಂದ ಪರದೇಶಿಯು ಮೆಲಾಂಕರ್ ಎಂದು ಪಿಗ್‌ಮೇಲಿಯನ್ನನಿಗೆ ಹೇಳಿ, ಅವನಿಗೆ ನಂಬಿಕೆಯನ್ನು ಉಂಟುಮಾಡಿ, ಅವನನ್ನು ಕಾರಾಗೃಹಕ್ಕೆ ಹಾಕಿಸಿ, ತಾನು ಹೀಗೆ ಮಾಡಿರುವುದಾಗಿಯೂ, 'ನಿನ್ನ ಜೊತೆಯಲ್ಲಿ ಬಂದ ಪರದೇಶೀಯನನ್ನು ಸ್ಯೆಪ್ರಸ್ ದ್ವೀಪಕ್ಕೆ ಕಳುಹಿಸಿ ಬಿಡು' ಇದನ್ನು ಏಕಾಂತವಾಗಿ ಇಟ್ಟುಕೋ ಎಂಬದಾಗಿಯೂ ನಾರ್‌ಬಲ್‌ನಿಗೆ ಹೇಳಿಕಳುಹಿಸಿದಳು.

ಈ ವರ್ತಮಾನವನ್ನು ಕೇಳಿದ ಕೂಡಲೆ, ನಾರ್‌ಬಲ್‌ನಿಗೆ ಪರಮಸಂತೋಷವಾಯಿತು. ಅದೇ ರೀತಿಯಲ್ಲಿ ಮಾಡುತ್ತೇನೆಂದು ಹೇಳಿ, ಆಸ್ಟಾಬರಳ ದೂತರನ್ನು ವಾಪಸು ಕಳುಹಿಸಿ, ಈ ವಿದ್ಯಮಾನಗಳನ್ನು ನನಗೆ ತಿಳಿಸಿದನು. ಭಯಂಕರವಾದ ವಿಪತ್ತು ಬಂದದ್ದನ್ನೂ, ಅದು ಹಾಗೆಯೇ ಮಾಯವಾದದ್ದನ್ನೂ ನೋಡಿ, ನನಗೆ ತುಂಬಾ ಆಶ್ಚರ್ಯವಾಯಿತು. ನಿರಪರಾಧಿಗಳನ್ನು ರಕ್ಷಿಸದೆ ಜಗದೀಶ್ವರನು ಎಂದಿಗೂ ಬಿಡುವುದಿಲ್ಲವೆಂಬ ನಂಬಿಕೆಯು ನನಗೆ ಉಂಟಾಯಿತು. ಆದರೆ, ಪಿಗ್‌ಮೇಲಿಯನ್ನನ ಅವಸ್ಥೆಯನ್ನು ಕೇಳಿ, ನನಗೆ ತುಂಬಾ ವಿಷಾದವಾಯಿತು. ಮನುಷ್ಯನಿಗೆ ದುರಾಸೆಯು ಅನೇಕ ಅನರ್ಥಗಳನ್ನು ತರುವುದು. ಈ ಅನರ್ಥಗಳ ಜೊತೆಗೆ ಜನಗಳು ದುರ್ವಿಷಯಗಳಿಗೆ ಮನಸ್ಸನ್ನು ಕೊಟ್ಟರೆ, ಅದರಿಂದ ವಿಪತ್ಪರಂಪರೆಗಳು ಬರುವುವು. ಧರ್ಮಕ್ಕೆ ಧರ್ಮವೇ ಫಲವೆಂದೂ, ಅಧರ್ಮಕ್ಕೆ ಅಧರ್ಮವೇ ಶಿಕ್ಷೆಯೆಂದೂ ಹೇಳುವುದುಂಟು. ಪಿಗ್‌ಮೇಲಿಯನ್ನನು ಪಟ್ಟಮಹಿಷಿಯನ್ನು ಬಿಟ್ಟು ದುರಾತ್ಮಳಾದ ಆಸ್ಟಾಬರಳ ವಂಚನೆಗೆ ಮನಃಪೂರ್ವಕವಾಗಿ ಗುರಿಯಾದನು. ಅದರ ಫಲವನ್ನು ಅನುಭವಿಸದೆ ಇರುವುದಕ್ಕೆ ಆಗುವುದೇ ? ಪತಿವ್ರತೆಯರ ಕಣ್ಣೀರು ಅಪ್ರತಿಹತವಾದ ದಾವಾಗ್ನಿಯಂತೆ ಪಾಪಿಷ್ಠರನ್ನು ಸುಡದೆ ಹೋಗುವುದಿಲ್ಲ. ಪ್ರಭುಗಳಲ್ಲಿ ಪ್ರಸಿದ್ಧನಾದ ಈ ಪಿಗ್‌ಮೇಲಿಯನ್ನನು ರಖಾವ್‌ದಾರಳ ದಾಸನಾಗಿ ಪರಿಣಮಿಸಿದನು. ಇದಕ್ಕಿಂತಲೂ ಹೇಯವಾದ ಸ್ಥಿತಿ ಯಾವುದುಂಟು ? ಇದಕ್ಕಿಂತಲೂ ದೊಡ್ಡ ಶಿಕ್ಷೆಯು ಬೇರೆ ಇರುವುದೇ ?

ಹೀಗೆ ಪರ್ಯಾಲೋಚಿಸುತ್ತಲಿರುವಾಗ, ಟ್ಯೆರ್ ಪಟ್ಟಣದಿಂದ ಸ್ಯೆಪ್ರಸ್ ತೀರದವರೆಗೆ ಅನುಕೂಲವಾದ ಗಾಳಿಯು ಬೀಸುವುದಕ್ಕೆ ಉಪಕ್ರಮವಾಯಿತು. ಅದನ್ನು ನೋಡಿ, ನಾರ್‌ಬಲ್‌ನು ಹೇಳಿದ್ದೇನೆಂದರೆ :—

" ಎಲೈ ಪ್ರಿಯನಾದ ಟೆಲಿಮಾಕಸ್ಸನೇ,—ಜಗದೀಶ್ವರನು ನಿನ್ನ ವಿಷಯ ದಲ್ಲಿ ಪ್ರಸನ್ನನಾಗಿರುವನು. ಈಗ ನಿಶ್ಚಿತವಾಗಿದ್ದ ವಿಪತ್ತಿನಿಂದ ನಿನ್ನನ್ನು ರಕ್ಷಿ ಸಿರುವನು ನೀಚನಾದ ಈ ಪಿಗ್ಮೇಲಿಯನ್ನನ ಸಂಸ್ಥಾನವನ್ನು ಬಿಟ್ಟು, ಪ್ರಯಾಣಮಾಡು. ನೀನು ಎಲ್ಲಿ ಹೋಗುತ್ತೀಯೋ ಅಲ್ಲಿಗೆ ನಿನ್ನ ಜೊತೆಯಲ್ಲಿ ಬರುವುದು ಪರಮಸುಖವಾದದ್ದು ಮತ್ತು ಅತ್ಯಂತ ಗೌರವವಾದದ್ದು. ಆದರೆ, ನಾನು ಬಹಳ ಪಾಪಿಷ್ಟನು. ಈ ದೇಶವನ್ನು ಬಿಡದಂತೆ ನಾನು ಬಂಧಿಸಲ್ಪಟ್ಟಿರು ತ್ತೇನೆ. ಈ ಪಿಗ್ಮೇಲಿಯನ್ನನ ದೌರಾತ್ಮ್ಯದಿಂದ ನನ್ನ ದೇಶಕ್ಕೆ ನರಕಯಾತ ನೆಯು ಉಂಟಾಗಿರುವುದು. ನಾನೂ ಈ ಕಷ್ಟವನ್ನು ಅನುಭವಿಸಬೇಕು. ಈ ದುರಾತ್ಮನ ಪ್ರಭುತ್ವದಲ್ಲಿ ಸತ್ಯದಿಂದಲೂ, ಧರ್ಮದಿಂದಲೂ ಬದುಕುವುದು ಕಷ್ಟ. ನೀನು ಪುಣ್ಯಶಾಲಿ. ದೇವರ ಪ್ರೀತಿಗೆ ಪಾತ್ರನಾಗಿರುವೆ. ಎಂಥಾ ಕಷ್ಟಗಳು ಬಂದಾಗ್ಯೂ, ಸತ್ಯವನ್ನೂ, ಧರ್ಮವನ್ನೂ, ಋಜುಮಾರ್ಗವನ್ನೂ, ಔದಾರ್ಯ ವನ್ನೂ, ದೈವಭಕ್ತಿಯನ್ನೂ ಬಿಡುವುದಕ್ಕಿಂತಲೂ ಪ್ರಾಣವನ್ನು ಬಿಡುವುದಕ್ಕೆ ಸಿದ್ಧನಾಗಿರುತ್ತೀಯೆ. ಈ ಧರ್ಮವೇ ನಿನ್ನನ್ನು ರಕ್ಷಿಸುವುದು. ನೀನು ಕ್ಷೇಮ ವಾಗಿ ಇಥಾಕಾ ದ್ವೀಪವನ್ನು ತಲಪುವಂತೆ ದೇವರು ಅನುಗ್ರಹಿಸಲಿ. ದುರಾತ್ಮ ರಾದ ಪ್ರಭುಗಳ ಪಾಶದಿಂದ ನಿಮ್ಮ ತಾಯಿಗೆ ಬಿಡುಗಡೆಯಾಗಲಿ. ಧರ್ಮಸ್ವ ರೂಪನಾದ ಯೂಲಿಸೆಸ್ಸನನ್ನು ನೋಡಿ, ಆನಂದಬಾಷ್ಪಗಳನ್ನು ಸುರಿಸುವ ಸಂಪ ತ್ತು ನಿನ್ನ ನೇತ್ರಗಳಿಗೆ ಉಂಟಾಗಲಿ, ವಿವೇಕನಿಧಿಯಾದ ನಿನ್ನ ತಂದೆಯನ್ನು ಆಲಿಂಗನ ಮಾಡಿಕೊಳ್ಳುವ ಸುಖವು ನಿನ್ನ ಬಾಹುಗಳಿಗೆ ಉಂಟಾಗಲಿ. ' ಪುತ್ರಾ ದಿಚ್ಛೇತ್ ಪರಾಭವಂ ' ಎಂಬ ಗಾಥೆಗನುಸಾರವಾಗಿ ತಂದೆಗಿಂತಲೂ ನೀನು ಧರ್ಮಿಷ್ಠನೆಂದು ಸಂತೋಷಿಸುವ ಸುಖವು ನಿನ್ನ ತಂದೆಯಾದ ಯೂಲಿಸೆಸ್ಸಿಗೆ ಉಂಟಾಗಲಿ. ನಿನಗೆ ಎಲ್ಲಾ ದುಃಖಗಳೂ ಪರಿಹಾರವಾಗಿ, ನಿನ್ನ ಗುಣಾತಿಶಯಗ ಳಿಗೆ ಅನುರೂಪವಾದ ಸಂಪತ್ತು ಬಂದಾಗ, ದುರದೃಷ್ಟವಂತನಾದ ನನ್ನನ್ನು ಸ್ಮರಿ ಸಿಕೊ. ನಿನ್ನಂಥಾ ಸತ್ಪುರುಷನ ಸ್ಮರಣೆಯ ಮಾತ್ರದಿಂದಲೇ ನಾನು ಕೃತಾ ರ್ಥನಾಗುವೆನು."

ಈ ರೀತಿಯಲ್ಲಿ ನಾರ್ಬಲ್‌ನು ಹೇಳಿ, ನನ್ನನ್ನು ಆಲಿಂಗಿಸಿಕೊಂಡನು. ಇವನ ಮಾತುಗಳನ್ನು ಕೇಳಿದ ಕೂಡಲೆ, ನನ್ನ ಕಣ್ಣುಗಳಿಂದ ಧಾರಾಳವಾಗಿ ಕಣ್ಣೀರು ಸುರಿಯುವುದಕ್ಕೆ ಉಪಕ್ರಮವಾಯಿತು. ಹೃದಯವು ಕರಗಿಹೋ ಯಿತು. ಸಮಸ್ತ ಅವಯವಗಳೂ ನಡುಗುವುದಕ್ಕೆ ಉಪಕ್ರಮವಾದುವು. ಪ್ರತ್ಯು ತ್ತರವನ್ನು ಕೊಡುವುದಕ್ಕೆ ಶಕ್ತಿಯು ಇಲ್ಲದೆ ಹೋಯಿತು. ಒಂದು ಶಬ್ದವನ್ನು ಉಚ್ಚರಿಸುವುದೂ ಕೂಡ ಅಸಾಧ್ಯವಾಯಿತು. ಮೌನದಲ್ಲಿ ಒಬ್ಬರನ್ನು ಒಬ್ಬರು

ಆಲಿಂಗನೆಯನ್ನು ಮಾಡಿಕೊಂಡೆವು. ಅನಂತರ ಆತನು ನನ್ನನ್ನು ಕರೆದುಕೊಂಡು ಬಂದು, ಹಡಗನ್ನು ಹತ್ತಿಸಿದನು. ಹಡಗಿನ ಲಂಗರು ಎತ್ತಲ್ಪಟ್ಟಿತು. ಆತನು ಹಡಗನ್ನು ಇಳಿದು, ವಿಯೋಗದುಃಖದಿಂದ ಮೌನವನ್ನು ಅವಲಂಬಿಸಿ ನಿಂತಿದ್ದನು. ನಾನೂ ಅದೇ ರೀತಿಯಲ್ಲಿ ಶಿಲಾವಸ್ಥೆಯನ್ನು ಅವಲಂಬಿಸಿದ್ದೆನು. ಹಡಗು ಸೈಪ್ರೆಸ್ ದ್ವೀಪದ ಕಡೆಗೆ ಹೊರಟಿತು. ಒಬ್ಬರ ಆಕಾರವು ಒಬ್ಬರಿಗೆ ಕಾಣುತ್ತಲಿರುವವರೆಗೂ ನಾವು ಒಬ್ಬರನ್ನು ಒಬ್ಬರು ನೋಡುತ್ತಾ ಇದ್ದೆವು. ಕ್ರಮೇಣ ನಮ್ಮ ದೇಹದ ಕಣ್ಣುಗಳಿಗೆ ನಾವು ಅಗೋಚರವಾದೆವು. ಆದರೆ, ನಮ್ಮ ಮನಸ್ಸಿನ ಕಣ್ಣುಗಳಿಗೆ ಮಾತ್ರ ನಾವು ಅದೃಶ್ಯರಾಗಲಿಲ್ಲ. ದೇಹವನ್ನು ಧರಿಸಿರುವವರೆಗೂ ನಾವು ಒಬ್ಬರನ್ನು ಒಬ್ಬರು ಮರೆಯುವುದು ಅಸಾಧ್ಯವೆಂದು ನನಗೆ ತೋರಿತು.

---

## ನಾಲ್ಕನೆಯ ಅಧ್ಯಾಯ.

ಈ ರೀತಿ ಟೆಲಿಮಾಕಸ್ಸನು ತನ್ನ ವೃತ್ತಾಂತವನ್ನು ಕೆಲಿಪ್ಸೋ ಎಂಬ ಕಿನ್ನರಿಗೆ ಹೇಳಿದನು. ಅವಳು ಮೋಹಪರವಶಳಾಗಿ, ಇವನ ವೃತ್ತಾಂತಗಳನ್ನು ಕೇಳಿದಳು. ಈ ವೃತ್ತಾಂತದ ಮನೋಹರತೆಯು ಅವಳನ್ನು ನಿಶ್ಚಲಳನ್ನಾಗಿ ಮಾಡಿತು. ಸಂತೋಷಪರವಶಳಾಗಿ ಅವಳು ಇವನ ಸಾಹಸದ ವೃತ್ತಾಂತಗಳನ್ನೆಲ್ಲಾ ಕೇಳಿದಳು ಹಗಲೆಲ್ಲಾ ನಿಮಿಷದಂತೆ ಕಳೆಯಿತು. ರಾತ್ರಿ ಭೋಜನದ ವೇಳೆಯೂ ಆಯಿತು. ವಿಶ್ರಾಂತಿಗೆ ಅವಕಾಶವನ್ನು ಕೊಡಬೇಕೆಂದು ಅವಳಿಗೆ ತೋರಿತು. ಅವಳು ಟೆಲಿಮಾಕಸ್ಸನಿಗೆ ಹೇಳಿದ್ದೇನೆಂದರೆ :—

" ನೀನು ಬಹಳ ಕಷ್ಟವನ್ನು ಪಟ್ಟಿರುವಿ. ವಿಶ್ರಾಂತಿ ಸುಖವು ನಿನಗೆ ಬೇಕಾಗಿರುವುದು. ಈಗ ನೀನು ನಿರ್ಭಯವಾಗಿ ಇರಬಹುದು. ಇಲ್ಲಿ ನಿನ್ನ ಇಷ್ಟಕ್ಕೆ ವಿರೋಧವಾಗಿ ನಡೆಯತಕ್ಕವರು ಯಾರೂ ಇರುವುದಿಲ್ಲ. ದೇವತೆಗಳ ಭೋಜನಕ್ಕೆ ಯೋಗ್ಯವಾದ ಪದಾರ್ಥಗಳೆಲ್ಲಾ ಸಿದ್ಧವಾಗಿರುವುವು. ಸ್ನಾನವನ್ನು ಮಾಡು. ನಿತ್ಯಕರ್ಮಗಳನ್ನು ಪೂರೈಸಿಕೊ. ದೇವರನ್ನು ಆರಾಧಿಸು. ಇಷ್ಟವಾದ ಪದಾರ್ಥಗಳನ್ನು ಭುಜಿಸು. ಅನಂತರ ಮನೋಹರವಾದ ಗಾನಗಳಿಗೆ ಏರ್ಪಾಡು ಮಾಡಲ್ಪಟ್ಟಿರುವುದು. ಸ್ವಲ್ಪ ಹೊತ್ತು ಅದನ್ನು ಕೇಳಿ, ಅನಂತರ ವಿಶ್ರಾಂತಿಯನ್ನು ಹೊಂದಬಹುದು. ಅರುಣೋದಯವಾದ ಕೂಡಲೆ, ಸಕಲ ಸೃಷ್ಟಿಸ್ಥಿತಿಲಯಗಳಿಗೂ ಕಾರಣಭೂತನಾದ ಜಗದೀಶ್ವರನ ಮಹಿಮೆಯಿಂದ ಸೂರ್ಯನು ಉದಯಿಸುವನು. ನಕ್ಷತ್ರಗಳು ಅದೃಶ್ಯವಾಗುವುವು. ಅಂಧಕಾ

ರವು ಅದೃಶ್ಯವಾಗುವುದು. ಆಗ ನಿನ್ನ ಚರಿತ್ರೆಯನ್ನು ಕೇಳುವುದಕ್ಕೆ ನಾವೆಲ್ಲರೂ ಸಿದ್ಧರಾಗಿರುತ್ತೇವೆ. ಅನೇಕಶಾಲೆಗಳಲ್ಲಿ ನಿನ್ನ ತಂದೆಯು ಅದ್ವಿತೀಯನೆಂದು ತಿಳಿದುಕೊಂಡಿದ್ದೆನು. ನೀನು ಅವನಿಗಿಂತ ಲೇಶವೂ ಕಡಮೆಯುಳ್ಳವನೆಂದು ಗೊತ್ತಾಗುತ್ತದೆ. ಪರಾಕ್ರಮದಲ್ಲಿ ನಿನ್ನ ತಂದೆಯನ್ನು ಮೀರಿಸಿರುವೆ. ಹೆಕ್ಟರನನ್ನು ಜಯಿಸಿದ ಎಕಿಲೀಸನು ನಿನಗೆ ಸಮನಲ್ಲ. ನರಕದಿಂದ ಹಿಂತಿರುಗಿದ ಥೆಸಿಯಸ್ಸನಿಗಿಂತಲೂ ನೀನು ಅಧಿಕನು. ಜಗತ್ತಿಗೆ ಕ್ಲೇಶವನ್ನುಂಟುಮಾಡುತ್ತಿದ್ದ ಅನೇಕ ರಾಕ್ಷಸರಿಂದ ಭೂಮಿಯನ್ನು ರಕ್ಷಿಸಿದ ಆಲ್ಸೈಡೀಸನೂ ಕೂಡ ಸಾಹಸದಲ್ಲಿಯೂ, ಸದ್ಗುಣಗಳಲ್ಲಿಯೂ ನಿನಗೆ ಸಮಾನನಲ್ಲವೆಂದು ನನಗೆ ತೋರುತ್ತದೆ. ಈ ರಾತ್ರಿಯೆಲ್ಲಾ ನಿನಗೆ ಒಂದು ನಿಮಿಷವಾಗಿ ಪರಿಣಮಿಸುವಂತೆ ಜಗದೀಶ್ವರನು ಅನುಗ್ರಹಿಸಲಿ. ನಿನ್ನ ಮನೋಹರವಾದ ಮಾತುಗಳನ್ನು ಕೇಳುವುದಕ್ಕೆ ನನ್ನ ಕಿವಿಗಳು ಅತ್ಯಂತ ಆಸಕ್ತಿಯುಳ್ಳವುಗಳಾಗಿರುವುವು. ನಿನ್ನ ರೂಪಲಾವಣ್ಯಗಳನ್ನು ನೋಡಿ, ಸಂತೋಷಪಡುವುದಕ್ಕೆ ನನ್ನ ಕಣ್ಣುಗಳೂ ಕೂಡ ವಿಶೇಷ ಆಸಕ್ತಿಯುಳ್ಳವುಗಳಾಗಿರುವುವು. ನೀನು ಹೇಳಿದ ಮನೋಹರವಾದ ಕಥೆಗಳನ್ನು ಎಷ್ಟು ಕೇಳಿದರೂ, ಪುನಃ ಪುನಃ ಕೇಳಬೇಕೆಂಬ ಆಸೆಯು ನನಗೆ ಉಂಟಾಗುತ್ತಲಿದೆ. ಆದರೆ, ಮುಂದಿನ ವೃತ್ತಾಂತವನ್ನು ತಿಳಿಯಬೇಕೆಂಬ ಅಭಿಲಾಷೆಯು ಇನ್ನೂ ಹೆಚ್ಚಾಗಿರುವುದು. ಎಲೈ ಮನೋಹರನಾದ ಟೆಲಿಮಾಕಸ್ಸನೇ, ದೇವರ ಪ್ರೀತಿಯು ನಿನ್ನಲ್ಲಿ ಅಪರಿಮಿತವಾಗಿರುವುದು. ಮೆಂಟರನು ನಿನಗೆ ಮೂರ್ತಿಮತ್ತಾದ ಜಗದೀಶ್ವರನ ಅನುಗ್ರಹವಾಗಿ ಪರಿಣಮಿಸಿರುವನು. ಅವನೊಡನೆ ಭೋಜನ ಸುಖವನ್ನು ಅನುಭವಿಸಿ, ವಿಶ್ರಾಂತಿಯನ್ನು ಹೊಂದು. ನಿದ್ದೆಯ ಅಧಿದೇವತೆಯು ನಿನ್ನಲ್ಲಿ ಪರಿಪೂರ್ಣವಾದ ಅನುಗ್ರಹವನ್ನು ಮಾಡಲಿ. ನಾನಾವಿಧವಾದ ಕ್ಲೇಶಗಳಿಂದಲೂ, ಸಾಹಸಕೃತ್ಯಗಳಿಂದಲೂ ನಿನಗೆ ಉಂಟಾದ ಬೇಜಾರು ಪರಿಹರಿಸಲ್ಪಡಲಿ. ಮನೋಹರವಾದ ಸ್ವಪ್ನಗಳು ನಿನಗೆ ಸ್ವರ್ಗಸುಖವನ್ನು ಕೊಡಲಿ. ಸದಾ ಸಂತೋಷಚಿತ್ತರಾದವರಿಗೆ ಸುಖಪರಂಪರೆಗಳು ಅಟ್ಲಾಂಟಿಕ್ ಸಾಗರದ ಘಾಡಿ ಕೊಲ್ಲಿಯಲ್ಲಿ ಪರ್ವತಾಕಾರವಾಗಿ ಅಲೆಗಳು ಒಂದಾಗುತ್ತಲೂ ಒಂದು ಬರುವಂತೆ ಬರುವುವು. ಇಂಥಾ ಸುಖಪರಂಪರೆಗಳು ನಿನಗೆ ಲಭ್ಯವಾಗಲಿ. ಮಲಿನಚಿತ್ತರಾದವರಿಗೆ ಸ್ವಪ್ನದಲ್ಲಿಯೂ ಸುಖವು ದುರ್ಲಭವಾಗುವುದು. ವಿಪತ್ಕಾಲದಲ್ಲಿ ಧೈರ್ಯವು ನಿನಗೆ ನಿಸರ್ಗವಾಗಿ ಬರುತ್ತಲಿರುವುದು. ಆದುದರಿಂದ ನಿನಗೆ ಕ್ಲೇಶದ ಸಂಪರ್ಕವೇ ಇರುವುದಿಲ್ಲ. ಇದುವರೆಗೂ ನಿನಗೆ ಬಂದ ಕ್ಲೇಶಗಳೆಲ್ಲಾ ಪ್ರಳಯ ಕಾಲದ ಸೂರ್ಯನ ಎದುರಿಗೆ ನೀರಿನ ಗಡ್ಡೆಗಳು ಕರಗಿಹೋಗುವಂತೆ ಕರಗಿಹೋಗಿವೆ. ನೀನೇ ಕೃತಾರ್ಥನು. ದೇವರು ನಿನಗೆ ಮಂಗಳವನ್ನು ಮಾಡಲಿ.''

ಈ ರೀತಿಯಲ್ಲಿ ಹೇಳಿ, ಕೆಲಿಪ್ಸೊ ಎಂಬ ಕಿನ್ನರಿಯು ಟೆಲಿಮಾಕಸ್ಸನನ್ನೂ, ಮೆಂಟರನನ್ನೂ ಅವರ ಬಿಡಾರಗಳಿಗೆ ಕಳುಹಿಸಿ ಕೊಟ್ಟಳು. ಈ ಬಿಡಾರವು ಒಂದು ಸ್ಫಟಿಕಶಿಲೆಯಲ್ಲಿ ರಚಿಸಲ್ಪಟ್ಟಿದ್ದ ಅರಮನೆಯಾಗಿತ್ತು. ದೇವೇಂದ್ರನೇ ಮೊದಲಾದವರಿಗೆ ಕೂಡ ಇಂಥಾ ಅರಮನೆಯು ದುರ್ಲಭವೆಂದು ತೋರುತ್ತಿತ್ತು. ಅದರ ಒಂದು ಭಾಗದಲ್ಲಿ ಜಲಯಂತ್ರಗಳಿಂದ ಆಕಾಶಕ್ಕೆ ನೀರು ಹಾರುತ್ತಿತ್ತು. ಇನ್ನೊಂದು ಭಾಗದಲ್ಲಿ ಸರ್ವಲಕ್ಷಣ ಸಂಪನ್ನೆಯರಾದ ಸ್ತ್ರೀರತ್ನಗಳು ಇವರ ಶೈತ್ಯೋಪಚಾರಕ್ಕೆ ಬೇಕಾದ ಅನುಕೂಲ್ಯಗಳನ್ನು ಮಾಡುತ್ತಿದ್ದರು. ಮತ್ತೊಂದು ಭಾಗದಲ್ಲಿ ಸ್ನಾನಕ್ಕೆ ಬೇಕಾದ ಏರ್ಪಾಡು ಮಾಡಲ್ಪಟ್ಟಿತ್ತು. ಇನ್ನೊಂದು ಭಾಗದಲ್ಲಿ ದೇವತಾರಾಧನೆಗಳಿಗೆ ಬೇಕಾದ ಸಾಮಗ್ರಿಗಳೂ ಒದಗಿಸಲ್ಪಟ್ಟಿದ್ದವು. ಬೇರೊಂದು ಕಡೆ ಗಾಯಕರೂ ವೀಣೆ, ಪಿಟೀಲು, ಮೃದಂಗವೇ ಮೊದಲಾದವುಗಳೊಡನೆ ಇವರ ನೇತ್ರಗಳಿಗೂ ಶ್ರೋತ್ರಗಳಿಗೂ ಪರಮಾನಂದವನ್ನುಂಟುಮಾಡುವುದಕ್ಕೆ ಸಿದ್ಧರಾಗಿದ್ದರು. ಮತ್ತೊಂದು ಕಡೆಯಲ್ಲಿ ಹಂಸತೂಲಿಕಾತಲ್ಪಗಳಿಂದ ಶೋಭಿತವಾದ ಮಂಚಗಳೂ, ಪೀತಾಂಬರಗಳೂ, ಪರದೆಗಳೂ ಅಣಿಮಾಡಲ್ಪಟ್ಟಿದ್ದವು. ನಾನಾ ವಿಧವಾದ ಉಪಚಾರ ರೂಪವಾದ ಸಂಕಲೆಗಳಿಂದ ಟೆಲಿಮಾಕಸ್ಸನನ್ನು ಬಂಧಿಸಿ, ಅವನನ್ನು ಸ್ವಾಧೀನ ಪಡಿಸಿಕೊಳ್ಳುವುದಕ್ಕೆ ತೋರಿದ ಉಪಾಯಗಳನ್ನೆಲ್ಲಾ ಆ ಕಿನ್ನರಿಯು ಮಾಡಿದ್ದಳು. ಟೆಲಿಮಾಕಸ್ಸನಿಗೆ ಹಾಕಲ್ಪಟ್ಟಿದ್ದ ಮಂಚವು ಬಹಳ ಅಕ್ಕರೆಯುಳ್ಳದ್ದಾಗಿತ್ತು. ಮೆಂಟರಿಗೆ ಹಾಕಲ್ಪಟ್ಟಿದ್ದ ಮಂಚವು ಕರಡಿಯ ಆಕಾರವುಳ್ಳದ್ದಾಗಿತ್ತು. ಭೋಜನವಾದ ಮೇಲೆ, ಮನೋಹರವಾದ ಸಂಗೀತಗಳನ್ನು ಕೇಳಿ, ಟೆಲಿಮಾಕಸ್ಸನೂ, ಮೆಂಟರೂ ಇಬ್ಬರೂ ವಿಶ್ರಮಿಸಿಕೊಳ್ಳುವುದಕ್ಕೆ ಮಂಚವನ್ನು ಹತ್ತಿದರು. ಆಗ ಪರಿಜನರೆಲ್ಲರೂ ಹೊರಟು ಹೋದರು. ಇವರಿಬ್ಬರೇ ಇದ್ದರು. ಟೆಲಿಮಾಕಸ್ಸನು ನಿದ್ರೆಗೆ ಅಧೀನನಾಗುವುದಕ್ಕೆ ಮುಂಚೆ ಮೆಂಟರು ಅವನಿಗೆ ಹೇಳಿದ್ದೇನೆಂದರೆ :—

"ಎಲೈ ಟೆಲಿಮಾಕಸ್ಸನೇ, ನೀನು ಈಗ ಪರವಶನಾಗಿರುವೆ. ಈ ಕಿನ್ನರಿಗೆ ನಿನ್ನ ವೃತ್ತಾಂತವನ್ನು ತಿಳಿಸುವುದರಲ್ಲಿ, ನೀನು ಬಹಳ ದುಡುಕನ್ನು ಮಾಡಿರುವೆ. ನಿನಗೆ ಬಂದ ಅಪಾಯಗಳನ್ನು ಧೈರ್ಯದಿಂದಲೂ, ಸ್ಥೈರ್ಯದಿಂದಲೂ ಸಾಹಸದಿಂದಲೂ ನೀನು ಹೇಗೆ ಜಯಿಸಿದೆಯೋ ಅದನ್ನು ಕೇಳಿ, ಈ ಕಿನ್ನರಿಯು ನಿನ್ನಲ್ಲಿ ಮೋಹವನ್ನು ಇಡುವಂತೆ ಮಾಡಿಕೊಂಡಿರುವೆ. ಅವಳ ಮೋಹವು ಪರಾಕಾಷ್ಠದೆಸೆಗೆ ಬಂದಿರುವುದು. ನಿನ್ನ ಬಂಧವೂ ಕೂಡ ಪರಾಕಾಷ್ಠದೆಸೆಗೆ ಬಂದಿರುವುದು. ನೀನು ಅವಳ ಭಾಗಕ್ಕೆ ಸ್ವರ್ಗಪ್ರಾಯನಾಗಿ ಪರಿಣಮಿಸಿರುವೆ. ನಿನ್ನನ್ನು ಅವಳು ಬಿಡುವುದಿಲ್ಲ. ಯಾವ ಉದ್ದೇಶದಿಂದ ನೀನು ದೇಶಯಾತ್ರೆಗೆ ಉಪಕ್ರಮಿಸಿದೆಯೋ

ಅದು ಮುಂದೆ ನಡೆಯುವಂತೆ ತೋರುವುದಿಲ್ಲ. ನಿನ್ನ ವಾಗ್ವೈಖರಿಯಿಂದ ಅವಳನ್ನು ನೀನು ಮರಳು ಮಾಡಿರುವಿ. ಅವಳ ಇಂದ್ರಜಾಲ ಮಹೇಂದ್ರಜಾಲ ವಿದ್ಯೆಗಳೆಂಬ ಪಾಶದಿಂದ ನೀನು ತಪ್ಪಿಸಿಕೊಳ್ಳುವುದು ಅಸಾಧ್ಯ. ನಿಮ್ಮ ತಂದೆಯ ವೃತ್ತಾಂತವನ್ನು ನಿನಗೆ ಹೇಳುವುದಾಗಿ ಅವಳು ಸೂಚಿಸಿರುವಳು. ನಿನ್ನನ್ನು ಸ್ವಾಧೀನ ಪಡಿಸಿಕೊಳ್ಳುವುದಕ್ಕೆ ಇವಳಿಗೆ ಅದೇ ಸಮ್ಮೋಹನಾಸ್ತ್ರವಾಗುವುದು. ಸ್ವೈರಿಣಿಯರ ಮಾತುಗಳಲ್ಲಿ ಅಮೃತವು ಧಾರಾಳವಾಗಿ ಸುರಿಯುವುದು. ಸ್ತುತಿಪಾಠಕರು ಮನೋಹರವಾಗಿ ಸ್ತೋತ್ರಮಾಡುವುದನ್ನು ಇವರಿಂದ ಕಲಿಯಬೇಕು. ಇಂಥಾ ಅವಸ್ಥೆಗೆ ನೀನು ಬಂದದ್ದನ್ನು ನೋಡಿದರೆ, ನನಗೆ ತುಂಬಾ ವಿಷಾದವಾಗುತ್ತದೆ. ಸ್ತ್ರೀಯರಿಂದ ಹೊಗಳಿಸಿಕೊಳ್ಳಬೇಕೆಂಬ ಈ ಆಸೆಯು ನಿನಗೆ ಎಲ್ಲಿಂದ ಬಂತು? ನಿನ್ನ ತಾಯಿಯ ಎದುರಿಗೆ ನೀನು ಮಾಡಿದ ಪ್ರತಿಜ್ಞೆಯು ಸ್ಮರಣೆಯಲ್ಲಿರುವುದೇ? ಆಕೆಗೆ ಬಂದಿರತಕ್ಕ ವಿಪತ್ತನ್ನು ತಪ್ಪಿಸುವುದು ನಿನಗೆ ಮುಖ್ಯ ಕರ್ತವ್ಯವಲ್ಲವೇ? ಈ ಹೆಂಗಸಿನ ಪಾಶಕ್ಕೆ ಬಿದ್ದು, ನಿನ್ನ ಕರ್ತವ್ಯವನ್ನು ಮರೆಯುವ ಸ್ಥಿತಿಗೆ ನೀನು ಬರಬಹುದೆ? ಹಾಗೆ ಬಂದರೆ, ಯೂಲಿಸೆಸ್ಸನ ಮಗನೆನ್ನಿಸಿಕೊಳ್ಳುವುದಕ್ಕೆ ನೀನು ಅರ್ಹನಾಗಿರುವೆಯಾ? ಈ ಹೆಂಗಸಿನ ಮರುಳಿಗೆ ನೀನು ವಶನಾದರೆ, ತಿರ್ಯಗ್ಜಂತುಗಳಿಗೂ, ನಿನಗೂ ವೈಲಕ್ಷಣ್ಯವೇನು ಉಂಟಾಯಿತು? ನೀನು ವಿಷಯಾಸಕ್ತಿ ಎಂಬ ಪರ್ವತದ ಶಿಖರಕ್ಕೆ ಹತ್ತಿರುವಿ. ಅಲ್ಲಿಂದ ಅಗಾಧವಾದ ಪಾತಾಳಕ್ಕೆ ನಿನಗೆ ಪತನವು ಸಿದ್ಧವಾಗಿರುವುದು. ಈ ಕಿನ್ನರಿಯು ಸಕಲ ವಿಷಯಗಳಲ್ಲಿಯೂ ನಿನ್ನ ತಂದೆಗಿಂತ ನೀನು ಹೆಚ್ಚೆಂದು ನಿನ್ನನ್ನು ಸ್ತುತಿಸಿದಳು. ಅದನ್ನು ಕೇಳಿ ನಿನಗೆ ಚತುರ್ಭುಜವಾಯಿತು. ಇವಳ ಪಾಶಕ್ಕೆ ನಿನ್ನ ತಂದೆಯು ಬೀಳಲಿಲ್ಲ. ನೀನು ಬೀಳುವ ಸ್ಥಿತಿಯಲ್ಲಿರುವಿ. ಜಿತೇಂದ್ರಿಯನಾದ ನಿನ್ನ ತಂದೆಯೆಲ್ಲಿ? ಮೋಹಪರವಶನಾದ ನೀನೆಲ್ಲಿ? ಇಂಥಾ ಮೋಹಪರವಶತೆಯನ್ನು ನೀನು ಹೊಂದಿದ್ದಕ್ಕಾಗಿ ನಾನು ತುಂಬಾ ವಿಷಾದಿಸುತ್ತೇನೆ.''

ಈ ರೀತಿಯಲ್ಲ ಹೇಳಿದ ಮೆಂಟರನ ಮಾತುಗಳು ಟೆಲಿಮಾಕಸ್ಸನಿಗೆ ವಜ್ರಾಯುಧದ ಘಟಿನಂತೆ ಪರಿಣಮಿಸಿದವು. "ನನ್ನ ದುರದೃಷ್ಟದ ವರ್ತಮಾನಗಳನ್ನು ಕೇಳಬೇಕೆಂದು ಈಕೆಯು ಪ್ರಾರ್ಥಿಸಿದ್ದರಿಂದ, "ನಾನು ನನ್ನ ವೃತ್ತಾಂತವನ್ನು ಹೇಳಿದೆನು. ಇದರಲ್ಲಿ ತಪ್ಪೇನು?'' ಎಂದು ಟೆಲಿಮಾಕಸ್ಸನು ಮೆಂಟರನನ್ನು ಕೇಳಿದನು. ಅದಕ್ಕೆ ಮೆಂಟರನು ಹೇಳಿದ್ದೇನೆಂದರೆ:—

"ನಿನ್ನ ವೃತ್ತಾಂತವನ್ನು ಹೇಳುವುದರಲ್ಲಿ ಬಾಧಕವೇನೂ ಇರಲಿಲ್ಲ. ನಿನ್ನಲ್ಲಿ ಅನುತಾಪ ಉಂಟಾಗುವಂತೆ ನಿನ್ನ ವಿದ್ಯಮಾನಗಳನ್ನು ನೀನು ಹೇಳಬೇಕಾಗಿತ್ತು.

ಸಿಸಿಲಿ ದೇಶದಲ್ಲಿ ನೀನು ಹೇಗೆ ಖೈದಿನಲ್ಲಿ ಇಡಲ್ಪಟ್ಟಿದ್ದೆಯೋ, ಈಜಿಪ್ಟ್ ದೇಶದಲ್ಲಿ ಹೇಗೆ ವಿಕ್ರಯಿಸಲ್ಪಟ್ಟೆಯೋ, ಬಂದ ಕಷ್ಟಗಳನ್ನು ಹೇಗೆ ಸಹಿಸಿದೆಯೋ, ಅವುಗಳನ್ನೆಲ್ಲಾ ಅವಳಿಗೆ ನಿನ್ನಲ್ಲಿ ಕನಿಕರ ಉಂಟಾಗುವಂತೆ ಹೇಳಿದ್ದರೆ ಸಾಕಾಗಿತ್ತು. ನೀನು ಜಗದೇಕವೀರನೆಂಬದಾಗಿಯೂ, ನಿಮ್ಮ ತಂದೆಗಿಂತಲೂ ನೀನು ದೊಡ್ಡವನೆಂಬದಾಗಿಯೂ, ನಿನ್ನ ದೇಹಬಲವು ಹರ್ಕ್ಯುಲೀಸನ ಬಲಕ್ಕೆ ಸಮಾನವಾದದ್ದೆಂದು ತೋರುವಂತೆಯೂ, ನಿನ್ನ ಬುದ್ಧಿಬಲವು ಜೂಪಿಟರನ ಬಲಕ್ಕೆ ಸಮಾನವಾದದ್ದೆಂದು ತೋರುವಂತೆಯೂ, ನಿನ್ನ ಪರಾಕ್ರಮವು ಮಾರ್ಸ್‌ನ ಪರಾಕ್ರಮಕ್ಕೆ ಸಮಾನವಾದದ್ದೆಂಬದಾಗಿಯೂ ತೋರುವಂತೆ ನೀನು ವಿಜೃಂಭಿಸಿ, ನಿನ್ನಲ್ಲಿ ಅವಳು ಅನುರಕ್ತಳಾಗುವಂತೆ ಮಾಡಿಕೊಂಡದ್ದು ತಪ್ಪು.'' ಈ ಮಾತುಗಳನ್ನು ಕೇಳಿ ಟೆಲಿಮಾಕಸ್ಸನು ಹೇಳಿದ್ದೇನೆಂದರೆ :—

"ಈಗ ಮಾಡತಕ್ಕದ್ದೇನು ? ಅಪರಾಧವು ಮಾಡಲ್ಪಟ್ಟಿತು. ಅದರ ಪರಿಣಾಮ ಫಲವು ನನಗೆ ತೋರಲಿಲ್ಲ. ನಾನು ಮಾಡಿದ ತಪ್ಪುಗಳನ್ನು ಹೇಗೆ ತಿದ್ದಿಕೊಳ್ಳಲಿ? ಅದನ್ನು ನನ್ನಲ್ಲಿ ಕೃಪೆಯಿಟ್ಟು ಹೇಳಬೇಕು.'' ಈ ರೀತಿಯಲ್ಲಿ ಪ್ರಾರ್ಥಿಸಲು, ಮೆಂಟರನು ಹೇಳಿದ್ದೇನೆಂದರೆ :—

"ಎಲೈ ಟೆಲಿಮಾಕಸ್ಸನೇ,—ಇದುವರೆಗೂ ನಡೆದ ವಿದ್ಯಮಾನಗಳನ್ನು ಇವಳಿಗೆ ಶ್ರುತಪಡಿಸುವುದರಲ್ಲಿ ನೀನು ತಪ್ಪುಗಳನ್ನು ಮಾಡಿರುವಿ. ಇವಳಿಗೆ ನಿನ್ನಲ್ಲಿ ಅಪ್ರತಿಹತವಾದ ಅನುರಾಗವನ್ನು ಹುಟ್ಟಿಸಿರುವಿ. ಇದನ್ನು ಮೂಲೋತ್ಪಾಟನ ಮಾಡುವುದು ಬಹಳ ಕಷ್ಟ. ನಿನ್ನ ವೃತ್ತಾಂತವನ್ನು ಪೂರಾ ಕೇಳಬೇಕೆಂಬ ಕುತೂಹಲವು ಅವಳಿಗೆ ಬಲವಾಗಿರುವುದು. ನಿನ್ನ ಕಥೆಯನ್ನು ಇಲ್ಲಿಗೆ ಉಪಸಂಹರಿಸುವುದು ಅಸಾಧ್ಯ. ಆದರೆ, ನಿನ್ನ ವೃತ್ತಾಂತವನ್ನು ಹೇಳುವುದರಲ್ಲಿ, ನೀನು ಎಚ್ಚರಿಕೆಯುಳ್ಳವನಾಗಿರಬೇಕು. ನಿನಗೆ ಬಂದ ವಿಪತ್ಪರಂಪರೆಗಳು ಪರಿಹಾರವಾಗುವುದಕ್ಕೆ ನೀನು ಕಾರಣಭೂತನಲ್ಲ. ನಿನ್ನ ಪರಾಕ್ರಮವೂ, ಸಾಹಸವೂ, ವಿವೇಕವೂ ಕಾರಣಗಳಲ್ಲ. ಜಗದೀಶ್ವರನ ಪ್ರಸನ್ನತೆಯೇ ಇವಕ್ಕೆ ಮುಖ್ಯ ಕಾರಣ. ಮುಂದಿನ ಕಥೆಯನ್ನು ಹೇಳುವುದರಲ್ಲಿ, ಸತ್ಯವೂ, ಧರ್ಮವೂ ಉದ್ಧರಿಸಲ್ಪಡಬೇಕೆಂಬದಾಗಿಯೂ, ಇಹಪರಗಳಲ್ಲಿ ಆಸಕ್ತರಾದವರು ದುರ್ವಿಷಯಗಳಲ್ಲಿ ಮನಸ್ಸನ್ನು ಬಿಡಕೂಡದೆಂಬದಾಗಿಯೂ, ದುಷ್ಟಸಂಕಲ್ಪಗಳಿಗೆ ಅಧೀನರಾಗಬಾರದೆಂಬದಾಗಿಯೂ, ಎಂಥಾ ಕಷ್ಟಗಳು ಬಂದಾಗ್ಯೂ, ಧರ್ಮದಿಂದ ನಡೆಯಬೇಕೆಂಬದಾಗಿಯೂ, ಧರ್ಮಕ್ಕೆ ಲೋಪವು ಬರುವುದಾದರೆ, ದೇಹವನ್ನು ಬಿಡುವುದಕ್ಕೂ ಸಿದ್ಧರಾಗಿರಬೇಕೆಂಬದಾಗಿಯೂ, ಹಾಗೆ ಮಾಡತಕ್ಕವರಲ್ಲಿ ದೇವರು ಪ್ರಸನ್ನನಾಗುವನೆಂಬದಾಗಿಯೂ, ಅದರಿಂದ ಸಕಲ ಇಷ್ಟಾರ್ಥಸಿದ್ಧಿಗಳೂ ಆಗು

ವುನೆಂಬದಾಗಿಯೂ ತೋರುವಂತೆ ನಿನ್ನ ಕಥೆಯನ್ನು ಹೇಳು. ಅವಳಿಗೆ ನಿನ್ನಲ್ಲಿ ಹುಟ್ಟಿರತಕ್ಕ ವ್ಯಾಮೋಹವು ಕಿರಿದಾಗಿ ಪರಿಣಮಿಸುವಂತೆ ಮಾಡು. ಹಾಗೆ ಮಾಡದಿದ್ದರೆ, ಅವಳ ಮೋಹವು ಹೆಚ್ಚುವುದು. ಅವಳ ಬಲೆಗೆ ಬಿದ್ದು, ಪತಂಗದ ಹುಳುವು ಬೆಂಕಿಯ ಜ್ವಾಲೆಯಲ್ಲಿ ಬಿದ್ದು ನಾಶವಾಗುವಂತೆ ನೀನೂ ನಾಶವಾಗುತ್ತೀಯೆ. ಪರಿಣಾಮ ಫಲವನ್ನು ಪರ್ಯಾಲೋಚಿಸಿ, ಎಚ್ಚರಿಕೆಯಿಂದ ನಡೆದುಕೊ.''

ಈ ರೀತಿಯಲ್ಲಿ ಮೆಂಟರನು ಹಿತೋಪದೇಶವನ್ನು ಮಾಡಿದ ಮೇಲೆ, ಹಾಗೆಯೇ ಸರಿಯೆಂದು ಟೆಲಿಮಾಕಸ್ಸನು ಒಪ್ಪಿದನು. ಅನಂತರ ಇಬ್ಬರೂ ಬೆಳಗಾಗುವವರೆಗೂ ವಿಶ್ರಾಂತಿಸುಖವನ್ನು ಅನುಭವಿಸಿದರು. ಸೂರ್ಯೋದಯವಾದ ಕೂಡಲೆ, ಕೆಲಿಪ್ಸೋ ಎಂಬ ಕಿನ್ನರಿಯು ಅವಳ ದೂತಿಯೊಡನೆ ಈ ಬಿಡಾರಕ್ಕೆ ಸೇರಿದ ಉಪವನದಲ್ಲಿ ಗಾನವನ್ನು ಮಾಡುತ್ತಾ, ಅಲ್ಲಿ ಫಲಪುಷ್ಪಗಳನ್ನು ಬಿಡತಕ್ಕ ವೃಕ್ಷಗಳಿಗೆ ನೀರನ್ನು ಹಾಕುತ್ತಾ ಇದ್ದಳು. ಇವರ ಮನೋಹರವಾದ ಗಾನದಿಂದ ಮೆಂಟರಿಗೂ, ಟೆಲಿಮಾಕಸ್ಸಿಗೂ ಎಚ್ಚರವಾಯಿತು. ಆಗ ಮೆಂಟರನು ಹೇಳಿದ್ದೇನೆಂದರೆ :—

'' ಎಲೈ ಟೆಲಿಮಾಕಸ್ಸನೇ,—ಈ ಕಿನ್ನರಿಯ ಮನೋಹರವಾದ ಗಾನವು ಕಿವಿಗಳ ಮೂಲಕವಾಗಿ ಮನಸ್ಸನ್ನು ಆಕರ್ಷಿಸುತ್ತಲಿದೆ. ಈ ಗಾನವು ನಿನ್ನನ್ನು ಆಕರ್ಷಿಸುವುದಕ್ಕೆ ಹಾಕಲ್ಪಟ್ಟಿರತಕ್ಕ ಮಹಾ ಪಾಶವೆಂದು ತಿಳಿದುಕೊ. ಈಗ ಧೈರ್ಯವೂ, ಸ್ಥೈರ್ಯವೂ ನಿನ್ನ ಸಹಾಯಕ್ಕೆ ಬರಬೇಕು. ಇವಳ ಸ್ತುತಿಪಾಠಗಳಿಗೆ ಮರುಳಾಗಬೇಡ. ಇವಳು ಮಾಡತಕ್ಕ ಸ್ತುತಿಯು ಬಲವಾದ ವಿಷವೆಂದು ಭಾವಿಸು. ಯೂಲಿಸಸ್, ಎಕಿಲೀಸ್, ಥಿಸಿಯಸ್, ಹರ್ಕ್ಯುಲಿಸ್ ಮೊದಲಾದ ಮಹಾಮಹಿಮರಿಗಿಂತ ನೀನು ಅಧಿಕನೆಂದು ಇವಳು ಹೇಳಿದಳು. ಇದು ನಿಜವೆಂದು ನೀನು ತಿಳಿದುಕೊಂಡಿರುವೆಯಾ? ಅವಳು ಇದನ್ನು ನಿಜವೆಂದು ತಿಳಿದುಕೊಂಡಿರುವಳೇ? ನೀನು ಹಾಗೆ ತಿಳಿದುಕೊಂಡಿರಬಹುದು. ಅವಳು ಮಾತ್ರ ನಿನ್ನನ್ನು ನಿಗಳಬಂಧ ಮಾಡುವುದಕ್ಕೆ ಇದು ಅಭೇದ್ಯವಾದ ಸರಪಣಿಯೆಂದು ತಿಳಿದುಕೊಂಡಿರುವಳು. ಮೋಸ ಹೋಗಬೇಡ. ಈ ಮಹಾತ್ಮರಲ್ಲಿ ಇರತಕ್ಕ ಶಕ್ತಿಯನ್ನು ನೀನು ಪಡೆದಿರುವುದಿಲ್ಲ. ಜಿತೇಂದ್ರಿಯನಾಗಿ ಅರಿಷಡ್ವರ್ಗಗಳನ್ನು ಗೆದ್ದು, ಇವರ ಶಕ್ತಿಯನ್ನು ನೀನು ಸಂಪಾದಿಸಿಕೊಳ್ಳಬೇಕಾಗಿರುತ್ತದೆ. ಇವಳು ನಿನ್ನನ್ನು ಮಂದಹಾಸ ಪೂರ್ವಕವಾಗಿ ಸ್ತುತಿಸುತ್ತಿದ್ದಳು. ತನ್ನ ಸ್ತುತಿಗಳಿಂದ ನಿನ್ನನ್ನು ಮರಳು ಮಾಡಿರುವುದಾಗಿ ಅವಳು ತಿಳಿದುಕೊಂಡಿರುವಳು. ನೀನು ಯೂಲಿಸಸ್ಸನಂತೆ ಅವಳ ಮಾಯೆಗೆ ಒಳಗಾಗದೆ, ಹೊರಟು ಹೋಗುವೆ,

ಎಂಬ ಭಯವು ಅವಳಿಗೆ ಬಲವಾಗಿರುವುದು. ಜೋಕೆ! ಎಚ್ಚರವಾಗಿರು.'' ಈ ರೀತಿಯಲ್ಲಿ ಮೆಂಟರನು ಹೇಳಿ ಪೂರೈಸುವುದರೊಳಗಾಗಿ ಕೆಲಿಪ್ಸಳು ಅವರ ಬಳಿಗೆ ಬಂದಳು. ಅವಳು ಟೆಲಿಮಾಕಸ್ಸನನ್ನು ಕುರಿತು ಹೇಳಿದ್ದೇನೆಂದರೆ.—

"ಎಲೈ ಪ್ರಾಣಪ್ರಾಯನಾದ ಟೆಲಿಮಾಕಸ್ಸನೇ,—ನಿದ್ರೆಯು ಚನ್ನಾಗಿ ಬಂತೇ? ವಿಶ್ರಾಂತಿಯಿಂದ ನಿನಗೆ ಉಂಟಾಗಿದ್ದ ಬಳಲಿಕೆಯು ಪರಿಹಾರವಾಯಿತೇ? ನಿನ್ನ ಸಾಹಸಕೃತ್ಯಗಳಲ್ಲಿ ನೀನು ಹೇಳಿದ ವಿಷಯಗಳನ್ನೆಲ್ಲಾ ನಾನು ಸ್ಮರಿಸುತ್ತಾ ರಾತ್ರಿಯನ್ನು ಕಳೆದೆನು. ನಿನ್ನ ಸಾಹಸಗಳನ್ನೆಲ್ಲಾ ಪ್ರತ್ಯಕ್ಷವಾಗಿ ನೋಡಿದಂತೆ ನನ್ನ ಮನೋದೃಷ್ಟಿಗೆ ತೋರುತ್ತಿತ್ತು. ನೀನು ಅಸಾಧಾರಣವಾದ ಪ್ರಜ್ಞೆಯನ್ನು ಪಡೆದಿರುವಿ. ಈ ಪ್ರಜ್ಞೆಗೆ ಕಾರಣಭೂತವಾದ ಸಕಲ ಶಾಸ್ತ್ರಪಿಶಾರದತ್ವವು ನಿನ್ನಲ್ಲಿ ಹೇಗೆ ಮೂರ್ತೀಭವಿಸಿರುವುದೋ ಅದು ನಿನ್ನ ಮಾತುಗಳಿಂದಲೇ ತೋರುತ್ತದೆ. ವಾಗ್ಮಿಗಳಲ್ಲಿ ನೀನು ಶಿರೋಮಣಿಯಾಗಿರುವಿ. ನಿನ್ನ ವಾಕ್ಯಗಳಲ್ಲಿ ಮಕರಂದವು ತುಂಬಿತುಳುಕುತ್ತಲಿರುವುದು. ನಿನ್ನ ವೃತ್ತಾಂತದಲ್ಲಿ ಉಳಿದಿದನ್ನು ಕೇಳುವ ಸುಖವನ್ನು ಅನುಭವಿಸಬೇಕೆಂದು ನನಗೆ ತುಂಬಾ ಆಸೆಯಾಗುವುದು. ನನ್ನಲ್ಲಿ ಕೃಪೆಯನ್ನು ಇಟ್ಟು ಉಳಿದ ವೃತ್ತಾಂತವನ್ನು ಹೇಳು.''

ಈ ರೀತಿಯಲ್ಲಿ ಕೆಲಿಪ್ಸಳು ಹೇಳಿದಾಗ, ಮೆಂಟರೂ ಮಗ್ಗುಲಲ್ಲಿ ಇದ್ದನು. ಟೆಲಿಮಾಕಸ್ಸನ ಮನೋವೃತ್ತಿಯು ಅನಿರ್ವಚನೀಯವಾಗಿತ್ತು. ಮೆಂಟರು ಉಪದೇಶ ಮಾಡಿದಂತೆ ನಡೆಯಬೇಕೆಂಬ ಅಪೇಕ್ಷೆಯು ಮನಸ್ಸಿನಲ್ಲಿ ಒಂದು ಭಾಗದಲ್ಲಿ ಇತ್ತು. ಈ ಕಿನ್ನರಿಯಲ್ಲಿ ಅಪ್ರತಿಹತವಾದ ಅನುರಾಗವೂ, ಅವಳ ಪ್ರೀತಿಗೆ ಪಾತ್ರನಾಗಬೇಕೆಂಬ ಆಸೆಯೂ, ಅವಳ ಇಷ್ಟಾನುಸಾರವಾಗಿ ನಡೆಯಬೇಕೆಂಬ ಕುತೂಹಲವೂ ಮತ್ತೊಂದು ಕಡೆಯಲ್ಲಿತ್ತು. ಅವಳ ಮನೋಹರವಾದ ವಾಕ್ಯಗಳಿಂದ ಕಲ್ಪಿಸಲ್ಪಟ್ಟ ಮೋಹವು ಇವನ ವಿವೇಕಕ್ಕೆ ವಿಷಪ್ರಾಯವಾಗಿ ಪರಿಣಮಿಸಿತು. "ಮೆಂಟರನ ಸಹವಾಸವು ತಪ್ಪಿದರೆ ಸಾಕು. ತಂದೆಯನ್ನು ಹುಡುಕತಕ್ಕ ಕೆಲಸವು ನಿಷ್ಪ್ರಯೋಜನ. ತಾಯಿಗೆ ಮಾಡಿಕೊಟ್ಟ ಪ್ರತಿಜ್ಞೆಯನ್ನು ನೆರವೇರಿಸುವುದಕ್ಕೆ ಆಗುವುದಿಲ್ಲ. ಬಹುಶಃ ತಂದೆಯು ಸತ್ತಿರಬಹುದು. ತಾಯಿಯು ವಿಷವನ್ನು ತೆಗೆದುಕೊಂಡು ಸತ್ತಿರಬಹುದು. ಅಪ್ರಾರ್ಥಿತವಾಗಿ ನನ್ನನ್ನು ಪ್ರೀತಿಸುವ ಲೋಕೈಕ ಸುಂದರಿಯಾದ ಇವಳ ಅನುರಾಗ ಸಾಮ್ರಾಜ್ಯವನ್ನು ತಿರಸ್ಕರಿಸುವುದು ತಪ್ಪು. ಮೆಂಟರನ ಬುದ್ಧಿವಾದಗಳನ್ನು ತಿರಸ್ಕರಿಸಬಹುದು. ನನ್ನಲ್ಲಿ ಅಸಮಾಧಾನವನ್ನು ಪಟ್ಟುಕೊಂಡು, ಇವನು ಹೊರಟು ಹೋಗಲಿ. ಇವಳ ಅನುರಾಗವು ಅಕೃತ್ರಿಮವಾದದ್ದು. ಯಾವಜ್ಜೀವವೂ ಇವಳ ಪ್ರೀತಿಯೆಂಬ ಸುಖಸಾಮ್ರಾಜ್ಯವನ್ನು ಅನುಭವಿಸುತ್ತಾ ನಾನು ಇರು

ವುದು ಉತ್ತಮ" ಎಂದು ಇವನಿಗೆ ತೋರಿತು. ಆದರೆ ಆ ರೀತಿಯಲ್ಲಿ ನಡೆಯು ವುದಕ್ಕೆ ಭಯ ಉಂಟಾಯಿತು. ಮೆಂಟರನ ಶಕ್ತಿಯು ಅಪ್ರತಿಹತವಾದದ್ದೆಂಬ ದಾಗಿಯೂ, ಅವನ ಉಪದೇಶಕ್ಕೆ ವಿರೋಧವಾಗಿ ನಡೆದರೆ, ತನ್ನನ್ನೂ, ಆ ಕಿನ್ನರಿ ಯನ್ನೂ ಇಬ್ಬರನ್ನೂ ನಿಗ್ರಹಿಸುವ ಶಕ್ತಿಯು ಅವನಿಗೆ ಇರುವುದೆಂಬದಾಗಿಯೂ ಇವನಿಗೆ ಭಯ ಉಂಟಾಯಿತು. ಮೆಂಟರನಿಗೆ ಅಸಮಾಧಾನವಾಗದಂತೆಯೂ, ಕೆಲಿಪ್ಸಳಿಗೆ ಮನೋಹರವಾಗಿರುವಂತೆಯೂ ಹೇಳಬೇಕೆಂದು ಮನಸ್ಸಿನಲ್ಲಿ ಸಂಕ ಲ್ಪವನ್ನು ಮಾಡಿಕೊಂಡು, ಟೆಲಿಮಾಕಸ್ಸನು ತನ್ನ ವೃತ್ತಾಂತವನ್ನು ಹೇಳವುದಕ್ಕೆ ಉಪಕ್ರಮಿಸಿದನು. ಅವನು ಹೇಳಿದ್ದೇನಂದರೆ :—

" ಎಲೈ ಪ್ರಾಣಕಾಂತೆಯಾದ ಕೆಲಿಪ್ಸಳೇ,—ಫಿನೀಷಿಯಾ ರಾಜ್ಯದ ತೀರ ವನ್ನು ಬಿಟ್ಟು, ನಮ್ಮ ಹಡಗು ಮುಂದಕ್ಕೆ ಹೊರಟಿತು. ಅನುಕೂಲವಾದ ಗಾ ಳಿಯು ಬೀಸುತ್ತಿತ್ತು. ಸೈಪ್ರೆಸ್ ದ್ವೀಪದ ನಿವಾಸಿಗಳು ನನ್ನ ಸುತ್ತಲೂ ಇದ್ದರು. ಅವರ ನಡೆನುಡಿಗಳು ನನಗೆ ತಿಳಿದಿರಲಿಲ್ಲ. ಮೌನವನ್ನು ನಾನು ಅವ ಲಂಬಿಸಿದ್ದೆನು. ಅವರು ಹೇಳಿದನ್ನೆಲ್ಲಾ ಕೇಳುತ್ತಾ ಇರಬೇಕೆಂದು ಸಂಕಲ್ಪ ಮಾಡಿದೆನು. ಸ್ವಲ್ಪ ಹೊತ್ತಿನಲ್ಲಿ ಬಲವಾದ ನಿದ್ದೆಯು ನನಗೆ ಬಂದಿತು. ಮೈಮ ರೆತು ನಿದ್ರೆ ಮಾಡುವಾಗ, ಆಕಾಶದಲ್ಲಿ ಮೇಘವು ಎರಡು ಭಾಗವಾದಂತೆಯೂ, ರತಿದೇವಿಯು ಎರಡು ಪಾರಿವಾಳಗಳಿಂದ ಎಳೆಯಲ್ಪಟ್ಟ ರಥದಲ್ಲ ಸಂಚಾರ ಮಾ ಡುತ್ತಿದ್ದ ಹಾಗೆಯೂ, ಅವಳ ರೂಪಲಾವಣ್ಯಗಳೂ, ಅವಳ ಮಂದಹಾಸವೂ, ಅವಳ ಯೌವನವೂ ಅತ್ಯಂತ ಜಾಜ್ವಲ್ಯಮಾನವಾಗಿದ್ದಂತೆಯೂ, ಆಕಾಶಮಾರ್ಗ ದಿಂದ ಬಂದು, ನನ್ನ ಬಳಿಯಲ್ಲಿ ನಿಂತು ನನ್ನ ಭುಜದ ಮೇಲೆ ಕೈಯನ್ನು ಹಾಕಿ' ' ಎಲೈ ಟೆಲಿಮಾಕಸ್ಸನೇ, ನೀನು ನನ್ನ ರಾಜ್ಯವನ್ನು ಪ್ರವೇಶಿಸುವ ಸಂಭವವು ಬಂದು ಇದೆ. ಈ ದ್ವೀಪದಲ್ಲಿ ನಿನ್ನ ಇಷ್ಟಾರ್ಥಸಿದ್ಧಿಗೆ ಬೇಕಾದವುಗಳೆಲ್ಲಾ ಇರು ತ್ತವೆ. ಸ್ವರ್ಗಭೋಗವು ನಿನ್ನ ಹಸ್ತಗತವಾಗಿರುವುದು. ಈ ಭೋಗವನ್ನು ತಿರಸ್ಕರಿಸಬೇಡ ' ಎಂದು ಹೇಳಿದ ಹಾಗೆಯೂ ಸ್ವಪ್ನವಾಯಿತು ಮನ್ಮಥನು ಇವಳ ಬಳಿಯಲ್ಲಿ ಆಡುತ್ತಿದ್ದ ಹಾಗೆ ಕಾಣಬಂದಿತು. ಅವನು ವೀನಸ್ಸಳಂತೆ ಬಹಳ ಮನೋಹರವಾದ ಆಕೃತಿಯುಳ್ಳವನಾಗಿದ್ದನು. ಅವನ ಕಣ್ಣುಗಳಲ್ಲಿ ಒಂದು ವಿಜಾತೀಯವಾದ ಪ್ರಕಾಶವು ಕಾಣುತ್ತಿತ್ತು. ಅದು ನನಗೆ ಭಯವನ್ನುಂ ಟುಮಾಡಿತು. ಅವನು ಮಂದಹಾಸ ಪೂರ್ವಕವಾಗಿ ನನ್ನನ್ನು ನೋಡಿದನು. ಈ ಮಂದಹಾಸದಲ್ಲಿ ಪರಿಹಾಸವೂ, ಕ್ರೌರ್ಯವೂ ಕಾಣಬರುತ್ತಿದ್ದವು. ಅವನು ತನ್ನ ಚಿನ್ನದ ಬತ್ತಳಿಕೆಯಿಂದ ಅತ್ಯಂತ ತೀಕ್ಷ್ಣವಾದ ಅಂಬುಗಳನ್ನು ತೆಗೆದು ಕೊಂಡು ಬಿಲ್ಲಿಗೆ ಹಗ್ಗವನ್ನು ಕಟ್ಟಿ, ಬಾಣವನ್ನು ಪರಿಸಿದನು. ಆಗ ಮಿನರ್ವಳು

ಪ್ರತ್ಯಕ್ಷಳಾಗಿ, ತನ್ನ ಅಮಾನುಷವಾದ ವಿಗ್ರಹವು ನನಗೆ ಕಾಣುವಂತೆ ಮಾಡಿದಳು. ವೀನಸ್ಸಿನ ಮುಖದಲ್ಲಿ ಕಾಣುತ್ತಿದ್ದ ಅಸಾಧಾರಣವಾದ ಮಾರ್ದವವೂ ಅನುರಾಗವೂ ಇವಳ ಮುಖದಲ್ಲಿ ಕಾಣುತ್ತಿರಲಿಲ್ಲ. ಮಿನರ್ವಳ ಸೌಂದರ್ಯವು ಗರತಿಯರ ಸೌದರ್ಯದಂತೆ ಸಾಮಾನ್ಯವಾಗಿಯೂ, ಅಕೃತ್ರಿಮವಾಗಿಯೂ, ಗಂಭೀರವಾಗಿಯೂ, ಧೈರ್ಯಸ್ಥೈರ್ಯಗಳಿಂದಲೂ, ಸತ್ಯದಿಂದಲೂ, ಧರ್ಮದಿಂದಲೂ ಪ್ರಜ್ವಲಿಸತಕ್ಕದ್ದಾಗಿಯೂ ಇತ್ತು. ಇವಳನ್ನು ನೋಡಿದ ಕೂಡಲೇ ಮನ್ಮಥನ ಬಿಲ್ಲಿಗೆ ಏರಿಸಿದ್ದ ಬಾಣಗಳು ನೆಲಕ್ಕೆ ಬಿದ್ದವು. ಅವನು ನಿಟ್ಟುಸಿರನ್ನು ಬಿಟ್ಟನು. ಅವನನ್ನು ನೋಡಿ, ಮಿನರ್ವಳು ಹೇಳಿದ್ದೇನೆಂದರೆ :—

"ಎಲೈ ದುರಾತ್ಮನಾದ ಮನ್ಮಥನೇ, —ನಿನ್ನ ದರ್ಪಕ್ಕೆ ಇದು ಸ್ಥಾನವಲ್ಲ. ನಿನ್ನ ಬಾಣಗಳು ಇಲ್ಲಿ ಅವುಗಳ ಶಕ್ತಿಯನ್ನು ತೋರಿಸಲಾರವು. ಅಜಿತೇಂದ್ರಿಯರ ಮೇಲೆ ಅವುಗಳನ್ನು ಪ್ರಯೋಗಿಸು. ವಿವೇಕವೂ, ಸತ್ಯವೂ, ಧರ್ಮವೂ, ಘನತೆಯೂ ಸಾರಾಸಾರವಿಚಾರವೂ, ಇಂದ್ರಿಯನಿಗ್ರಹ ಶಕ್ತಿಯೂ, ಯಾರಿಗಿರುವುದೋ ಅವರ ಮೇಲೆ ನೀನು ಬಾಣಗಳನ್ನು ಹಾಕಿದರೆ, ಅವುಗಳು ವ್ಯರ್ಥವಾಗುವುವು. ಮಹಾಮಹಿಮನಾದ ಈಶ್ವರನ ಮೇಲೆ ಹಾಕಲ್ಪಟ್ಟ ನಿನ್ನ ಬಾಣದ ದೆಸೆಯಿಂದ ಭಸ್ಮೀಭೂತನಾಗಿ ಅನಂಗನಾಗಿ ಪರಿಣಮಿಸಿರುತ್ತೀಯೆ. ಆದಾಗ್ಯೂ ನಿನಗೆ ವಿವೇಕವು ಬಂದಿಲ್ಲ. ದುರಾತ್ಮನೆ! ಹೊರಟು ಹೋಗು" ಎಂದು ಹೇಳಿದಳು.

ಮಿನರ್ವಳನ್ನು ನೋಡಿದ ಕೂಡಲೆ, ವೀನಸ್ಸಳು ತನ್ನ ರಥವನ್ನು ಏರಿ, ಕೊಲಿಪ್ಪಸ್ ಪರ್ವತ ಶಿಖರಕ್ಕೆ ಹೊರಟು ಹೋದಳು. ಮಿನರ್ವಳೂ ಕೂಡ ಅದೃಶ್ಯಳಾದಳು. ಅನಂತರ ನಾನು ಮನೋಹರವಾದ ತೋಟದಲ್ಲಿದ್ದಂತೆಯೂ, ಅದೇ ಸ್ವರ್ಗಕ್ಕೆ ಸೇರಿದ ನಂದನವನ ವಾಗಿತ್ತೆಂಬದಾಗಿಯೂ ನನಗೆ ತೋರಿತು. ಅಲ್ಲಿ ಮೆಂಟರನು ನನಗೆ ಉಪದೇಶ ಮಾಡಿದನು. ಅವನು ಹೇಳಿದ್ದೇನಂದರೆ :—

"ಇದು ನರಕಕ್ಕೆ ಸಮಾನವಾದ ರಾಜ್ಯ. ಇದು ಅಂಟುರೋಗಗಳಿಗೆ ಪ್ರಸಿದ್ಧವಾದ ದ್ವೀಪ. ಇಲ್ಲಿನ ವಾಯುವೂ ಕೂಡ ವಿಷಯದ ಸೋಂಕಿನಿಂದ ದುಷ್ಟವಾಗಿರುವುದು ಸತ್ಯವೂ, ಧರ್ಮವೂ, ಇಂದ್ರಿಯನಿಗ್ರಹವೂ ಈ ಪ್ರಾಂತ್ಯವನ್ನು ಬಿಟ್ಟು, ಹೊರಟು ಹೋಗಿರುವುವು. ಅಸತ್ಯಕ್ಕೂ, ಅಧರ್ಮಕ್ಕೂ, ವ್ಯಭಿಚಾರಕ್ಕೂ ಇದು ಜನ್ಮಸ್ಥಾನವಾಗಿರುವುದು."

ಈ ರೀತಿಯಲ್ಲಿ ಮೆಂಟರನು ಹೇಳಿದಂತೆ ನನ್ನ ಕಿವಿಗೆ ಕೇಳಿತು. ಮೆಂಟರನನ್ನು ನೋಡಿದ ಕೂಡಲೆ, ಆನಂದಪರವಶನಾಗಿ, ಅವನನ್ನು ಆಲಿಂಗಿಸಿಕೊಳ್ಳುವುದಕ್ಕೆ ನಾನು ಕೈಗಳನ್ನು ಚಾಚಿದೆನು. ಅಷ್ಟರಲ್ಲಿಯೇ ನನಗೆ ಎಚ್ಚರಿಕೆಯು ಆಯಿ

ತು. ಈ ವಿಚಿತ್ರವಾದ ಸ್ವಪ್ನವು ದೇವರ ಅನುಗ್ರಹದಿಂದ ಉಂಟಾದದ್ದೆಂದು ನಾನು ತಿಳಿದುಕೊಂಡೆನು. ವಿಷಯಾಸಕ್ತನಾಗಬಾರದೆಂಬದಾಗಿಯೂ, ಸತ್ಯವ್ರತನಾಗಿರಬೇಕೆಂಬದಾಗಿಯೂ, ವಿಷಯ ಸುಖಗಳಲ್ಲಿ ಪರಾಙ್ಮುಖನಾಗಬೇಕೆಂಬದಾಗಿಯೂ ನಾನು ಸಂಕಲ್ಪವನ್ನು ಮಾಡಿದೆನು. ಅಷ್ಟರಲ್ಲಿಯೇ ಮೆಂಟರನು ಸತ್ತನೆಂಬದಾಗಿಯೂ, ಅವನು ಸ್ವರ್ಗವನ್ನು ಪ್ರವೇಶಿಸಿರುವನೆಂಬದಾಗಿಯೂ ತೋರಿತು. ಬಿಕ್ಕಿ ಬಿಕ್ಕಿ ಅಳುವುದಕ್ಕೆ ನಾನು ಪ್ರಾರಂಭಿಸಿದೆನು. ಇದನ್ನು ನೋಡಿದ ಸೈಪ್ರೆಸ್ ದ್ವೀಪ ನಿವಾಸಿಗಳು ಏತಕ್ಕೆ ಅಳುತ್ತೀ ಎಂಬದಾಗಿ ಕೇಳಿದರು. ಅನೇಕರು ನನ್ನನ್ನು ನೋಡಿ, ಪರಿಹಾಸ ಮಾಡುವುದಕ್ಕೆ ಉಪಕ್ರಮಿಸಿದರು. ಹಡಗನ್ನು ನಡೆಸತಕ್ಕವರು ದ್ರಾಕ್ಷಾರಸವನ್ನು ವಿಶೇಷವಾಗಿ ಪಾನಮಾಡಿ, ಉನ್ಮತ್ತರಾಗಿ ಮನಸ್ಸಿ ಕೂಗಿಕೊಳ್ಳುತ್ತಿದ್ದರು. ಆ ಜನರೆಲ್ಲರೂ ಬೇಕಾದ ಹಾಗೆ ಪಾನಮಾಡಿ, ತಮ್ಮ ಕೆಲಸಗಳನ್ನು ಬಿಟ್ಟು, ನಿದ್ರೆಮಾಡುವುದಕ್ಕೆ ಉಪಕ್ರಮಿಸಿದರು. ಅಷ್ಟರಲ್ಲಿಯೇ ಈ ಕುಡುಕರ ಸಂಗೀತವೂ, ಉನ್ಮತ್ತಪ್ರಲಾಪವೂ ಗಗನವನ್ನು ಮುಟ್ಟುವುದಕ್ಕೂ ಉಪಕ್ರಮವಾಯಿತು. ಆಗ ಹಠಾತ್ತಾಗಿ ಬಹಳ ನಿಬಿಡವಾದ ಮೇಘವು ಆಕಾಶವನ್ನು ಆವರಿಸಿತು. ಪ್ರಳಯಕಾಲದ ಮಾರುತದಂತೆ ಗಾಳಿಯು ಬೀಸುವುದಕ್ಕೆ ಉಪಕ್ರಮವಾಯಿತು. ಅಲೆಗಳು ಪರ್ವತಾಕಾರವಾಗಿ ನಮ್ಮ ಹಡುಗುಗಳಿಗೆ ತಗಲುವುದಕ್ಕೆ ಉಪಕ್ರಮವಾದವು. ಈ ಅಲೆಗಳಿಂದ ಎಳೆಯಲ್ಪಟ್ಟು, ನಮ್ಮ ಹಡಗು ಕೆಲವು ಭಾರಿ ಬಂಡೆಗಳ ಕಡೆಗೆ ಬಹಳ ಜೋರಾಗಿ ಹೋಗುವುದಕ್ಕೆ ಉಪಕ್ರಮಮಾಡಿತು. ವಿಷಯಾಸಕ್ತರಾಗಿಯೂ, ಭೋಗಪರಾಯಣರಾಗಿಯೂ ಇರತಕ್ಕವರು ಕಷ್ಟಕಾಲದಲ್ಲಿ ಭಯದಿಂದ ಸಾಯುವುದೂ ಕೂಡ ಉಂಟೆಂದು ಮೆಂಟರನು ಹೇಳುತ್ತಿದ್ದನು. ಈಗ ಅದು ಅನುಭವಸಿದ್ಧವಾಯಿತು. ನಮಗೆ ಬಂದ ವಿಪತ್ತನ್ನು ನೋಡಿ, ಈ ಹಡಗಿನಲ್ಲಿ ಇದ್ದ ಸೈಪ್ರೆಸ್ ದ್ವೀಪನಿವಾಸಿಗಳೆಲ್ಲಾ ಹೆಂಗಸರಂತೆ ಅಳುವುದಕ್ಕೆ ಉಪಕ್ರಮಿಸಿದರು. ಎಲ್ಲಿ ನೋಡಿದರೂ ರೋದನವು ಕೇಳಲ್ಪಟ್ಟಿತು. ಧೈರ್ಯಶಾಲಿಗಳಾದವರು ಒಬ್ಬರೂ ಆ ಹಡಗಿನಲ್ಲಿ ಇರಲಿಲ್ಲ. ತಮ್ಮ ಅವತಾರವು ಪೂರ್ತಿಯಾಯಿತೆಂದು ಕೆಲವರು ದುಃಖಿಸಿದರು. ಈ ವಿಪತ್ತಿನಿಂದ ರಕ್ಷಿಸಲ್ಪಟ್ಟರೆ, ನಾನಾವಿಧವಾದ ಬಲಿಗಳನ್ನು ಕೊಡುವುದಾಗಿ ದೇವತೆಗಳಿಗೆ ಅನೇಕರು ಹರಕೆಯನ್ನು ಕಟ್ಟುವುದಕ್ಕೆ ಉಪಕ್ರಮಿಸಿದರು. ಸನ್ನಿಹಿತವಾದ ವಿಪತ್ತನ್ನು ತಪ್ಪಿಸುವುದಕ್ಕೆ ಯಾರೂ ಪ್ರಯತ್ನ ಮಾಡಲಿಲ್ಲ. ಈ ಅವಸ್ಥೆಯಲ್ಲಿ ಎಲ್ಲರನ್ನೂ ರಕ್ಷಿಸಿ, ನನ್ನನ್ನು ನಾನೂ ರಕ್ಷಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುವುದು ನನ್ನ ಕರ್ತವ್ಯವೆಂದು ನನಗೆ ತೋರಿತು. ಸಾರಾಯನ್ನು ಕುಡಿದು ಮೈಮೇಲೆ ಪ್ರಜ್ಞೆಯನ್ನು ಕಳೆದುಕೊಂಡಿರತಕ್ಕ ಹಡಗು ನಡೆಸತಕ್ಕವನ

ಸ್ಥಳಕ್ಕೆ ಹೋಗಿ, ಅವನ ಕೆಲಸವನ್ನು ನಾನು ಮಾಡುವುದಕ್ಕೆ ಉಪಕ್ರಮಿಸಿದೆನು. ಪ್ರಜ್ಞೆಯಿರತಕ್ಕ ಜನಗಳನ್ನೆಲ್ಲಾ ಸೇರಿಸಿ, ಬಾವುಟಗಳನ್ನು ಇಳಿಸಿದೆನು. ಅವರಿಗೆ ಉತ್ಸಾಹವನ್ನು ಮಾಡಿ, ಪುಟ್ಟುಗಳನ್ನು ಹಾಕುವುದಕ್ಕೆ ಉಪಕ್ರಮಿಸಿದೆವು. ಧೈರ್ಯವು ಸರ್ವತ್ರ ಸಾಧನವೆಂಬುದು ಈಗ ನಿಜವಾಯಿತು. ಬಂಡೆಗಳ ಕಡೆಗೆ ಈ ಹಡಗು ಹೋಗುವುದನ್ನು ನಾವು ತಪ್ಪಿಸಿದೆವು. ಕ್ರಮಕ್ರಮವಾಗಿ ನಾವಿಕರಿಗೆ ಪ್ರಜ್ಞೆಯು ಬಂದಿತು. ನನ್ನ ಸಾಹಸವನ್ನು ನೋಡಿ, ಅವರು ತುಂಬಾ ಆಶ್ಚರ್ಯಪಟ್ಟರು. ಹಡಗನ್ನು ರಕ್ಷಿಸುವುದಕ್ಕೆ ನಾನು ಪ್ರಯತ್ನ ಮಾಡದಿದ್ದರೆ, ಸದರಿ ಬಂಡೆಗೆ ತಗುಲಿ ಹಡಗು ಛಿದ್ರವಾಗುತ್ತಿತ್ತೆಂಬದಾಗಿಯೂ, ತಾವೆಲ್ಲರೂ ಸಾಯಬೇಕಾಗುತ್ತಿತ್ತೆಂಬದಾಗಿಯೂ ಅವರು ತಿಳಿದುಕೊಂಡರು. ಅವರೆಲ್ಲರಿಗೂ ನನ್ನಲ್ಲಿ ವಿಶೇಷ ಗೌರವವೂ, ಪ್ರೀತಿಯೂ ಉಂಟಾಯಿತು. ಸ್ವಲ್ಪ ಹೊತ್ತಿನಲ್ಲಿ ಅಲೆಗಳ ರಭಸವು ಕಡಮೆಯಾಯಿತು. ಸೈಪ್ರಸ್ ದ್ವೀಪದ ಬಳಿಗೆ ಹಡಗನ್ನು ನಡೆಸಿಕೊಂಡು ಹೋದೆವು. ಅದು ರೇವು ಪಟ್ಟಣವನ್ನು ಸೇರಿತು. ಹಡಗಿನಿಂದ ಆ ದ್ವೀಪಕ್ಕೆ ಇಳಿದೆವು. ನಾವು ಇಳಿದ ದಿವಸ ಅಲ್ಲಿ ಮನ್ಮಥೋತ್ಸವವು ನಡೆಯುತ್ತಿತ್ತು. ಎಲ್ಲಿ ನೋಡಿದಾಗ್ಯೂ ಸ್ತ್ರೀಯರು ಹಬ್ಬದ ಉಡಿಗೆಗಳನ್ನು ಹಾಕಿಕೊಂಡು, ರತಿದೇವಿಯ ಪೂಜೆಯನ್ನು ಮಾಡುತ್ತಿದ್ದರು. ಗುಂಪುಗುಂಪಾಗಿ ಜನಗಳು ಆಕೆಯ ದೇವಸ್ಥಾನಕ್ಕೆ ಹೋಗುತ್ತಿದ್ದರು. ಅವರ ಮುಖದಲ್ಲಿ ಆನಂದಪರವಶತೆಯು ಕಾಣುತ್ತಿತ್ತು. ಸಾಧ್ವಿಗಳಿಗೆ ಸಹಜವಾದ ನೋಟವು ಅವರಲ್ಲಿ ಇರಲಿಲ್ಲ. ಸ್ವೈರಿಣಿಯರ ವಿಲಾಸಗಳು ವಿಶೇಷವಾಗಿ ಕಾಣುತ್ತಿದ್ದವು. ತಮ್ಮ ವಿಲಾಸಗಳಿಂದ ಪುರುಷರನ್ನು ಮರುಳು ಮಾಡುವುದರಲ್ಲಿ ನಾನು ಮೊದಲು, ತಾನು ಮೊದಲು ಎಂದು ಪೋಟಾಪೋಟಿಗಳು ನಡೆಯುತ್ತಿದ್ದವು ಇದನ್ನು ನೋಡಿದ ಕೂಡಲೇ, ನನಗೆ ತಿರಸ್ಕಾರವು ಹುಟ್ಟಿತು. ಅಸಹ್ಯವು ಉಂಟಾಯಿತು. ಈ ದ್ವೀಪದಲ್ಲಿ ಅನೇಕ ದೇವಸ್ಥಾನಗಳು ಇರುತ್ತವೆ. ಸಿಥೀರಾ ಎಂಬ ದೇವಸ್ಥಾನಕ್ಕೆ ನಾನು ಕರೆದುಕೊಂಡು ಹೋಗಲ್ಪಟ್ಟೆನು. ಈ ದೇವಸ್ಥಾನದ ಕಂಭಗಳು ಉನ್ನತವಾಗಿಯೂ, ಬಹಳ ದೊಡ್ಡವಾಗಿಯೂ ಅಮೃತಶಿಲೆಯಲ್ಲಿ ಮಾಡಲ್ಪಟ್ಟಿದ್ದವು. ಈ ಕಟ್ಟಡವು ಬಹಳ ಲಕ್ಷಣವಾಗಿತ್ತು. ಅನೇಕ ದೇವತೆಗಳ ವಿಗ್ರಹಗಳು ಕೆತ್ತಲ್ಪಟ್ಟಿದ್ದವು. ತಲೆಬಾಗಿಲಲ್ಲಿಯೇ ಕಾಣಿಕೆಗಳು ಒಪ್ಪಿಸಲ್ಪಡುತ್ತಿದ್ದವು. ಅಲ್ಲಿನ ಅನೇಕ ದೇವಸ್ಥಾನಗಳಲ್ಲಿ ಅನೇಕ ವಿಧವಾದ ಪ್ರಾಣಿಗಳನ್ನು ಬಲಿಕೊಡುವ ಸಂಪ್ರದಾಯವಿರುವುದು. ಈ ದೇವಸ್ಥಾನದಲ್ಲಿ ಈ ಪದ್ಧತಿಯು ಇರಲಿಲ್ಲ. ವಾಸನೆಯು ಕಟ್ಟಲ್ಪಟ್ಟ ಸಾರಾಯಿಗಳನ್ನು ಮಾತ್ರ ದೇವರ ನೈವೇದ್ಯಕ್ಕೋಸ್ಕರ ತಂದಿಟ್ಟಿದ್ದರು. ಅಗ್ನಿಷ್ಟಿಕೆಗಳಲ್ಲಿ ಬೆಂಕಿಯು ಪ್ರಜ್ವಲಿಸು

ತ್ತಿತ್ತು. ಸಾಂಬ್ರಾಣಿ, ಧೂಪ ಮೊದಲಾದವುಗಳ ವಾಸನೆಯು ಎಲ್ಲೆಲ್ಲಿಯೂ ತುಂಬಿಕೊಂಡಿತ್ತು. ಆದರೆ, ಸ್ತ್ರೀ ಪುರುಷರು ವಿಷಯಾಸಕ್ತಿಯನ್ನು ಆಚ್ಛಾದಿಸಿಕೊಂಡಿರಲಿಲ್ಲ. ಬಹಿರಂಗವಾಗಿ ಒಬ್ಬರನ್ನು ಒಬ್ಬರು ಹಾಸ್ಯಪರಿಹಾಸ್ಯಗಳನ್ನು ಮಾಡಿಕೊಳ್ಳುತ್ತಾ ಸ್ವೇಚ್ಛಾಪ್ರವೃತ್ತಿಯಲ್ಲಿ ತಿರಗ್ಜಂತುಗಳಂತೆ ನಡೆಯುತ್ತಿದ್ದರು. ಈ ಇಂದ್ರಿಯಪರವಶತೆಯು ಸಾಂಕ್ರಾಮಿಕ ರೋಗದಂತೆ ಎಲ್ಲೆಲ್ಲಿಯೂ ವ್ಯಾಪ್ತವಾಗಿತ್ತು. ವಿಷಯಾಸಕ್ತಿಯಲ್ಲಿ ನಾನು ಪರಾಙ್ಮುಖನಾಗಿರುವುದನ್ನು ನೋಡಿ, ನನ್ನನ್ನು ಪರಿಹಾಸ ಮಾಡುವುದಕ್ಕೂ, ನನ್ನಲ್ಲಿ ಅನುರಾಗವನ್ನು ಉಂಟುಮಾಡುವುದಕ್ಕೂ ಅನೇಕರು ಪ್ರಯತ್ನ ಮಾಡಿದರು. ಕೆಲವು ದಿವಸಗಳಲ್ಲಿ ನನ್ನ ಬುದ್ಧಿಯು ಕೆಡುವ ಸ್ಥಿತಿಗೆ ಬಂದಿತು. ವ್ಯಭಿಚಾರವು ದುಷ್ಟವಾದದ್ದೆಂದು ನನಗೆ ಮೊದಲಿನಲ್ಲಿ ತೋರುತ್ತಿತ್ತು. ಕೆಲವು ದಿವಸಗಳಲ್ಲಿ ಸ್ವೇಚ್ಛಾಪ್ರವೃತ್ತಿಯಿಂದ ದೋಷವೇನೂ ಇಲ್ಲವೆಂಬ ಭಾವನೆಯು ನನಗೆ ಉಂಟಾಗುತ್ತಾ ಬಂದಿತು.

ಒಂದು ದಿವಸ ಸ್ವಪ್ನದಲ್ಲಿ ಮೆಂಟರನನ್ನು ನೋಡಿದೆನು. 'ಯೂಲಿಸೆಸ್ಸನ ಮಗನಾಗಿ, ನೀನು ಈ ಗತಿಗೆ ಬಂದಿರುವೆಯಲ್ಲಾ! ಇಂದ್ರಿಯಪರವಶನಾಗಿ ಬದುಕುವುದಕ್ಕಿಂತಲೂ ನೀನು ಸಾಯುವುದು ಮೇಲಲ್ಲವೇ?' ಎಂದು ಮೆಂಟರನು ಹೇಳಿದಂತೆ ಸ್ವಪ್ನವಾಯಿತು. ನಿಟ್ಟುಸಿರುಗಳನ್ನು ಬಿಡುವುದಕ್ಕೂ, ಕಣ್ಣೀರುಗಳನ್ನು ಸುರಿಸುವುದಕ್ಕೂ ಪ್ರಾರಂಭ ಮಾಡಿದೆನು. ಯೌವನವೂ, ಪ್ರಭುತ್ವವೂ, ಧನಸಂಪತ್ತಿಯೂ, ಅವಿವೇಕವೂ ಮನುಷ್ಯನನ್ನು ನಾಯಿಗಿಂತಲೂ ಕಡೆಯಾಗಿ ಮಾಡುವುದೆಂದು ನನಗೆ ಸ್ಪಷ್ಟವಾಗಿ ಗೊತ್ತಾಯಿತು. ಯೌವನವು ಜನಗಳಿಗೆ ಅತ್ಯಂತ ವಿಷಮವಾದ ಅವಸ್ಥೆಯು. ಈ ಅವಸ್ಥೆಯು ಬಂದಾಗ, ವಿಷಯಸುಖಗಳಿಗೆ ದಾಸರಾಗದೆ, ಅದರಿಂದ ಬರತಕ್ಕ ಅನರ್ಥಗಳಿಗೆ ಗುರಿಯಾಗದೆ ಇರಬೇಕಾದರೆ, ದೇವರ ಅನುಗ್ರಹವು ಬೇಕೆಂದು ನಾನು ಯೋಚಿಸಿದೆನು. ನಮ್ಮ ತಾತನಾದ ಲೇಆರ್ಟೀಸನಿಗೆ ಯಾವ ಅಪಕೀರ್ತಿಯೂ ಬರದಂತೆ ನಮ್ಮ ತಂದೆಯಾದ ಯೂಲಿಸೆಸ್ಸನು ನಡೆದುಕೊಂಡನು. ನನಗೆ ಆ ಶಕ್ತಿಯು ತಪ್ಪುವ ಅವಸ್ಥೆಯು ಬಂದಿರುವುದು. ಮೋಹವೆಂಬ ಪಾಶಕ್ಕೆ ನಾನು ಸಿಕ್ಕಿಬೀಳುವ ಸನ್ನಿವೇಶವು ಬಂದಿರುವುದು. ಯೂಲಿಸೆಸ್ಸನ ಮಗನೆನ್ನಿಸಿಕೊಳ್ಳುವುದಕ್ಕೆ ಅಸಮರ್ಥನಾಗುವ ಸ್ಥಿತಿಯು ಬರುವಂತೆ ತೋರುವುದು. ಜಘನ್ಯವಾದ ಭೋಗಸುಖದಲ್ಲಿ ನನಗೆ ಇಷ್ಟವು ಉಂಟಾಗುತ್ತಿರುವುದು. ಈ ವಿಪತ್ತು ಬರುವುದಕ್ಕೆ ಮುಂಚೆ, ಈ ದೇಶವನ್ನು ಬಿಟ್ಟು ಹೋಗಬೇಕು. ಅಥವಾ ದೇಹವನ್ನಾದರೂ ಬಿಡಬೇಕು ಎಂದು ನನಗೆ ತೋರಿತು.

ಶಿಕಾರಿಯವರ ಏಟನ್ನು ತಿಂದು, ಓಡಿಹೋಗುವ ಜಿಂಕೆಯ ಅವಸ್ಥೆಯು ನನಗೆ ಉಂಟಾಯಿತು. ಈ ದ್ವೀಪದಿಂದ ಹೊರಟು ಹೋಗಬೇಕೆಂಬ ಸಂಕಲ್ಪವನ್ನು ಮಾಡುತ್ತಾ ತಿರುಗುತ್ತಿರುವಾಗ ಎದುರಿಗೆ ಮೆಂಟರನು ಬರುವಂತೆ ನನಗೆ ತೋರಿತು. ಅವನ ಮುಖವು ಬಿಳಿತುಕೊಂಡಿತ್ತು. ವ್ಯಸನವೂ, ಕ್ಲೇಶವೂ ಅವನನ್ನು ಆವರಿಸಿಕೊಂಡಿದ್ದಂತೆ ಕಾಣಬಂತು. ಈ ಆಕೃತಿಯು ಮೆಂಟರನದೇ? ಅಥವಾ ಅವನ ಲಿಂಗಶರೀರವಾಗಿರಬಹುದೇ? ಎಂದು ಸಂದೇಹ ಉಂಟಾಯಿತು. 'ಎಲೈ ಮಹಾತ್ಮನೇ, ನೀನು ಮೆಂಟರನೇ ಅಥವಾ ಅವನ ನೆರಳೇ? ನೀನು ಬದುಕಿದ್ದೀಯಾ ಅಥವಾ ದೇಹಾಂತರವನ್ನು ಹೊಂದಿರುವೆಯಾ?' ಎಂದು ಕೇಳುತ್ತಾ, ಆತನ ಬಳಿಗೆ ನಾನು ಓಡಿದೆನು. ಆತನು ಮುಂದಕ್ಕೆ ಬರದೆ, ನಿಂತ ಕಡೆಯೇ ನಿಂತಿದ್ದನು. ಓಡಿ ಹೋಗಿ; ಅವನನ್ನು ತಬ್ಬಿಕೊಂಡೆನು. ನನ್ನ ಕೈಗಳಿಗೂ, ಮೈಗಳಿಗೂ ಮೆಂಟರನ ಸ್ಪರ್ಶಸುಖವು ಉಂಟಾಯಿತು. ಇವನೇ ಮೆಂಟರನೆಂಬ ಜ್ಞಾನವು ಉಂಟಾಯಿತು. ಕಣ್ಣೀರುಗಳನ್ನು ಸುರಿಸುತ್ತಾ, ಮಾತನಾಡುವುದಕ್ಕೆ ಶಕ್ತಿಯಿಲ್ಲದೆ, ಅವನನ್ನು ತಬ್ಬಿಕೊಂಡಿದ್ದೆನು. ಸ್ವಲ್ಪ ಹೊತ್ತು ವ್ಯಸನದಿಂದಲೂ, ಕನಿಕರದಿಂದಲೂ, ಭೀತಿಯಿಂದಲೂ ಅವನು ನನ್ನನ್ನು ನೋಡುವಂತೆ ಕಾಣಬಂದಿತು. ಆಗ ಅವನನ್ನು ಕುರಿತು ನಾನು ಹೇಳಿದ್ದೇನೆಂದರೆ:—

"ಎಲೈ ಮೆಂಟರನೇ,—ನೀನು ಎಲ್ಲಿಂದ ಬಂದಿರುವಿ? ನೀನಿಲ್ಲದಿರುವಾಗ ನನಗೆ ಎಷ್ಟೋ ವಿಪತ್ತುಗಳು ಬಂದವು. ನಿನ್ನ ಸಹಾಯವು ಇದ್ದಿದ್ದರೆ, ಅವುಗಳನ್ನೆಲ್ಲಾ ನಾನು ನಿಮಿಷಾರ್ಧದಲ್ಲಿ ಗೆಲ್ಲುತ್ತಿದ್ದೆನು. ಆ ಶಕ್ತಿಯು ನನಗೆ ತಪ್ಪಿತು. ಇಂದ್ರಿಯಪರವಶನಾಗುವ ಸ್ಥಿತಿಗೆ ನಾನು ಬಂದಿರುವೆನು ಸತ್ಯದಲ್ಲಿಯೂ, ಧರ್ಮದಲ್ಲಿಯೂ ನಿನ್ನ ಸಹವಾಸದಲ್ಲಿದ್ದಾಗ, ನನಗೆ ಎಷ್ಟು ಪ್ರೀತಿಯು ಇತ್ತೋ ಅಷ್ಟು ಪ್ರೀತಿಯು ಈಗ ಇರುವುದಿಲ್ಲ. ಕಡಮೆಯಾಗುವ ಸಂಭವವು ಬರುತ್ತಲಿರುವುದು. ದೃವಯೋಗದಿಂದ ವಿಪತ್ತು ಸನ್ನಿಹಿತವಾಗುವ ಕಾಲಕ್ಕೆ ಸರಿಯಾಗಿ ನೀನು ಬಂದಿರುವಿ. ನಾನು ಕೃತಾರ್ಥನಾದೆನು."

ಈ ರೀತಿಯಲ್ಲಿ ನಾನು ಹೇಳುವುದರೊಳಗಾಗಿ, "ಈ ದ್ವೀಪದಲ್ಲಿ ಒಂದು ನಿಮಿಷವೂ ಇರಬೇಡ. ಇಲ್ಲಿಂದ ಪ್ರಯಾಣ ಮಾಡು. ಈ ದ್ವೀಪದ ಫಲಗಳೂ ಕೂಡ ವಿಷಭರಿತವಾಗಿರುವುವು. ಇಲ್ಲಿನ ವಾಯುವು ವಿಷದ ಹಬೆಯುಳ್ಳದ್ದು. ಜನಗಳು ವಿಷದ ಸೋಂಕುಳ್ಳವರು. ಇವರ ಸಹವಾಸದಿಂದ ಅಮೃತವು ವಿಷವಾಗುವುದು. ಇವರು ತಿರ್ಯಗ್ಜಂತುಗಳಿಗಿಂತಲೂ ಕಡೆ. ಯೂಲಿಸೆಸ್ಸನ ಮಗನಿಗೆ ಇದು ಅನುಕೂಲವಾದ ಸ್ಥಳವಲ್ಲ. ಒಂದು ನಿಮಿಷವೂ ಇಲ್ಲಿ ಇರಬೇಡ. ಹಿಂತಿರುಗಿ ನೋಡಬೇಡ. ನಾಶಕ್ಕೆ ಪಾತ್ರಸ್ಥಾನವಾದ ಈ ದ್ವೀಪವನ್ನು ಬಿಟ್ಟು ಓಡು." ಎಂಬದಾಗಿ ಮೆಂಟರನು ಹೇಳಿದನು.

ಈ ಮಾತುಗಳನ್ನು ಕೇಳಿದ ಕೂಡಲೇ, ವಿಚಿತ್ರವಾದ ಮನಸ್ಥೈರ್ಯವು ನನಗೆ ಉಂಟಾಯಿತು. ನನ್ನ ಕಣ್ಣುಗಳಲ್ಲಿ ಒಂದು ಕಾಂತಿಯು ಹುಟ್ಟಿತು. ಈ ದ್ವೀಪ ನಿವಾಸಿಗಳಲ್ಲಿ ತಿರಸ್ಕಾರವು ಹುಟ್ಟಿತು. ಈ ದ್ವೀಪಕ್ಕೆ ಬಂದೆನಲ್ಲಾ ಎಂಬ ವ್ಯಸನವು ಹುಟ್ಟಿತು. ಈಶ್ವರನ ಅನುಗ್ರಹವೇ ಮೆಂಟರನ ರೂಪವಾಗಿ ಬಂದಿರುವುದೆಂಬದಾಗಿಯೂ, ಈ ಅನುಗ್ರಹಕ್ಕೆ ಅನುಸಾರವಾಗಿ ನಡೆಯುವುದೇ ನನ್ನ ಕರ್ತವ್ಯವೆಂಬದಾಗಿಯೂ ನನಗೆ ತೋರಿತು. ಆಗ ಮೆಂಟರನು ಪುನಃ ಹೇಳಿದ್ದೇನೆಂದರೆ :—

"ಎಲೈ ಟೆಲಿಮಾಕಸ್ಸನೇ,—ಸಾವಕಾಶ ಮಾಡದೆ ಈ ಸ್ಥಳವನ್ನು ಬಿಟ್ಟು ಹೊರಡು. ನಾನು ಹೊರಡಬೇಕಾಗಿದೆ. ಅನುಲ್ಲಂಘನೀಯವಾದ ಕೆಲಸಗಳು ನನಗೆ ಬೇಕಾದ ಹಾಗಿರುವುವು. ನಾನು ಹೋಗುತ್ತೇನೆ." ಈ ರೀತಿಯಲ್ಲಿ ಮೆಂಟರನು ಹೇಳಿದ್ದನ್ನು ಕೇಳಿ, ನಾನು ಹೇಳಿದ್ದೇನೆಂದರೆ :—

"ನೀನು ಎಲ್ಲಿಗೆ ಹೋಗುತ್ತೀಯೆ ? ನೀನು ಹೋದ ಕಡೆಗೆ ನಿನ್ನ ನೆರಳಂತೆ ನಾನೂ ಅನುಸರಿಸಿ ಬರುವೆನು. ನನ್ನನ್ನು ಬಿಟ್ಟು ಹೋಗಬೇಡ. ಹಾಗೆ ಹೋಗುವ ಪಕ್ಷದಲ್ಲಿ, ನಿನ್ನ ಬಳಿಯಲ್ಲಿ ನನ್ನ ದೇಹವನ್ನು ಬಿಡುವೆನು." ಎಂದು ಹೇಳಿ, ಅವನ ಕಾಲನ್ನು ಹಿಡಿದುಕೊಂಡೆನು. ಅದಕ್ಕೆ ಮೆಂಟರನು ಹೇಳಿದ್ದೇನೆಂದರೆ ;—

"ನಿನ್ನ ಪ್ರಯತ್ನಗಳೆಲ್ಲಾ ವ್ಯರ್ಥ. ನಾನು ನಿನ್ನ ಬಳಿಯಲ್ಲಿ ಇರುವುದಕ್ಕೆ ಆಗುವುದಿಲ್ಲ. ಮೆಟೋಫಿಸ್ಸನು ನನ್ನನ್ನು ಹೇಜಲ್ ಎಂಬ ಅರಬ್ಬಿಯವನಿಗೆ ಮಾರಿರುವನು. ಅವನು ಡಮಾಸ್ಕಸ್ ದೇಶಕ್ಕೆ ಹೊರಟಿರುವನು. ಈ ಹೇಜಲ್ ಎಂಬುವನು ನಾನು ಗ್ರೀಸ್ ದೇಶದವನೆಂದು ತಿಳಿದುಕೊಂಡು, ನನ್ನನ್ನು ಕೊಂಡುಕೊಂಡಿರುವನು. ಅವನು ಆ ದೇಶದ ಚರಿತ್ರೆಯನ್ನೂ, ಶಾಸ್ತ್ರಗಳನ್ನೂ ತಿಳಿದುಕೊಳ್ಳಬೇಕೆಂಬ ಅಭಿಲಾಷೆಯುಳ್ಳವನಾಗಿರುವನು. ಬಹು ದ್ರವ್ಯವನ್ನು ಕೊಟ್ಟು, ನನ್ನನ್ನು ಕೊಂಡುಕೊಂಡಿರುವನು. ನಾನು ಗ್ರೀಸ್ ದೇಶದ ರಾಜತಂತ್ರಗಳನ್ನೆಲ್ಲಾ ಅವನಿಗೆ ಉಪದೇಶ ಮಾಡಿರುವೆನು. ಈಗ ಮಹಾತ್ಮನಾದ ಮೈನಾಸಿನ ಧರ್ಮಶಾಸ್ತ್ರಗಳನ್ನು ವ್ಯಾಸಂಗ ಮಾಡುವುದಕ್ಕೋಸ್ಕರ ಅವನು ಉಪಕ್ರಮ ಮಾಡಿರುವನು. ಕ್ರೀಟ್ ದ್ವೀಪಕ್ಕೆ ನಾವು ಹೋಗುತ್ತಿದ್ದೇವೆ. ಪ್ರತಿಕೂಲವಾದ ವಾಯುವಿನ ದೆಸೆಯಿಂದ ಈ ದ್ವೀಪಕ್ಕೆ ಬಂದೆವು. ಈ ದೇವಸ್ಥಾನಕ್ಕೂ ಪೂಜಾರ್ಥವಾಗಿ ಅವನು ಬರುತ್ತಲಿದ್ದಾನೆ. ಇಲ್ಲಿನ ಪೂಜೆಯನ್ನು ತೀರಿಸಿಕೊಂಡು, ನಾವು ಹೊರಡುವೆವು. ಅನುಕೂಲವಾದ ಗಾಳಿಯು ಬೀಸುವುದಕ್ಕೆ ಉಪಕ್ರಮವಾಗಿರುವುದು. ಟೆಲಿಮಾಕಸ್ಸನೇ ನಿನಗೆ ಮಂಗಳವಾಗಲಿ. ನಾನು ಈಗ ಹೇಜಲ್‌ನ

ದಾಸನಾಗಿರುತ್ತೇನೆ. ನನ್ನ ಯಜಮಾನನ ಆಜ್ಞಾನುಸಾರವಾಗಿ ನಾನು ನಡೆಯ ಬೇಕಾಗಿರುವುದು. ಹೀಗಾಗುವುದು ದೇವರ ಸಂಕಲ್ಪ. ನಾನು ಸ್ವತಂತ್ರನಾಗಿದ್ದರೆ, ನಿನ್ನ ಯೋಗಕ್ಷೇಮ ಚಿಂತೆಯನ್ನು ಮಾಡಬಹುದಾಗಿತ್ತು. ನಾನು ಈಗ ಸ್ವತಂತ್ರನಲ್ಲ. ಪರತಂತ್ರನಾಗಿರುತ್ತೇನೆ. ನಿಮ್ಮ ಅಪ್ಪನ ಯಶಸ್ಸನ್ನು ಸ್ಮರಿಸಿಕೊ. ನಿಮ್ಮ ತಾಯಿಗೆ ಉಂಟಾಗಿರತಕ್ಕ ದುರದೃಷ್ಟವನ್ನು ಸ್ಮರಿಸಿಕೊ. ದೇವರು ಧರ್ಮಿಷ್ಠರಲ್ಲಿ ಅನುರಕ್ತನಾಗಿರುವನು. ಇದನ್ನು ಮರೆಯಬೇಡ. ಇನ್ನು ಹೋಗಿಬರುವೆನು.''

"ಎಲೈ ಜಗದೀಶ್ವರನೇ,—ನಿರಪರಾಧಿಗಳನ್ನು ರಕ್ಷಿಸುವುದು ನಿನ್ನ ಬಿರುದಾಗಿರುವುದು. ಈ ಟೆಲಿಮಾಕಸ್ಸನು ನಿರಪರಾಧಿಯು. ಸತ್ಯಸಂಧನು. ಧರ್ಮಾತ್ಮನು. ಮನಸ್ಸಾಕ್ಷಿಗನುಸಾರವಾಗಿ ನಡೆಯುವುದರಲ್ಲಿ ಬದ್ಧಾದರನು. ಇವನು ನಿನ್ನ ರಕ್ಷಣೆಗೆ ಪಾತ್ರನು. ಇವನನ್ನು ನಿನಗೆ ಒಪ್ಪಿಸಿರುತ್ತೇನೆ. ನೀನು ಕಾಪಾಡುತ್ತೀ ಎಂಬದಾಗಿ ನಂಬಿರುತ್ತೇನೆ.'' ಎಂದು ಹೇಳಿ, ಮೆಂಟರನು ಹೇಜಲ್‌ನ ಬಳಿಗೆ ಹೊರಟನು. ಆಗ ಮೆಂಟರನಿಗೆ ನಾನು ಹೇಳಿದ್ದೇನೆಂದರೆ:—

"ಎಲೈ ಮೆಂಟರನೇ,—ನನ್ನನ್ನು ಬಿಟ್ಟು ನೀನು ಹೋಗಕೂಡದು. ಹಾಗೆ ಹೋಗುವ ಪಕ್ಷದಲ್ಲಿ, ನಾನು ಕೂಡಲೇ ದೇಹವನ್ನು ಬಿಡುವೆನು. ಹೇಜಲ್‌ನು ಮನುಷ್ಯಮಾತ್ರದವನಾಗಿರಬೇಕು. ಅವನು ನಿರ್ಘೃಣನಾಗಿರಲಾರನು. ನನಗೂ, ನಿನಗೂ ವಿಯೋಗವನ್ನು ಅವನು ಎಂದಿಗೂ ಮಾಡಲಾರನು. ನಿನ್ನ ಜೊತೆಯಲ್ಲಿ ದಾಸನಾಗಿರುವುದಕ್ಕೆ ನನಗೂ ಅವಕಾಶವನ್ನು ಕೊಡಲಿ ಈ ದ್ವೀಪವನ್ನು ಬಿಟ್ಟು ಹೊರಡಬೇಕೆಂದು ನೀನು ಅಪ್ಪಣೆಯನ್ನು ಕೊಟ್ಟಿರುವಿ. ನಿನ್ನ ಜೊತೆಯಲ್ಲಿಯೇ ನಾನೂ ಏತಕ್ಕೆ ಹೋಗಕೂಡದು? ನನ್ನನ್ನು ದಾಸನನ್ನಾಗಿ ಪರಿಗ್ರಹಿಸೆಂದು ನಾನು ಹೇಜಲ್‌ನನ್ನು ಪ್ರಾರ್ಥಿಸುವೆನು ನನ್ನಲ್ಲಿ ಅವನಿಗೆ ಪ್ರೀತಿಯು ಹುಟ್ಟಬಹುದು. ಕನಿಕರವೂ ಹುಟ್ಟಬಹುದು. ದೇಶಾಟನಗಳನ್ನು ಮಾಡಿ, ಧರ್ಮದಸ್ವರೂಪವನ್ನು ತಿಳಿದುಕೊಳ್ಳಬೇಕೆಂಬ ಅಭಿಲಾಷೆಯುಳ್ಳವನು ನನ್ನ ಪ್ರಾರ್ಥನೆಯನ್ನು ಎಂದಿಗೂ ತಿರಸ್ಕರಿಸನು. ಅವನ ಕಾಲಿಗೆ ಬಿದ್ದು, ನನ್ನ ದಾಸತ್ವವನ್ನೂ, ನಾನು ಮಾಡುವ ಸೇವೆಯನ್ನೂ ಪರಿಗ್ರಹಿಸಬೇಕೆಂದು ಪ್ರಾರ್ಥಿಸುವೆನು. ಅವನ ಸಮ್ಮತಿಯಿಂದ ನಾನು ನಿನ್ನ ಜೊತೆಯಲ್ಲ ಬರುವೆನು. ಎಲೈ ಪರಮ ಆಪ್ತನಾದ ಮೆಂಟರನೇ, ನಿನಗೆ ಬಂದ ಬಂಧವು ನನಗೆ ಏತಕ್ಕೆ ಬರಕೂಡದು? ನನ್ನ ಪ್ರಾರ್ಥನೆಯನ್ನು ಅವನು ತಿರಸ್ಕರಿಸಿದರೆ, ಮುಂದಿನ ಗತಿಯನ್ನು ನೋಡುವೆನು. ನಿನ್ನನ್ನು ಬಿಟ್ಟು, ಈ ಲೋಕದಲ್ಲಿರುವುದಕ್ಕಿಂತಲೂ ಲೋಕಾಂತರವೇ ಉತ್ತಮ.''

ಹೀಗೆ ನಾನು ಹೇಳುತ್ತಿರುವಾಗ್ಗೆ, ಹೇಜಲ್‌ಸು ನಮ್ಮ ಸಮೀಪಕ್ಕೆ ಬಂದು ಮೆಂಟರನ್ನು ಕರೆದನು. ಕೂಡಲೆ ನಾನು ಸಾಷ್ಟಾಂಗ ಪ್ರಣಾಮವನ್ನು ಮಾಡಿದೆನು. ನನ್ನನ್ನು ನೋಡಿ, 'ನೀನು ಯಾರು ? ಯಾತಕ್ಕೋಸ್ಕರ ನನ್ನ ಕಾಲುಗಳನ್ನು ಹಿಡಿದುಕೊಂಡಿರುವೆ' ಎಂದು ಕೇಳಿದನು. ನಾನು ಹೇಳಿದ್ದೇನೆಂದರೆ :—

'ನಾನು ಒಬ್ಬ ಪರದೇಶಿ. ನಾನು ಈ ಮೆಂಟರನ ಶಿಷ್ಯನು. ಇವನ ಜೊತೆಯಲ್ಲಿ ನಾನು ದಾಸನಾಗಿರುವುದಕ್ಕೆ ಅನುಜ್ಞೆಯನ್ನು ಪ್ರಾರ್ಥಿಸುತ್ತೇನೆ' ಎಂದು ಹೇಳಿದೆನು. 'ನೀನು ಯಾರ ಮಗನು' ಎಂದು ಅವನು ಕೇಳಿದನು. ಟ್ರಾಯ್ ದೇಶವನ್ನು ಮುತ್ತಿಗೆ ಹಾಕುವುದಕ್ಕೆ ಹೋದ ಗ್ರೀಕ್ಸ್ ಪ್ರಭುಗಳಲ್ಲಿ ಅಗ್ರಗಣ್ಯನಾಗಿದ್ದ, ಪ್ರಪಂಚದಲ್ಲಿ ಜಗಂತಪ್ರಶಸ್ತ್ಯಾಂತವಾದ ಕೀರ್ತಿಯನ್ನು ಪಡೆದಿದ್ದ ಯೂಲಿಸಸ್ಸನ ವಿಷವನ್ನು ನೀನು ಕೇಳಿರಬಹುದು. ನಾನು ಅವನ ಮಗನು. ನಿನ್ನಿಂದ ಪೂಜಿಸಲ್ಪಡಬೇಕೆಂದು ನನ್ನ ತಂದೆಯ ಮಹಿಮೆಯನ್ನು ನಿನ್ನಲ್ಲಿ ಹೇಳಿಕೊಳ್ಳುತ್ತೇನೆಂದು ಭಾವಿಸಬೇಡ. ನನ್ನಲ್ಲಿ ನೀನು ಕರುಣವನ್ನು ಇಡುವುದಕ್ಕೆ ಇದು ಕಾರಣವಾದರೆ ಆಗಲೆಂಬದಾಗಿ, ನೀನು ಕೇಳಿದ್ದರಿಂದ ಈ ವಿಷಯವನ್ನು ಹೇಳಬೇಕಾಯಿತು. ಈ ಮೆಂಟರನು ನನ್ನ ತಂದೆಗೆ ಸಮಾನನಾದ ನನ್ನ ಗುರುವಾಗಿ ದೈವಯೋಗದಿಂದ ಪರಿಣಮಿಸಿರುವನು. ನನ್ನ ತಂದೆಯು ದೇಶಯಾತ್ರೆಗೋಸ್ಕರ ಹೊರಟಿರುವನು. ಅವನನ್ನು ಹುಡುಕಿಕೊಂಡು ನಾವು ಹೊರಟಿದ್ದೆವು. ಈಗ ಮೆಂಟರನು ನಿನ್ನ ದಾಸನಾಗಿರುವನು. ಈ ದಾಸತ್ವವನ್ನು ನನ್ನ ಮೇಲೆ ದಯವಿಟ್ಟು ನನಗೂ ಅನ್ವಯಿಸುವಂತೆ ಮಾಡು. ಮೈನಾಸ್ ಧರ್ಮಶಾಸ್ತ್ರವನು ತಿಳಿದುಕೊಳ್ಳುವುದಕ್ಕೆ ನೀನು ಕ್ರೀಟ್ ದ್ವೀಪಕ್ಕೆ ಹೋಗುವುದಾದರೆ, ನಿಮ್ಮಗಳ ಜೊತೆಯಲ್ಲಿ ಬರುವುದಕ್ಕೆ ನನಗೂ ಅನುಜ್ಞೆಯನ್ನು ಕೊಡು. ಲೋಕೈಕವೀರನಾದ ಯೂಲಿಸಸ್ಸನ ಮಗನು ನಿನ್ನ ದಾಸಾನುದಾಸನಾಗಿರಬೇಕೆಂದು ಪ್ರಾರ್ಥಿಸುತ್ತಲಿದ್ದಾನೆ. ಒಂದಾನೊಂದು ಕಾಲದಲ್ಲಿ ಸಿಸಲಿ ದ್ವೀಪದಲ್ಲಿ ನಾನು ಖೈದಿಯಾಗಿದ್ದಾಗ, ಸೇವಾವೃತ್ತಿಗಿಂತಲೂ ಮರಣವು ಉತ್ತಮವೆಂದು ನಾನು ಭಾವಿಸಿದ್ದೆನು. ಈಗ ಮರಣಕ್ಕಿಂತಲೂ ನಿನ್ನಲ್ಲಿ ದಾಸನಾಗಿರುವುದು ಉತ್ತಮವೆಂದು ಭಾವಿಸಿ, ನಿನ್ನನ್ನು ಪ್ರಾರ್ಥಿಸುತ್ತಲಿದ್ದೇನೆ. ಈ ವಿಷಯದಲ್ಲಿ ನೀನು ನನ್ನಲ್ಲಿ ಅನುಗ್ರಹವನ್ನು ಮಾಡದಿದ್ದರೆ ದೇಹವನ್ನು ಬಿಡುವೆನು. ನನ್ನ ಪ್ರಾರ್ಥನೆಯನ್ನು ಪಾಲಿಸುವ ಬುದ್ಧಿಯನ್ನು ದೇವರು ನಿನಗೆ ಕೊಡಲಿ. ಜೊತೆಯಲ್ಲಿ ಹೊರಡುವುದಕ್ಕೆ ನನಗೂ ಅವಕಾಶವನ್ನು ದಯವಿಟ್ಟು ಕೊಡು. ಮೆಂಟರನ ಜೊತೆಯಲ್ಲಿ ನಾನೂ ನಿನ್ನ ದಾಸನಾಗಿ ಇರುತ್ತೇನೆ. ಗ್ರೀಸ್ ದೇಶದ ಚರಿತ್ರೆಯನ್ನು ತಿಳಿಸುವುದಕ್ಕೂ, ಮೈನಾಸ್‌ನ ಧರ್ಮಶಾಸ್ತ್ರಗಳಲ್ಲಿ ನಿನಗೆ ಪ್ರವೇಶವನ್ನುಂಟುಮಾಡುವುದಕ್ಕೂ ಸಾಧ್ಯವಾದ ಮಟ್ಟಿ

ಗೂ ನಿನಗೆ ಸಹಾಯಕನಾಗಿರುತ್ತೇನೆ. ನನ್ನಲ್ಲಿ ಅನುಗ್ರಹವನ್ನು ಮಾಡು ' ಎಂದು ನಾನು ಪ್ರಾರ್ಥಿಸಲು, ಹೇಜಲ್‌ನು ಅತ್ಯಂತ ಸಂತೋಷದಿಂದ ನನ್ನನ್ನು ನೋಡಿದನು. ಸಾಷ್ಟಾಂಗ ಪ್ರಣಾಮವನ್ನು ಮಾಡಿ, ದಾಸತ್ವವನ್ನು ಪ್ರಾರ್ಥಿಸಿದ ನನ್ನನ್ನು ಮೇಲಕ್ಕೆ ಎತ್ತಿ, ಅವನು ಹೇಳಿದ್ದೇನೆಂದರೆ.—

" ಎಲೈ ಟೆಲಿಮಾಕಸ್ಸನೇ,— ಯೂಲಿಸಸ್ಸನ ವಿವೇಕವು ದಿಗಂತವಿಶ್ರಾಂತವಾಗಿರುವುದು. ಅವನ ರಾಜತಂತ್ರವಿಶಾರದತ್ವದ ಮಹಿಮೆಯನ್ನು ತಿಳಿಯದವರೇ ಅಪೂರ್ವ. ಗ್ರೀಸ್ ನೇತೀಯರಲ್ಲಿ ಅವನು ಸಂಪಾದಿಸಿರುವ ಮಹಿಮೆಯ ವಿಷಯವನ್ನು ನಾನು ಕೇಳಿ ಇದ್ದೇನೆ ಅವನ ಯಶಸ್ಸು ಪಾಶ್ಚಾತ್ಯ ದೇಶಗಳಲ್ಲಿ ಮಾತ್ರವೇ ಅಲ್ಲದೆ, ಪೂರ್ವ ದಿಕ್ಕಿನ ದೇಶಗಳಲ್ಲಿಯೂ ಹರಡಿಕೊಂಡಿರುವುದು. ಯೂಲಿಸಸ್ಸಿಗೆ ನೀನು ಔರಸ ಪುತ್ರನು. ನನಗೆ ಪ್ರೇಮಪುತ್ರನಾಗಿರು. ಯೂಲಿಸಸ್ಸನು ನಿನಗೆ ಸಿಕ್ಕುವವರಗೂ ನಾನು ನಿನಗೆ ತಂದೆಯಾಗಿರುವೆನು. ನಿಮ್ಮ ತಂದೆಯ ಮಹಿಮೆಯೂ, ಅವನ ದುರದೃಷ್ಟವೂ, ನನ್ನ ಅನುರಾಗಕ್ಕೆ ಪಾತ್ರವಾಗದೆ ಇದ್ದಾಗ್ಯೂ, ನಿನ್ನ ವಿಷಯದಲ್ಲಿ ಮೆಂಟರನಿಗೆ ಇರತಕ್ಕ ಪ್ರೀತಿಯು ನಿನ್ನನ್ನು ನನ್ನ ಪ್ರೀತಿಗೂ ವಿಷಯನನ್ನಾಗಿ ಮಾಡಿರುವುದು. ನಾನು ಮೆಂಟರನನ್ನು ಖರೀದಿಗೆ ಕೊಂಡುಕೊಂಡೆನು. ಅವನು ತಾನು ನನ್ನ ದಾಸನೆಂದು ತಿಳಿದುಕೊಂಡಿರುವನು. ನಾನು ಹಾಗೆ ಭಾವಿಸಿರುವುದಿಲ್ಲ. ಅದೃಷ್ಟವಶದಿಂದ ನನಗೆ ಲಭ್ಯವಾದ ದೇವರಂತೆ ಅವನನ್ನು ನಾನು ಭಾವಿಸಿರುವೆನು. ನನ್ನ ಪುಣ್ಯಾಪರಿಪಾಕದಿಂದ ಮೆಂಟರನು ನನಗೆ ದೊರೆತನು. ಅವನಿಗೆ ಬೆಲೆಯನ್ನು ಕೊಟ್ಟಿರುವೆನೆಂದು ನಾನು ತಿಳಿದುಕೊಂಡಿಲ್ಲ. ಈ ಪ್ರಪಂಚದ ಸಂಪತ್ತನ್ನೆಲ್ಲಾ ಕೊಟ್ಟಾಗ್ಯೂ, ಅದು ಅವನಿಗೆ ತಕ್ಕ ಬೆಲೆಯಲ್ಲ. ಅವನು ನನಗೆ ಉಪದೇಶ ಮಾಡಿದ ಧರ್ಮಗಳಿಗೂ, ಹಿತೋಕ್ತಿಗಳಿಗೂ ಬೆಲೆಯುಂಟಾಯದು! ಅವನ ಹಿತೋಪದೇಶದಿಂದ ನನಗೆ ಲಭ್ಯವಾಗಿರುವ ಜ್ಞಾನವನ್ನು ಅಳೆಯುವುದು ಹೇಗೆ! ಅವನು ದೊರೆತದ್ದು ಒಂದು ದೊಡ್ಡ ಸಂಪತ್ತೆಂದು ನಾನು ತಿಳಿದುಕೊಂಡಿದ್ದೆನು. ಅವನ ಜೊತೆಗೆ ನೀನೂ ಸಿಕ್ಕಿದ್ದು ಹಾಗೆಯೇ ಬೆಲೆಯಿಲ್ಲದ ಸಂಪತ್ತೆಂದು ನನಗೆ ತೋರುತ್ತದೆ. ಲೋಕೈಕವೀರನಾದ ಯೂಲಿಸಸ್ಸೆಲ್ಲಿ? ಅವನಿಗೆ ಸಮಾನನಾದ ಟೆಲಿಮಾಕಸ್ಸನೆಲ್ಲಿ? ನಾನು ಎಲ್ಲಿ? ನನ್ನಲ್ಲಿ ದಾಸನಾಗಿರಬೇಕೆಂದು ನೀನು ಅಪೇಕ್ಷಿಸುತ್ತೀಯೆ. ನೀನು ನನಗೆ ಆಪ್ತಮಿತ್ರನಾಗಿರಬೇಕೆಂದು ನಾನು ಅಪೇಕ್ಷಿಸುತ್ತೇನೆ. ದಾಸರೆಂದು ನೀವು ಇಬ್ಬರೂ ತಿಳಿದುಕೊಳ್ಳಬಾರದು. ಪರಮ ಆಪ್ತರಾದ ಸ್ನೇಹಿತರೆಂದು ನೀವು ಭಾವಿಸಬೇಕು."

ಈ ರೀತಿಯಲ್ಲಿ ಹೇಜಲ್‌ನು ಹೇಳಲು, ಅನಿರ್ವಚನೀಯವಾದ ಸಂತೋ

ಷವು ನನಗೆ ಉಂಟಾಯಿತು. ದೇಹವನ್ನು ಬಿಡಬೇಕೆಂಬ ಸಂಕಲ್ಪವು ದೂರವಾಯಿತು. ಮೆಂಟರನ ಜೊತೆಯಲ್ಲಿ ಇದ್ದುಕೊಂಡು, ಇಷ್ಟಾರ್ಥಗಳನ್ನೆಲ್ಲಾ ಹೊಂದುವ ಸಂಭವವು ಬರುವುದೆಂಬ ಕೋರಿಕೆಯೂ ಉಂಟಾಯಿತು. ಮೆಂಟರನ ಸಾನ್ನಿಧ್ಯವೇ ಸ್ವರ್ಗವೆಂಬದಾಗಿಯೂ, ಮುಂದೆ ಅವನಿಂದ ವಿಯೋಗವು ಬರುವುದಿಲ್ಲವೆಂಬದಾಗಿಯೂ ತೋರಿತು. ಹೇಜಲ್‌ನು ನಮ್ಮಿಬ್ಬರಲ್ಲಿಯೂ ನಿಸರ್ಗವಾದ ಪ್ರೀತಿಯುಳ್ಳವನಾಗಿದ್ದನು. ಇವನನ್ನು ಕಾಣುವುದಕ್ಕೆ ಮುಂಚೆ, ಪ್ರಪಂಚವೇ ನನ್ನ ಭಾಗಕ್ಕೆ ತಮೋಮಯವಾಗಿತ್ತು. ದೈವಯೋಗದಿಂದ ನನಗೆ ಉಂಟಾಗಿದ್ದ ಕ್ಲೇಶವೆಲ್ಲಾ ಸಂತೋಷವಾಗಿ ಪರಿಣಮಿಸಿತು. ನಾವು ಮೂರು ಜನಗಳೂ ಕ್ರೀಟ್ ದ್ವೀಪಕ್ಕೆ ಹೊರಟೆವು. ವಾಯುವು ನಮಗೆ ಅನುಕೂಲವಾಗಿತ್ತು. ಸೈಪ್ರೆಸ್ ದ್ವೀಪವನ್ನು ಬಿಟ್ಟ ಕೊಂಚ ಹೊತ್ತಿನಲ್ಲಿಯೇ ಬಹು ದೂರ ಹೋದೆವು. ಆ ದ್ವೀಪವು ಅದೃಶ್ಯವಾಯಿತು. 'ಈ ದ್ವೀಪನಿವಾಸಿಗಳ ನಡನುಡಿಗಳ ವಿಷಯದಲ್ಲಿ ನಿನ್ನ ಅಭಿಪ್ರಾಯವೇನು?' ಎಂಬದಾಗಿ ಹೇಜಲ್‌ನು ನನ್ನನ್ನು ಕೇಳಿದನು. ಇಲ್ಲಿನ ಸ್ತ್ರೀಪುರುಷರು ವಿಷಯಸುಖಪರವಶರಾಗಿ, ಸ್ವಲ್ಪವೂ ಯಗ್ಗಿಲ್ಲದೆ ನಡೆದುಕೊಳ್ಳುವುದನ್ನೂ, ಇವರ ನಡವಳಿಯಿಂದ ಉಂಟಾಗತಕ್ಕ ಅನರ್ಥಗಳನ್ನೂ ನಾನು ಪ್ರಸ್ತಾಪಿಸಿದೆನು. ದುರ್ವಿಷಯಗಳಲ್ಲಿ ನನಗೆ ಉಂಟಾಗಿದ್ದ ಅಸಹ್ಯವನ್ನು ನೋಡಿ ಅವನು ಹೇಳಿದ್ದೇನೆಂದರೆ:—

"ಈ ದ್ವೀಪನಿವಾಸಿಗಳು ತಿರ್ಯಗ್ಜಂತುಗಳಂತೆ ನಡೆದುಕೊಳ್ಳುತ್ತಿದ್ದಾಗ್ಯೂ, ನೀನು ದುರ್ವಿಷಯದಲ್ಲಿ ಪರಾಙ್ಮುಖನಾಗಿರುವುದನ್ನು ನೋಡಿ, ನನಗೆ ಸಂತೋಷವಾಯಿತು. ಈ ದ್ವೀಪನಿವಾಸಿಗಳಿಗೂ, ನಾಯಿಗಳೇ ಮೊದಲಾದ ತಿರ್ಯಗ್ಜಂತುಗಳಿಗೂ ವಿಶೇಷ ವ್ಯತ್ಯಾಸವಿರುವುದಿಲ್ಲ. ಈ ದ್ವೀಪದ ಸೋಂಕನ್ನು ತಪ್ಪಿಸಿಕೊಳ್ಳುವುದಕ್ಕೆ ನಿನಗೆ ಅವಕಾಶ ಉಂಟಾದದ್ದನ್ನು ನೋಡಿದರೆ, ದೇವರ ಅನುಗ್ರಹವು ನಿನ್ನಲ್ಲಿ ಪರಿಪೂರ್ಣವಾಗಿರುವಂತೆ ತೋರುತ್ತದೆ." ಎಂದು ಹೇಳಿ, ಮೆಂಟರನೊಡನೆ ಸಂಭಾಷಣೆಗೆ ಉಪಕ್ರಮಿಸಿದನು.

ಸೃಷ್ಟಿಸ್ಥಿತಿಪ್ರಳಯಗಳಿಗೆ ಮೂಲಕಾರಣನನ್ನೂ, ಸರ್ವವ್ಯಾಪಿಯಾದ ಜಗದೀಶ್ವರನ ಮಹಿಮೆಯನ್ನೂ, ಸೂರ್ಯನು ಪ್ರಪಂಚವನ್ನು ಹೇಗೆ ಬೆಳಕಿನಿಂದ ತುಂಬುವಂತೆ ಮಾಡುತ್ತಾನೋ ಹಾಗೆ ಬ್ರಹ್ಮಜ್ಞಾನದಿಂದ ಮನಸ್ಸೆಂಬ ಪ್ರಪಂಚವು ಜ್ಞಾನವೆಂಬ ಬೆಳಕಿನಿಂದ ಹೇಗೆ ತುಂಬಲ್ಪಡುವುದೋ ಅದನ್ನೂ ಕುರಿತು ಸಂಭಾಷಣವನ್ನು ಮಾಡುವುದಕ್ಕೆ ಉಪಕ್ರಮಿಸಿದರು. ಹುಟ್ಟುಕುರುಡರಾದವರಿಗೆ ಪ್ರಪಂಚದ ಸ್ವರೂಪವು ಹೇಗೆ ಗೊತ್ತಾಗುವುದಿಲ್ಲವೋ ಹಾಗೆಯೇ ವಿಷಯಲಂಪಟರಾದವರಿಗೆ ಈ ಲೋಕವನ್ನೇ ಹೇಗೆ ಸ್ವರ್ಗವನ್ನಾಗಿ ಮಾಡಿಕೊಳ್ಳ

ಬಹುದೋ ಅದು ಗೊತ್ತಾಗುವುದಿಲ್ಲ. ಕುರುಡರಿಗೆ ಪ್ರಪಂಚವೆಲ್ಲಾ ಅಂಧಕಾರಮಯವಾಗಿರುವುದು. ಅಜ್ಞಾನಿಗಳಾದವರು ತಾವು ಪ್ರಪಂಚವನ್ನೆಲ್ಲಾ ನೋಡಿರುವುದಾಗಿ ತಿಳಿದುಕೊಂಡಿರುವರು. ಅವರಿಗೆ ಒಂದೂ ತಿಳಿಯುವುದಿಲ್ಲ. ಜಘನ್ಯವಾದ ವಿಷಯ ಸುಖಗಳಲ್ಲಿ ಮುಳುಗಿ ತೇಲತಕ್ಕವರಿಗೆ ಧರ್ಮವೂ, ಮೋಕ್ಷವೂ ಎರಡೂ ಲಭ್ಯವಾಗುವುದಿಲ್ಲ. ಮನೋವಾಕ್ಕರ್ಮಗಳಲ್ಲಿ ಪರಿಶುದ್ಧರಾದವರಿಗೆ ಸಕಲ ಇಷ್ಟಾರ್ಥಸಿದ್ಧಿಯೂ ಆಗುವುದು. ಇದು ಅನುಭವೈಕವೇದ್ಯವಾದದ್ದು. ಈ ಪ್ರಕಾರ ಈ ವಿಷಯಗಳನ್ನೆಲ್ಲಾ ಮೆಂಟರನೂ, ಹೇಜಲ್‌ನೂ ಚರ್ಚೆ ಮಾಡುತ್ತಿದ್ದರು. ಮೆಂಟರನು ಬೃಹಸ್ಪತಿಯ ಅವತಾರನೆಂದು ನಾನು ಭಾವಿಸಿದ್ದೆನು. ಸಾರಾಸಾರ ವಿಚಾರಗಳಲ್ಲಿ, ಅವನಲ್ಲಿ ಪ್ರಪಂಚವೇ ಭಿಕ್ಷವನ್ನೆತ್ತಬೇಕೆಂಬ ಪ್ರತ್ಯೆಯವು ನನಗೆ ಉಂಟಾಗಿತ್ತು. ಹೇಜಲ್‌ನ ಸಂಭಾಷಣಗಳನ್ನು ನೋಡಿ, ಸಕಲ ವಿಷಯಗಳಲ್ಲಿಯೂ ಮೆಂಟರನು ಅದ್ವಿತೀಯನೆಂದೂ, ಹೇಜಲ್‌ನು ಮೆಂಟರನ ಶಿಷ್ಯನಾಗಿರುವುದಕ್ಕೆ ಅನರ್ಹನಲ್ಲನೆಂದೂ ನನಗೆ ಗೊತ್ತಾಯಿತು. ಈ ಅಖಂಡ ಬ್ರಹ್ಮಾಂಡದ ಸೃಷ್ಟಿಸ್ಥಿತಿ ಪ್ರಳಯಗಳು ಹೇಗೆ ವಿಚಿತ್ರವಾಗಿರುವುವೋ, ಅಣುಗಳು ಮೊದಲ್ಗೊಂಡು ಅವುಗಳಿಂದ ಪರಿಪೂರ್ಣವಾದ ಬ್ರಹ್ಮಾಂಡದವರೆಗೂ ಸಕಲ ಚರಾಚರ ವಸ್ತುಗಳೂ ಹೇಗೆ ಪರಬ್ರಹ್ಮನಿಂದ ವ್ಯಾಪ್ತವಾಗಿರುವುವೋ, ಕೆಲವು ಪದಾರ್ಥಗಳಲ್ಲಿ ಈ ವ್ಯಾಪ್ತಿಯು ಹೇಗೆ ಅವ್ಯಕ್ತವಾಗಿರುವುದೋ, ಮತ್ತೆ ಕೆಲವು ಪದಾರ್ಥಗಳಲ್ಲಿ ಅವುಗಳೆಲ್ಲಾ ಹೇಗೆ ವ್ಯಕ್ತವಾಗಿರುವುದೋ, ಸೂರ್ಯ ಚಂದ್ರ ನಕ್ಷತ್ರಗಳಲ್ಲಿ ಈ ಶಕ್ತಿಯು ಹೇಗೆ ಜಾಜ್ವಲ್ಯಮಾನವಾಗಿರುವುದೋ, ಜಡವಸ್ತುಗಳಲ್ಲಿ ಹೇಗೆ ಪ್ರಚ್ಛನ್ನವಾಗಿರುವುದೋ, ಬೀಜಸ್ವರೂಪದಲ್ಲಿರುವಾಗ, ನಾನಾವಿಧವಾದ ವೃಕ್ಷಗಳೂ, ಫಲಪುಷ್ಪಗಳೂ ಹೇಗೆ ಸಂಕುಚಿತವಾದ ಅವಸ್ಥೆಯಲ್ಲಿರುವುವೋ ಭೂಸಂಬಂಧವೂ ಪಂಚಭೂತಗಳ ಸಂಬಂಧವೂ ಉಂಟಾದ ಕೂಡಲೆ, ಬೀಜವು ವೃಕ್ಷವಾಗಿಯೂ, ಫಲವಾಗಿಯೂ, ಪುನಃ ಉತ್ತರೋತ್ತರ ವ್ಯಕ್ತವಾಗುವ ಬೀಜವಾಗಿಯೂ ಹೇಗೆ ಆಗುವುದೋ, ಶಿಲಾವಸ್ಥೆಯಲ್ಲಿಯೂ, ಜಲಾವಸ್ಥೆಯಲ್ಲಿಯೂ, ಅನಿಲಾವಸ್ಥೆಯಲ್ಲಿಯೂ ಇರತಕ್ಕ ಪ್ರಪಂಚವೆಲ್ಲಾ ಈ ವ್ಯಕ್ತಾವ್ಯಕ್ತ ದೆಸೆಯಲ್ಲಿ ಹೇಗಿರುವುದೋ, ಇದಕ್ಕೆ ಆದಿಕಾರಣನಾದವನೇ ಹೇಗೆ ಪರಬ್ರಹ್ಮನೆನ್ನಿಸಿಕೊಳ್ಳುವನೋ, ಇವನ ವ್ಯಕ್ತಾವ್ಯಕ್ತ ಸ್ವರೂಪವನ್ನು ತಿಳಿದುಕೊಳ್ಳುವುದು ಹೇಗೆ ಪಾಮರರಿಗೆ ಅಸಾಧ್ಯವೋ, ನಮಗೆ ಕಣ್ಣುಗಳು ಇದ್ದಾಗ್ಯೂ, ಹೇಗೆ ಕಣ್ಣಿಲ್ಲದವರಾಗಿ ಇರುವೆವೋ, ಕಿವಿ ಇದ್ದಾಗ್ಯೂ, ಕಿವಿಯಿಲ್ಲದವರಾಗಿರುವೆವೋ, ಮೂಗು, ನಾಲಗೆ, ತ್ವಕ್ಕು, ಬುದ್ಧಿ, ಮೊದಲಾದವುಗಳನ್ನು ನಾವು ಹೊಂದಿದ್ದಾಗ್ಯೂ, ಸ್ವಲ್ಪ ಹೆಚ್ಚು ಕಡಮೆಯಾಗಿ ಅವುಗಳನ್ನು ಹೊಂದದೆ ಇದ್ದವರೊಡನೆ

ನಾವು ಹೇಗೆ ಸಮನಾಗಿರುತ್ತೇವೋ, ಬೆಳಕಿನಲ್ಲಿ ಇದ್ದಾಗ್ಯೂ ಹೇಗೆ ಅಗಾಧವಾದ ಕತ್ತಲೆಯಲ್ಲಿ ಇರುತ್ತೇವೋ, ವಿವೇಕಿಗಳೆಂದು ನಾವು ತಿಳಿದುಕೊಂಡಿದ್ದಾಗ್ಯೂ, ಹೇಗೆ ವಜ್ರಮೂರ್ಖರಾಗಿರುತ್ತೇವೆಯೋ, ಸರ್ವಜ್ಞರೆಂದು ನಾವು ತಿಳಿದುಕೊಂಡಿದ್ದಾಗ್ಯೂ, ಹೇಗೆ ಅಜ್ಞಾನ ಶಿರೋಮಣಿಗಳಾಗಿರುತ್ತೇವೋ, ಮಿಥ್ಯೆಗಳನ್ನೆಲ್ಲಾ ನಾವು ಹೇಗೆ ಸತ್ಯವೆಂದು ತಿಳಿದುಕೊಂಡಿರುತ್ತೇವೆಯೋ, ಗೋಸುಂಬೆಯಂತೆ ಈ ಪ್ರಪಂಚವು ಹೇಗೆ ಪ್ರತಿ ನಿಮಿಷದಲ್ಲಿಯೂ ಅದರ ಸ್ವರೂಪವನ್ನು ಬದಲಾಯಿಸುತ್ತಿರುವುದೋ, ವಿಷಯ ಸುಖದಲ್ಲಿ ಮುಳುಗಿ ತೇಲತಕ್ಕವರಿಗೆ ಈ ಪ್ರಪಂಚದ ಸ್ವರೂಪವು ಹೇಗೆ ಗೊತ್ತಾಗುವುದಿಲ್ಲವೋ, ಕ್ಷಣಭಂಗುರವಾಗಿರತಕ್ಕ ಸುಖಗಳನ್ನೆಲ್ಲಾ ಆಚಂದ್ರಾರ್ಕವಾದವುಗಳೆಂದು ತಿಳಿದುಕೊಂಡು, ನಾವು ಹೇಗೆ ಪ್ರವರ್ತಿಸುತ್ತೇವೋ, ಪ್ರತಿ ನಿಮಿಷದಲ್ಲಿಯೂ ಕೋಟ್ಯಂತರ ಪ್ರಾಣಿಗಳು ಯಮಾಲಯವನ್ನು ಪ್ರವೇಶಿಸುತ್ತಿದ್ದಾಗ್ಯೂ, ನಾವು ಮಾತ್ರ ಆಚಂದ್ರಾರ್ಕವಾಗಿ ಬದುಕುವಂತೆ ತಿಳಿದುಕೊಂಡು ಯಥಾಜಾತರಂತೆ ಹೇಗೆ ನಡೆದುಕೊಳ್ಳುತ್ತೇವೋ, ನಮ್ಮ ಕ್ಷೇಮಾರ್ಥವಾಗಿ ಜಗದೀಶ್ವರನು ನಮಗೆ ಅನುಗ್ರಹಿಸಿ ಕೊಟ್ಟಿರುವ ತಾರತಮ್ಯ ಜ್ಞಾನವು ಜಡಾವಸ್ಥೆಗೆ ಬರುವಂತೆ ನಾವು ಹೇಗೆ ಮಾಡಿಕೊಳ್ಳುತ್ತೇವೋ, ಮನೋವಾಕ್ಕರ್ಮಗಳಲ್ಲಿ ನಾವು ವ್ಯಭಿಚರಿಸಿ ನಡೆದರೆ, ಅದಕ್ಕೆ ಕನಿಷ್ಠಪಕ್ಷ ಇಬ್ಬರು ಸಾಕ್ಷಿಗಳಾದರೂ ಇರುವರೆಂದು ನಾವು ಹೇಗೆ ತಿಳಿದುಕೊಳ್ಳುವುದಿಲ್ಲವೋ, ನಮ್ಮ ಮನಸ್ಸೂ, ಸರ್ವವ್ಯಾಪಿಯಾದ ದೇವರೂ ಇವರಿಗೆ ತಿಳಿಯದಂತೆ ಯಾವ ಕೆಲಸವೂ ಮಾಡುವುದಕ್ಕಾಗುವುದಿಲ್ಲವೆಂಬ ಜ್ಞಾನವು ನಮಗೆ ಹೇಗೆ ಇರುವುದಿಲ್ಲವೋ, ಜಗದೀಶ್ವರನ ಮಹಿಮೆಯು ಹೇಗೆ ವಿಚಾರಸಾಗರವಾಗಿ ಪರಿಣಮಿಸುವುದೋ, ಅವುಗಳ ಸ್ವರೂಪವನ್ನು ತಿಳಿದುಕೊಳ್ಳಬೇಕಾದರೆ, ಏಕಾಗ್ರಚಿತ್ತದಿಂದ ಹೇಗೆ ತಪಸ್ಸನ್ನು ಮಾಡುವುದು ಆವಶ್ಯಕವೋ, ಇವುಗಳನ್ನೆಲ್ಲಾ ಕುರಿತು ಪೇಜಲ್‌ನು ತನ್ನ ಅಭಿಪ್ರಾಯವನ್ನು ತಿಳಿಸಿದ್ದನಲ್ಲ, ಮಿಂಟರನು ಅವುಗಳಿಗೆ ಕೊಟ್ಟ ಉತ್ತರವನ್ನೂ ನಾನು ಕೇಳುತ್ತಿದ್ದೆನು. ಇವರ ಸಂಭಾಷಣೆಯಿಂದ ನನಗೆ ಒಂದು ಹೊಸ ಪ್ರಪಂಚ ಜ್ಞಾನವು ದೃಷ್ಟಿಪಥಕ್ಕೆ ಬಿದ್ದ [illegible] ಎಚ್ಚತ್ತ, ನಾನೇ ಸರ್ವಜ್ಞನೆಂದು ತಿಳಿದುಕೊಂಡಿದ್ದೆನು. [illegible] ಕಿರಿಯನೆಂದು ಅವನ ಸಂಭಾಷಣೆಯಿಂದ ಗೊತ್ತಾಯಿತು. [illegible] ದಲ್ಲಿ [illegible] ರತ್ನಗಳಿರುವುವೆಂಬದಾಗಿಯೂ, ಮಿಂಟರನು ಚಿಂತಾಮಣಿಗೆ ಸಮಾನನಾಗಿದ್ದಾಗ್ಯೂ, ಸ್ವಲ್ಪ ಹೆಚ್ಚು ಕಡಮೆಯಾಗಿ ಅವನಿಗೆ ಸಮಾನವಾದ ಮಹಿಮೆಯುಳ್ಳವರೂ ಕೂಡ ಪ್ರಪಂಚದಲ್ಲಿ ಇರುತ್ತಾರೆಂಬದಾಗಿಯೂ ನನಗೆ ಗೊತ್ತಾಯಿತು.

ಶ್ರೀ ಕೃಷ್ಣನು ಅರ್ಜುನನಿಗೆ ವಿಶ್ವರೂಪುದರ್ಶನವನ್ನು ಮಾಡಿಸಿದನೆಂದು ಭಾರತೀಯರು ಹೇಳಿಕೊಳ್ಳುವುದು ಮಿಥ್ಯೆಯೆಂದು ಗನಗೆ ತೋರುತಿತ್ತು. ಇವರ ಸಂಭಾಷಣದಿಂದ ಈ ಪ್ರಪಂಚದ ಸೃಷ್ಟಿಸ್ಥಿತಿಪ್ರಳಯಗಳೂ ಇವುಗಳಿಗೆಲ್ಲಾ ಜಗದೀಶ್ವರನು ಒಂದೊಂದು ವಿಧವಾಗಿ ವ್ಯಾಪ್ತನಾಗಿರುವುದೂ, ಸೃಷ್ಟಿಯಲ್ಲಿ ಬ್ರಹ್ಮನಾಗಿಯೂ, ಸ್ಥಿತಿಯಲ್ಲಿ ವಿಷ್ಣುವಾಗಿಯೂ, ಪ್ರಳಯದಲ್ಲಿ ರುದ್ರನಾಗಿಯೂ ಜಗದೀಶ್ವರನು ಹೇಗೆ ಇರುವನೋ ಅದೂ ಅಪ್ರಯತ್ನಪೂರ್ವಕವಾಗಿ ನನ್ನ ಬುದ್ಧಿಯ ದೃಷ್ಟಿಗೆ ಗೋಚರವಾಯಿತು. ಇದೇ ಜಗದೀಶ್ವರನ ವಿಶ್ವರೂಪವೆಂದು ತಿಳಿದುಕೊಂಡೆನು. ಈ ಮಹಾತ್ಮರಿಬ್ಬರೂ ದೇವತೆಗಳ ವಿಷಯವನ್ನೂ, ರಾಕ್ಷಸರ ವಿಷಯವನ್ನೂ, ಶೂರರ ವಿಷಯವನ್ನೂ, ಮಹಾಕವಿಗಳ ವಿಷಯವನ್ನೂ, ಧರ್ಮಯುಗದ ವಿಷಯವನ್ನೂ, ಕಲಿಮಹಿಮೆಯ ವಿಷಯವನ್ನೂ, ದೇಹವನ್ನು ಬಿಟ್ಟ ಮೇಲೆ ಬರತಕ್ಕ ಅವಸ್ಥೆಯ ವಿಷಯವನ್ನೂ, ಬೀಜವೃಕ್ಷ ನ್ಯಾಯಗಳನ್ನೂ, ಪಾಪಿಷ್ಠರಿಗೆ ಆಗತಕ್ಕ ಶಿಕ್ಷೆಯ ವಿಷಯವನ್ನೂ, ಪುಣ್ಯವಂತರಿಗೆ ಆಗುವ ಫಲದ ವಿಷಯವನ್ನೂ, ಅತ್ಯುತ್ಕಟವಾದ ಪುಣ್ಯಪಾಪಗಳಿಗೆ ಈ ಜನ್ಮದಲ್ಲಿಯೇ, ಈ ಲೋಕದಲ್ಲಿಯೇ ಆಗತಕ್ಕ ಫಲಗಳ ವಿಷಯವನ್ನೂ ಚರ್ಚೆಮಾಡುತಿದ್ದರು. ಇವರಿಬ್ಬರೂ ಆಧ್ಯಾತ್ಮ ವಿಷಯಗಳನ್ನು ಚರ್ಚಿಸುವ ವಶಿಷ್ಠ-ರಾಮರಂತೆ ನನಗೆ ತೋರಿತು. ಕುರುಬರ ಜೊತೆಯಲ್ಲಿ ಕುರುಬನಾಗಿದ್ದು, ಕಾರಾಗೃಹದಲ್ಲಿ ದೇಹತ್ಯಾಗವನ್ನು ಮಾಡಿಕೊಳ್ಳಬೇಕೆಂಬ ಅಭಿನಿವೇಶವುಳ್ಳವನಾಗಿದ್ದು, ಸೈಪ್ರಸ್ ದ್ವೀಪದಲ್ಲಿ ವಿಷಯಾಸಕ್ತರಾಗಿ, ಗ್ರಾಮಸಿಂಹಗಳಂತೆ ನಡೆದುಕೊಳ್ಳುತ್ತಿದ್ದವರ ಮಧ್ಯದಲ್ಲಿ ಇರುವ ಸ್ಥಿತಿಯು ಬಂದಿತಲ್ಲಾ ಎಂದು ವಿಷಾದಿಸುತ್ತಿದ್ದಾಗ ನನಗೆ ಇವರ ಸಂಭಾಷಣೆಯನ್ನು ಕೇಳಿ, ಆನಂದಸಾಗರದಲ್ಲ ವಿಹರಿಸುವ ಸಂಪತ್ತು ಬಂದದ್ದನ್ನು ನೋಡಿ, ಜಗದೀಶ್ವರನ ಲೀಲೆಯು ಅವಾಙ್ಮಾನಸಗೋಚರವಾದದ್ದೆಂದು ತಿಳಿದುಕೊಂಡು, ಸಂತೋಷ ಪಡುತ್ತಾ, ಅವರ ಸಂಭಾಷಣವನ್ನು ಕೇಳುತ್ತಾ ಇದ್ದೆನು.

ಹೀಗೆ ಅವರು ಮಾತನಾಡುತ್ತಿರುವಾಗ, ಕೆಲವು ಮತ್ಸ್ಯಗಳು ನಮ್ಮ ಬಳಿಗೆ ಬಂದವು. ಅವುಗಳಲ್ಲಿ ಕೆಲವು ಮೇಘಕಾಂತಿಯುಳ್ಳವುಗಳಾಗಿಯೂ, ಕೆಲವು ಹೊಂಬಣ್ಣವುಳ್ಳಗಳಾಗಿಯೂ ಇದ್ದವು. ಅವುಗಳು ಸಮುದ್ರದಿಂದ ಮೇಲಕ್ಕೆ ಎದ್ದ ಕೂಡಲೇ, ಅಲೆಗಳು ವಿಭಕ್ತವಾದವು. ಒಂದು ವಿಧವಾದ ಹೊಗೆಯು ಮೇಲಕ್ಕೆ ಎದ್ದಿತು. ಅನಂತರ ಕೆಲವು ಆಮೆಗಳು ಮೇಲಕ್ಕೆ ಎದ್ದವು. ಅವುಗಳು ಮನೋಹರವಾದ ಗಾನವನ್ನು ಮಾಡಿದವು. ಅನಂತರ ಬೆಳ್ಳಗೆ ಇರತಕ್ಕ ಸಮುದ್ರದ ಕುದುರೆಗಳಿಂದ ಎಳೆಯಲ್ಪಟ್ಟ ಒಂದು ರಥದಲ್ಲಿ ಸಮುದ್ರದ ಅಧಿದೇ

ವತೆಯು ಬಂದಳು. ಸ್ವಲ್ಪ ಹೊತ್ತಿನಲ್ಲಿಯೇ ಮಾಯವಾದಳು. ಅವಳ ಕಣ್ಣು ಗಳಲ್ಲಿ ಬೆಂಕಿಯ ಜ್ವಾಲೆಯು ಪ್ರಜ್ವಲಿಸುತ್ತಿತ್ತು. ಅವಳ ಮೂಗಿನಿಂದ ನಿಬಿಡ ವಾದ ಹೊಗೆಯು ಹೊರಡುತ್ತಿತ್ತು. ಈ ಸಮುದ್ರದ ಅಧಿದೇವತೆಗೆ ಅವಳ ರಥವು ದಂತದ ರಥವಾಗಿತ್ತು. ಅದು ಬಹಳ ಮನೋರಂಜಕವಾಗಿತ್ತು. ಇದರ ಗಾಲಿಗಳು ಕಾಂಚನಮಯವಾಗಿದ್ದವು. ಮೊಟಾರು ಗಾಲಿಗಳು ಹೋಗುವಷ್ಟು ವೇಗವಾಗಿ ನದರಿ ಗಾಲಿಗಳು ಹೊರಡುತ್ತಿದ್ದವು ಈ ರಥದ ಹಿಂದೆ ಅನೇಕ ನಾಗಕನ್ನಿಕೆಯರು ಬರುತ್ತಿದ್ದರು. ನಾನಾ ವಿಧವಾದ ಪುಷ್ಪಗಳಿಂದ ಪರಿಶೋಭಿತವಾದ ಅವರ ಕೂದಲುಗಳು ಮಂದಮಾರುತದಿಂದ ನರ್ತಿಸುತ್ತಿದ್ದವು. ಈ ದೇವತೆಯ ಕೈಯಲ್ಲಿ ಒಂದು ಚಿನ್ನದ ರಾಜದಂಡವು ಇತ್ತು. ಈ ರಾಜದಂಡಕ್ಕೆ ಸಮುದ್ರದ ಅಲೆಗಳು ವಿಧೇಯವಾಗಿದ್ದವು. ತೊಡೆಯ ಮೇಲೆ ತನ್ನ ಮಗುವನ್ನು ಕೂರಿಸಿಕೊಂಡು ಹಾಲನ್ನು ಕೊಡುತ್ತಿದ್ದಳು. ಅವಳ ಮುಖದಲ್ಲಿ ಗಾಂಭೀರ್ಯವೂ, ಮನೋಹರ ತೆಯೂ ಮೂರ್ತೀಭವಿಸಿದ್ದವು. ಮಾರುತವು ಅತ್ಯಂತ ಭೀತಿಯಿಂದ ಸಂಕುಚಿತ ವಾಗಿ ಏಳುತ್ತಿದ್ದವು. ರಥವನ್ನು ನಡೆಸತಕ್ಕವಳು ಚಿನ್ನದ ಲಗಾಮುಗಳಿಂದ ಕುದುರೆಗಳನ್ನು ನಡೆಸುತ್ತಿದ್ದಳು. ಕೆಂಪು ಬಣ್ಣವುಳ್ಳ ಧ್ವಜವು ಎತ್ತಿಕಟ್ಟಲ್ಪ ಟ್ಟಿತ್ತು. ಮಂದಮಾರುತವು ಅದಕ್ಕೆ ತಗಲಿ, ರಥವು ಅಲ್ಲಾಡದೆ, ಆಕಾಶ ಮಾರ್ಗ ದಲ್ಲಿ ವಿಮಾನಗಳು ಹೇಗೆ ಹೋಗುತ್ತವೋ ಹಾಗೆ ಹೋಗುತ್ತಿತ್ತು. ರಥದ ಕುದುರೆಗಳು ಸ್ವೇಚ್ಛೆಯಾಗಿ ಹೋಗುವುದಕ್ಕೆ ಲಗಾಮಿನಿಂದ ನಿರ್ಬಂಧ ಉಂಟಾ ಗಿರುವುದೆಂದು ಅಸಮಾಧಾನದಿಂದ ಹೇಷಾಕಾರವನ್ನು ಮಾಡಿಕೊಂಡು ಮುಂದು ವರಿಯುವುದನ್ನೂ, ಪ್ರಜ್ವಲಿಸುತ್ತಲಿರುವ ಅವುಗಳ ಕಣ್ಣುಗಳ ಕಾಂತಿಯನ್ನೂ ನೋಡಿ, ಜಲಚರಗಳೆಲ್ಲಾ ಭಯಭ್ರಾಂತವಾದವು. ತಿಮಿತಿಮಿಂಗಿಲಗಳೇ ಮೊದ ಲಾದವುಗಳೆಲ್ಲಾ ತಮ್ಮ ಪಾತಾಳ ಪ್ರದೇಶದಿಂದ ಮೇಲಕ್ಕೆ ಎದ್ದು, ಈ ಸಮು ದ್ರದ ಚಕ್ರವರ್ತಿನಿಯ ಸಂದರ್ಶನ ಸುಖವನ್ನು ಅನುಭವಿಸುವುದಕ್ಕೆ ಗುಂಪು ಗುಂಪಾಗಿ ಬಂದು, ಸಾಷ್ಟಾಂಗ ಪ್ರಣಾಮವನ್ನು ಮಾಡಿದವು.

---

## ಐದನೆಯ ಅಧ್ಯಾಯ.

ಈ ಸಮುದ್ರದ ಅಧಿದೇವತೆಯು ಸ್ವಲ್ಪ ಹೊತ್ತಿನಲ್ಲೇ ಅದೃಶ್ಯವಾದಳು. ಕ್ರೀಟ್ ದ್ವೀಪದ ಪರ್ವತಗಳೂ, ಸಮುದ್ರವೂ, ಆಕಾಶವೂ ಇವುಗಳೆಲ್ಲಾ ಏಕಾ ಕಾರವಾಗಿ ಕಾಣುತ್ತಿದ್ದವು. ಸ್ವಲ್ಪ ಹೊತ್ತಿನಲ್ಲಿ ಐಡಾ ಪರ್ವತದ ಶಿಖರವು ದೃಷ್ಟಿ

ಪಥಕ್ಕೆ ಬಿದ್ದಿತು. ಈ ಶಿಖರವು ಆಕಾಶವನ್ನು ಪ್ರವೇಶಿಸಿರುವಂತೆ ತೋರಿಬಂದಿತು. ಸ್ವಲ್ಪ ಹೊತ್ತಿನಲ್ಲಿ ಈ ದ್ವೀಪದ ತೀರವನ್ನು ನೋಡಿದೆವು. ಅರ್ಧಗೋಳಾಕಾರವಾದ ನಾಟಕಶಾಲೆಯಂತೆ ಈ ದ್ವೀಪವು ಕಾಣಬಂದಿತು. ಸೈಪ್ರೆಸ್ ದ್ವೀಪದಲ್ಲಿ ಹೇಗೋ ಹಾಗೆ ಈ ದ್ವೀಪದಲ್ಲಿಯೂ ನಾನಾವಿಧವಾದ ವೃಕ್ಷಗಳು ಫಲಪುಷ್ಪಭರಿತಗಳಾಗಿದ್ದವು. ಸೈಪ್ರೆಸ್ ದ್ವೀಪದ ವೃಕ್ಷಗಳು ತಾವಾಗಿ ಬೆಳೆದುಕೊಂಡಿದವು. ಇಲ್ಲಿ ಎಲ್ಲಿ ನೋಡಿದಾಗ್ಯೂ, ಮನುಷ್ಯನ ಮೆಹನತ್ತು ತೋರುತ್ತಿತ್ತು. ಕಸಿ ಗಿಡಗಳಿಂದ ಫಲಪುಷ್ಪಗಳ ಗೊಂಚಲುಗಳು ಗಿಡಗಳಿಗೆ ನಮ್ರತ್ವವನ್ನು ಉಂಟುಮಾಡಿದ್ದವು. ಈ ದ್ವೀಪದ ತೀರಕ್ಕೆ ಬಂದ ಹಾಗೆಲ್ಲಾ ಅನೇಕ ಗ್ರಾಮಗಳು ದೃಷ್ಟಿಗೆ ಗೋಚರವಾದವು. ಅವುಗಳೆಲ್ಲಾ ಬಹಳ ಮನೋಹರವಾಗಿ ಕಟ್ಟಲ್ಪಟ್ಟಿದ್ದವು. ಅನೇಕ ಪಟ್ಟಣಗಳೂ ಕೂಡ ಕಾಣಬಂದವು. ಅರಮನೆಗಳಿಂದಲೂ, ಗಗನಚುಂಬಿಗಳಾದ ಪ್ರಾಸಾದಗಳಿಂದಲೂ ಅವುಗಳು ಶೋಭಾಯಮಾನವಾಗಿದ್ದವು. ಹೊಲಗಳೂ, ಗದೆಗಳೂ, ತೋಟಗಳೂ, ತೋಪುಗಳೂ, ಕೊಳಗಳೂ, ಬಾವಿಗಳೂ, ಸರೋವರಗಳೂ, ಇವುಗಳೆಲ್ಲಾ ದೃಷ್ಟಿಪಥಕ್ಕೆ ಬಿದ್ದವು. ಎಲ್ಲೆಲ್ಲಿಯೂ ಮನುಷ್ಯನ ಮೆಹನತ್ತು ಸಂಪೂರ್ಣವಾಗಿ ಕಾಣುತ್ತಿತ್ತು. ಕಳೆ ಮೊದಲಾದವುಗಳು ಎಲ್ಲಿಯೂ ಕಾಣಬರಲಿಲ್ಲ. ಪಾಪಾಸು ಕಳ್ಳಿ, ಮುಳ್ಳುಗಿಡ ಮೊದಲಾದವುಗಳು ಎಲ್ಲಿಯೂ ಕಾಣಲಿಲ್ಲ. ಕಶ್ಮಲವಾದ ನೀರುಳ್ಳ ಹಳ್ಳಕೊಳ್ಳಗಳು ಎಲ್ಲಿಯೂ ಕಾಣಬರಲಿಲ್ಲ. ವಾಪೀಕೂಪಗಳಲ್ಲಿ ನೀರಿನ ಸ್ವಚ್ಛತೆಯಿಂದ ನೆಲವೂ ಕೂಡ ಕಾಣುತ್ತಿತ್ತು. ಕಣಿವೆಗಳ ಒಂದು ಭಾಗದಲ್ಲಿ ಲಕ್ಷಾಂತರ ದನಗಳು ಮೇಯುತ್ತಿದ್ದವು. ಮತ್ತೊಂದು ಭಾಗದಲ್ಲಿ ಲಕ್ಷಾಂತರ ಕುರಿಗಳು ಮೇಯುತ್ತಿದ್ದವು. ಪರ್ವತಾಗ್ರಗಳಲ್ಲಿಯೂ, ಪರ್ವತ ಪ್ರಸ್ಥಾನಗಳಲ್ಲಿಯೂ ಅನೇಕ ಆಡುಗಳು ಕೆಲವು ಕಡೆ ಮೇಯುತ್ತಲೂ, ಕೆಲವು ಕಡೆ ಬಂಡೆಯಿಂದ ಬಂಡೆಗೆ ಹಾರುತ್ತಲೂ, ವಿನೋದವಾಗಿ ಓಡಾಡುತ್ತಲೂ ಇದ್ದವು. ಎಲ್ಲೆಲ್ಲಿ ನೋಡಿದಾಗ್ಯೂ ಹಸರು ಜಂಖಾನವು ಹಾಸಿದ್ದರೆ ಹೇಗೋ ಹಾಗೆ ಗರಿಕೆಯು ಬೆಳೆದುಕೊಂಡಿತ್ತು. ಗಿರಿನದಿಗಳು ಮನೋಹರವಾದ ಧ್ವನಿಯನ್ನು ಮಾಡಿಕೊಂಡು, ಕಣಿವೆಗಳಿಗೆ ಧುಮುಕುತ್ತಿದ್ದವು. ಪರ್ವತದ ತಪ್ಪಲಿನ ಅನೇಕ ಭಾಗಗಳಲ್ಲಿ ದ್ರಾಕ್ಷಿ ಬಳ್ಳಿಯಿಂದ ಅತ್ಯಂತ ರಮ್ಯವಾದ ಹಣ್ಣಿನ ಗೊನೆಗಳು ನೇತಾಡುತ್ತಿದ್ದವು, ಇವುಗಳನ್ನು ನೋಡಿ ಮೆಂಟರನು ಹೇಳಿದ್ದೇನೆಂದರೆ :—

"ಈ ದ್ವೀಪವನ್ನು ನೋಡಿದವರೆಲ್ಲರೂ ಪರಮಾಶ್ಚರ್ಯಪಡುತ್ತಾರೆ. ಈ ದ್ವೀಪದಲ್ಲಿ ಸಾವಿರಾರು ಪಟ್ಟಣಗಳಿರುತ್ತವೆ. ಈ ದ್ವೀಪನಿವಾಸಿಗಳಿಗೆ ಎಷ್ಟು ಭೋಗ್ಯವಸ್ತುಗಳು ಬೇಕೋ ಅದಕ್ಕೆ ಹತ್ತರಷ್ಟು ಬೆಳೆಯುತ್ತಾರೆ. ಎಲ್ಲರಇಷ್ಟಾ

ರ್ಥಸಿದ್ಧಿಗೂ ಎಷ್ಟು ಭೋಗ್ಯವಸ್ತುಗಳು ಬೇಕೋ ಅದಕ್ಕಿಂತಲೂ ಹೆಚ್ಚಾಗಿ ಬೆಳೆಯುತ್ತವೆ. ಜನಗಳು ಸೋಮಾರಿಗಳಾಗಿದ್ದರೆ, ಅನ್ನವಸ್ತ್ರಗಳಿಗೆ ಸಾಕಾದಷ್ಟು ಬೆಳೆಯುವುದೂ ಕೂಡ ಅಸಾಧ್ಯವಾಗುತ್ತದೆ. ಎಲ್ಲರೂ ಉದ್ಯೋಗಿಗಳಾಗಿದ್ದರೆ ದೇಶದ ಸಂಪತ್ತಿಗೆ ಕೊನೆಯೇ ಇರುವುದಿಲ್ಲ. ಈ ದ್ವೀಪವು ಇಲ್ಲಿನ ಜನಗಳಿಗೆ ತಾಯಿಯಂತೆ ಪರಿಣಮಿಸಿರುವುದು. ಈ ತಾಯಿಯು ತನ್ನ ಮಕ್ಕಳ ಸಕಲ ಇಷ್ಟಾರ್ಥಸಿದ್ಧಿಗೂ ಸಾಧನಭೂತಳಾಗಿರುವಳು. ಯಾವ ದೇಶದಲ್ಲಿ ಉತ್ಪತ್ತಿ ಮಾಡತಕ್ಕವರ ಸಂಖ್ಯೆಯು ಕಡಮೆಯಾಗಿರುವುದೋ, ಸೋಮಾರಿಗಳಾಗಿದ್ದು ಕೊಂಡು, ತಿನ್ನತಕ್ಕವರ ಸಂಖ್ಯೆಯು ಹೆಚ್ಚಾಗಿರುವುದೋ ಆ ದೇಶದಲ್ಲಿ ಸಕಲ ಭೋಗ್ಯವಸ್ತುಗಳೂ ಪ್ರಿಯವಾಗುವುವು. ಉದ್ಯೋಗ ಮಾಡಿ ಸಂಪಾದಿಸತಕ್ಕವರ ಸಂಪತ್ತನ್ನು ನಿರುದ್ಯೋಗಿಗಳು ಅಪಹರಿಸುವರು. ಉದ್ಯೋಗಿಗಳಿಗೆ ಅವರು ಉತ್ಪತ್ತಿ ಮಾಡಿದ ಪದಾರ್ಥಗಳೇ ದೊರೆಯದಂತಾಗುವುವು. ಧಕ್ಕಡಕರಾದ ನಿರುದ್ಯೋಗಿಗಳು ಅವರ ಬಚಬೆಣ್ಣೆಯನ್ನೂ ಕೂಡ ಕಕ್ಕಿಸಿ, ತಾವು ನಿತ್ಯೋತ್ಸವ, ಮಾಸೋತ್ಸವ, ವರ್ಷೋತ್ಸವಗಳಲ್ಲಿ ಮುಳುಗಿ ತೇಲುತ್ತಿರುವರು. ಸೋಮಾರಿಗಳಾದವರು ತಾವು ಕೆಲಸ ಮಾಡದೆ, ಉದ್ಯೋಗಿಗಳು ಕೆಲಸ ಮಾಡಿ ಆರ್ಜಿಸಿದ ಪದಾರ್ಥಗಳನ್ನು ಅಪಹರಿಸುವುದು ಮಾತ್ರವೇ ಅಲ್ಲದೆ, ಅವರನ್ನು ದಾಸಾನುದಾಸರನ್ನಾಗಿಯೂ ಉಪಯೋಗಿಸುವರು. ಅವರಿಗೆ ಹೊಟ್ಟೆಬಟ್ಟೆಗಳಿಗೆ ಅವಕಾಶವಿಲ್ಲದಂತೆ ಮಾಡಿ. ತಾವು ಇಂದ್ರಭೋಗವನ್ನು ಪಡೆಯಬೇಕೆಂಬ ಕುತೂಹಲವುಳ್ಳವರಾಗುವರು. ಉದ್ಯೋಗಿಗಳಿಗೆ ಹೊಟ್ಟೆಬಟ್ಟೆಯೂ ಸಿಕ್ಕುವುದಿಲ್ಲ. ಅವರ ಮೆಹನತ್ತಿನಿಂದ ಬದುಕತಕ್ಕವರಿಗೆ ಸ್ವರ್ಗಭೋಗಗಳೆಲ್ಲಾ ದೊರೆಯುವುವು. ಸಕಲ ಉದ್ಯೋಗಗಳನ್ನು ಎಲ್ಲರೂ ಹಂಚಿಕೊಂಡು, ದಿನಕ್ಕೆ ೮-೧೦ ಗಂಟೆಗಳಾದರೂ ಎಲ್ಲರೂ ಕೆಲಸ ಮಾಡಿದರೆ ಪರಸ್ಪರ ಸಹಾಯದಿಂದ ಎಲ್ಲರೂ ಸುಖವಾಗಿರಬಹುದು. ‘ ನೀನು ತಂದು ಹಾಕು, ನಾನು ತಿಂದು, ತೇಗಿ, ಜಗಳವಾಡುತ್ತಾ, ಗೊಣಗುಟ್ಟುತ್ತಾ, ಕಲಹಪ್ರಿಯನಾಗಿ, ಲೋಕವನ್ನೇ ನರಕವನ್ನಾಗಿ ಮಾಡುತ್ತೇನೆ ’ ಎಂದು ಕೆಲವರು ನಿಂತರೆ, ನರಕವೂ, ಸ್ವರ್ಗವೂ ಇವೆರಡೂ ಈ ಭೂಮಿಯಲ್ಲಿಯೇ ಅವತರಿಸುವುವು. ಎಷ್ಟು ಕ್ಲೇಶಪಟ್ಟಾಗ್ಯೂ, ಅದಕ್ಕೆ ತಕ್ಕ ಫಲವು ಅನೇಕರಿಗೆ ದೊರೆಯುವುದಿಲ್ಲ. ಲೇಶವೂ ಕಷ್ಟವಿಲ್ಲದೆ, ಕೆಲವರಿಗೆ ಸಕಲ ಸಂಪತ್ತುಗಳೂ ದೊರೆಯುವುವು. ಒಂದು ಕಡೆ ದಾರಿದ್ರ್ಯವೂ, ರೋಗಾದಿಗಳೂ, ಕಷ್ಟವೂ, ಅಕಾಲ ಮರಣಗಳೂ ಇರುವುವು. ಮತ್ತೊಂದು ಕಡೆ ಸಂಪತ್ತೂ, ಭೋಗಸಾಮಗ್ರಿಗಳೂ, ದುಂದುಗಾರಿಕೆಯೂ, ಸೋಮಾರಿತನದಿಂದ ಉಂಟಾಗತಕ್ಕ ಕ್ಲೇಶಗಳೂ, ಇಂದ್ರಿಯಪರವಶತೆಯಿಂದಲೂ, ಅರಿಷಡ್ವರ್ಗಪರವಶತೆ

ಯಿಂದಲೂ ಉಂಟಾಗತಕ್ಕ ಕ್ಲೇಶಗಳೂ, ಇರುವುವು. ದಾರಿದ್ರ್ಯದಿಂದ ಕೆಲವರು ಕ್ಲೇಶಪಡುವರು. ಸಂಪತ್ತಿನಿಂದ ಕೆಲವರು ಕ್ಲೇಶಪಡುವರು. ಇಂಥಾ ಅವಸ್ಥೆಗಳು ಎಲ್ಲೆಲ್ಲಿಯೂ ಇರುತ್ತವೆ. ಈ ದ್ವೀಪದಲ್ಲಿ ಎಲ್ಲಿ ನೋಡಿದಾಗ್ಯೂ, ದಾರಿದ್ರ್ಯವು ದೃಷ್ಟಿಪಥಕ್ಕೆ ಬೀಳುತ್ತಲಿಲ್ಲ. ಎಲ್ಲರೂ ಈ ದ್ವೀಪದಲ್ಲಿ ನೆಮ್ಮದಿಯಾಗಿರುವಂತೆ ತೋರುತ್ತದೆ. ಇಲ್ಲಿನ ಜನಗಳಲ್ಲಿ ಉದ್ಯೋಗವೇ ಸರ್ವರಿಗೂ ಪುರುಷಲಕ್ಷಣವಾಗಿರುವುದು ಮಾತ್ರವೇ ಅಲ್ಲದೆ, ಸ್ತ್ರೀಯರಿಗೂ ಲಕ್ಷಣವಾಗಿರುವಂತೆ ತೋರುತ್ತದೆ. ಇದಕ್ಕೆ ಕಾರಣವನ್ನು ಪರಿಶೋಧಿಸಿದರೆ, 'ಯಥಾ ರಾಜಾ ತಥಾಪ್ರಜಾಃ' ಎಂಬ ಗಾಥೆಗೆ ದೃಷ್ಟಾಂತವು ಇಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಈ ದೇಶದಲ್ಲಿ ಪ್ಲೈನಾಸ್ ಎಂಬ ಧರ್ಮಶಾಸ್ತ್ರಜ್ಞನೊಬ್ಬನಿದ್ದನು. ಇವನು ವಿಶೇಷ ವಿವೇಕಶಾಲಿ. ಪ್ರಭುಗಳಲ್ಲಿಯೂ ಇವನು ಅಗ್ರಗಣ್ಯನಾಗಿದ್ದನು. ಈ ದ್ವೀಪದ ಮಹಿಮೆಗೆ ಇವನ ಧರ್ಮಶಾಸ್ತ್ರ ಪ್ರಚಾರವೇ ಮುಖ್ಯಕಾರಣ, ಇವನು ವಿಧಿಸಿರುವ ವಿದ್ಯಾಭ್ಯಾಸ ಕ್ರಮವು ಇವನ ಪೂರ್ವಾಪರಜ್ಞಾನವನ್ನು ತೋರಿಸುತ್ತಿತ್ತು. ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಆರೋಗ್ಯದೃಢಕಾಯತೆಗೆ ಸಹಾಯವಾದ ಶಾರೀರಕ ಧರ್ಮಶಾಸ್ತ್ರ ವಿಧಿಗಳು ಜನಗಳಿಗೆ ತಿಳಿಸಲ್ಪಡಬೇಕೆಂದು ಇವನು ನಿಷ್ಕರ್ಷೆಮಾಡಿದ್ದನು. ಚಿಕ್ಕ ವಯಸ್ಸಿನಿಂದಲೂ ಸರ್ವರಿಗೂ ಕೆಲಸ ಮಾಡುವುದರಲ್ಲಿಯೂ, ಮಿತವ್ಯಯದಲ್ಲಿಯೂ ಇವನು ಆಸಕ್ತಿಯನ್ನು ಹುಟ್ಟಿಸುವುದಕ್ಕೆ ತಕ್ಕ ಏರ್ಪಾಡನ್ನೂ ಬ್ರಹ್ಮಚರ್ಯಕ್ಕೆ ಬಾಲ್ಯದಲ್ಲಿ ವಿಶೇಷ ಗಮನವು ಕೊಡಲ್ಪಡುವಂತೆಯೂ ಇವನು ಏರ್ಪಾಡು ಮಾಡಿದ್ದನು. ಸ್ವಶಕ್ತಿಯಿಂದ ಬದುಕುವ ದೇಹಬಲವೂ, ಬುದ್ಧಿಬಲವೂ ಬರುವವರೆಗೆ ವೀರ್ಯರಕ್ಷಣೆಗೆ ಪ್ರತಿಬಂಧಕವಾಗದೆ ಇರಬೇಕೆಂದು ವಿಧಿಯನ್ನು ಮಾಡಿ, ಅದು ಅನುಷ್ಠಿಸಲ್ಪಡುವಂತೆ ಇವನು ಶುದ್ಧವಾಗಿ ನೋಡಿಕೊಳ್ಳುತ್ತಿದ್ದನು. ಇದರಿಂದ ಚಿಕ್ಕ ಮಕ್ಕಳು ದೇಹದಲ್ಲಿ ಹರ್ಕ್ಯುಲಿಸ್‌ಗಳಾಗಿ, ಬುದ್ಧಿಯಲ್ಲಿ ಬೃಹಸ್ಪತಿಗಳಾಗಿ ಪರಿಣಮಿಸವುದಕ್ಕೆ ಅವಕಾಶವಾಯಿತು. ಶೂರರಲ್ಲಿ ಅಗ್ರಗಣ್ಯರಾಗಬೇಕೆಂಬ ಅಭಿಲಾಷೆಯು ಮಕ್ಕಳಲ್ಲಿ ಅಪ್ರತಿಹತವಾಗುವಂತೆ ಮಾಡಲ್ಪಟ್ಟಿತ್ತು. ಧರ್ಮಯುದ್ಧದಲ್ಲಿ ಅಜೇಯರಾಗುವಂತೆ ಧೈರ್ಯಸ್ಥೈರ್ಯಗಳ ಆರ್ಜನೆಯು ಮಾಡಲ್ಪಡುತ್ತಿತ್ತು. ಜಘನ್ಯವಾದ ವಿಷಯ ಸುಖಗಳಲ್ಲಿ ಪರಾಙ್ಮುಖತೆಯು ಎಲ್ಲಾ ಸ್ತ್ರೀಪುರುಷರಿಗೂ ಬರುವಂತೆ ಮಾಡಲ್ಪಟ್ಟಿತ್ತು. ಯುದ್ಧದಲ್ಲಿ ತೋರಿಸುವ ಪರಾಕ್ರಮಕ್ಕಿಂತಲೂ ಹೊನ್ನು, ಹೆಣ್ಣು ಮಣ್ಣುಗಳಲ್ಲಿ ತೋರಿಸಲ್ಪಡತಕ್ಕ ಉಪೇಕ್ಷೆಯು ಶಕ್ತಿತಮವೆಂದು ಭಾವಿಸಲ್ಪಡುವಂತೆ ಈತನು ಮಾಡಿದ್ದನು. ಈ ದೇಶದ ಪೀನಲ್ ಕೋಡಿನಲ್ಲಿ ಮೂರು ಅಪರಾಧಗಳಿಗೆ ಬಲವಾದ ಶಿಕ್ಷೆಯು ವಿಧಿಸಲ್ಪಡುತ್ತಿತ್ತು. ಮೊದಲನೇ ಅಪರಾಧವು 'ಕೃತಘ್ನತೆ, ಉಂಡ

ಮನೆಗೆ ಎರಡು ಬಗೆಯುವುದು, ಉಪಕಾರಿಗಳಿಗೆ ಅಪಕಾರ ಮಾಡುವುದು.' ಎರಡನೇ ಅಪರಾಧವು 'ಮನಸ್ಸಿನಲ್ಲಿ ಒಂದು ವಿಧವಾಗಿಯೂ, ವಾಚಾ ಬೇರೆ ವಿಧವಾಗಿಯೂ ಇರುವುದು,' ಮೂರನೇ ಅಪರಾಧವು 'ದುರಾಸೆ, ಯಾವುದು ತನ್ನದಲ್ಲವೋ ಅದನ್ನು ಅಪರಿಹರಿಸುವ ಇಚ್ಛೆ.' ಈ ಮೂರು ಅಪರಾಧಗಳಿಗೂ ಈ ಮೈನಾಸನು ಬಲವಾದ ಶಿಕ್ಷೆಯನ್ನು ವಿಧಿಸಿದನು. ಅಭಕ್ಷ್ಯಭೋಜನ, ಅಪೇಯಪಾನ, ಅಗಮ್ಯಾಗಮನ, ಅನರ್ಹವಾದ ವಿಜೃಂಭಣೆ, ಇವುಗಳಿಂದ ಅನೇಕ ದೇಶಗಳಲ್ಲಿ ಅನೇಕ ಉಪಪನ್ನರಲ್ಲಿಯೂ ಮತ್ತು ಅನೇಕ ಪ್ರಭುಗಳಲ್ಲಿಯೂ ಬಹು ದ್ರವ್ಯವು ಖರ್ಚಾಗುತ್ತದೆ. ದೇಶದ ಹುಟ್ಟುವಳಿಯು ಇವುಗಳಲ್ಲಿ ವಿಶೇಷ ವಿನಿಯೋಗವಾಗುವುದರಿಂದ, ದೇಶದ ಉತ್ಪತ್ತಿಗೆ ಕಾರಣಭೂತರಾದವರಿಗೆ ಅಶನವಸನಗಳಿಗೂ ಕೂಡ ಅವಕಾಶವಾಗುವುದಿಲ್ಲ. ಅನೇಕ ರಾಜ್ಯಗಳ ಹೀನಸ್ಥಿತಿಗೂ, ಅನೇಕ ಪ್ರಭುಗಳಿಗೆ ಅಪಕೀರ್ತಿ ಬರುವುದಕ್ಕೂ, ರಾಜಯಕ್ಷ್ಮಾದಿಗಳು ಅನೇಕರನ್ನು ಅಕಾಲದಲ್ಲಿ ಯಮಾಲಯಕ್ಕೆ ಕಳುಹಿಸುವುದಕ್ಕೂ ಇವುಗಳು ಕಾರಣವಾಗುತ್ತವೆ. ಈ ದ್ವೀಪದಲ್ಲ ಈ ಸಾಂಕ್ರಾಮಿಕ ರೋಗವು ಅಂಕುರಿಸಿಯೂ ಇರುವುದಿಲ್ಲ. ಪ್ರತಿ ಒಬ್ಬ ಮನುಷ್ಯನೂ, ಪ್ರತಿ ಒಬ್ಬ ಸ್ತ್ರೀಯೂ ಇಲ್ಲಿ ಉತ್ಸಾಹದಿಂದ ಕೆಲಸ ಮಾಡುತ್ತಾರೆ. ಎಲ್ಲರೂ ಎಲ್ಲರ ಸುಖವನ್ನೂ ನೋಡುತ್ತಾರೆ. ಯಾರೂ ಇತರರ ಯಾವ ಸುಖಕ್ಕೂ ಪ್ರತಿಬಂಧಕರಾಗುವುದಿಲ್ಲ. ಎಲ್ಲರೂ ಅವರವರ ಶಕ್ತಿಗೂ, ಬುದ್ಧಿಗೂ ಅನುಸಾರವಾಗಿ ಕೆಲಸ ಮಾಡುತ್ತಾರೆ. ಉದ್ಯೋಗವೇ ಇವರಿಗೆ ವ್ಯಾಯಾಮವಾಗಿ ಪರಿಣಮಿಸಿದೆ. ಉದ್ಯೋಗದಿಂದಲೇ ಇವರಿಗೆ ಜೀರ್ಣಶಕ್ತಿಯೇ ಮೊದಲಾದವುಗಳೆಲ್ಲಾ ಲಭ್ಯವಾಗುತ್ತಲಿವೆ. ಉದ್ಯೋಗದಿಂದಲೇ ದೇಹವು ದಣಿದು, ಸ್ವರ್ಗಸುಖಕ್ಕೆ ಸಮಾನವಾದ ವಿಶ್ರಾಂತಿಯು ಇವರಿಗೆ ಲಭ್ಯವಾಗುವುದು. ಎಲ್ಲರೂ ಆರೋಗ್ಯಕರವಾದ ಮನೆಗಳನ್ನೂ, ಸಾಮಾನುಗಳನ್ನೂ, ಭೋಗ್ಯವಸ್ತುಗಳನ್ನೂ ಹೊಂದಿರುವರು. ವಿಜೃಂಭಣೆಗೆ ಸಾಧಕವಾದ ಪದಾರ್ಥಗಳಲ್ಲ ಸರ್ವರೂ ಪರಾಙ್ಮುಖರಾಗಿರುವರು. ತುಪಟದ ಬಟ್ಟೆಗಳಿಗೆ ಮನೋಹರವಾದ ರಂಗುಗಳನ್ನು ಹಾಕಿ, ಶಾಖವಾದ ಉಡಿಗೆಗಳನ್ನು ಎಲ್ಲರೂ ಹಾಕಿಕೊಳ್ಳುವರು. ಜರತಾರಿ ಮೊದಲಾದವುಗಳಿಂದ ವಿಜೃಂಭಿಸುವ ಉಡಿಗೆಗಳು ಈ ದ್ವೀಪದಲ್ಲಿ ಇರುವುದೇ ಇಲ್ಲ. 'ಅತಿಸರ್ವತ್ರ ವರ್ಜಯೇತ್' ಎಂಬ ಅಶ್ವಿನಿದೇವತೆಗಳ ವಿಧಿಯು ಇವರ ಅನುಷ್ಠಾನದಲ್ಲಿ ಇರುವುದು. ಅನ್ನ, ಹಣ್ಣು, ಹಾಲು, ಸಕ್ಕರೆ, ಮೊದಲಾದ ಪದಾರ್ಥಗಳು ಎಲ್ಲರ ಮನೆಗಳಲ್ಲಿಯೂ ಸಮೃದ್ಧಿಯಾಗಿರುವುವು. ಎಲ್ಲರ ಮನೆಗಳೂ ಶುದ್ಧವಾಗಿಯೂ, ಅನುಕೂಲವಾಗಿಯೂ, ಮನೋಹರವಾಗಿಯೂ ಇರುವುವು. ಅಲಂಕಾರವು ಯಾವ ಮನೆಗಳಲ್ಲಿಯೂ

ಕಾಣುವುದಿಲ್ಲ. ದುರ್ವಿಷಯಗಳಿಗೆ ಚಿಹ್ನೆಯಾಗಿರತಕ್ಕ ತಸ್ವೀರುಗಳೇ ಮೊದಲಾದವುಗಳು ಎಲ್ಲಿಯೂ ಕಾಣುವುದಿಲ್ಲ. ದೇವಸ್ಥಾನಗಳಲ್ಲಿಯೂ ಚಿತ್ರಕೆಲಸಗಳು ದೃಷ್ಟಿಪಥಕ್ಕೆ ಬೀಳುವುವು. ಅವುಗಳೂ ಕೂಡ ಸಾಧುವಾದ ಅಲಂಕಾರಗಳಾಗಿರುವುವು. ಬುದ್ಧಿಯು ವ್ಯಭಿಚರಿಸುವುದಕ್ಕೆ ಸಾಧಕವಾದ ವಿಗ್ರಹಗಳೇ ಆಗಲಿ, ತಸ್ವೀರುಗಳೇ ಆಗಲಿ ಯಾವುದೂ ಅವರ ದೇವಸ್ಥಾನಗಳಲ್ಲಿ ಇರುವುದಿಲ್ಲ. ಈ ದ್ವೀಪನಿವಾಸಿಗಳ ಆರೋಗ್ಯ, ಶಕ್ತಿ, ಧೈರ್ಯ, ನೆಮ್ಮದಿ ಪರಸ್ಪರ ಪ್ರೀತಿ, ಯಾರಿಗೂ ಬಾಧಕವನ್ನುಂಟುಮಾಡದೆ ಇರತಕ್ಕ ಸ್ವಾತಂತ್ರ್ಯ, ಭೋಗ್ಯವಸ್ತುಗಳ ಪರಿಪೂರ್ಣತೆ, ಅನುಪಯುಕ್ತವಾದ ವಸ್ತುಗಳಲ್ಲ ತಿರಸ್ಕಾರ, ಉದ್ಯೋಗ ಪರಾಯಣತೆ, ಸೋಮಾರಿತನದಲ್ಲಿ ಪರಾಙ್ಮುಖತೆ, ಸದ್ಗುಣಗಳಲ್ಲಿ ಹುರುಡು, ಧರ್ಮಶಾಸ್ತ್ರಗಳಲ್ಲಿ ಶರಣಾಗತಿ, ದೇವಭಕ್ತಿ, ರಾಜಭಕ್ತಿ, ಇವುಗಳೇ ಈ ದ್ವೀಪನಿವಾಸಿಗಳ ಸಂಪತ್ತುಗಳಾಗಿ ಇರುವುವು.''

ಈ ರೀತಿಯಲ್ಲಿ ಮೆಂಟರನು ಹೇಳಿದ್ದನ್ನು ಕೇಳಿ, ಇಂಥಾ ಗುಣಾತಿಶಯಗಳು ಯಾವ ದೇಶೀಯರಲ್ಲಿಯೂ ಇರುವುದಿಲ್ಲ. ಈ ದ್ವೀಪನಿವಾಸಿಗಳಲ್ಲಿ ಇವುಗಳೆಲ್ಲಾ ಇರುವುದನ್ನು ನೋಡಿದರೆ, ಈ ಮೈನಾಸ್ ಮಹಾಪ್ರಭುವು ಈಶ್ವರನ ಅವತಾರವಾಗಿರುವಂತೆ ತೋರುತ್ತದೆ. ಪ್ರಭುವಿನ ಅಧಿಕಾರದ ವಿಷಯದಲ್ಲಿ ಮೈನಾಸನು ಏನು ಹೇಳಿರುವನು ! ಪ್ರಭುಗಳ ಅಧಿಕಾರಕ್ಕೆ ಮೇರೆಯಾವುದು ! ಅವರು ಎಷ್ಟು ಕೆಲಸಗಳನ್ನು ಮಾಡಬಹುದು ? ಎಲ್ಲಿಂದ ಆಚೆಗೆ ಅವರು ಹೋಗಕೂಡದು ? ಅವರ ಅಧಿಕಾರದ ಮೇರೆಯಾವುದು ? ಈ ವಿಷಯದಲ್ಲಿ ಮೈನಾಸ್‌ನ ಧರ್ಮವು ಹೇಗಿರುವುದು ? ಅದನ್ನು [illegible] ನಾನು ಕೇಳಿದೆನು. ಅದಕ್ಕೆ ಮೆಂಟರನು ಹೇಳಿದ್ದೇನೆಂದರೆ .--

“ ಪ್ರಜೆಗಳ ಮೇಲೆ ಪ್ರಭುವಿನ ಅಧಿಕಾರಕ್ಕೆ ಮೇರೆಯೇ ಇರುವುದಿಲ್ಲ. ಅವನ ಅಧಿಕಾರವು ನಿರಂಕುಶವಾಗಿರುವುದು. ಆದರೆ, ಅವನ ಮೇಲೆ ಧರ್ಮದ ಅಧಿಕಾರವು ನಿರಂಕುಶವಾಗಿರುವುದು. ಉಪಕಾರ ಮಾಡುವುದಕ್ಕೆ ದೊರೆಯು ಸರ್ವ ಸ್ವತಂತ್ರನು. ಅಪಕಾರ ಮಾಡುವುದಕ್ಕೆ ಅವನಿಗೆ ಎಳ್ಳಿನಷ್ಟು ಶಕ್ತಿಯೂ ಇರುವುದಿಲ್ಲ ಧರ್ಮಶಾಸ್ತ್ರಗಳು ಪ್ರಜೆಗಳನ್ನು ಅವನ ವಶಕ್ಕೆ ಒಪ್ಪಿಸಿರುವುವು. ಎಲ್ಲಾ ಪ್ರಜೆಗಳನ್ನೂ ಸ್ವಂತ ಮಕ್ಕಳಂತೆ ಕಾಪಾಡಬೇಕಾಗಿ ಈ ಧರ್ಮಶಾಸ್ತ್ರಗಳು ಅವನಿಗೆ ವಿಧಿಯನ್ನು ಮಾಡಿರುವುವು. ಆ ವಿಧಿಯನ್ನು ಇವನು ಉಲ್ಲಂಘಿಸಿದರೆ, ಇವನ ರಕ್ಷಣೆಯನ್ನು ಧರ್ಮಶಾಸ್ತ್ರಗಳು ಉಲ್ಲಂಘಿಸುವುವು. ಪ್ರಭುವಿನ ವಿವೇಕವೂ, ಧರ್ಮವೂ ದುಷ್ಟನಿಗ್ರಹಕ್ಕೂ, ಶಿಷ್ಟಪರಿಪಾಲನೆಗೂ ಸಾಧಕವಾಗಿರಬೇಕೆಂಬುವುದೇ ಧರ್ಮಶಾಸ್ತ್ರಗಳ ಉದ್ದೇಶ. ಪ್ರಜೆಗಳಿಗೋಸ್ಕರ ಪ್ರಭುವು

ಇರುವನೇ ಹೊರತು, ಪ್ರಭುವಿಗೋಸ್ಕರ ಪ್ರಜೆಗಳು ಇರುವುದಿಲ್ಲವೆಂದು ಈ ಧರ್ಮ ಶಾಸ್ತ್ರಗಳ ಸಿದ್ಧಾಂತವಾಗಿರುವುದು. ಇವನ ವಿವೇಕದಿಂದಲೂ, ಧರ್ಮಬುದ್ಧಿಯಿಂದಲೂ ಮಹಾಜನಗಳೆಲ್ಲರೂ ನಿರುಪಾಧಿಕವಾದ ಸುಖಸೌಖ್ಯ ಅನುಭವಿಸಬೇಕು. ಇವನ ವಿಜೃಂಭಣೆಗೂ, ಸೌಖ್ಯಕ್ಕೂ ಅವರು ಅಹೋರಾತ್ರಿಗಳಲ್ಲಿಯೂ ದುಡಿದು, ದಾಸಾನುದಾಸರಾಗಿರಬೇಕು " ಎಂದು ಈ ಧರ್ಮಶಾಸ್ತ್ರವು ಹೇಳುವುದಿಲ್ಲ. ಪ್ರಜೆಗಳ ಸಂಪತ್ತಿಗಿಂತಲೂ ಪ್ರಭುವಿನ ಸಂಪತ್ತು ಹೆಚ್ಚಾಗಿ ಇರಕೂಡದು. ಆದರೆ, ಎಲ್ಲಾ ಪ್ರಜೆಗಳ ಕ್ಷೇಮಾರ್ಥವಾಗಿ ಪ್ರಭುವು ಅಹೋರಾತ್ರಿಗಳಲ್ಲಿಯೂ ಕೆಲಸ ಮಾಡಬೇಕು. ದುಷ್ಟನಿಗ್ರಹ, ಶಿಷ್ಟಪರಿಪಾಲನಕ್ಕೆ ಸಾಧಕವಾದ ಹುಕುಂಗಳನ್ನು ಜಾರಿಗೆ ತರಬೇಕು. ಈ ಎರಡು ಕೆಲಸಗಳೂ ಸಮರ್ಪಕವಾಗಿ ನಡೆಯಬೇಕಾದರೆ, ಅಧಿಕಾರ ದರ್ಪವನ್ನು ರಕ್ಷಿಸಿಕೊಳ್ಳುವುದಕ್ಕೆ ಬೇಕಾದ ಏರ್ಪಾಡು ಇರಬೇಕು. ಆ ಏರ್ಪಾಡುಗಳೆಲ್ಲಾ ಪ್ರಜೆಗಳ ಕ್ಷೇಮಾರ್ಥವಾದ ಏರ್ಪಾಡುಗಳಾಗಿರಬೇಕು ಅದಕ್ಕೆ ಬೇಕಾದ ಖರ್ಚು ವಿನಾ ಆತ್ಮಾರ್ಥವಾದ ಖರ್ಚು ಪ್ರಜೆಗಳಿಗೆ ಎಷ್ಟು ಬೇಕೋ, ಪ್ರಭುವಿಗೆ ಅದಕ್ಕಿಂತಲೂ ಹೆಚ್ಚಾಗಿ ಇರಕೂಡದು. ಪ್ರಭುವಿನ ಮೇಲ್ಪಂಕ್ತಿಯು ಪ್ರಜೆಗಳ ಅನುಷ್ಠಾನಕ್ಕೆ ಬರುವುದು. ಹಿರಿಯರು ನಡದಂತೆ ಕಿರಿಯರು ನಡೆಯುವುದು ವಾಡಿಕೆಯಾಗಿರುವುದು. ಆದುದರಿಂದ ಪ್ರಜೆಗಳೆಲ್ಲರೂ ಹೇಗಿದ್ದರೆ ದೇಶವು ಸುಭಿಕ್ಷವಾಗಿರುವುದೋ ಅದನ್ನು ಪರ್ಯಾಲೋಚಿಸಿ, ಅದಕ್ಕೆ ಅನುಸಾರವಾದ ಮೇಲ್ಪಂಕ್ತಿಯಾಗಿ, ತನ್ನ ನಡೆನುಡಿಗಳು ಇರುವಂತೆ ಪ್ರಭುವು ಮಾಡಿಕೊಳ್ಳಬೇಕು. ಪರಿಣಾಮಫಲವನ್ನು ಪರ್ಯಾಲೋಚಿಸದೆ, ಯಾವ ಕೆಲಸವನ್ನೂ ಮಾಡಬಾರದು. ಕೆಟ್ಟ ಮೇಲ್ಪಂಕ್ತಿಯನ್ನು ಹಾಕಿದರೆ, ದೇಶವೇ ನಾಶವಾಗುವುದು. ಪ್ರಜೆಗಳಿಗೋಸ್ಕರವಾದರೂ ಪ್ರಭುವಿನ ನಡೆನುಡಿಗಳು ಸಮೀಚೀನವಾಗಿರುವಂತೆ ಮಾಡಿಕೊಳ್ಳಲ್ಪಡಬೇಕು. ತನ್ನ ಪ್ರಜೆಗಳ ಭಕ್ತಿಗೆ ಇವನು ವಿಷಯನಾಗಿರಬೇಕು. ಎಂಥಾ ಕಷ್ಟಗಳು ಬಂದಾಗ್ಯೂ, ಇವನು ಧರ್ಮವನ್ನು ಬಿಡತಕ್ಕವನಲ್ಲವೆಂಬ ಯಶಸ್ಸನ್ನು ಇವನು ಸಂಪಾದಿಸಿಕೊಳ್ಳಬೇಕು. ಸಕಲ ವಿಷಯಗಳಲ್ಲಿಯೂ ಇವನ ನಡೆನುಡಿಗಳು ಪ್ರಜೆಗಳಿಗೆ ಸಮೀಚೀನವಾದ ಮೇಲ್ಪಂಕ್ತಿಯಾಗಿರಬೇಕು. ಪ್ರಭುತ್ವವು ಇವನಿಗೆ ಆತ್ಮಾರ್ಥವಾಗಿ ಬಂದಿರುವುದಿಲ್ಲ. ಪ್ರಜೆಗಳ ಸೇವೆಯನ್ನು ಮಾಡುವುದರಲ್ಲಿ ಇವನ ಶಕ್ತಿಯು ಅಪ್ರತಿಹತವಾಗಿರಲೆಂದು ಪ್ರಭುತ್ವವು ಇವನಿಗೆ ವಹಿಸಲ್ಪಟ್ಟಿರುವುದು. ಇವನ ಕಾಲವೆಲ್ಲಾ ಪ್ರಜೆಗಳದಾಗಿರಬೇಕು. ಇವನ ಮನೋವ್ಯಾಪಾರಗಳಿಗೆ ಪ್ರಜೆಗಳ ಕ್ಷೇಮವು ಸದಾ ವಿಷಯವಾಗಿಬೇಕು. ಪ್ರಜೆಗಳ ಕಷ್ಟನಿಷ್ಠುರಗಳನ್ನು

17

ಇವನು ಸದಾ ಪರೀಕ್ಷಿಸಿ, ನಿವಾರಣೆ ಮಾಡುತ್ತಲಿರಬೇಕು. ಪ್ರಜೆಗಳ ಕಷ್ಟವನ್ನು ತಪ್ಪಿಸುವುದೇ ತನ್ನ ಮುಖ್ಯ ಸುಖವೆಂದು ಇವನು ಭಾವಿಸಬೇಕು. ಯಾವ ಪ್ರಭುವು ತನ್ನ ಸುಖವನ್ನು ಪರಿತ್ಯಾಗ ಮಾಡಿ, ಜನಗಳ ಸುಖವೇ ತನ್ನ ಸುಖವೆಂದು ಭಾವಿಸುವನೋ ಅವನು ಜಗದೀಶ್ವರನ ಪ್ರತಿನಿಧಿಯಾಗುವನು. ಈ ರೀತಿಯಲ್ಲಿ ಧರ್ಮಶಾಸ್ತ್ರವನ್ನು ವಿಧಿಸಿ, ಮೈನಾಸನು ಈ ಧರ್ಮಗಳಿಗೆ ಅನುಸಾರವಾಗಿ ನಡೆಯದಿದ್ದರೆ, ತನ್ನ ಮಕ್ಕಳಿಗೆ ಪ್ರಭುತ್ವವನ್ನು ಕೊಡಕೂಡದೆಂದು ವಿಧಾಯಕ ಮಾಡಿಸುವನು. ತನ್ನ ಕುಟುಂಬದವರ ಮೇಲೆ ಇವನಿಗೆ ಎಷ್ಟು ವಿಶ್ವಾಸವಿತ್ತೋ ಅದಕ್ಕಿಂತಲೂ ತನ್ನ ಪ್ರಜೆಗಳ ಮೇಲೆ ಇವನಿಗೆ ವಿಶ್ವಾಸವು ಹೆಚ್ಚಾಗಿತ್ತು. ಹೀಗೆ ಇದ್ದುದರಿಂದಲೇ ಮೈನಾಸನು ಜಗದೀಶ್ವರನ ಅವತಾರವೆಂದು ಭಾವಿಸಲ್ಪಟ್ಟನು. ಇವನ ಧರ್ಮವು ಎಲ್ಲಿ ಅನುಷ್ಠಾನದಲ್ಲಿರುತ್ತದೋ ಅಲ್ಲಿ ಸತ್ಯವೂ, ಧರ್ಮವೂ ದೃಢಮೂಲವಾಗಿರುವುವು. ಅಲ್ಲಿ ಲಕ್ಷ್ಮಿಯು ತಾಂಡವಾಡುವಳು. ಅಲ್ಲಿ ಜಗದೀಶ್ವರನು ವಾಸವಾಗಿರುವನು ಅಲ್ಲಿ ದುಷ್ಟರು ಇರುವುದಿಲ್ಲ. ಶಿಷ್ಟರು ಸಕಲ ಸಾಮ್ರಾಜ್ಯವನ್ನೂ ಅನುಭವಿಸುತ್ತಲಿರುವರು.

ಈ ರೀತಿಯಲ್ಲಿ ಮೆಂಟರನು ಹೇಳಿದ ಮೈನಾಸನ ಧರ್ಮಗಳನ್ನು ಕೇಳುತ್ತಾ, ನಾವು ಈ ಕ್ರೀಟ್ ದ್ವೀಪದ ತೀರಕ್ಕೆ ಬಂದೆವು. ಈ ವೃತ್ತಾಂತವನ್ನು ಕೇಳುವಾಗ್ಯೆ, ನಮ್ಮ ಮನಸ್ಸೆಲ್ಲಾ ಈ ಧರ್ಮಗಳಲ್ಲಿ ಲೀನವಾಗಿತ್ತು. ಈ ವೃತ್ತಾಂತವು ಮುಗಿಯುವುದರೊಳಗಾಗಿ ಕ್ರೀಟ್ ದ್ವೀಪದ ತೀರಕ್ಕೆ ನಾವು ಬಂದೆವು. ಸದರಿ ತೀರದಲ್ಲಿ ಡೀಡಲಸ್‌ನಿಂದ ರಚಿಸಲ್ಪಟ್ಟ ಯಾವ ದಿಕ್ಕಿಗೆ ಹೋದಾಗ್ಯೂ, ಮಾರ್ಗವನ್ನು ತಪ್ಪಿಸುವ ಚಕ್ರಬಿಂಬವು ನಮ್ಮ ದೃಷ್ಟಿಪಥಕ್ಕೆ ಬಿದ್ದಿತು. ಈಜಿಪ್ಟ್ ದೇಶದಲ್ಲಿ ನಾವು ನೋಡಿದ ಚಕ್ರಬಿಂಬಕ್ಕಿಂತಲೂ ಇದು ದೊಡ್ಡದಾಗಿತ್ತು. ಈ ವಿಚಿತ್ರವಾದ ಕಟ್ಟಡವನ್ನು ನಾವು ನೋಡುತ್ತಿದ್ದಾಗ, ಬಹು ಜನಗಳು ಗುಂಪುಕಟ್ಟಿಕೊಂಡು, ನಮ್ಮ ಹಡಗಿನ ಬಳಿಗೆ ಬಂದರು. ಇಷ್ಟು ಗುಂಪು ಸೇರುವುದಕ್ಕೆ ಕಾರಣವೇನೆಂದು ನಾನು ಕೇಳಿದೆನು. ಆ ಗುಂಪಿನಲ್ಲಿ ಮುಖಂಡನಾಗಿದ್ದ ನಾಸಿಕ್ರೇಟೀಸ್ ಎಂಬುವನು ಹೇಳಿದ್ದೇನೆಂದರೆ:—

“ಮೈನಾಸ್ ಎಂಬುವನ ಮರಿಮಗನಾದ ಇಡೊಮಿನಿಯಸ್ ಎಂಬುವನು ಟ್ರಾಯ್ ದೇಶಕ್ಕೆ ಗ್ರೀಸ್ ದೇಶದಿಂದ ಪ್ರಯಾಣ ಮಾಡಿದ ಪ್ರಭುಗಳ ಜೊತೆಯಲ್ಲಿ ಹೋಗಿದ್ದನು. ಸದರಿ ಪಟ್ಟಣವು ನಾಶವಾದ ಮೇಲೆ, ಅವನು ಕ್ರೀಟ್ .ದೇಶಕ್ಕೆ ಹೊರಟನು. ದಾರಿಯಲ್ಲಿ ಬಲವಾದ ಬಿರುಗಾಳಿಯು ಉಂಟಾಯಿತು. ಅವನ ಹಡಗಿನಲ್ಲಿದ್ದವರೆಲ್ಲಾ ಹಡಗನ್ನು ನಡೆಸುವುದರಲ್ಲಿ ಬಹಳ ನಿಪುಣರಾಗಿದ್ದಾಗ್ಯೂ, ಹಡಗು ಮುಳುಗಿ ಹೋಗುವುದೆಂಬ ಭಯವು ಅವರಿಗೆ ಉಂಟಾ

ಯಿತು. ಮರಣವು ತಪ್ಪುವುದಿಲ್ಲವೆಂದು ಎಲ್ಲರೂ ತಿಳಿದುಕೊಂಡರು. ಸಮುದ್ರವು ತಮ್ಮನ್ನು ನುಂಗಿಬಿಡುವುದೆಂದು ಎಲ್ಲರಿಗೂ ತೋರಿತು. ಎಲ್ಲರೂ ಬಹಳ ವ್ಯಸನವುಳ್ಳವರಾದರು. ಅಪಮೃತ್ಯುವಿನಿಂದ ಮರಣ ಉಂಟಾದರೆ, ಅಂಥಾವರಿಗೆ ಸದ್ಗತಿಯುಂಟಾಗುವುದಿಲ್ಲವೆಂದು ಅವರ ಧರ್ಮಶಾಸ್ತ್ರದಲ್ಲಿ ಹೇಳಲ್ಪಟ್ಟಿರುವುದು. ಇಂಥಾ ಅಪಮೃತ್ಯುವಿಗೆ ಗುರಿಯಾದೆವಲ್ಲಾ ಎಂದು ಅವರು ವಿಷಾದವನ್ನು ಪಡುತ್ತಿದಾಗ, ಇಡುಮಿಾನಿಯಸ್‌ನು ಕೈಗಳನ್ನು ಆಕಾಶಕ್ಕೆ ಎತ್ತಿ, ಜಗದೀಶ್ವರನನ್ನು ಕುರಿತು, " ಎಲೈ ಸೃಷ್ಟಿಸ್ಥಿತಿಪ್ರಳಯಕರ್ತನೇ,—ಈಗ ಸನ್ನಿಹಿತವಾಗಿರುವ ಅಪಮೃತ್ಯುವಿನ ದೆಸೆಯಿಂದ ಮರಣವನ್ನು ತಪ್ಪಿಸು. ಈಗ ಸಮುದ್ರದಲ್ಲಿ ಮುಳುಗಿ ಸಾಯುವುದನ್ನು ನೀನು ತಪ್ಪಿಸಿದರೆ, ನನ್ನ ದೇಶಕ್ಕೆ ಹೋದ ಕೂಡಲೇ, ಯಾವ ಪ್ರಾಣಿಯು ಮೊದಲು ನನ್ನ ಬಳಿಗೆ ಬರುವುದೋ ಅದನ್ನು ನಿನಗೆ ಬಲಿ ಕೊಡುತ್ತೇನೆ" ಎಂದು ಪ್ರಾರ್ಥಿಸಿದನು. ದೈವಯೋಗದಿಂದ ಗಾಳಿಯು ನಿಂತಿತು. ಅವನ ಹಡಗಿಗೆ ಅಪಾಯವು ತಪ್ಪಿತು. ಕ್ರೀಟ್ ದ್ವೀಪವನ್ನು ಅವನು ತಲಪಿದನು."

ಇವನು ಹಡಗನ್ನು ಇಳಿದ ಕೂಡಲೇ, ಇವನ ಪ್ರೀತಿಗೆ ಅತ್ಯಂತ ಪಾತ್ರನಾದ ಇವನ ಮಗನು ಬಂದು, ಅವನನ್ನು ಎದುರುಗೊಂಡು, ಅವನ ಆಲಿಂಗನ ಸುಖವನ್ನು ಅಪೇಕ್ಷಿಸಿದನು. ಕೂಡಲೇ ಈ ಇಡುಮಿಾನಿಯಸ್ಸನು ದುಸ್ಸಹವಾದ ವ್ಯಸನದಿಂದ ವಜ್ರಾಯುಧದಿಂದ ಹೊಡೆಯಲ್ಪಟ್ಟಂತೆ ನೆಲಕ್ಕೆ ಬಿದ್ದನು. ನಾನಾ ವಿಧವಾದ ಶೈತ್ಯೋಪಚಾರಗಳಿಂದ ಅವನಿಗೆ ಪ್ರಜ್ಞೆಯು ಬರುವಂತೆ ಮಾಡಲ್ಪಟ್ಟಿತು. ಬದುಕಿರುವುದಕ್ಕಿಂತ ಸಾಯುವುದು ಮೇಲೆಂದು ಅಂದುಕೊಂಡನು. ತನಗೆ ಉಂಟಾದ ಮೂರ್ಛೆಯಿಂದ ಸತ್ತಿದ್ದರೆ ಚನ್ನಾಗಿತ್ತೆಂಬ ಭಾವನೆಯು ಅವನಿಗೆ ಉಂಟಾಯಿತು. ಮುಂದಕ್ಕೆ ಹೋಗುವುದಕ್ಕೆ ಹಿಂತೆಗೆದನು. 'ದುರ್ದೈವವೇ! ನನಗೆ ಏನು ಗತಿ!' ಎಂದು ಅಳುವುದಕ್ಕೆ ಉಪಕ್ರಮಿಸಿದನು. ನನ್ನ ಮಗನೇ ಮೊದಲು ನನ್ನ ದೃಷ್ಟಿಗೆ ಬೀಳುವಂತೆ ಆಯಿತಲ್ಲಾ! ದೇವರು ನನ್ನನ್ನು ಪರೀಕ್ಷಿಸುತ್ತಲಿದಾನೆ. ಬದುಕಿ ಪುತ್ರಶೋಕವನ್ನು ಅನುಭವಿಸುವುದಕ್ಕಿಂತ ಸಾಯುವುದು ಮೇಲು ಎಂದುಕೊಂಡನು. ಈ ಅವಸ್ಥೆಯನ್ನು ನೋಡಿ, ಇಡುಮಿಾನಿಯಸ್ಸನನ್ನು ಕುರಿತು, ಅವನ ಮಗನು ಹೇಳಿದ್ದೇನೆಂದರೆ:—

" ಎಲೈ ಜನಕನೇ,—ಈ ಅಪಾರವಾದ ದುಃಖಕ್ಕೆ ಕಾರಣವೇನು? ನೀನು ಈ ದೇಶವನ್ನು ಬಿಟ್ಟು ಬಹುಕಾಲವಾಯಿತು. ನಿನ್ನ ದರ್ಶನಸುಖವನ್ನು ಅನುಭವಿಸಬೇಕೆಂದು ಬಂದ ನನಗೆ ನಿನ್ನ ಸ್ಥಿತಿಯನ್ನು ನೋಡಿದರೆ ತುಂಬಾ ವ್ಯಸನವಾ

ಗುತ್ತದೆ. ನನ್ನ ಕಡೆಗೆ ನಿನ್ನ ದೃಷ್ಟಿಯು ಬೀಳುತ್ತಲಿಲ್ಲ. ನಾನು ಏನು ಅಪ ರಾಧ ಮಾಡಿದೆ? ಅಪರಾಧವೇನಾದರೂ ಮಾಡಿದ್ದರೆ, ಅದನ್ನು ಕ್ಷಮಿಸು."

ಈ ರೀತಿ ಮಗನು ಹೇಳಿದ್ದನ್ನು ಕೇಳಿ, ಇನ್ನೂ ಅಧಿಕವಾದ ಸಂತಾಪದಿಂದ ಮಾತನಾಡುವುದಕ್ಕೆ ಅಸಮರ್ಥನಾದನು ಸ್ವಲ್ಪ ಹೊತ್ತಿನ ಮೇಲೆ, 'ಎಲೈ ಜಗದೀಶ್ವರನೇ—ನಾನು ಎಂಥಾ ಪ್ರತಿಜ್ಞೆಯನ್ನು ಮಾಡಿದೆನು! ಈ ಪ್ರತಿಜ್ಞೆ ಯನ್ನು ನಿರಾಕರಿಸಿ, ನೀನು ನನ್ನನ್ನು ಏತಕ್ಕೆ ಸಮುದ್ರದಲ್ಲಿ ಮುಳುಗಿಸಲಿಲ್ಲ? ನನ್ನ ಹಡಗು ಛಿದ್ರವಾಗಿ, ನಾನು ದೇಹವನ್ನು ಬಿಟ್ಟಿದ್ದರೆ, ನನಗೆ ಈ ದುಸ್ಸಹ ವಾದ ಸಂಕಟವು ಬರುತ್ತಿರಲಿಲ್ಲ. ನನ್ನ ಮಗನನ್ನು ರಕ್ಷಿಸುವುದಕ್ಕೋಸ್ಕರ ನನ್ನ ಬಲಿಯನ್ನು ಒಪ್ಪಿಕೊ' ಎಂದು ಹೇಳಿ, ಕತ್ತಿಯನ್ನು ಹಿರಿದು, ತನ್ನನ್ನು ಸಂಹರಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದನು. ಸಮೀಪದಲ್ಲಿದ್ದವರು ಅವನ ಕೈಯನ್ನು ಹಿಡಿದುಕೊಂಡರು. ಅಲ್ಲಿದ್ದ ದೀರ್ಘದರ್ಶಿಯಾದ ಒಬ್ಬ ಮಹಾ ತ್ಮನು 'ವ್ಯಸನ ಪಡಬೇಡ ನಿನ್ನ ಮಗನನ್ನು ಬಲಿ ಕೊಡದೆ, ದೇವರನ್ನು ಸಮಾ ಧಾನಪಡಿಸುವ ಏರ್ಪಾಡುಗಳನ್ನು ಪರ್ಯಾಲೋಚಿಸೋಣ. ನೀನು ತಪ್ಪು ಪ್ರತಿ ಜ್ಞೆಯನ್ನು ಮಾಡಿದೆ. ಬಲಿಯಿಂದ ದೇವರು ತೃಪ್ತನಾಗುವನೇ? ಈ ವಿಷಯದಲ್ಲಿ ನೀನು ಮಾಡಿದ ಸಂಕಲ್ಪವು ಪಾಪಿಷ್ಠವಾದದ್ದಲ್ಲವೇ? ಮಗನನ್ನು ಬಲಿ ಕೊಡು ವುದಾಗಿ ನೀನು ಹೇಳಿದ್ದೇ ತಪ್ಪು. ಆತ್ಮಹತ್ಯವನ್ನು ಮಾಡಿಕೊಳ್ಳುವುದಾಗಿ ಸಂಕಲ್ಪ ಮಾಡುವುದು ಅದಕ್ಕಿಂತಲೂ ದೊಡ್ಡ ತಪ್ಪು. ಒಂದುನೂರು ವೃಷಭ ಗಳನ್ನು ಬರಮಾಡು. ಈ ಬಲಿಪೀಠಕ್ಕೆ ಪೂಜೆಯನ್ನು ಮಾಡು. ಅವುಗಳನ್ನು ಬಲಿ ಕೊಡು. ಅದನ್ನು ಜಗದೀಶ್ವನು ನಿನ್ನ ಮಗನಿಗೆ ಬದಲಾಗಿ ಪರಿಗ್ರಹಿಸಲಿ' ಎಂದು ಹೇಳಿದನು.

ಇಡುಮಿನಿಯಸ್ಸನಿಗೆ ಇದು ಧರ್ಮವಾಗಿ ತೋರಲಿಲ್ಲ. ಸ್ವಲ್ಪ ಹೊತ್ತು ಅವನು ಮಾತನಾಡದೆ ಇದ್ದನು. ಅವನ ಕಣ್ಣುಗಳು ಬೆಂಕಿಯಂತಾದವು. ಅವನ ಮುಖವು ಹುಚ್ಚರ ಮುಖದಂತೆ ಪರಿಣಮಿಸಿತು. ಅವನ ವರ್ಣವು ಗೋಸುಂಬೆ ಯ ವರ್ಣದಂತೆ ಕ್ಷಣಕ್ಕೆ ಒಂದು ವಿಧವಾಗುವಂತೆ ಆಯಿತು. ಸಕಲ ಅವಯವ ಗಳೂ ನಡಗುತ್ತಿದ್ದವು. ಈ ಅವಸ್ಥೆಯನ್ನು ನೋಡಿ, 'ಎಲೈ ತಂದೆಯೇ,— ಏತಕ್ಕೆ ವ್ಯಸನಪಡುತ್ತೀಯೆ? ನಿನ್ನ ಪ್ರತಿಜ್ಞೆಗೆ ಭಂಗವು ಏತಕ್ಕೆ ಬರಬೇಕು? ಹುಟ್ಟಿದವರಿಗೆ ಮರಣವು ಎಂದಿಗೂ ತಪ್ಪುವುದಿಲ್ಲ. ಇಗೋ ನಾನು ಸಿದ್ಧನಾ ಗಿರುತ್ತೇನೆ. ಸಾವಕಾಶ ಮಾಡಬೇಡ. ನನ್ನನ್ನು ಬಲಿ ಕೊಡುವುದಕ್ಕೆ ನಾನು ಮನಃಪೂರ್ವಕವಾಗಿ ಒಪ್ಪಿರುತ್ತೇನೆ. ಇದರಿಂದ ನಿನಗೆ ಯಾವ ಪಾಪವೂ ಇಲ್ಲ. ನೀನೂ, ಈ ಹಡಗಿನಲ್ಲಿರತಕ್ಕ ಮಹಾಜನಗಳೂ ಬದುಕುವುದಕ್ಕೆ ನನ್ನ ಬಲಿಯು

ಸಾಧಕವಾದರೆ ನಾನು ಧನ್ಯನಾಗಲಿಲ್ಲವೇ ? ಇದಕ್ಕೆ ವ್ಯಸನವೇತಕ್ಕೆ ? ಮರಣಕ್ಕೆ ನಾನು ಭಯಪಡತಕ್ಕವನಲ್ಲ. ನಿಮ್ಮನ್ನೆಲ್ಲಾ ಬದುಕಿಸುವುದಕ್ಕೆ ನಾನು ಸಾಧನಭೂತನಾದ್ದರಿಂದ, ನಾನು ಧನ್ಯನಾಗಲಿಲ್ಲವೇ ? ವ್ಯಸನವನ್ನು ಬಿಡು. ಕತ್ತಿಯನ್ನು ತೆಗೆದುಕೊ ನನ್ನನ್ನು ಸಂಹರಿಸು, ಜಗದೀಶ್ವರನಿಗೆ ಬಲಿಯನ್ನಾಗಿ ಮಾಡು. ಅವನು ತೃಪ್ತನಾಗಲಿ ' ನಿನ್ನ ಪ್ರತಿಜ್ಞೆಯು ಪರಿಪೂರ್ಣವಾಗಲಿ, ಎಂದು ಹೇಳಿದನು.

ಈ ಮಾತನ್ನು ಕೇಳಿ, ತುಂಬಾ ವಿಷಾದವಾದಾಗ್ಯೂ, ಪ್ರತಿಜ್ಞೆಯನ್ನು ಪರಿಪಾಲಿಸುವುದು ತನಗೆ ಧರ್ಮವೆಂದು ತಿಳಿದುಕೊಂಡು, ಮಗನು ಹೇಳಿದಂತೆ ಕತ್ತಿಯನ್ನು ತೆಗೆದುಕೊಂಡು, ' ಎಲೈ ಜಗದೀಶ್ವರನೇ,—ನಾನು ಮಾಡಿದ ಪ್ರತಿಜ್ಞೆಯು ಅನುಲ್ಲಂಘನೀಯವಾದದು. ನನಗೆ ಪ್ರಾಣಪ್ರಾಯನಾದ ಮಗನನ್ನು ನಿನಗೆ ಒಪ್ಪಿಸಿರುತ್ತೇನೆ ' ಎಂದು ಕತ್ತಿಯಿಂದ ಒಂದೇ ಏಟಿನಲ್ಲಿ ಮಗನ ಶಿರಚ್ಛೇದವನ್ನು ಮಾಡಿದನು. ಅದೇ ಕತ್ತಿಯಿಂದ ತನ್ನನ್ನು ಹೊಡೆದುಕೊಳ್ಳಬೇಕೆಂದು ಪ್ರಯತ್ನ ಮಾಡಿದನು. ಅಷ್ಟರಲ್ಲಿಯೇ ಸಮೀಪದಲ್ಲಿದ್ದವರು ಆತ್ಮಹತ್ಯವನ್ನು ತಪ್ಪಿಸಿದರು ಆದಾಗ್ಯೂ ದೇಹದ ಮೇಲೆ ಪ್ರಜ್ಞೆಯಿಲ್ಲದೆ, ಅವನು ನೆಲಕ್ಕೆ ಬಿದ್ದನು. ಅವನಿಗೆ ಪ್ರಜ್ಞೆಯು ತಪ್ಪಿತು. ಶೈತ್ಯೋಪಚಾರ ಬಲದಿಂದ ಅವನಿಗೆ ಪ್ರಜ್ಞೆಯು ಬಂದಿತು. ಆದರೆ, ಬುದ್ಧಿವಿಕಲ್ಪವು ಉಂಟಾಯಿತು. ದುಃಖಪರವಶತೆಯಿಂದ ಸಿಕ್ಕಿದ ಕಡೆ ತಿರುಗುತ್ತಾ, ನನ್ನ ಮಗನು ಎಲ್ಲಿ ? ಎಂಬದಾಗಿ ಕೇಳುತ್ತಾ, ಉನ್ಮತ್ತಾವಸ್ಥೆಯನ್ನು ಹೊಂದಿದನು.

ಮಗನನ್ನು ಕೊಂದದ್ದಕ್ಕೆ ಜಗದೀಶ್ವರನು ಇವನಿಗೆ ತಕ್ಕ ಶಿಕ್ಷೆಯನ್ನು ಮಾಡಿರುವನೆಂದು ಜನಗಳು ಹೇಳುವುದಕ್ಕೆ ಉಪಕ್ರಮ ಮಾಡಿದರು. ಪುತ್ರಹತ್ಯಮಾಡಿದವನೆಂದು ಇವನನ್ನು ಜನಗಳು ಬಹಿರಂಗವಾಗಿ ನಿಂದಿಸು[illegible]ದಕ್ಕೆ ಉಪಕ್ರಮಿಸಿದರು. ಪ್ರಭುವಾಗಿರುವುಕ್ಕೆ ಇವನು ಅನರ್ಹನೆಂದು ಆ [illegible]ಪದ ನಿವಾಸಿಗಳೆಲ್ಲರೂ ಇವನಲ್ಲಿ ತಿರಸ್ಕಾರವನ್ನು ತೋರಿಸಿದರು. ಇವನ [illegible]ರಲ್ಲಿ ಕೆಲವರು ಇವನನ್ನು ಕರೆದುಕೊಂಡು ಹೋಗಿ ಹಡಗಿಗೆ ಬಿಟ್ಟರು. ಆ ದ್ವೀಪದಿಂದ ಈ ಹಡಗು ಹೆಸ್ಪೇರಿಯಾ ಪ್ರಾಂತ್ಯಕ್ಕೆ ಹೊರಟಿತು

ಈ ಮಧ್ಯೆ ಕ್ರೀಟ್ ದ್ವೀಪದ ನಿವಾಸಿಗಳು ಇಡುಮಿಾನಿಯಸ್ಸನಿಗೆ ಬದಲಾಗಿ, ಒಬ್ಬ ಪ್ರಭುವನ್ನು ಚುನಾಯಿಸಿಕೊಳ್ಳಬೇಕೆಂದು ನಿಷ್ಕರ್ಷಿಸಿದರು. ಇದಕ್ಕಾಗಿ ಪ್ರತಿ ಒಂದು ಪಟ್ಟಣದಿಂದಲೂ ಮಹಾಜನಗಳು ಕರೆಸಲ್ಪಟ್ಟರು. ಆ ದ್ವೀಪದಲ್ಲಿ ಮುಖಂಡರಾದ ವಿದ್ವಾಂಸರೆಲ್ಲಾ ಸೇರಿ, ಪ್ರಭುವಾಗಿ ಚುನಾಯಿಸಬೇಕಾದರೆ, ಏನು ಮಾಡಬೇಕೆಂದು ಪರ್ಯಾಲೋಚಿಸಿದರು. ಪ್ರಭುಪದವಿಗೆ

ಚುನಾಯಿಸಲ್ಪಡತಕ್ಕವನು ದೇಹಶಕ್ತಿಯನ್ನೂ, ಬುದ್ಧಿಶಕ್ತಿಯನ್ನೂ ವಿಶೇಷವಾಗಿ ಪಡೆದಿರಬೇಕೆಂದು ನಿಷ್ಕರ್ಷೆ ಮಾಡಲ್ಪಟ್ಟಿತು. ವ್ಯಾಯಾಮಗಳಲ್ಲಿಯೂ, ಧೈರ್ಯದಲ್ಲಿಯೂ, ಬಲದಲ್ಲಿಯೂ, ಚಟುವಟಿಕೆಯಲ್ಲಿಯೂ, ಧರ್ಮಶಾಸ್ತ್ರಗಳಲ್ಲಿಯೂ ಯಾರು ಸರ್ವೋತ್ತಮರೋ, ಧರ್ಮಗಳು ಯಾರ ಅನುಷ್ಠಾನದಲ್ಲಿ ಇರುವುವೋ ಅವರು ಚುನಾಯಿಸಲ್ಪಡಬೇಕೆಂದು ನಿಷ್ಕರ್ಷೆಯಾಯಿತು. ಈ ನಿಷ್ಕರ್ಷೆಗೆ ಅನುಸಾರವಾಗಿ ಮೊದಲು ದೇಹಶಕ್ತಿಯನ್ನು ಪರೀಕ್ಷಿಸುವುದಕೋಸ್ಕರ ಆಟಪಾಟಗಳಲ್ಲಿಯೂ, ಅಂಗಸಾಧನೆಗಳಲ್ಲಿಯೂ ಪೋಟಾಪೋಟಿಯು ಏರ್ಪಡಿಸಲ್ಪಟ್ಟಿತು. ಪ್ರಭುಪದವಿಗೆ ಉಮೇದುವಾರರಾಗತಕ್ಕ ಜನಗಳೆಲ್ಲಾ ಸೇರಿಸಲ್ಪಟ್ಟರು. ಒಂದು ದೊಡ್ಡ ಅಖಾಡಾವು ಏರ್ಪಡಿಸಲ್ಪಟ್ಟಿತು. ಇವರ ಪೋಟಾಪೋಟಿಯನ್ನು ನೋಡುವುದಕ್ಕೆ ಲಕ್ಷೋಪಲಕ್ಷ ಪ್ರೇಕ್ಷಕರು ಸೇರಿದರು. ಈ ಪೋಟಾಪೋಟಿಗೆ ನೇರಬೇಕೆಂದು ಅಧಿಕಾರಿಗಳು ನಮಗೆ ಅಪ್ಪಣೆ ಕೊಡಿಸಿದರು. ಮೆಂಟರನು ವೃದ್ಧನಾದ್ದರಿಂದ, ತಾನು ಪೋಟಾಪೋಟಿಗೆ ಸೇರುವುದಿಲ್ಲವೆಂದು ಹೇಳಿದನು. ಹೇಜಲ್‍ನ ದೇಹಸ್ಥಿತಿಯು ಸರಿಯಾಗಿರಲಿಲ್ಲ. ಆದುದರಿಂದ ಅವನೂ ಸೇರಲಿಲ್ಲ. ನಾನು ಪ್ರಾಯಸ್ಥನಾಗಿಯೂ, ಬಲಿಷ್ಠನಾಗಿಯೂ ಇದ್ದುದರಿಂದ, ನನ್ನನ್ನು ಸೇರಬೇಕೆಂದು ಬಲಾತ್ಕಾರ ಮಾಡಿದರು. ನಾನು ತಪ್ಪಿಸಿಕೊಳ್ಳುವುದಕ್ಕೆ ಆಗಲಿಲ್ಲ. ಸೇರಬಹುದೆಂದು ಮೆಂಟರನು ಅನುಜ್ಞೆಯನ್ನು ಕೊಟ್ಟನು. ನಾನು ಈ ಪೋಟಾಪೋಟಿಗೆ ಸೇರಿದೆನು. ನಾನು ಬಟ್ಟೆಗಳನ್ನು ತೆಗೆದು, ಅಂಗಸಾಧನೆಗೆ ಉಚಿತವಾದ ಚಡ್ಡಿ ಮೊದಲಾದವುಗಳನ್ನು ಹಾಕಿಕೊಂಡು, ಅಖಾಡಕ್ಕೆ ಇಳಿದ ಕೂಡಲೇ, ಬಾಲ್ಯದಲ್ಲಿ ನನ್ನನ್ನು ನೋಡಿದ್ದವರು ಯಾರೋ ಒಬ್ಬರು ನಾನು ಇಥಾಕಾ ದೇಶದ ಪ್ರಭುವಾದ ಯೂಲಿಸಸ್ಸನ ಮಗನೆಂದು ಹೇಳಿದರು. ಊರೆಲ್ಲಾ ಹರಡಿಕೊಂಡಿತು. ಮೊದಲು ಕುಸ್ತಿಗೆ ಪ್ರಾರಂಭವಾಯಿತು. ರೋಡ್ಸ್ ದೇಶದವನೊಬ್ಬ ಯುವಕನು ತನ್ನೊಡನೆ ಕುಸ್ತಿಗೆ ಬಂದವರನ್ನೆಲ್ಲಾ ಕೆಡವಿ, ಅದ್ವಿತೀಯನೆನಿಸಿಕೊಂಡಿದ್ದನು ಅವನು ಆಜಾನುಬಾಹುವಾಗಿಯೂ, ಅದ್ಭುತವಾದ ದೇಹಶಕ್ತಿಯುಳ್ಳವನಾಗಿಯೂ ಇದ್ದನು. ಅವನ ನರಗಳು ಉಕ್ಕಿನ ಸಲಾಕಿಗಳಂತೆ ಇದ್ದವು. ಎಲ್ಲರೂ ಅವನಿಂದ ಪರಾಜಿತರಾದರು. ನಾನು ಒಬ್ಬನು ಮಾತ್ರ ಉಳಿದಿದ್ದೆನು. ನನ್ನನ್ನು ನೋಡಿ, ಮಶಕವನ್ನು ನೋಡಿದ ಆನೆಗೆ ಎಂಥಾ ತಿರಸ್ಕಾರವು ಉಂಟಾಗುವುದೋ ಅಂಥಾ ತಿರಸ್ಕಾರವನ್ನು ಇವನು ನನ್ನ ವಿಷಯದಲ್ಲಿ ತೋರಿಸಿದನು. ಆದಾಗ್ಯೂ, ಭಯಪಡದೆ, ನಾನು ಕುಸ್ತಿಗೆ ಸಿದ್ಧವಾದೆನು. ಸ್ವಲ್ಪ ಹೊತ್ತು ನಾವಿಬ್ಬರೂ ಹೆಣಗಾಡಿದೆವು. ನಮ್ಮ ಶಕ್ತಿಯನ್ನೆಲ್ಲಾ ಬಿಟ್ಟು, ಒಬ್ಬರನ್ನು ಒಬ್ಬರು ಗೆಲ್ಲಬೇಕೆಂಬ ಹುಮ್ಮಸ್ಸಿನಿಂದ ಒಬ್ಬರನ್ನು ಒಬ್ಬರು

ಕೆಡಹುವುದಕ್ಕೆ ನಾವು ಅನೇಕ ಹುನ್ನರುಗಳನ್ನು ಮಾಡಿದೆವು. ನನ್ನನ್ನು ಕೆಡವ ಬೇಕೆಂದು ಅವನು ಎಷ್ಟೋ ಪ್ರಯತ್ನಗಳನ್ನು ಮಾಡಿದನು. ಕೆಲವು ಸಂದರ್ಭ ಗಳಲ್ಲಿ ತನ್ನ ಬಲದಿಂದಲೂ, ಇನ್ನು ಕೆಲವು ಸಂದರ್ಭಗಳಲ್ಲಿ ಹುನ್ನರುಗಳಿಂದಲೂ ನನ್ನನ್ನು ಕೆಡಹುವ ಪ್ರಯತ್ನವನ್ನು ಮಾಡಿದನು. ಒಳ್ಳೆ ಸಮಯವನ್ನು ನಿರೀ ಕ್ಷಿಸಿ, ನನ್ನ ಶಕ್ತಿಯನ್ನೆಲ್ಲಾ ಬಿಟ್ಟು, ಅವನು ಬೀಳುವಂತೆ ಮಾಡಿದೆನು. ಬೀಳು ವಾಗ್ಗೂ, ಅವನು ನನ್ನನ್ನು ಎಳೆದುಕೊಂಡು ಕೆಡವಬೇಕೆಂದು ಪ್ರಯತ್ನ ಮಾಡಿ ದನು. ಅವನು ಬಿದ್ದ ಕೂಡಲೇ, ಅಲ್ಲಾಡುವುದಕ್ಕೆ ಅವಕಾಶ ಕೊಡದೆ, ಅವನ ಮೇಲೆ ನಾನು ಅಗಿತುಕೊಂಡೆನು. ಯೂಲಿಸೆಸ್ಸನ ಮಗನಿಗೆ ವಿಜಯವಾಯಿ ತೆಂದು ಎಲ್ಲರೂ ಜಯಧ್ವನಿಯನ್ನು ಮಾಡಿದರು. ಆ ಮೇಲೆ ಅವನಿಗೆ ಏಳುವು ದಕ್ಕೆ ಅವಕಾಶ ಕೊಟ್ಟೆನು. ಅವನು ಭಗ್ನಮನೋರಥವಾಗಿ ಹೊರಟು ಹೋದನು.

ಮುಷ್ಟಿಯುದ್ಧಕ್ಕೆ ಆ ಮೇಲೆ ಉಪಕ್ರಮವಾಯಿತು. ಸೇಮಾಸ್ ದ್ವೀಪದ ನಿವಾಸಿಯೊಬ್ಬನು ಈ ಯುದ್ಧದಲ್ಲಿ ಅನೇಕರನ್ನು ಸೋಲಿಸಿದನು. ಎಲ್ಲರೂ ಪರಾಜಿತರಾದ ಮೇಲೆ, ನನ್ನ ಸರದಿಯು ಬಂದಿತು. ಇವನು ಬಹಳ ಸಮರ್ಥ ನಾಗಿದ್ದನು. ಒಂದು ಕಡೆ ತೋರಿಸಿ, ಇನ್ನೊಂದು ಕಡೆ ಪ್ರಹಾರವನ್ನು ಮಾಡು ತ್ತಾ, ನಾನು ರಕ್ತವನ್ನು ಕಕ್ಕುವಂತೆ ಇವನು ಮಾಡಿದನು. ನನಗೆ ಕಣ್ಣು ಕಾಣ ದಂತಾಯಿತು. ತಲೆಯು ತಿರುಗುವುದಕ್ಕೆ ಉಪಕ್ರಮವಾಯಿತು. ಮೂರ್ಛೆ ಹೋಗಿ ಬೀಳುವ ದೆಸೆಗೆ ಬಂದೆನು ‘ ಆ ಕಾಲದಲ್ಲಿ ಯೂಲಿಸೆಸ್ಸನ ಮಗನಾಗಿ, ಪರಾಜಿತನಾಗುತ್ತೀಯಾ ? ನಿನ್ನ ಪದವಿಗೆ ಅನುರೂಪವಾಗಿ, ನಡೆದುಕೊ ’ ಎಂದು ಮಂಟರನು ಕೂಗಿದನು ಇವನ ಪ್ರೋತ್ಸಾಹದ ಮಾತಿನಿಂದ ಏನೋ ಒಂದು ವಿಧವಾದ ಶಕ್ತಿಯು ಬಂದಂತಾಯಿತು. ಧೈರ್ಯವನ್ನು ತಂದುಕೊಂಡೆನು. ಅವನ ಏಟುಗಳನ್ನು ತಪ್ಪಿಸಿಕೊಳ್ಳುವುಕ್ಕೆ ಉಪಕ್ರಮಿಸಿದೆನು. ಒಂದು ಏಟನ್ನು ತಪ್ಪಿಸಿ ಕೊಂಡಾಗ, ಅವನು ತನ್ನ ಸ್ವಂತ ಭಾರದಿಂದ ಮುಂದಕ್ಕೆ ಬಿದ್ದನು. ಆ ಸಮ ಯದಲ್ಲಿ ನನ್ನ ಶಕ್ತಿಯನ್ನೆಲ್ಲಾ ಬಿಟ್ಟು, ಒಂದು ಏಟಿನಲ್ಲಿ ಅವನನ್ನು ನೆಲಕ್ಕೆ ಕೆಡ ವಿದೆನು. ಅಲ್ಲಿಂದ ಎಬ್ಬಿಸುವುದಕ್ಕೆ ಕೈಯ್ಯನ್ನು ಕೊಟ್ಟೆನು. ಪರಾಜಿತನಾದೆ ನೆಂಬ ವಿಷಾದದಿಂದ ಅವನು ತಲೆಯನ್ನು ಬಗ್ಗಿಸಿಕೊಂಡು ಹೊರಟು ಹೋದನು. ಯೂಲಿಸೆಸ್ಸನ ಮಗನಿಗೆ ಜಯವಾಯಿತೆಂದು ಪುನಃ ಜಯಧ್ವನಿಯಾಯಿತು.

ರಥವನ್ನು ನಡೆಸುವ ಜೂಜು ಉಪಕ್ರಮವಾಯಿತು. ಲಾಟರಿ ಪ್ರಕಾರ ರಥಗಳು ಹಂಚಲ್ಪಟ್ಟವು. ನನ್ನ ರಥವು ಎಲ್ಲಾ ರಥಗಳಲ್ಲಿಯೂ ಅತ್ಯಂತ ದುರ್ಬ ಲವಾದುದಾಗಿತ್ತು. ಗಾಲಿಗಳು ಬಹಳ ದಪ್ಪನಾಗಿಯೂ, ಭಾರವಾಗಿಯೂ

ಇದ್ದವು. ಕುದುರೆಗಳು ಇತರ ರಥಗಳ ಕುದುರೆಗಳಿಗಿಂತ ದುರ್ಬಲವಾಗಿದ್ದವು. ಅದೃಷ್ಟ ಪರೀಕ್ಷೆಗೆ ಬೇಕೆಂದು ಏರ್ಪಾಟು ಮಾಡಲ್ಪಟ್ಟಂತೆ ಇದ್ದಿತು. ನಾವು ಜೂಜನ್ನು ಬಿಟ್ಟ ಕೂಡಲೆ, ಮೇಲಕ್ಕೆ ಎದ್ದ ಧೂಳು ಮೇಘಾಕಾರವಾಗಿ ಆಕಾಶವನ್ನು ಮುಚ್ಚಿತು. ಎಲ್ಲಾ ರಥಗಳೂ ನನಗಿಂತ ಮುಂಚೆ ನನ್ನ ಮುಂದುಗಡೆಯಲ್ಲಿ ಹೋದವು. ಗ್ರ್ಯಾಂಟರೆಂಬ ಲ್ಯಾಸಿಡಿಮೋನಿಯಾದ ನಿವಾಸಿಯು ನಮ್ಮೆಲ್ಲರನ್ನೂ ಹಿಂದಕ್ಕೆ ಹಾಕಿ ಮುಂದಾಳಾದನು. ಕ್ರೀಟ್ ದ್ವೀಪದ ನಿವಾಸಿಯಾದ ಪಾಲಿಕ್ಲೀಟಸ್ಸನು ಅವನ ಹಿಂದೆ ಸ್ವಲ್ಪ ದೂರದಲ್ಲಿದ್ದನು. ಇಡುಮಿಾನಿಯುಸ್ಸನ ಬಂಧುವಾದ ಹಿಪ್ಪೋಮೇಕಸ್ಸನು ಬಹಳ ಜೋರಾಗಿ ಕುದುರೆಗಳನ್ನು ಬಿಟ್ಟು, ಅವುಗಳ ಕತ್ತಿನ ಮೇಲಕ್ಕೆ ಬಗ್ಗಿ, ಅವುಗಳು ಜೋರಾಗಿ ಹೋಗುವುದಕ್ಕೆ ಪ್ರೋತ್ಸಾಹ ಮಾಡಿದನು. ಅವನ ರಥದ ಗಾಲಿಗಳು ಉರುಳುವುದೇ ಕಾಣ ತ್ತಿರಲಿಲ್ಲ. ಅಷ್ಟು ವೇಗವಾಗಿ ಅವನ ರಥವು ಹೋಗುತ್ತಿತ್ತು. ನನ್ನ ಕುದುರೆಗಳು ದುರ್ಬಲವಾದ್ದರಿಂದ, ನಾನು ನಿಧಾನವಾಗಿ ಅವುಗಳನ್ನು ಬಿಟ್ಟೆನು. ಎಲ್ಲರೂ ನನ್ನ ಮುಂದುಗಡೆಯಲ್ಲಿ ಬಹುದೂರದಲ್ಲಿ ಹೋಗುತಿದ್ದರು. ನಾನು ಎಲ್ಲರಿಗೂ ಹಿಂದುಗಡೆಯಲ್ಲಿ ಇದ್ದೆನು. ಹಿಪ್ಪೋಮೇಕಸ್ಸನ ಕುದುರೆಗಳು ದಣಿದು, ನೆಲಕ್ಕೆ ಬಿದ್ದವು. ಪಾಲಿಕ್ಲೀಟಸ್ಸನು ಅತ್ಯಂತ ಆತುರದಿಂದ ಕುದುರ ಮೇಲೆ ಬಗ್ಗಿಕೊಂಡಿದ್ದುದರಿಂದ, ಗಾಲಿಯು ಒಂದು ಸಣ್ಣ ಕಲ್ಲಿಗೆ ತಗುಲಿದ ಕೂಡಲೆ ಉಂಟಾದ ಸಂಘರ್ಷಣದಿಂದ ರಥದಿಂದ ಕೆಳಕ್ಕೆ ಬಿದ್ದನು. ಅವನು ಬದುಕಿದ್ದೇ ಹೆಚ್ಚಾಯಿತು ಗ್ರ್ಯಾಂಟರನು ತಾನೇ ಗೆಲ್ಲುವನೆಂದು ತಿಳಿದುಕೊಂಡು, ಬಹಳ ಜೋರಾಗಿ ಕುದುರಗಳನ್ನು ಬಿಟ್ಟುಕೊಂಡು ಹೋಗುತಿದ್ದನು. ಆದರೆ, ಅವನ ಕುದುರೆಗಳು ವಿಶೇಷವಾಗಿ ದಣಿದು ಇದ್ದವು. ಸ್ವಲ್ಪ ಹೊತ್ತಿನಲ್ಲಿಯೇ ಎಷ್ಟು ಹೊಡೆದಾಗ್ಯೂ, ಅವುಗಳು ಜೋರಾಗಿ ಹೋಗುವುದಕ್ಕೆ ಅಸಮರ್ಥಗಳಾದವು. ತನ್ನ ಕುದುರೆಗಳು ಹಠಾತ್ತಾಗಿ ದುರ್ಬಲವಾದದ್ದನ್ನು ನೋಡಿ, ತನ್ನ ರಥವು ಮುಂದಕ್ಕೆ ಹೋಗದಂತೆ ಅಡ್ಡಿ ಮಾಡಬೇಕೆಂದು ಎದುರಿಗೆ ಹೊಡೆಯುತ್ತಿದ್ದನು. ನನ್ನ ಕುದುರೆಗಳು ದಣಿದಿರಲಿಲ್ಲ. ಅನುಕೂಲವಾದ ಕಾಲವನ್ನು ನೋಡಿಕೊಂಡು, ಅವನು ಎದುರಿಗೆ ಬಂದಾಗ್ಯೂ, ನಾನು ಮುಂದಕ್ಕೆ ಹೋಗುವುದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಿದಾಗ್ಯೂ, ಒಳ್ಳೇ ಸಮಯವನ್ನು ನೋಡಿ, ಜೋರಾಗಿ ನನ್ನ ರಥವನ್ನು ಬಿಟ್ಟೆನು. ಅವನ ರಥಕ್ಕೆ ನನ್ನ ರಥವು ತಗುಲಿತು. ಅವನ ರಥವು ತಲಕೆಳಕಾಯಿತು. ನಾನು ಗೋಲನ್ನು ತಲಪಿದೆನು. ಯೂಲಿಸೆಸ್ಸನ ಮಗನಿಗೆ ವಿಜಯವಾಯಿತೆಂಬದಾಗಿಯೂ, ನಮ್ಮನ್ನು ಆಳುವುದಕ್ಕೆ ಇವನನ್ನೇ ಜಗದೀಶ್ವರನು ನಿಯಮಿಸಿರುವಂತೆ ತೋರುತ್ತದೆಂಬದಾಗಿಯೂ ಜನಗಳು ಘೋಷಮಾಡಿದರು.

ಈ ಜೂಜು ಮುಗಿದ ಕೂಡಲೇ, ಒಂದು ಉದ್ಯಾನವನದಲ್ಲಿ ಸೇರಿಸಲ್ಪಟ್ಟಿದ್ದ ಒಂದು ಮಹಾ ಸಭೆಗೆ ಬರಬೇಕೆಂದು ಆಜ್ಞೆಯಾಯಿತು. ಮೈನಾಸನ ಧರ್ಮಗಳಲ್ಲಿ ಪ್ರವೀಣರಾದ ಧರ್ಮಶಾಸ್ತ್ರಜ್ಞರು ಅಲ್ಲಿ ಸೇರಿದ್ದರು. ಮೇಲೆ ಹೇಳಿದ ವ್ಯಾಯಾಮರೂಪವಾದ ಪೋಟಾಪೋಟಿಗಳಿಗೆ ಸೇರಿದ್ದವರು ಮಾತ್ರ ಅಲ್ಲಿಗೆ ಬಿಡಲ್ಪಟ್ಟರು. ಅಲ್ಲಿಗೆ ನಾವೂ ಹೋದೆವು. ನಮ್ಮನ್ನು ಪರೀಕ್ಷೆ ಮಾಡುವುದಕ್ಕೆ ಅಲ್ಲಿ ಕುಳಿತಿದ್ದ ಸಕಲ ವಿದ್ಯಾವಿಶಾರದರಾದ ಧರ್ಮಶಾಸ್ತ್ರಜ್ಞರೆಲ್ಲರೂ ಬಹಳ ವೃದ್ಧರಾಗಿಯೂ, ತೇಜಸ್ವಿಗಳಾಗಿಯೂ ಇದ್ದರು. ಅವರನ್ನು ನೋಡಿದ ಕೂಡಲೇ, ಹೇಳಲಸದಳವಾದ ಭಕ್ತಿಯು ನನಗೆ ಹುಟ್ಟಿತು. ಭಕ್ತಿ ಪುರಸ್ಸರವಾಗಿ ಅವರಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿದೆನು. ಅವರ ಆಕೃತಿಗೆ ಸಮಾನವಾದ ದೇಹಶಕ್ತಿಯು ಅವರಿಗೆ ಇತ್ತು. ಅವರ ಗಾಂಭೀರ್ಯವು ಅವರ ವಿದ್ವತ್ತಿಗೆ ಸಮಾನವಾಗಿತ್ತು. ಎಲ್ಲರೂ ದೀರ್ಘವಾದ ಗಡ್ಡಗಳುಳ್ಳವರಾಗಿದ್ದರು. ಅವುಗಳಲ್ಲಿ ಒಂದು ಕರೀ ಕೂದಲೂ ಕೂಡ ಇರಲಿಲ್ಲ. ಅವರ ಹಣೆಯು ವಿಶಾಲವಾಗಿತ್ತು. ಮುಖವು ಚಂದ್ರಬಿಂಬದಂತೆ ಆಹ್ಲಾದಕರವಾಗಿತ್ತು. ಮೂಗು ಚಂಪಕದಂತೆಯೂ, ಕಿವಿಗಳು ಕಮಲಪತ್ರದಂತೆಯೂ ಇದ್ದವು. ಕಣ್ಣುಗಳಿಂದ ಮನೋಹರವಾದ ಚಂದ್ರಿಕೆಯು ಹೊರಡುತ್ತಿತ್ತು. ಅವರ ಬಾಯಿನಿಂದ ಬರತಕ್ಕ ಪ್ರತಿ ಒಂದು ಶಬ್ದವೂ ಪೂರ್ವಾಪರವಿಯಾಗಿಯೇ ಪರ್ಯಾಲೋಚಿಸಲ್ಪಟ್ಟ ವಿಷಯಗಳನ್ನು ಸ್ಪಷ್ಟವಾಗಿ ತಿಳಿಸುವುದಕ್ಕೆ ಹೇಗಿರಬೇಕೋ ಆ ಪ್ರಕಾರ ಇರುತ್ತಿತ್ತು. ಭಿನ್ನಾಭಿಪ್ರಾಯಗಳು ಬಂದಾಗ, ಅವರ ಸಂಭಾಷಣೆಯಲ್ಲಿ ಅವರ ಕೂಲಂಕಷವಾದ ಪ್ರಜ್ಞೆಯು ಗೊತ್ತಾಗುತ್ತಿತ್ತು. ಅವರ ವಾಕ್ಯಾರ್ಥಗಳನ್ನು ನೋಡಿದರೆ ಧ್ಯಾನಂಗರೂಪವಾದ ತಪಸ್ಸನ್ನು ಎಷ್ಟುಮಟ್ಟಿಗೆ ಮಾಡಿ, ಅವರು ಸಿದ್ಧಿಯನ್ನು ಹೊಂದಿದ್ದರೋ ಅದು ಗೊತ್ತಾಗುತ್ತಿತ್ತು. ಈ ಎಲ್ಲಾ ಗುಣಾತಿಶಯಗಳಿಗಿಂತಲೂ ಇವರಲ್ಲಿ ತೋರುತ್ತಿದ್ದ ಶಾಂತಿಯು ಪಸಿಫಿಕ್ ಸಾಗರದಂತೆ ಕಾಣುತ್ತಿತ್ತು. ಆತುರವೂ, ದುಡುಕೂ ಲೇಶವಾದರೂ ಇವರಲ್ಲಿ ಕಾಣಲಿಲ್ಲ. ವಿವೇಕನಿಧಿಗಳಿಗೆ ಇವರೇ ದೃಷ್ಟಾಂತವಾಗಿದ್ದರು. ದೇಹವನ್ನೂ, ಮನಸ್ಸನ್ನೂ ದಂಡಿಸಿ, ದೀರ್ಘವಾದ ತಪಸ್ಸಿನಿಂದ ಇಂದ್ರಿಯಗಳನ್ನೂ, ಬುದ್ಧಿಯನ್ನೂ ಹೇಗೆ ಹತೋಟಿಯಲ್ಲಿ ಇಟ್ಟುಕೊಳ್ಳಬೇಕೋ ಹಾಗೆ ಇಟ್ಟುಕೊಂಡಿದ್ದರು. ಜಿತೇಂದ್ರಿಯರೆಂಬ ಬಿರುದಿಗೆ ಇವರು ಅರ್ಹರಾಗಿದ್ದರು. ವಸಿಷ್ಠಾದಿ ಹಿಂದೂ ಮಹರ್ಷಿಗಳ ವೃತ್ತಾಂತವನ್ನು ನಾನು ಕೇಳಿ ಇದ್ದೆನು. ಅದಕ್ಕೆ ದೃಷ್ಟಾಂತವು ಈಗ ನನ್ನ ದೃಷ್ಟಿಪಥಕ್ಕೂ, ಬುದ್ಧಿಪಥಕ್ಕೂ ಬಿದ್ದವು. ಇವರನ್ನು ನೋಡಿದ ಕೂಡಲೇ, ವಿಲಕ್ಷಣವಾದ

ಆಶ್ಚರ್ಯದಿಂದಲೂ, ಆನಂದದಿಂದಲೂ ಪರವಶನಾದೆನು. ದೈವಾನುಗ್ರಹದಿಂದ ಈ ವಯಸ್ಸೂ, ಈ ಆರೋಗದೃಢಕಾಯತೆಯೂ, ವೈದುಷ್ಯವೂ, ಈ ಇಂದ್ರಿಯ ನಿಗ್ರಹ ಪ್ರಭಾವವೂ, ಈ ಅರಿಷಡ್ವರ್ಗಗಳ ವಿಜಯವೂ ಬಂದರೆ, ನಾನು ಧನ್ಯ ನಾಗುವೆನೆಂದು ತೋರಿತು. ಇವರ ಮನೋಭಾವದೊಡನೆ ನನ್ನ ಮನೋಭಾವ ವನ್ನು ಹೋಲಿಸಿಕೊಂಡೆನು. ದುರಾಶಾ ಪಿಶಾಚಗಳಿಂದ ಗ್ರಸ್ತನಾಗಿ, ವಿಷ ಯಾಸಕ್ತಿಯಿಂದ ಆಕರ್ಷಿಸಲ್ಪಟ್ಟ ಜಗದೀಶ್ವರನ ಅನುಗ್ರಹದಿಂದ ಅರಿಷಡ್ವ ರ್ಗಗಳಿಗೆ ಅಧೀನನಾಗದೆ ಇರುವುದು ಎಷ್ಟು ಕಷ್ಟವೋ ಅದನ್ನು ಸ್ಮರಿಸಿಕೊಂಡು, ಇವರ ಶಾಂತಿಯನ್ನು ನೋಡಿ, ಇವರು ಎಂಥಾ ಕೃತಾರ್ಥತೆಯನ್ನು ಹೊಂದಿದ್ದ ರೋ ಅಂತಹ ಕೃತಾರ್ಥತೆಯನ್ನು ಹೊಂದುವುದಕ್ಕೆ ಏನು ಮಾಡಬೇಕು ಎಂದು ಪರ್ಯಾಲೋಚಿಸುತ್ತಿದ್ದೆನು.

"ಇವರಲ್ಲಿ ಮುಖಂಡನಾಗಿಯೂ, ಅಗ್ರಾಸನಾಧಿಪತಿಯಾಗಿಯೂ ಇದ್ದ ತಪಸ್ವಿಯೊಬ್ಬನು ಚಿನ್ನದ ಪೆಟ್ಟಿಗೆಯಲ್ಲಿ ಇಟ್ಟಿದ್ದ ಮೈನಾಸ್ ಧರ್ಮಶಾಸ್ತ್ರ ವನ್ನು ಹೊರಗೆ ತೆಗೆದನು. ಕೂಡಲೇ ಪರೀಕ್ಷೆಯನ್ನು ಮಾಡುವುದಕ್ಕೆ ಬಂದಿದ್ದ ಅಲ್ಲಿದ್ದ ಮಹರ್ಷಿಗಳೆಲ್ಲರೂ ಆ ಗ್ರಂಥದ ವಿಷಯದಲ್ಲಿ ತಮಗಿರುವ ಭಕ್ತಿ ಯನ್ನು ಪ್ರಣಾಮಪೂರ್ವವಾಗಿ ತೋರಿಸಿದರು. ವಿವೇಕಕ್ಕೂ, ಧರ್ಮಕ್ಕೂ ಸದಿಷ್ಟಾರ್ಥಸಿದ್ಧಿಗೂ ಮೂಲಕಾರಣಗಳು ಕಾಲತ್ರಯಗಳಲ್ಲಿಯೂ ಎಲ್ಲಾ ದೇಶ ಗಳಲ್ಲಿಯೂ ಒಂದೇ ರೀತಿಯಾಗಿ, ಬದಲಾಯಿಸದೇ ಇರುವ ಧರ್ಮಗಳು. ಈ ಧರ್ಮಗಳಿಗೆ ಈ ಮಹರ್ಷಿಗಳು ನಿಧಿಗಳು. ಏನೋ ಒಂದು ವಿಧವಾದ ಪುಣ್ಯಪರಿಪಾಕದಿಂದ ಇವರ ದರ್ಶನ ಲಾಭವು ನನಗೆ ದೊರೆಯಿತು" ಎಂದು ನಾನು ಪರ್ಯಾಲೋಚಿಸುತ್ತಿದ್ದೆನು.

ಆಗ ಪರೀಕ್ಷೆಗೆ ಉಪಕ್ರಮವಾಯಿತು. ಮೊದಲನೆಯ ಪ್ರಶ್ನೆಯು ಹಾಕಲ್ಪ ಟ್ಟಿತು. ಲೋಕದಲ್ಲಿ ಯಾರು ಸ್ವತಂತ್ರರು? ಎಂಬುದೇ ಆ ಪ್ರಶ್ನೆಯಾಗಿತ್ತು. ಈ ಪ್ರಶ್ನೆಯು ಹಾಕಲ್ಪಟ್ಟ ಕೂಡಲೆ, ಇದಕ್ಕೆ ಒಬ್ಬೊಬ್ಬರು ಒಂದೊಂದು ವಿಧ ವಾಗಿ ಉತ್ತರವನ್ನು ಕೊಟ್ಟರು. ಯಾವ ಪ್ರಭುವಿಗೆ ಅವನ ಪ್ರಜೆಗಳ ಮೇಲೆ ನಿರಂಕುಶವಾದ ಅಧಿಕಾರವು ಇರುವುದೋ, ಯಾವನು ಶತ್ರುಗಳನ್ನೆಲ್ಲಾ ಜಯಿಸಿ, ಪ್ರತಿಕಕ್ಷಿಗಳ್ಯಾರೂ ಇಲ್ಲದಂತೆ ಮಾಡಿಕೊಂಡಿರುವನೋ, ಅವನು ಸ್ವತಂತ್ರ ನೆಂದು ಒಬ್ಬನು ಹೇಳಿದನು. ಯಾರು ಕುಬೇರನಂತೆ ಸಕಲ ಸಂಪತ್ತುಗಳನ್ನು ಹೊಂದಿರುವನೋ, ಯಾರ ಇಷ್ಟಾರ್ಥಗಳು ಅಪೇಕ್ಷಿಸಲ್ಪಟ್ಟ ಕೂಡಲೇ ಹಸ್ತಗ ತವಾಗುವುವೋ, ಅವನು ಸ್ವತಂತ್ರನೆಂದು ಮತ್ತೊಬ್ಬನು ಹೇಳಿದನು. ಯಾವನು ವಿವಾಹ ಬಂಧವಿಲ್ಲದೆ, ಸ್ವೇಚ್ಛಾಪ್ರವರ್ತಕನಾಗಿರುವನೋ, ದೇಶಾಟನವನ್ನು

ಮಾಡುತ್ತಾ, ಬೇಕಾದ ವಿಷಯಸುಖಗಳಲ್ಲಿ ಮುಳುಗಿ ತೇಲುತ್ತಾ ಇರುವನೋ, ಅವನು ಸ್ವತಂತ್ರನೆಂದು ಇನ್ನೊಬ್ಬನು ಹೇಳಿದನು. ಬಂಧವಿಮೋಚನವನ್ನು ಹೊಂದಿದ ದಾಸನು ಸ್ವತಂತ್ರನೆಂದು ಮತ್ತೊಬ್ಬನು ಹೇಳಿದನು. ಸಕಲ ಬಂಧ ವಿಮೋಚನೆಯೂ ಮರಣದಿಂದ ಉಂಟಾಗುವುದೆಂಬದಾಗಿಯೂ, ದೇಹವನ್ನು ಬಿಟ್ಟವನೇ ಸ್ವತಂತ್ರನೆಂಬದಾಗಿಯೂ ಮತ್ತೊಬ್ಬನು ಹೇಳಿದನು. ಹೀಗೆ ಅನೇಕರು ಅನೇಕ ವಿಧವಾದ ಉತ್ತರಗಳನ್ನು ಕೊಟ್ಟರು. ಆಖೈರಿನಲ್ಲಿ ನನ್ನ ಸರದಿಯು ಬಂದಿತು. ನಾನು ಹೇಳಿದ್ದೇನೆಂದರೆ :—

"ಯಾರು ದುರ್ವಿಷಯಸುಖಾಪೇಕ್ಷೆಯಿಂದ ಬದ್ಧರಾಗಿರುವುದಿಲ್ಲವೋ, ಯಾರು ಅರಿಷಡ್ವರ್ಗಗಳಿಗೆ ಅಧೀನರಾಗಿರುವುದಿಲ್ಲವೋ, ಯಾರು ಕಾರಾಗೃಹಗಳಲ್ಲಿಯೂ ಕೂಡ ತಪೋವನದಲ್ಲಿ ಹೇಗೋ ಹಾಗೆ ಸುಖವಾಗಿರಬಲ್ಲರೋ, ಯಾರು ಮನೋವಾಕ್ಕರ್ಮಗಳಲ್ಲಿ ಪರಿಶುದ್ಧರಾಗಿರುವರೋ, ಯಾರು ಪರಿಣಾಮ ಫಲಗಳನ್ನು ಪರ್ಯಾಲೋಚಿಸಿ ಧರ್ಮಗಳನ್ನು ಉಲ್ಲಂಘಿಸದೆ ಕೆಲಸ ಮಾಡುವರೋ, ಯಾರು ಆಸ್ತಿಕರಾಗಿರುವರೋ, ಯಾರಲ್ಲಿ ನಾಸ್ತಿಕ ಬುದ್ಧಿಯು ಇರುವುದಿಲ್ಲವೋ, ಭಯಕ್ಕೂ ಆಸೆಗೂ, ಅಧಿಕಾರಕ್ಕೂ ಅಧೀನನಾಗದೆ ಮನಸ್ಸಾಕ್ಷಿಗನುಸಾರವಾಗಿ ಕೆಲಸ ಮಾಡುವುದು ಯಾರಿಗೆ ಅಭ್ಯಾಸವಾಗಿರುವುದೋ, ಯಾವ ದುರಾಶಾಪಾಶಗಳಿಂದಲೂ ಯಾರು ಬದ್ಧರಾಗಿರುವುದಿಲ್ಲವೋ, ಸಕಲ ವಿಷಯಗಳಲ್ಲಿಯೂ ನಿರ್ಲಿಪ್ತರಾಗಿರುವರೋ ಅವರು ಸ್ವತಂತ್ರರೆಂಬದಾಗಿಯೂ, ಉಳಿದವರೆಲ್ಲಾ ಪರತಂತ್ರರೆಂಬದಾಗಿಯೂ ನಾನು ಹೇಳಿದೆನು."

ಈ ಮಹರ್ಷಿಗಳೆಲ್ಲರೂ ಮಂದಹಾಸಪೂರ್ವಕವಾಗಿ ಒಬ್ಬರ ಮುಖವನ್ನು ಇನ್ನೊಬ್ಬರು ನೋಡಿ, ನಾನು ಹೇಳಿದ್ದನ್ನು ವ್ಯಾಸಾಸನ ಧರ್ಮಶಾಸ್ತ್ರ ವಿಧಿಗಳೊಡನೆ ಹೋಲಿಸಿಕೊಂಡರು. ಈ ಉತ್ತರವು ಸಮರ್ಪಕವಾಗಿರುವುದೆಂದು ಅವರು ನನಗೆ ಅಪ್ಪಣೆ ಕೊಡಿಸಿದರು.

ಅನಂತರ ಎರಡನೇ ಪ್ರಶ್ನೆಯು ಕೇಳಲ್ಪಟ್ಟಿತು. ಲೋಕದಲ್ಲಿ ನಿರ್ಭಾಗ್ಯರು ಯಾರು ? ಯಾರಿಗೆ ಇಹಪರಸೌಖ್ಯಗಳೆರಡೂ ದೊರೆಯುವುದಿಲ್ಲ? ಎಂಬುವುದೇ ಈ ಪ್ರಶ್ನೆಯಾಗಿತ್ತು. ಇದಕ್ಕೆ ಒಬ್ಬೊಬ್ಬರು ಒಂದೊಂದು ವಿಧವಾಗಿ ಉತ್ತರವನ್ನು ಕೊಟ್ಟರು. ದ್ರವ್ಯ, ಆರೋಗ್ಯ, ಕೀರ್ತಿ, ಇವುಗಳಲ್ಲಿ ಯಾವುದೂ ಯಾರಿಗೆ ಇರುವುದಿಲ್ಲವೋ ಅವನೇ ನಿರ್ಭಾಗ್ಯನೆಂದು ಒಬ್ಬನು ಹೇಳಿದನು. ಕಷ್ಟ ಕಾಲಕ್ಕೆ ಒದಗತಕ್ಕ ಸ್ನೇಹಿತನಿಲ್ಲದವನು ನಿರ್ಭಾಗ್ಯನೆಂದು ಮತ್ತೊಬ್ಬನು ಹೇಳಿದನು. ಅಯೋಗ್ಯರಾಗಿಯೂ, ಕೃತಘ್ನರಾಗಿಯೂ ಇರತಕ್ಕ ಪುತ್ರಮಿತ್ರಕಳತ್ರಾದಿಗಳನ್ನು ಪಡೆದಿರತಕ್ಕವನು ನಿರ್ಭಾಗ್ಯನೆಂದು ಮತ್ತೆ ಕೆಲವರು ಹೇಳಿದರು. ತಾನು ನಿರ್ಭಾ-

ಗ್ಯನೆಂದು ಯಾವನು ತಿಳಿದುಕೊಳ್ಳುತ್ತಾನೋ ಅವನು ನಿರ್ಭಾಗ್ಯನೆಂದು ಲೆಸ್‌ಬಾಸ್ ಪಟ್ಟಣದ ನಿವಾಸಿಗಳಲ್ಲಿ ವಿವೇಕಿಯಾದವನೊಬ್ಬನು ಹೇಳಿದನು. ಭಾಗ್ಯವೂ, ನಿರ್ಭಾಗ್ಯವೂ ಮನೋವೃತ್ತಿಗಳಿಂದ ಬರತಕ್ಕವುಗಳಾದುದರಿಂದ, ತಾನು ಭಾಗ್ಯಶಾಲಿಯೆಂದು ತಿಳಿದುಕೊಂಡವನು ನಿರ್ಭಾಗ್ಯನಾಗುವುದಿಲ್ಲ. ನಿರ್ಭಾಗ್ಯನೆಂದು ತಿಳಿದುಕೊಂಡವನು ಭಾಗ್ಯಶಾಲಿಯಾಗುವುದಿಲ್ಲ ಎಂಬದಾಗಿ ಇವನು ನಿರೂಪಿಸಿದನು. ಈ ಮಾತನ್ನು ಕೇಳಿ, ಅನೇಕರು ಚಪ್ಪಾಳೆಯನ್ನು ತಟ್ಟಿದರು. ಇವನು ಹೇಳಿದ್ದೇ ತತ್ವವೆಂದು ಅನೇಕರು ತಿಳಿದುಕೊಂಡರು. ಅನಂತರ ನನ್ನ ಸರದಿಯು ಬಂದಿತು. ಕೆಲವು ನಿಮಿಷಗಳು ಪರ್ಯಾಲೋಚಿಸಿ, ನಾನು ಹೇಳಿದ್ದೇನೆಂದರೆ:—

“ಪ್ರಜೆಗಳನ್ನು ನಿರ್ಭಾಗ್ಯರನ್ನಾಗಿ ಮಾಡಿ, ತನ್ಮೂಲಕ ತಾನು ಭಾಗ್ಯವಂತನಾಗಬೇಕೆಂದು ಪ್ರಯತ್ನ ಮಾಡುವ ಪ್ರಭುವೇ ಲೋಕದಲ್ಲಿ ಹುಟ್ಟಿದ ಜನಗಳೆಲ್ಲಾ ಅತ್ಯಂತ ನಿರ್ಭಾಗ್ಯನು. ಇವನ ಅಜ್ಞಾನದಿಂದ ಇವನ ಭಾಗ್ಯವಿಹೀನತೆಯು ದ್ವಿಗುಣವಾಗುವುದು. ಭಾಗ್ಯವಿಹೀನತೆಯು ಹೇಗೆ ಉತ್ಪನ್ನವಾಗುವುದೋ ಅದು ಗೊತ್ತಾದ ಹೊರತು, ಅದಕ್ಕೆ ಚಿಕಿತ್ಸೆಯನ್ನು ಮಾಡುವುದು ಅಸಾಧ್ಯ. ವಾಸ್ತವಾಂಶವು ಪ್ರಭುತ್ವ ಮಾಡತಕ್ಕವರಿಗೆ ಗೊತ್ತಾಗುವುದು ಕಷ್ಟ. ಉದರನಿಮಿತ್ತವಾಗಿ ಸ್ತೋತ್ರಮಾಡುವುದರಲ್ಲಿ ದಕ್ಷರಾದವರು ಅವರನ್ನು ಆವರಿಸಿಕೊಂಡಿರುವರು. ನಿಜಾಂಶವು ಅವರಿಗೆ ಗೊತ್ತಾಗದಂತೆ ಅವರು ಮಾಡುವರು. ಸ್ತುತಿಪಾಠಕರ ಪಾಶಕ್ಕೆ ಸಿಕ್ಕಿದವರು ಆ ಪಾಶವನ್ನು ತಪ್ಪಿಸಿಕೊಳ್ಳುವುದೇ ಅಪೂರ್ವ. ಅವರ ಕರ್ತವ್ಯವನ್ನು ಮಾಡುವುದಕ್ಕೆ ಅವರು ಅನರ್ಹರಾಗುವರು. ಪರೋಪಕಾರದಿಂದ ಉಂಟಾಗತಕ್ಕ ಸುಖದ ಮಹಿಮೆಯು ಅವನಿಗೆ ಎಂದಿಗೂ ಗೊತ್ತಾಗುವುದಿಲ್ಲ. ಸತ್ಯಸಂಧತೆಯ ಮಹಿಮೆಯೂ ಕೂಡ ಅವನಿಗೆ ತಿಳಿಯುವುದಿಲ್ಲ. ಅವನ ನಿರ್ಭಾಗ್ಯತೆಗೆ ಅವನೇ ಕಾರಣಭೂತನಾಗುವನು. ಅವನ ಕ್ಲೇಶವು ದಿನೇ ದಿನೇ ಹೆಚ್ಚುವುದು. ಉನ್ನತಿಯು ಇವನಿಗೆ ಪತನಹೇತುವಾಗುವುದು. ಅಂತವಿಲ್ಲದ ಅಪಾರವಾದ ಕ್ಲೇಶಕ್ಕೆ ಅವನು ಗುರಿಯಾಗುವನು. ಪ್ರಜೆಗಳ ಮೆಹನತ್ತಿನಿಂದ ಬಂದ ದ್ರವ್ಯವನ್ನು ಕಂದಾಯ ರೂಪವಾಗಿ ಪರಿಗ್ರಹಿಸಿದ ಮೇಲೆ, ಯಾರ ಮೆಹನತ್ತಿನ ಫಲವು ತನಗೆ ದೊರೆಯುವುದೋ, ಅವರ ಪ್ರಾಣರಕ್ಷಣೆಯನ್ನೂ, ಧನರಕ್ಷಣೆಯನ್ನೂ, ಮಾನರಕ್ಷಣೆಯನ್ನೂ ಮಾಡುವುದು ಪ್ರಭುವಿಗೆ ಮುಖ್ಯ ಕರ್ತವ್ಯ. ಈ ಕರ್ತವ್ಯವನ್ನು ನೆರವೇರಿಸುವುದು ಸುಲಭವಲ್ಲ. ಕುಟುಂಬದ ಯಜಮಾನನು ಕುಟುಂಬಕ್ಕೆ ಸೇರಿದ ಜನಗಳನ್ನು ಉದ್ಧರಿಸುವುದೇ ಕಷ್ಟವಾಗುತ್ತದೆ. ಕುಟುಂಬದಲ್ಲಿ ನಾಲ್ಕೈದು ಜನಗಳ ಮೊದಲ್ಗೊಂಡು ೮-೧೦ ಜನಗಳವರೆಗೂ ಇರುವುದುಂಟು. ಪ್ರಭುಗಳು ದೊಡ್ಡ ಕುಟುಂಬಿಗಳು. ಪ್ರಜೆ

ಗಳೆಲ್ಲಾ ಇವರ ಮಕ್ಕಳಾದುದರಿಂದ, ಇವರ ಕುಟುಂಬಗಳಲ್ಲಿ ಲಕ್ಷಾಂತರ ಜನ ಗಳಿರುವರು. ಅವರೆಲ್ಲರೂ ಸನ್ಮಾರ್ಗಪ್ರವರ್ತಕರಾಗುವಂತೆಯೂ, ದುರ್ಮಾರ್ಗಪ್ರವರ್ತಕರಾಗದಂತೆಯೂ, ಆತ್ಮಾವಲಂಬಿಗಳಾಗುವಂತೆಯೂ, ಪರಾಧೀನರಾಗದಂತೆಯೂ, ಪರೋಪಕಾರಿಗಳಾಗುವಂತೆಯೂ, ಪರಪೀಡನದಲ್ಲಿ ಆಸಕ್ತರಾಗದಂತೆಯೂ, ಲೋಕಹಿತೈಷಿಗಳಾಗುವಂತೆಯೂ, ಲೋಕಕಂಟಕರಾಗದಂತೆಯೂ, ದೇವತೆಗಳಲ್ಲಿಯೂ, ಸಜ್ಜನರಲ್ಲಿಯೂ ಭಕ್ತಿಯುಳ್ಳವರಾಗುವಂತೆಯೂ, ನಾಸ್ತಿಕಶಿಖಾಮಣಿಗಳಾಗದಂತೆಯೂ, ಉದ್ಯೋಗಿಗಳಾಗುವಂತೆಯೂ, ನಿರುದ್ಯೋಗಿಗಳಾಗದಂತೆಯೂ ನೋಡಿಕೊಳ್ಳುವುದು ಪ್ರಭುವಿಗೆ ಮುಖ್ಯ ಕರ್ತವ್ಯ. ಎಷ್ಟು ಕಷ್ಟವಾದಾಗ್ಯೂ, ತದೇಕಾಯತ್ತಚಿತ್ತನಾಗಿ ಯಾರು ಸಕಲ ಪ್ರಜೆಗಳನ್ನೂ ಧರ್ಮಮಾರ್ಗೈಕಪರಾಯಣರನ್ನಾಗಿ ಮಾಡಿಕೊಳ್ಳುವನೋ ಅವನೇ ಭಾಗ್ಯವಂತನು. ಅವನಿಗೆ ಈ ಲೋಕವೂ, ಲೋಕಾಂತರವೂ ಎರಡೂ ಸ್ವರ್ಗವಾಗಿ ಪರಿಣಮಿಸುವುವು.'' ಈ ರೀತಿಯಲ್ಲಿ ನಾನು ಹೇಳಿದೆನು.

ಈ ಮಹರ್ಷಿಗಳೂ ಸ್ವಲ್ಪ ಹೊತ್ತು ಪರ್ಯಾಲೋಚಿಸಿದರು. ವೈನಾಸನ ಧರ್ಮಶಾಸ್ತ್ರ ಪುಸ್ತಕಗಳನ್ನು ತೆಗೆದು ನೋಡಿದರು ನಾನು ಹೇಳಿದ್ದೇ ಅವನ ಧರ್ಮಶಾಸ್ತ್ರವಾಗಿತ್ತು. ಈ ಪ್ರಶ್ನೆಗೂ ಸರಿಯಾದ ಉತ್ತರ ಬಂತೆಂದು ಅವರು ಅಪ್ಪಣೆ ಕೊಡಿಸಿದರು.

ಮೂರನೆಯ ಪ್ರಶ್ನೆಯು ಹಾಕಲ್ಪಟ್ಟಿತು. ಯುದ್ಧದಲ್ಲಿ ಅಜೇಯನಾದ ದೊರೆಯು ಉತ್ತಮನೇ? ಅಥವಾ ರಾಜ್ಯಭಾರವನ್ನು ಸಮಾಧಾನ ಕಾಲದಲ್ಲಿ ವಿಶೇಷ ವಿತರಣೆಯಿಂದ ಮಾಡತಕ್ಕವನು ಉತ್ತಮನೇ? ಎಂಬುವುದೇ ಮೂರನೆಯ ಪ್ರಶ್ನೆಯಾಗಿತ್ತು. ಯುದ್ಧದಲ್ಲಿ ಅಜೇಯನಾದವನೇ ಉತ್ತಮನೆಂದು ಕೆಲವರು ಹೇಳಿದರು. ಸಮಾಧಾನ ಕಾಲದಲ್ಲಿ ವಿವೇಕದಿಂದ ರಾಜ್ಯಭಾರ ಮಾಡುವುದು ಅಪೇಕ್ಷಣೀಯವಾದಾಗ್ಯೂ, ಯುದ್ಧವು ಸನ್ನಿಹಿತವಾದಾಗ, ಶತ್ರುಗಳನ್ನು ಜಯಿಸುವುದಕ್ಕೆ ಶಕ್ತಿಯಿಲ್ಲದವನು ಪ್ರಭುವಾಗಿದ್ದರೆ, ರಾಜ್ಯಭಾರ ಮಾಡುವುದರಲ್ಲಿ ಇರುವ ಶಕ್ತಿಯು ನಿಷ್ಪ್ರಯೋಜನವಾಗುವುದೆಂಬದಾಗಿಯೂ ಅವರು ಹೇಳಿದರು. ಶಾಂತಿಯುಳ್ಳ ದೊರೆಯೇ ಉತ್ತಮನೆಂದು ಕೆಲವರು ಹೇಳಿದರು. ಶಾಂತಿಯುಳ್ಳವರು ಯುದ್ಧವು ಬರುವುದಕ್ಕೆ ಅವಕಾಶವಿಲ್ಲದಂತೆ ಮಾಡುವರೆಂಬದಾಗಿಯೂ, ಯುದ್ಧದಲ್ಲಿ ಆಸಕ್ತರಾದವರು ಹೆಸರುವಾಸಿಯನ್ನು ಸಂಪಾದಿಸುವುದಕ್ಕೋಸ್ಕರ ಬಹು ಜನಗಳನ್ನು ಕೊಲ್ಲುವರೆಂಬದಾಗಿಯೂ, ಪಾಪಕ್ಕೆ ಗುರಿಯಾಗುವರೆಂಬದಾಗಿಯೂ, ಶಾಂತಿಯುಳ್ಳ ಪ್ರಭುವಿಗೆ ಇಂಥಾ ಪಾಪವು ಸಂಘಟನೆಯಾಗುವುದಿಲ್ಲವೆಂಬದಾಗಿಯೂ, ಯುದ್ಧವು ಸಂಭವಿಸದಂತೆ ಸತ್ಯದಿಂದಲೂ, ಧರ್ಮ

ದಿಂದಲೂ ರಾಜ್ಯಭಾರ ಮಾಡತಕ್ಕವನೇ ಶ್ರೇಷ್ಠನೆಂಬದಾಗಿಯೂ ಮತ್ತೆ ಕೆಲವರು ಹೇಳಿದರು. ಕೊನೆಗೆ ನನ್ನ ಸರದಿಯು ಬಂದಿತು. ನಾನು ಹೇಳಿದ್ದೇನೆಂದರೆ :—

“ ಸಮಾಧಾನದ ಕಾಲದಲ್ಲಿ ಚನ್ನಾಗಿ ರಾಜ್ಯಭಾರ ಮಾಡುವುದೂ, ಯುದ್ಧ ಬಂದರೆ, ಧೈರ್ಯದಿಂದ ಶತ್ರುಗಳನ್ನು ನಿಗ್ರಹಿಸುವುದೂ ಇವೆರಡು ಗುಣಗಳೂ ಯಾರಿಗಿರುತ್ತವೋ ಅವನು ಪೂರ್ಣ ಪ್ರಭುವು. ಒಂದೇ ಗುಣವಿದ್ದರೆ, ಅವನು ಅಧರ್ಮಪ್ರಭುವು. ಬರೀ ಯುದ್ಧದಲ್ಲಿ ಶೂರನಾಗಿದ್ದರೆ, ಅವನು ಪ್ರಭುವಾಗುವುದಕ್ಕೆ ತಕ್ಕ ಅರ್ಹತೆಯುಳ್ಳವನಾಗುವುದಿಲ್ಲ. ಸಮಾಧಾನ ಕಾಲದಲ್ಲಿ ಚನ್ನಾಗಿ ರಾಜ್ಯಭಾರ ಮಾಡುವುದು ಒಂದು ಮಾತ್ರ ತಿಳಿದಿದ್ದರೆ, ಯುದ್ಧ ಸಂಘಟನೆಯಾದಾಗ ಪರಾಜಿತನಾಗುವ ಸಂಭವವು ಬರುವುದು. ಈ ಎರಡು ಶಕ್ತಿಗಳೂ ಯಾರಿಗಿರುವುವೋ ಅವನು ಪ್ರಭುತ್ವಕ್ಕೆ ಅರ್ಹನಾಗುವನು. ಇವೆರಡು ಗುಣಾತಿಶಯಗಳೂ ಒಬ್ಬನಲ್ಲಿ ಇದ್ದರೆ, ಸಮಾಧಾನದ ಕಾಲದಲ್ಲಿ ಸತ್ಯದಿಂದಲೂ, ಧರ್ಮದಿಂದಲೂ, ನಿಷ್ಪಕ್ಷಪಾತತೆಯಿಂದಲೂ ಯುದ್ಧಮಾಡುವ ಶಕ್ತಿಯು ಅವನಿಗೆ ಲಭ್ಯವಾಗುವುದು. ಪ್ರಭುಶಕ್ತಿಯುಳ್ಳವನು ತಾನೇ ಯುದ್ಧಕ್ಕೆ ಹೋಗತಕ್ಕ ಆವಶ್ಯಕವಿಲ್ಲ. ಸಮರ್ಥರಾದ ಯೋಧರನ್ನು ನಿಯಮಿಸಿ, ಅವರಿಂದ ಜಯವುಂಟಾಗುವಂತೆ ಮಾಡಿಕೊಳ್ಳುವುದು ಸಾಧ್ಯ. ಯುದ್ಧದಲ್ಲಿ ವಿಶೇಷ ಆಸಕ್ತಿಯುಳ್ಳವನು ಪ್ರಭುವಾಗಿದ್ದರೆ, ಯಾವಾಗ್ಯೂ ಶತ್ರುಗಳನ್ನು ನಿಗ್ರಹಿಸಿ, ಹೊಸ ದೇಶಗಳನ್ನೂ, ಕೀರ್ತಿಯನ್ನೂ ಸಂಪಾದಿಸಬೇಕೆಂಬ ದುರಾಸೆಯು ಅವನಿಗೆ ಹೆಚ್ಚಾಗಿ ಉಂಟಾಗುವುದು. ಸಮಾಧಾನದ ಕಾಲದಲ್ಲಿ ಶಾಂತಿಯಿಂದ ರಾಜ್ಯಭಾರ ಮಾಡಿ, ಎಲ್ಲರನ್ನೂ ಸುಖವಾಗಿಟ್ಟುಕೊಂಡು, ತಾನೂ ಸುಖವಾಗಿರಬೇಕೆಂಬ ಪ್ರಭುವು ಹೀಗೆ ಪ್ರವರ್ತಿಸುವುದಿಲ್ಲ. ಯುದ್ಧಾಸಕ್ತಿಯು ಬಹಳ ಅನರ್ಥಕ್ಕೆ ಅವಕಾಶ ಉಂಟುಮಾಡುವುದು. ಅನೇಕ ಸಂದರ್ಭಗಳಲ್ಲಿ ಜಯವು ಪರಾಜಯಕ್ಕಿಂತಲೂ ಅನರ್ಥಕಾರಿಯಾಗುವುದು. ಕಕ್ಷಿಗಾರರು ಒಬ್ಬರನ್ನು ಒಬ್ಬರು ಮೂಲೋತ್ಪಾಟನ ಮಾಡಬೇಕೆಂದು ಕೋರ್ಟುಗಳಿಗೆ ಹೋಗಿ ಗುದ್ದಾಡುವರು. ಸುಳ್ಳು, ತಟವಟ ಮೊದಲಾದವುಗಳಿಂದ ಗೆಲ್ಲುವ ಪ್ರಯತ್ನವನ್ನು ಮಾಡುವರು. ರುಜುಮಾರ್ಗವನ್ನು ಬಿಟ್ಟು, ಗೆಲ್ಲುವುದಕ್ಕೋಸ್ಕರ ಪ್ರವರ್ತಿಸಿ, ಗೆದ್ದವರೂ ಕೂಡ ಸೋತವರಂತೆ ಸಂಕಟ ಪಡುವರು. ಸೋತವರು ಸತ್ತಂತೆ ಸಂಕಟ ಪಡುವರು. ಹಾಗೆಯೇ ಯುದ್ಧದಲ್ಲಿ ಆಸಕ್ತರಾದ ಪ್ರಭುಗಳ ಗತಿಯು ಹೀಗೆ ಆಗುವುದು. ಆದುದರಿಂದ ಪ್ರಭುಗಳು ಸ್ವಯಂ ಯುದ್ಧದಲ್ಲಿ ಆಸಕ್ತರಾಗುವುದು ಒಳ್ಳೆಯದಲ್ಲ. ಯುದ್ಧವು ಸಂಭವಿಸಿದಾಗ, ಪರಾಕ್ರಮಶಾಲಿಗಳಾದ

ವರನ್ನು ನಿಯಮಿಸಿ, ಶತ್ರುನಿಗ್ರಹವನ್ನು ಮಾಡಿ, ಯುದ್ಧವು ಪೂರೈಸಿ ಸಮಾಧಾನವಾದ ಮೇಲೆ ಜನಗಳಿಗೆ ನೆಮ್ಮದಿಯುಂಟಾಗುವಂತೆ ರಾಜ್ಯಭಾರ ಮಾಡತಕ್ಕ ಶಕ್ತಿಯುಳ್ಳವರು ಪ್ರಭುಗಳಾಗಿರುವುದು ಮೇಲು. ಯುದ್ಧದಲ್ಲಿ ಜಯಶೀಲನಾಗಿ, ಕೀರ್ತಿಯನ್ನು ಪಡೆಯಬೇಕೆಂಬ ಆಶಾಪಿಶಾಚವು ಜನಗಳನ್ನು ಹಿಡಿದರೆ, ಯಾವ ಅನರ್ಥ ತಾನೆ ಆಗುವುದಿಲ್ಲ? ಈ ಆಸೆಗೆ ಎಷ್ಟು ಜನಗಳು ಬಲಿಯಾಗುವುದಿಲ್ಲ? ಇದರಿಂದ ಎಷ್ಟು ಜನ ಸ್ತ್ರೀಯರು ವಿತಂತುಗಳಾಗುವುದಿಲ್ಲ? ಇದರಿಂದ ಎಷ್ಟು ಜನಗಳು ಅನಾಥರಾಗುವುದಿಲ್ಲ? ಈ ದುರಾಸೆಯಿಂದ ಸಂಪದಭಿವೃದ್ಧಿಯ ಕೆಲಸಗಳು ಎಷ್ಟು ನಿಲ್ಲುವುದಿಲ್ಲ? ಭೋಗ್ಯವಸ್ತುಗಳನ್ನು ನಿರ್ಮಾಣ ಮಾಡತಕ್ಕವರೆಲ್ಲರೂ ಒಬ್ಬರನ್ನು ಒಬ್ಬರು ಕೊಲ್ಲುವುದಕ್ಕೆ ಸಾಧಕವಾದ ಮದ್ದು, ಗುಂಡು, ಪಿರಂಗಿ, ಬಾಂಬು, ಶಸ್ತ್ರಾಸ್ತ್ರಗಳು ಇವುಗಳನ್ನು ನಿರ್ಮಾಣ ಮಾಡುವುದರಲ್ಲಿ ಎಷ್ಟು ಆಸಕ್ತಿಯನ್ನು ತೋರಿಸುವರೋ, ಕೃಷಿ, ಕೈಗಾರಿಕೆ, ವಾಣಿಜ್ಯಗಳು ಹೇಗೆ ಅಷ್ಟು ಹೀನಸ್ಥಿತಿಗೆ ಬರುವುವು? ದವಸಧಾನ್ಯಗಳ ಉತ್ಪತ್ತಿಯು ಹೇಗೆ ಕಡಮೆಯಾಗುವುವು? ಧಾರಣವಾಸಿಗಳು ಹೇಗೆ ಜಡಾವಾಗುವುವು? ಯುದ್ಧದಿಂದ ಸಾಯತಕ್ಕವರ ಜೊತೆಗೆ ಅನ್ನೋದಕಗಳಿಗೆ ಅಭಾವ ಉಂಟಾಗಿ, ಎಷ್ಟು ಜನಗಳು ಸಾಯುವರು? ಪ್ಲೇಗ್, ಕಾಲರ ಮೊಲಾದ ರೋಗಗಗಳಿಗಿಂತಲೂ ಯುದ್ಧಾಪೇಕ್ಷೆಯು ಎಷ್ಟು ಬಲವಾದದ್ದು? ಹೊನ್ನು, ಹೆಣ್ಣು, ಮಣ್ಣುಗಳ ಆಸೆಯಿಂದ ಎಷ್ಟು ಜನಗಳು ಮಹಾಮಾರಿಗಳಾಗಿ ಪರಿಣಮಿಸುವುದಿಲ್ಲ? ಈ ಮಹಾಮಾರಿಯ ದೆಸೆಯಿಂದ ಎಷ್ಟು ದಿಗ್ಬಲಿಗಳಾಗಿರುವುದಿಲ್ಲ! ಈ ಯುದ್ಧಗಳಲ್ಲಿ ಸುರಿದ ರಕ್ತವನ್ನು ಕೂಡಿಹಾಕಿದರೆ, ಯೂಫ್ರಟೀಸ್, ಟೈಗ್ರಿಸ್ ಪ್ರವಾಹಕ್ಕಿಂತಲೂ ಹೆಚ್ಚಾದ ಪ್ರವಾಹವು ಆಗುವುದಿಲ್ಲವೇ? ಅಟ್ಲಾಂಟಿಕ್ ಸಾಗರಕ್ಕಿಂತಲೂ ಹೆಚ್ಚಾದ ರಕ್ತಸಾಗರವಾಗುವುದಿಲ್ಲವೇ! ಟ್ರಾಯ್ ದೇಶವನ್ನು ಗೆಲ್ಲುವುದಕ್ಕೆ ಆ ದೇಶೀಯರು ಮಾತ್ರವೇ ಅಲ್ಲದೆ, ಗ್ರೀಸ್ ದೇಶದವರೂ ಎಷ್ಟು ಜನಗಳು ಸತ್ತರು? ಹತ್ತು ವರ್ಷದವರೆಗೂ ಗ್ರೀಸ್ ದೇಶವನ್ನು ಆಳತಕ್ಕ ಪ್ರಭುಗಳೇ ಅಪೂರ್ವವಾಗಲಿಲ್ಲವೇ? ಯುದ್ಧದಕಾಲದಲ್ಲಿ ಧರ್ಮಕ್ಕೆ ವನವಾಸವಾಗುವುದಿಲ್ಲವೇ? ಸಂಪದಭಿವೃದ್ಧಿಯು ನಿಂತುಹೋಗುವುದಲ್ಲವೇ? ಸಕಲ ಕಲೆಗಳೂ ಹೀನಸ್ಥಿತಿಗೆ ಬರುವದಿಲ್ಲವೇ? ಪರಸ್ವತ್ತು ಅಪಹರಿಸಲ್ಪಡುವುದಿಲ್ಲವೇ? ಪರಸ್ತ್ರೀಯರು ಕೆಡಿಸಲ್ಪಡುವುವಿಲ್ಲವೇ? ನೀಚರು ಪ್ರಬಲರಾಗುವುದಿಲ್ಲವೇ? ಸಮಾಧಾನ ಕಾಲದಲ್ಲಿ ಬಲಿಷ್ಠರಾದವರಿಗೆ ಇರುವ ಭಯವು ಯುದ್ಧದ ಕಾಲದಲ್ಲಿ ಇರುವುದೇ? ಕಳ್ಳರೂ, ದರೋಡೆ ಮಾಡತಕ್ಕವರೂ, ಅಧರ್ಮದಿಂದ ಜೀವಿಸತಕ್ಕವರೂ ಇವರೇ ಮೊದಲಾದವರು ಯುದ್ಧವು ಉಪಕ್ರಮವಾದ ಮೇಲೆ, ಅಗಾಡಿ, ಪಿಚಾಡಿ, ಲಗಾಮು

ಈ ಮೂರು ಇಲ್ಲದ ಕುದುರೆಗಳಂತೆ ಪರಿಣಮಿಸುವುದಿಲ್ಲವೇ? ಯುದ್ಧದಲ್ಲಿ ಸಮರ್ಥನೆಂದು ಕೀರ್ತಿಯು ಪ್ರಭುವಿಗೆ ಲಭ್ಯವಾಗಬೇಕಾದರೆ, ಎಷ್ಟು ಜನಗಳು ಬಲಿಯಾಗಬೇಕು? ಎಷ್ಟು ಸಂಪತ್ತು ನಾಶವಾಗಬೇಕು? ಎಷ್ಟು ಜನಗಳಿಗೆ ವಿಪತ್ತು ಬರಬೇಕು? ಎಷ್ಟು ತಲೆಗಳು ನಾಶವಾಗಬೇಕು? ಎಷ್ಟು ಜನ ಯೋಧರು ಏಟುಗಳನ್ನು ತಿಂದು, ಪ್ರಾಣ ಹೋಗುವುದಕ್ಕೆ ಮುಂಚೆ, ಅನಿರ್ವಚನೀಯವಾದ ನೋವನ್ನು ಅನುಭವಿಸಬೇಕು? ದೇಹವನ್ನು ಬಿಟ್ಟು ಎಷ್ಟು ಜನ ಯೋಧರ ದೇಹವು ನರಿ, ನಾಯಿ, ಹದ್ದು ಮೊದಲಾದ ದುಷ್ಟಮೃಗಗಳಿಗೂ, ದುಷ್ಟಪಕ್ಷಿಗಳಿಗೂ ಆಹಾರವಾಗಿ ಪರಿಣಮಿಸಬೇಕು? ಎಷ್ಟು ಜನಗಳ ಮಾನವೂ, ಪ್ರಾಣವೂ ಹೋಗಬೇಕು? ಇಂಥಾ ಕುಯುಕ್ತಿಯನ್ನು ಅಪೇಕ್ಷಿಸತಕ್ಕವರು ಮನುಷ್ಯರೇ? ಇವರಿಂದ ಪ್ರಪಂಚಕ್ಕೆ ಕ್ಷೇಮ ಉಂಟಾಗುವುದೇ? ಪ್ರಪಂಚದಲ್ಲಿ ಧರ್ಮವು ಮೂಲೋತ್ಪಾಟನವಾಗುವುದಕ್ಕೂ, ಅಧರ್ಮವು ಮೆರೆಯುವಂತೆ ಆಗುವುದಕ್ಕೂ, ಪ್ರಪಂಚವು ನರಕವಾಗುವುದಕ್ಕೂ, ಅವರವರ ಕರ್ಮಫಲವನ್ನು ಅನುಭವಿಸಲೆಂದು ಜಗದೀಶ್ವರನು ತಟಸ್ಥನಾಗುವುದಕ್ಕೂ ಈ ಯುದ್ಧಾಪೇಕ್ಷೆಯು ಕಾರಣವಾಗುವುದಿಲ್ಲವೇ?''

"ಸಮಾಧಾನದಲ್ಲಿ ಆಸಕ್ತನಾದ ದೊರೆಯು ಯುದ್ಧದಲ್ಲಿ ಪ್ರಕಾಶಿಸುವುದಕ್ಕೆ ಅರ್ಹತೆಯುಳ್ಳವನಾಗಿರಬಹುದು ಭೇದಭಾವಗಳನ್ನು ಹುಟ್ಟಿಸಿ, ಒಬ್ಬರನ್ನು ಒಬ್ಬರು ಗೆಲ್ಲುವಂತೆ ಮಾಡುವುದರಲ್ಲಿ ನಿಶ್ಶಕ್ತರಾಗಿರಬಹುದು. ಇತರರ ಆಸ್ತಿಯನ್ನೂ, ಜಹಗೀರನ್ನೂ. ಪರಸ್ತ್ರೀಯರನ್ನೂ ಬಲಾತ್ಕಾರವಾಗಿ ತೆಗೆದುಕೊಳ್ಳುವುದರಲ್ಲಿ ಪರಾಙ್ಮುಖನಾಗಿರಬಹುದು. ಈ ನ್ಯೂನತೆಗಳೆಲ್ಲಾ ಗುಣಗಳಾಗಿ ಪರಿಣಮಿಸುವುದಿಲ್ಲವೇ? ಈ ಗುಣಾತಿಶಯಗಳು ಎಲ್ಲರೂ ತಮಗೆ ಕೊಟ್ಟಿದ್ದರಲ್ಲಿ ತೃಪ್ತರಾಗಿರುವಂತೆ ಮಾಡುವುದಕ್ಕೆ ಸಾಧಕಗಳಾಗುವುದಿಲ್ಲವೇ? ಅವನಲ್ಲಿ ಸಕಲ ಪ್ರಜೆಗಳೂ ಅನುರಕ್ತರಾಗುವುದಿಲ್ಲವೇ? ಜನಗಳೂ ಕೂಡ ತಮ್ಮ ತಮ್ಮ ಹಕ್ಕುಬಾಧ್ಯತೆಗಳನ್ನು ಹೊಂದಿ ಸುಖವಾಗಿರುವಂತಾಗುವುದಿಲ್ಲವೇ? ಶಾಂತಿಯಲ್ಲಿ ಆಸಕ್ತನಾದ ಪ್ರಭುವಿನ ಕಾಲದಲ್ಲಿ ಪಭುವಿನ ಮೇಲ್ಪಂಕ್ತಿಯು ಪ್ರಜೆಗಳಲ್ಲಿಯೂ ಶಾಂತಿಯನ್ನುಂಟುಮಾಡುವುದಿಲ್ಲವೇ? ರಾಜನು ಹೇಗೋ ಪ್ರಜೆಗಳೂ ಹಾಗೆಂಬ ಗಾಥೆಯು ಹುಟ್ಟಿರುವುದಿಲ್ಲವೇ? ರಾಜನು ಯುದ್ಧದಲ್ಲಿ ಪರಾಙ್ಮುಖನಾಗಿ, ಧರ್ಮದಿಂದ ತನ್ನ ಪ್ರಜೆಗಳನ್ನು ಪರಿಪಾಲಿಸುವುದರಲ್ಲಿ ಆಸಕ್ತನಾದರೆ, ಪ್ರಜೆಗಳೂ ಕೂಡ ಧರ್ಮದಿಂದ ತಮ್ಮ ಕುಟುಂಬವನ್ನು ಪರಿಪಾಲಿಸುವುದಕ್ಕೂ, ನೆರೆಹೊರೆಯವರಲ್ಲಿ ಸುಪ್ರೀತರಾಗಿರುವುದಕ್ಕೂ ಕಾರಣವಾಗುವುದಿಲ್ಲವೇ? ನಿರ್ಭಯವಾಗಿ ಧರ್ಮವನ್ನು ಆಚರಿಸುವುದಕ್ಕೂ, ಅಧರ್ಮವನ್ನು ಮಾಡುವುದರಲ್ಲಿ ಭಯಪಡುವುದಕ್ಕೂ

ಇದು ಕಾರಣವಾಗುವುದಿಲ್ಲವೇ? ಧರ್ಮಿಷ್ಠನಾದ ಪಕ್ಷದಲ್ಲಿ, ಎಲ್ಲಾ ಧರ್ಮಿಷ್ಠರಾದ ಪ್ರಭುಗಳೂ ಇವನಿಗೆ ಸಹಾಯ ಮಾಡುವುದಿಲ್ಲವೇ? ಅಧರ್ಮಿಷ್ಠರೂ ಕೂಡ ಇವನಿಗೆ ಭಯಪಡುವುದಿಲ್ಲವೇ? ಇವನ ಧರ್ಮವೂ, ನಿಷ್ಪಕ್ಷಪಾತತೆಯೂ, ಪ್ರಜೆಗಳಲ್ಲಿ ಇವನಿಗೆ ಇರತಕ್ಕ ಅನುರಾಗವೂ ಇವನಿಗೆ ವಜ್ರಕವಚವಾಗಿ ಪರಿಣಮಿಸುವುದಿಲ್ಲವೇ? ಇವನ ಮಾತುಗಳಲ್ಲಿ ಇತರ ಪ್ರಭುಗಳಿಗೂ, ಅವರ ಪ್ರಜೆಗಳಿಗೂ ನಂಬಿಕೆಯು ಹುಟ್ಟುವುದಿಲ್ಲವೇ? ಯುದ್ಧದಲ್ಲಿ ಆಸಕ್ತನಾದ ಅಧರ್ಮಿಷ್ಠನಾದ ಪ್ರಭುವಿಗೆ ಪ್ರಪಂಚವೆಲ್ಲಾ ಶತ್ರುಗಳಾಗುವುದಿಲ್ಲವೇ? ಶಾಂತಿಯಲ್ಲಿ ಆಸಕ್ತನಾದ ಧೊರೆಯ ಕೀರ್ತಿಯೊಡನೆ ಜಗಳಗಂಟನ ಕೀರ್ತಿಯನ್ನು ಹೋಲಿಸುವುದು ಸಾಧ್ಯವೆ? ಶಾಂತಿಯಿಂದ ಶೋಭಿಸುವ ಪ್ರಭುವನ್ನು ಜನಗಳು ದೇವರಂತೆಯೂ, ಯುದ್ಧಾಸಕ್ತಿಯುಳ್ಳ ಪ್ರಭುವನ್ನು ಪಿಶಾಚದಂತೆಯೂ ಸಜ್ಜನರು ಭಾವಿಸುವುದಿಲ್ಲವೇ? ಎಲ್ಲಿ ಸಮಾಧಾನವು ಇರುವುದೋ ಅಲ್ಲಿ ಧರ್ಮವೂ ಇರುವುದು. ಅಲ್ಲಿ ಸಕಲ ವಿದ್ಯೆಗಳೂ, ಸಕಲ ಕಲೆಗಳೂ ವೃದ್ಧಿಯಾಗುವುವು. ಕೃಷಿ, ಕೈಗಾರಿಕೆ ವ್ಯಾಪಾರ ಮೊದಲಾದವುಗಳು ಅಲ್ಲಿ ನಿರ್ವಿಘ್ನವಾಗಿ ನಡೆಯುವುವು. ಸರ್ವರೂ ಶಕ್ತಿಗನುಸಾರವಾಗಿ ಕೆಲಸ ಮಾಡುವರು. ಭೋಗ್ಯವಸ್ತುಗಳು ಬೇಕಾದ ಹಾಗೆ ಉತ್ಪತ್ತಿಯಾಗುವುವು. ಅಂಥಾ ಪ್ರಭುವಿನ ದೇಶದಲ್ಲ ಮಾತ್ರವೇ ಅಲ್ಲದೆ, ಪ್ರಪಂಚದಲ್ಲೆಲ್ಲಾ ಧಾರಣವಾಸಿಗಳು ಚಡಾವಾಗದೆ, ಜನಗಳಿಗೆ ಕ್ಷಾಮ ಭಯವಿಲ್ಲದಂತೆ ಆಗುವುದು. ಸಮಾಧಾನದಿಂದ ಶೋಭಿತನಾದ ಧೊರೆಯ ಪ್ರಭುತ್ವದಲ್ಲಿ ಜನಗಳು ಆರೋಗದೃಢಕಾಯರಾಗಿಯೂ, ದೀರ್ಘಾಯುರಾರೋಗ್ಯವುಳ್ಳವರಾಗಿಯೂ, ಸತ್ವವಂತರಾಗಿಯೂ, ಎಲ್ಲರೂ ಸೌಖ್ಯವಾಗಿರುವಂತೆಯೂ ಆಗಿ, ಅದರಿಂದ ಜನರೆಲ್ಲರೂ ತಮ್ಮ ಸೌಖ್ಯವನ್ನು ಸಂಪಾದಿಕೊಳ್ಳತಕ್ಕವರಾಗಿಯೂ, ಎಲ್ಲರೂ ಅವರವರ ಹಕ್ಕುಬಾಧ್ಯತೆಗಳಿಗೆ ಅನುರೂಪವಾದ ಫಲವನ್ನು ಹೊಂದತಕ್ಕವರಾಗಿಯೂ, ಅಧರ್ಮಪ್ರವರ್ತನಕ್ಕೆ ಎಲ್ಲರೂ ಪ್ರತಿಭಟಿಸತಕ್ಕವರಾಗಿಯೂ ಆಗುವರು. ಅಂಥಾ ಪ್ರಭುವಿಗೆ ಸಕಲ ಸಂಪತ್ತುಗಳೂ ಅಪ್ರಾರ್ಥಿತವಾಗಿ ಬರುವುವು. ದುರ್ಮಾರ್ಗಪ್ರವರ್ತಕರನ್ನು ಶಿಕ್ಷಿಸುವುದಕ್ಕೋಸ್ಕರ ಅವನು ಯುದ್ಧವನ್ನು ಮಾಡಬೇಕಾಗಿ ಬರುವುದುಂಟು. ಅಂತಹ ಸಂಭವವು ಬಂದರೆ, ದುರ್ಮಾರ್ಗಪ್ರವರ್ತಕರನ್ನು ಶಿಕ್ಷಿಸುವುದರಲ್ಲಿ, ಅಪ್ರತಿಹತವಾದ ಶಕ್ತಿಯುಳ್ಳ ಯೋಧರೂ ಮಿಲಿಟರಿ ಅಧಿಕಾರಿಗಳೂ ನಮಗೆ ಬೇಕಾದ ಹಾಗೆ ಸಿಕ್ಕುವರು. ಶಾಂತಿಯಲ್ಲಿ ಆಸಕ್ತನಾದ ಪ್ರಭುವು ತಾನೇ ಯುದ್ಧಕ್ಕೆ ಹೋಗಬೇಕಾದ ಆವಶ್ಯಕತೆಯಿಲ್ಲ. ಸಮರ್ಥರಾದವರನ್ನು ಚುನಾಯಿಸಿ ಕಳುಹಿಸುವನು. ಆದರಿಂದ ಇವನಿಗೆ ಜಯವೂ

ತಪ್ಪುವುದಿಲ್ಲ. ಧರ್ಮಿಷ್ಠರಿಗೆ ದೈವಬಲವು ಇರುವುದು. ಈ ಬಲವು ಅಧರ್ಮಿಷ್ಠರಿಗೆ ಇರುವುದಿಲ್ಲ. ದೈವಬಲವಿಲ್ಲದವನು ಇತರ ಬಲಗಳನ್ನು ಎಷ್ಟು ಮಟ್ಟಿಗೆ ಹೊಂದಿದಾಗ್ಯೂ, ಅವುಗಳೆಲ್ಲಾ ದುರ್ಬಲವಾಗಿ ಪರಿಣಮಿಸುವುವು. ಸಕಲ ವೇದ ಶಾಸ್ತ್ರಪುರಾಣೇತಿಹಾಸಗಳಲ್ಲಿಯೂ, ಸಕಲ ದೇಶಗಳ ಚರಿತ್ರೆಗಳಲ್ಲಿಯೂ ಇದಕ್ಕೆ ಉದಾಹರಣೆಗಳು ಬೇಕಾದ ಹಾಗೆ ಸಿಕ್ಕುತ್ತವೆ. ಈ ಕಾರಣಗಳಿಂದ ಯುದ್ಧಾಸಕ್ತಿಯುಳ್ಳ ಪ್ರಭುವಿಗಿಂತಲೂ ಶಾಂತಿಯಲ್ಲಿ ಆಸಕ್ತನಾಗಿ, ಪ್ರಜೆಗಳನ್ನು ಪರಿಪಾಲಿಸುವ ಪ್ರಭುವು ಸರ್ವೋತ್ತಮನು. ಅಂಥಾ ಪ್ರಭುವಿಗೆ ಯುದ್ಧಮಾಡುವ ಶಕ್ತಿಯಿಲ್ಲವೆಂದು ತಿಳಿದುಕೊಳ್ಳುವುದು ತಪ್ಪು. ಅಧರ್ಮ ಯುದ್ಧದಲ್ಲಿ ಅವನು ಪ್ರವರ್ತಿಸುವುದಿಲ್ಲ. ಧರ್ಮಯುದ್ಧವು ಬಂದರೆ, ಅದನ್ನು ಮಾಡುವುದರಲ್ಲಿ, ಅವನು ಎಂದಿಗೂ ಹಿಂತೆಗೆಯುವುದಿಲ್ಲ. ಅಂಥಾ ಯುದ್ಧದಲ್ಲಿ ಜಯಿಸಿದರೆ, ಈ ಲೋಕದಲ್ಲಿ ಕೀರ್ತಿಯು ಬರುವುದು. ಈ ಯುದ್ಧದಲ್ಲಿ ಸತ್ತರೆ, ಲೋಕಾಂತರದಲ್ಲಿ ಸದ್ಗತಿಯು ಬರುವುದು ಎಂಬ ನಂಬಿಕೆಯಿಂದ ಅವನು ಸಿಹ್ಮದಂತೆ ಯುದ್ಧಮಾಡುವನು. ಆದುದರಿಂದ ದೇಹಬಲದಿಂದಲೂ, ಕೊಬ್ಬಿನಿಂದಲೂ ಪ್ರತಿನಿಮಿಷ್ಟನಾಗಿ, ಯುದ್ಧಕ್ಕೋಸ್ಕರ ಯುದ್ಧಮಾಡತಕ್ಕ ಪ್ರಭುವಿಗಿಂತಲೂ ದೇಹಬಲವನ್ನೂ, ಸಕಲ ಸಂಪತ್ತುಗಳನ್ನೂ ಹತೋಟಿಯಲ್ಲಿಟ್ಟುಕೊಂಡು, ಸನ್ನಿಹಿತವಾದ ಯುದ್ಧವು ಧರ್ಮವಾದದ್ದೇ ಅಥವಾ ಅಧರ್ಮವಾದದ್ದೇ ಎಂಬುವುದನ್ನು ಬುದ್ಧಿಬಲದಿಂದ ಗೊತ್ತುಮಾಡಿ, ಅಧರ್ಮಕ್ಕೆ ಬೀಳದೆ, ಧರ್ಮಕ್ಕೆ ಲೋಪ ಬರುವುದಾದರೆ, ಯುದ್ಧವನ್ನು ಕೈಗೊಂಡು, ಧರ್ಮಿಷ್ಠರಾಗಿಯೂ, ಪರಾಕ್ರಮಶಾಲಿಗಳಾಗಿಯೂ ಇರತಕ್ಕವರನ್ನು ಉಪಯೋಗಿಸಿಕೊಂಡು, ದುಷ್ಟರಾಗಿಯೂ, ಉನ್ಮತ್ತರಾಗಿಯೂ ಇರತಕ್ಕ ಪ್ರಭುಗಳನ್ನು ನಿಗ್ರಹಿಸುವುದಕ್ಕೆ ಶಾಂತಿನಿಧಿಯಾದ ಪ್ರಭುವೇ ಸಮರ್ಥನು. ಸಾರಾಸಾರ ವಿಚಾರವಿಹೀನನಾಗಿ, ಕೋಟ್ಯಂತರ ಜನಗಳನ್ನು ಕೊಲ್ಲುವುದರಲ್ಲಿ ಸಮರ್ಥನೆಂಬ ಕೀರ್ತಿಯಲ್ಲಿ ಮಾತ್ರ ಆಸಕ್ತನಾಗಿ, ಧರ್ಮಕ್ಕೆ ವಿನಾಶವನ್ನು ಉಂಟುಮಾಡುವ ಅಧರ್ಮಪ್ರಭುವಿಗಿಂತಲೂ ದೇವರ ಮೇಲೆ ಭಾರವನ್ನು ಹಾಕಿ, ಎಷ್ಟು ಕಷ್ಟಗಳು ಬಂದರೂ ಲಕ್ಷ್ಯಮಾಡದೆ, ಶ್ರೀರಾಮನೇ ಮೊದಲಾದವರಂತೆ ಧರ್ಮಯುದ್ಧವನ್ನು ಮಾಡತಕ್ಕವರು ಉತ್ತಮರೆಂದು ನನಗೆ ತೋರುತ್ತದೆ. ಪ್ರಾಜ್ಞರಾದ ತಾವೆಲ್ಲರೂ ಇದಕ್ಕೆ ಸಾಕ್ಷಿ " ಎಂದು ನಾನು ನುಡಿದೆನು. ಈ ಶಾಸ್ತ್ರಜ್ಞರೆಲ್ಲರೂ ನನ್ನ ಉತ್ತರವನ್ನು ಕೇಳಿ, ಸ್ವಲ್ಪ ಹೊತ್ತು ಪರ್ಯಾಲೋಚಿಸಿದರು. ಮೈನಾಸನ ಧರ್ಮಶಾಸ್ತ್ರಗಳನ್ನು ಮಗುಚಿಹಾಕಿದರು. ನಾನು ಹೇಳಿದ್ದು ಯುಕ್ತವೆಂದು ಇವರಿಗೆ ಗೊತ್ತಾಯಿತು. ಈ ಧರ್ಮಶಾಸ್ತ್ರದ ಒಂದು ಭಾಗದಲ್ಲಿ ಒಂದು ವಿಚಿತ್ರವಾದ ವಾಕ್ಯವು ಇತ್ತು. ' ಈ ದೇಶದ ಧರ್ಮಕ್ಕೆ ಹಾನಿಯುಂಟಾ

ತಿಯನೊಬ್ಬನು ಬಂದು ಧರ್ಮನಿರೂಪಣವನ್ನು ಮಾಡುವನು. ಉಜ್ಜೀವಿಸಲ್ಪಡುವುದು' ಎಂದು ಬರೆದಿತ್ತು. ಅದನ್ನು ನೋಡಿ ...ಷ್ಠರು ಹೇಳಿದ್ದೇನೆಂದರೆ:—"ಈ ಧರ್ಮಗ್ರಂಥವನ್ನು ನೋಡಿದಾಗ, ...ದೇಶೀಯರು ಯಾರೋ ಬಂದು ಜಯಿಸುತ್ತಾರೆಂದು ನಾವು ತಿಳಿದುಕೊಂಡಿದ್ದೆವು. ಈಗ ಈ ವಾಕ್ಯಕ್ಕೆ ಅರ್ಥವಾಯಿತು. ಧರ್ಮಸ್ವರೂಪವನ್ನು ತಿಳಿದುಕೊಳ್ಳದೆ, ಇಡುಮಿನಿಯಸ್ಸನು ಮಾಡಬಾರದ ಕೆಲಸಗಳನ್ನು ಮಾಡಿ, ದುಸ್ಸಹವಾದ ಕಷ್ಟಗಳನ್ನು ಅನುಭವಿಸುವ ಸ್ಥಿತಿಗೆ ಬಂದನು. ಲೋಕೈಕವೀರನಾದ ನೀನು ಮೈನಾಸನ ಧರ್ಮತತ್ವವನ್ನು ಸಮಗ್ರವಾಗಿ ತಿಳಿದುಕೊಂಡಿದ್ದೀಯೆ. ಮೈನಾಸನ ಧರ್ಮಗಳಿಗೆ ನೀನು ಹೇಳಿದ್ದೆಲ್ಲಾ ವ್ಯಾಖ್ಯಾನ ರೂಪವಾಗಿರುವುದು. ಈ ದ್ವೀಪಕ್ಕೆ ನೀನೇ ಪ್ರಭುವಾಗಬೇಕೆಂದು ಜಗದೀಶ್ವರನ ಸಂಕಲ್ಪವು ಇರುವಂತೆ ತೋರುತ್ತದೆ. ನಿನ್ನ ಉತ್ತರಗಳೆಲ್ಲಾ ನಮಗೆ ಅತ್ಯಂತ ಸಂತೋಷವನ್ನುಂಟು ಮಾಡಿದವು. ದೇಹಶಕ್ತಿಯಲ್ಲಿ ಹರ್ಕ್ಯುಲೀಸಿಗೆ ಸಮಾನನಾಗಿಯೂ, ಬುದ್ಧಿಯಲ್ಲಿ ಜೂಪಿಟರಿಗೆ ಸಮಾನನಾಗಿಯೂ ಇರುತ್ತೀಯೆ. ಎಂದು ಈ ದೇಶದ ಪ್ರಭುತ್ವವನ್ನು ವಹಿಸಿ, ಧರ್ಮಯುಗಕ್ಕೆ ಪ್ರವರ್ತಕನಾಗು. ದೇವರ ಸಂಕಲ್ಪವು ಹೇಗಿರುವುದೋ, ನಮ್ಮ ಸಂಕಲ್ಪವೂ ಹಾಗೆಯೇ ಇರುವುದು." ಈ ರೀತಿಯಲ್ಲಿ ಮಹರ್ಷಿಶ್ರೇಷ್ಠರು ಅಪ್ಪಣೆ ಕೊಡಿಸಿದರು. ಸಕಲ ರಾಜತಂತ್ರವಿಶಾರದನಾದ ಟೆಲಿಮಾಕಸ್ಸನೇ ನಮಗೆ ದೊರೆಯಾಗಲೆಂದು ಅಲ್ಲಿ ಸೇರಿದ್ದ ಮಹಾಜನಗಳೆಲ್ಲರೂ ಘೋಷಮಾಡಿದರು. ಅದು ಆ ರಾಜಧಾನಿಯನ್ನೆಲ್ಲಾ ವ್ಯಾಪಿಸಿತು. ನಮ್ಮ ಪುಣ್ಯಪರಿಪಾಕದಿಂದ ಇಷ್ಟು ಧರ್ಮಜ್ಞನಾದ ಪ್ರಭುವು ನಮಗೆ ಲಭ್ಯನಾದನೆಂದು ಈ ದ್ವೀಪನಿವಾಸಿಗಳೆಲ್ಲರೂ ಸಂತೋಷಪಟ್ಟರು. ಸರ್ವರೂ ನನ್ನನ್ನು ಪೂಜಿಸುವುದಕ್ಕೆ ಉಪಕ್ರಮಿಸಿದರು. ನಾನು ಉತ್ಸವಪರಿಗ್ರಹ ಮಾಡಿದೆನು. ನನಗೆ ಮಾತನಾಡುವುದಕ್ಕೂ ಅವಕಾಶವಾಗಲಿಲ್ಲ. ನನ್ನ ಗುಣಕಥನಗಳು ದಶದಿಕ್ಕುಗಳಿಗೂ ವ್ಯಾಪಿಸಿದವು. ಪುಷ್ಪವೃಷ್ಟಿಯಾಗುವುದಕ್ಕೆ ಉಪಕ್ರಮವಾಯಿತು. ಪ್ರಭುಗಳಿಗೂ, ದೇವತೆಗಳಿಗೂ ಆಗತಕ್ಕ ಮರ್ಯಾದೆಯು ಸಮಾರಂಭಕ್ಕೆ ಉಪಕ್ರಮವಾಯಿತು. ಪರೀಕ್ಷೆಯ ಸಭೆಯು ಉಪಸಂಹರಿಸಲ್ಪಟ್ಟಿತು.

ಮೊದಲನೆಯ ಭಾಗ ಸಂಪೂರ್ಣವು.